ಗಂಧ ಮತ್ತು ಕಲ್ಲು



SERVICE TO HUMANITY

ಡಾ. ಶ್ರೀನಿವಾಸ ಹಾವನೂರ

ಗಂಧ ಮತ್ತು ಕಲ್ಲು

ಹೆಣ್ಣಿನ ಜೀವನದ ಏಳು ಬೀಳುಗಳನ್ನು
ವಯೋನುಕ್ರಮದಲ್ಲಿ ಚಿತ್ರಿಸುವ ಆಯ್ದ ಕತೆಗಳು

ಲೇಖಕರು :

ಡಾ॥ ಶ್ರೀನಿವಾಸ ಹಾವನೂರ

ಅಖಿಲ ಸೇವಾ ಸಂಸ್ಥೆ

ನಂ. 133, ಮೊದಲನೇ ಮಹಡಿ, ಕೆ.ಆರ್. ರಸ್ತೆ,
ಓಬಳಪ್ಪ ಗಾರ್ಡನ್, ಬೆಂಗಳೂರು - 560 082

"GANDHA MATTU KALLU"
(A collection of short stories depicting
womens life in stages from teenage)
By
Dr. Srinivasa Havanura

Published by
T.S. Viswanath, Chairman, "Alilu Seva Samsthe", # 133, 1st Floor,
K.R. Road, Obalappa Garden, Bangalore - 560 082

First edition : 2006

Pages : 132 + iv

Price : Rs. 60
ಬೆಲೆ : 60 ರೂ

Distributors
Prashantha Prakashana
No. 1014, 24th Main, BSK 2nd Stage,
Bangalore - 560 070.

Printed by :
Alilu Seva Samsthe (Printing & Publishing Division)
133, 1st Floor, K.R. Road, Obalappa Garden
Bangalore - 560 082. Phone : 26763373

ಪೀಠಿಕೆ

ನೂರಾರು ಕಥೆಗಳನ್ನು ಬರೆದಾಗ, ಅವುಗಳಲ್ಲಿ ಉತ್ತಮವೆನಿಸಿದವುಗಳನ್ನು ಆರಿಸಿ ಇಲ್ಲಿ ಪ್ರಕಟಿಸಿದ್ದಲ್ಲ. ಬದಲಾಗಿ ಮಹಿಳಾ ದೃಷ್ಟಿಕೋನದಿಂದ, ಅವರ ವಯೋಮಾನಕ್ಕಾನುಸಾರವಾಗಿ ಆಯ್ದ ಕತೆಗಳಿವು.

ಮೊದಲ ಕತೆ ಇನ್ನೂ ಹದಿವಯದವಳಾದ ಲೇಪಾಕ್ಷಿಯ ಮನೋಭೂಮಿಕೆಯನ್ನು ಚಿತ್ರಿಸುತ್ತದೆ. ಎರಡನೆಯದರಲ್ಲಿಯ ರಮಾ ಮದುವೆಗೆ ಬೆಳೆದು ನಿಂತವಳು. ಬಡ ಮಧ್ಯಮ ವರ್ಗದವಳಾದ ಆಕೆ ವರನನ್ನು ಆಯುವಲ್ಲಿಯ ಅನಿವಾರ್ಯತೆಯನ್ನು ಪ್ರತಿನಿಧಿಸುತ್ತಿದ್ದಾಳೆ.

ಇನ್ನು ಹೊಸದಾಗಿ ಮದುವೆಯಾದ ಮಹಿಳೆಯ ಸುಖದ ಕನಸನ್ನು, ಮುಗ್ಧ ಮಗುವಿನ ಬಯಕೆಯನ್ನು ಮುಂದಿನ ಎರಡು ಕತೆಗಳು ತೋರ್ಪಡಿಸುತ್ತವೆ. ಸಂಸಾರ ಮುಂದುವರಿದ ಮೇಲೆ, Seven Year Itch ಮನೋಭೂಮಿಕೆಯನ್ನು ಗಂಡ ತಳೆದಾಗ ಹೆಂಡತಿಯಾದವಳು ಲಘುವಾಗಿ ಹೇಗೆ ಎದುರಿಸುವಳೆಂಬುದು ಮುಂದಿನ ಕತೆಯ ನಿಲುವಾಗಿದೆ.

ಅಲ್ಲಿಂದ ದಾಂಪತ್ಯ ವಿರಸದ ಚಿತ್ರಣ; ಅದರ ಕಲಾತ್ಮಕ ನಿರೂಪಣೆಯು 'ಗಂಧ ಮತ್ತು ಕಲ್ಲು' ಕತೆಯಲ್ಲಿ ಬಂದಿದೆ. 'ಗಂಡ ಹೆಂಡಿರ ಜಗಳ ಗಂಧ ತೀಡಿದ್ಹಾಂಗ' ಎಂಬುದು ಜಾನಪದ ಹಿತೋಕ್ತಿ ಸರಿಯೇ. ಆದರೆ ಆ ಜಗಳ ಎರಡು ಕಲ್ಲುಗಳನ್ನು ಘಟ್ಟಿಸಿದಂತೆ ಆದರೆ? ಹೆನ್ರಿಕ್ ಇಬ್ಸೆನ್ನನ 'Dolls House' ನಾಟಕದಲ್ಲಿ ಗಂಡನ ಪ್ರೀತಿಯ ನಾಟಕೀಯತೆಗಳನ್ನು ಕಂಡ ಕಥಾನಾಯಕಿ ಮನೆ ಬಿಟ್ಟು ಹೋದದ್ದು ೧೯ನೆಯ ಶತಮಾನದಲ್ಲಿ ಯೂರೋಪಿನಲ್ಲಿ ಕ್ರಾಂತಿಕಾರೀ ನಿಲುವು ಎನಿಸಿತು. ಆದರೆ ಭಾರತೀಯ ಸ್ತ್ರೀ ಹಾಗೆ ಮಾಡುವುದಿಲ್ಲ. ಮಕ್ಕಳು ಇದ್ದುವೆಂದರೆ ಆ ಮನೆಯಲ್ಲಿ ತನ್ನ ಹಕ್ಕನ್ನು ಪ್ರಸ್ಥಾಪಿಸುತ್ತಾಳೆ. ಈ ಕತೆ ಹಲವಾರು ಭಾರತೀಯ ಭಾಷೆಗಳಿಗೆ ಅನುವಾದಗೊಳ್ಳುವಷ್ಟು ಮಹತ್ವದ್ದೆನಿಸಿತು. ಹೀಗಾಗಿ ಇದೇ ಶೀರ್ಷಿಕೆಯನ್ನು ಈ ಸಂಗ್ರಹಕ್ಕೆ ಇಡಲಾಗಿದೆ. ಇಲ್ಲಿ ಗಂಧ ತೀಡುವಿಕೆಯ ಸರಸಕ್ಕಿಂತ. ಕಲ್ಲಿನ ಘರ್ಷಣೆಯ ವಿರಸ ಇದೆ.

ಮುಂದಿನ ಕತೆಯಲ್ಲಿ ಹೊಂದಾಣಿಕೆಯಿಲ್ಲದ ದಾಂಪತ್ಯವಿಲ್ಲದೆ ಹೆಣ್ಣು ಜಾರಿದ್ದರ ಪ್ರಸಂಗವಿದೆ. ನಡೆದು ಹೋದ ಅಚಾತುರ್ಯದಿಂದಾಗಿ ಆಕೆ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಆ ಮುಂದಿನ ಕತೆಯಲ್ಲಿ ವಿರಸದ ವ್ಯಾವಹಾರಿಕ ದಾಂಪತ್ಯವು ವಾನಪ್ರಸ್ಥಾಶ್ರಮಕ್ಕೆ ದಾಟಿದಾಗ ಹೇಗಿರುತ್ತದೆ ಎಂಬುದನ್ನು 'ಇಂತೀ ನಮಸ್ಕಾರಗಳು' ಕತೆಯಲ್ಲಿ ಕಾಣಬಹುದು.

ಕೊನೆಯ ಕತೆ ಹೆಣ್ಣಿನ ವೃದ್ಧಾಪ್ಯದ ಬದುಕಿನಲ್ಲಿ ಧರ್ಮವು ಕಾಣಿಸಿಕೊಳ್ಳುವ ರೀತಿಯಿದೆ. ಮಾಗಿದ ಲೋಕಾನುಭವದಿಂದ ಮೂಡಿದ ಕತೆಯಿದು. ಎಲ್ಲ ದೃಷ್ಟಿಯಿಂದ, ಮೇಲ್ಮಟ್ಟದ್ದು. "ನಿಮ್ಮ ಅತ್ಯುತ್ತಮ ಕತೆ ಯಾವುದು, ಹಾವನೂರರೇ?" ಎಂದು ಯಾರಾದರೂ ನನ್ನನ್ನು ಕೇಳಿದರೆ ಇದನ್ನೇ ಹೇಳಿಯೇನು.

ಮಂಗಳೂರು

ಡಾ॥ ಶ್ರೀನಿವಾಸ ಹಾವನೂರ

ಪರಿವಿಡಿ

೧. ಲೇಪಾಕ್ಷಿಯೂ ಲೇಡಿಸ್ ಹಾಸ್ಟೆಲೂ

ಮೊದಲಿಗೆ ಒಂದೆರಡು ಸ್ಪಷ್ಟೀಕರಣಗಳು. 'ಲೇಪಾಕ್ಷಿಯೂ ಲೇಡೀಸ್ ಹಾಸ್ಟೆಲೂ' ಸಣ್ಣ ಕತೆ ಬರೆದವರು ಶ್ರೀನಿವಾಸ ಹಾವನೂರ ಎಂಬುದರ ಕುರಿತು. ಮೊದಲನೆಯದಾಗಿ, ಇದು ಸಣ್ಣ ಕತೆ ಅಲ್ಲ. ಎಂದರೆ ಕಲ್ಪಿಸಿದ್ದಲ್ಲ. ನಡೆದ ಘಟನಾವಳಿ. ಎರಡನೆಯದಾಗಿ ಶ್ರೀ. ಹಾ. ಇದರ ಲೇಖಕ ಅಲ್ಲ. ಈ ಘಟನಾವಳಿಯಲ್ಲಿ ಖುದ್ದಾಗಿ ಭಾಗವಹಿಸಿದ ಕಲ್ಯಾಣಿಯ ನಿರೂಪಣೆ ಇದು. ಶ್ರೀ. ಹಾ. ಮಾಡಿದ್ದು ಅದರ 'ಶಬ್ದಾಂಕನ' ಮಾತ್ರ. ಅವಳೇ ಏಕೆ ಬರೆಯಲಿಲ್ಲ? ಅಂತ ಕೇಳುತ್ತೀರಾ? ಬರೀಲಿಲ್ಲ. ಬರೀಬೇಕೂ ಅಂತ ಆಕೆಗೆ ಅನಿಸಲಿಲ್ಲ! ಇಷ್ಟೇ ಅದಕ್ಕೆ ಉತ್ತರ. ಮತ್ತೆ, ನಿಮಗೇ ಏಕೆ ಬರೆಯ ಹೇಳಿದಳು ಎನ್ನುವಿರ? ಇದು ನನ್ನ ಅವಳ ಸಂಬಂಧದಲ್ಲಿ ಮೂಗು ತೂರಿಸಿದಂತಾದೀತು ಅಲ್ಲವೆ.

ಇನ್ನೊಂದು ಸ್ಪಷ್ಟೀಕರಣ ಶೀರ್ಷಿಕೆಯಲ್ಲಿನ 'ಲೇ... ಲೇ...' ಪ್ರಾಸವನ್ನು ಕುರಿತದ್ದು. ಇದು ಬುದ್ಧಿಪೂರ್ವಕ ಮಾಡಿದ್ದಲ್ಲ. ಲೇಪಾಕ್ಷಿ ಅನ್ನುವ ಹೆಸರನ್ನು ಅವಳ ತಂದೆ ತಾಯಿಗಳು ಈಗ ೧೭ ವರ್ಷಗಳ ಹಿಂದೆಯೇ ಇಟ್ಟಿದ್ದಾರೆ. ನಾವೇಕೆ ಅದನ್ನು ಬದಲಿಸ ಹೋಗೋಣ? ಮತ್ತೆ ಇಲ್ಲಿಯ ಮುಖ್ಯ ವಿಚಾರ ಅವಳನ್ನು ಲೇಡೀಸ್ ಹಾಸ್ಟೆಲ್ಲಿಗೆ ಸೇರಿಸಬೇಕೆನ್ನುವುದು.

ಈ ಆಂಗ್ಲ ಶಬ್ದವನ್ನು 'ಸಭ್ಯ ಮಹಿಳೆಯರ (gentlemen ಪ್ರತಿಯಾಗಿ) ವಸತಿ ಗೃಹ' ಎಂದು ಯಥಾವತ್ತಾಗಿ ಕನ್ನಡಿಸಬಹುದಿತ್ತು. ಇವರ opposite sexನ ವಸತಿ ಗೃಹ ವಾಸಿಗಳು boys, ಹುಡುಗರು. ಅದಕ್ಕೆ ಪ್ರತಿಯಾಗಿ ಇವರನ್ನು ಪ್ರಬುದ್ಧ ಸ್ತ್ರೀಯಾಗಿ ಪರಿಭಾವಿಸುವುದು ತಪ್ಪಲ್ಲವೆ? ಮತ್ತೊಂದೆಂದರೆ ಆ ಹಾಸ್ಟೆಲಿನಲ್ಲಿ ಇರುವ ಎಲ್ಲರೂ 'ಸಭ್ಯ' ಎಂದು ಅಲ್ಲಿಯ ವಾರ್ಡನ್ ಬಾಯಿಯೇ ತಿಳಿದಂತೆ ಕಾಣಲಿಲ್ಲ. ಅಂದಾಗ

ಇನ್ನು ಮುಂದಿನದನ್ನು ಕಲ್ಯಾಣಿಯೇ ಹೇಳ್ತಾಳೆ. ಕೇಳಿರಿ :

ನಮ್ಮ ಭೀಮೇಶನ ಹೆಂಡತಿ ವಿಮಲಾಳ ತಂಗಿಯೇ ಈ ಲೇಪಾಕ್ಷಿ. ಹದಿಹರೆಯದ ಆದರೆ ನಿಶ್ಚಿತವಾಗಿ ಆ ಸ್ಟೇಜನ್ನು ದಾಟಿದಂತೆ ಕಾಣುವ ಈಕೆ ಬಿ.ಕಾಂ. ಓದಲೆಂದು ಕಳೆದ

ಎರಡು ವರ್ಷಗಳಿಂದ ನಮ್ಮ ಮನೆಯಲ್ಲೇ ಇದ್ದಾಳೆ. ಲೇಪಾಕ್ಷಿ ಅನ್ನೋ ಹೆಸರೇನೋ ಚೆಂದ. ಆದರೆ ನೋಡೋದಕ್ಕೆ? ಹರೇದ ವಯಸ್ಸಿನಲ್ಲಿ ಕತ್ತೆಯೂ ಚೆಂದ ಕಂಡೀತು. ಅವಳು ಹೇಗಿದ್ದರೆ ನನಗೇನಂತೆ, ಆದರೆ ಅವಳಿಗೂ ಅವಳ ಅಕ್ಕನಿಗೂ ರೂಪ ಮತ್ತು ಸ್ವಭಾವದಲ್ಲಿಯ ಅಂತರ ಮಾತ್ರ ನನ್ನನ್ನು ದಂಗುಬಡಿಸಿದೆ. ನಮ್ಮ ವಿಮಲಾನ ಬಣ್ಣ, ಕಪ್ಪು ಇದ್ರೂ ಮುಖ ಮಾಟಾಗಿದೆ. ಮೂಗು ನೀಳವಾದದ್ದು. ಕಣ್ಣು ಹೊಳಪಿನದು. ಒಂದು ಮಗುವಿನ ತಾಯಿಯಾಗಿದ್ದರೂ ಸಪೂರ ಇದ್ದಾಳೆ. ಲೇಪಾಕ್ಷಿಯೋ ದಪ್ಪ ಮೈಕಟ್ಟಿನವಳು. ತುಸು ದೊಣ್ಣೆ ಮೂಗು. ಸಣ್ಣ ಕಣ್ಣುಗಳು. ಬಣ್ಣ ಮಾತ್ರ ಅಕ್ಕನಿಗಿಂತ ಎಷ್ಟೋ ತಿಳಿ. ಒಂದೇ ಹೊಟ್ಟೆಯಿಂದ ಹುಟ್ಟಿಬಂದ ಇಬ್ಬರಲ್ಲಿ ಇಷ್ಟೊಂದು ಹೆಚ್ಚು ಕಡಿಮೆ ಹೇಗೆ ಸಾಧ್ಯ? ನನದೇ ಅನಸ್ತದ. ಬ್ರಹ್ಮನಿಗೆ ಒಂದೇ ಸಮನೆ ಪ್ರಾಣಿಗಳನ್ನು ಸೃಷ್ಟಿಸುವ ಕೆಲಸದಲ್ಲಿ ಬೇಸರ ಬಂದದ್ದರಿಂದ ಹೀಗಾಯಿತೆ? ಅಥವಾ ಅಕ್ಕನನ್ನು ಹುಟ್ಟಿಸಿದ ೧೫ ವರ್ಷಗಳ ಅನಂತರ ಈ ತಂಗಿಯನ್ನು ರೂಪಿಸುವಾಗಿ ಹಿಂದಿನ ಪ್ಯಾಟರ್ನ್ ಮರೆತುಹೋಯಿತೋ. ಬ್ರಹ್ಮನಿಗೆ? ಇರಲಿ.

* * * *

ಅವರಿಬ್ಬರ ಸ್ವಭಾವನೂ ಬೇರೇನೆ ಅದೆ. ವಿಮಲಾ ಗಂಭೀರ ಸ್ವಭಾವದವಳು. ಕೆಲಸದಲ್ಲಿ ಚೊಕ್ಕಟ ಮತ್ತು ಶಿಸ್ತಿನವಳು. ಆಫೀಸಿನಲ್ಲಿಯೂ ಅವಳ ಬಗ್ಗೆ ಎಲ್ಲರಿಗೂ ಖುಷಿ. ಆದರೆ ಈ ಹುಡುಗಿಯ ಮಾತು-ಕತೆಗೆ ಲಂಗುಲಗಾಮೇ ಇಲ್ಲರೀ. ಮನೆಯಲ್ಲಿ ತನ್ನ ಪುಸ್ತಕಾ, ಬಟ್ಟೆ-ಬರೆ ಎಲ್ಲಾನೂ ಹರವಿರತಾಳ. ಅದನ್ನು ಕಂಡಾಗೆಲ್ಲ ನನಗೆ ಬ್ರಹ್ಮಾಂಡ ಸಿಟ್ಟು ಬರತದ. ಇದೊಂದು ವರ್ಷ ಆಕೆಯದು ಯಾವಾಗ ಮುಗಿದೀತೋ ಅಂತ ಕಾದೇನಿ. ಹೀಗೆಲ್ಲ ನಾ ಹೇಳಿದಾಗ, ನನಗ ಆಕಿನ್ನ ಕಂಡರ ಆಗೋದಿಲ್ಲ ಅನ್ನೋದು ಹೊಳೆದಿರಬಹುದು. ಹೌದು. ನಾನಾದರೂ ಅದನ್ನು ಮುಚ್ಚಿ ಇಟ್ಟಿಲ್ಲ. ವಿಮಲಾನ ಮಾರೀ ನೋಡಿ ಸುಮ್ಮನಿರತೇನಿ. ವಿಮಲಾ ಎಲ್ಲಾ ದೃಷ್ಟಿಯಿಂದ ಆದರ್ಶ ಗೃಹಿಣಿ. ಬಂದ ಒಂದು ವರ್ಷದಲ್ಲೇ, ನಮ್ಮ ವಂಶದ ಕುಡಿಯಾಗಿ ಮಕರಂದನನ್ನ ಹೆತ್ತಿದ್ದಾಳೆ. ಟೈಪಿಣಿಯಾಗಿ ಒಂದು ಖಾಸಗೀ ಕಂಪೆನಿಯೊಳಗೆ ಕೆಲಸಕ್ಕೆ ಹೋಗಿರತಾಳ. ದಣಿದು ಮನಿಗೆ ಬಂದರೂ ಒಂದು ನಿಮಿಷನೂ ಸುಮ್ಮನೆ ಕೂಡೋದಿಲ್ಲ. ಮಗನ ಅಭ್ಯಾಸದ ಕಡೆಗೂ ಲಕ್ಷ್ಯ ಕೊಡತಾಳ. ಮನೀ ಕೆಲಸ ನಾನೇ ಹೆಚ್ಚಾಗಿ ನೋಡಿಕೊಳ್ತನಲ್ಲ. ಆದಾಗ್ಯೂ ನನಗೆ ಮದ್ದತ ಮಾಡಲಿಕ್ಕೆ ಧಡಪಡಸ್ತಾಳೆ. ನನಗ ಅವಳು ಸೊಸೆ ಅಂತ ಅನಿಸೇ ಇಲ್ಲ. ನನ್ನ ಇನ್ನೊಬ್ಬ ಮಗಳಂತೇ ಇದ್ದಾಳೆ. ನನ್ನ ಇಬ್ಬರು ಹೆಣ್ಣು ಮಕ್ಕಳು ತವರು ಮನೆಗಂತ ಬಂದ್ರ, ವಿಮಲಾಳದ್ದೇ ಸಂಭ್ರಮ. ತನ್ನ ಖಾಸಾ ಅಕ್ಕ, ತಂಗಿಯರು ಬಂದಷ್ಟು ಖುಷಿಪಡ್ತಾಳ.

ನಮ್ಮ ಭೀಮೂ ಆಕಿನ್ನ ಮದುವಿಯಾಗಿ ಏಳು ವರ್ಷ ಆತು. ಅವನ ಬಗ್ಗೆ ಇಂಥದ್ದೇ ಅಂತ ಹೇಳಲಿಕ್ಕೆ ಏನೂ ಇಲ್ಲ. ಹೋದ ವರ್ಷ ೩೪ ತುಂಬಿತ್ತು. ಮುಂದಿನ ವರ್ಷ

ಮೂವತ್ತಾರು. ಪೇಪರ ಓದತಾನ. ನಾವು ಮಾಡಿ ಹಾಕಿದ್ದು ತಿಂತಾನ. ಗಡಿಯಾರ ಹತ್ತರ ಅಂಕಿ ತೋರಿಸಿತೆಂದ್ರ ಆಫೀಸಿಗೆ ಹೋಗ್ತಾನ. ಬರ್ತಾನ, ಸಂಜಿಗೆ ಠರಾವಿಕ ವೇಳೆಗೆ. ಮತ್ತು ಉಂಡು ರಾತ್ರಿ ಮಲಗತಾನ. ಏನೇನೂ ಗದ್ದಲ ಇಲ್ಲ. ಒಂದೇ ಗದ್ದಲ ಅಂದ್ರ, ಅವ ಸ್ಕೂಟರ್ ಹತ್ತೋವಾಗ ಮತ್ತು ಮನಿಗೆ ಬಂದ ಮೇಲೆ ನಿಲ್ಲಿಸುವಾಗ! ಹಾಂ. ನಾ ಅವನ ತಾಯಿ ಅಂತ ಹೇಳಿದ್ನೇನು? ಅಲ್ಲ. ಅಂವ ನನ್ನ ಭಾವನವರ ಮಗ. ಅವರ ಅಪ್ಪ ಬೇಗ ತೀರಿಕೊಂಡರು. ನನ್ನ ಯಜಮಾನರೂ ಈಗ ಇಲ್ಲ. ಹೀಂಗಾಗಿ ಈ ಮನೆಗೆ ನಾನೇ ಯಜಮಾನತಿ. ಆದ್ರ ದೊಡ್ಡ ವಿದ್ವಾಂಸರ ಕೈ ಹಿಡಿದಾಕೆ ಆಗಿ ಒಂದಿಷ್ಟು ಓದುವ ಚಟ ಅದ. ಮಧ್ಯಾಹ್ನದ ಮೇಲೆ ಲೈಬ್ರರಿಗೆ ಹೋಗಿರತೇನಿ. ಮೊಮ್ಮಕ್ಕಳ ನೆನಪಾದರ ಅಳಿಯಂದಿರು, ಒಬ್ಬರಲ್ಲದ್ಹಂಗ ಇಬ್ಬರಿದ್ದಾರ. ಅವರ ಊರಿಗೆ ಹೋಗಿ ಬರತೇನಿ. ಇದನ್ನೆಲ್ಲಾ ಯಾಕ ಈಗ ಹೇಳಲಿಕ್ಕೆ ಹತ್ತೇನಿ? ಏನೊ. ಅದಿರಲಿ.

ಮುಖ್ಯ ವಿಷಯ ಲೇಪಾಕ್ಷಿಯನ್ನು ಹಾಸ್ಟೆಲ್ಲಿಗೆ ಸೇರಿಸುವುದು. ಅದರ ಕಾರಣಾ ಹೇಳತೇನಿ. ಅವತ್ತ ರವಿವಾರ. ನಾನು, ಭೀಮೇಶ ಇಬ್ಬರೂ ನಮ್ಮ ಹಳೆಯ ಪರಿಚಯದವರೊಬ್ಬರ ನಿಶ್ಚಿತಾರ್ಥದ ಊಟಕ್ಕ ಹೋಗಿದ್ವಿ. ಈ ಅಕ್ಕಾ ತಂಗಿ ಮತ್ತ ಮಕರಂದ ಇಷ್ಟೇ ಜನ ಮನಿ ಒಳಗ. ವಿಮಲಾ ಊಟಾ, ಕೆಲಸ ಮುಗಿಸಿ ಮಲಗಿದ್ದಳಂತ. ಆಗ 'ಅವ್ವಾ' ಅಂತ ಮಕರಂದ ಕೂಗಿದ್ಹಾಂಗ ಅನಿಸಿತಂತ. ಕನಸಿನೊಳಗ ಕೇಳಿಸಿದ್ಹಾಂಗ. ಆಮೇಲೆ 'ವಂಯ್' ಅಂತ, ಅಳೂ ಹಾಂಗ. ಎಚ್ಚರಾತು ಆಕೆಗೆ. ಈ ಬಾರಿಯಂತೂ 'ಬಿಡs' ಅಂತ ಗಟ್ಟಿಯಾಗೇ ಕೂಗಿದ್ನಂತ. ವಿಮಲಾ ಎದ್ದವಳೇ, ಮಗ್ಗಲು ಕೋಣೆಯ ಬಾಗಿಲನ್ನು ಹಠಾತ್ತನೆ ದೂಡಿ ನೋಡ್ತಾಳೆ! ಲೇಪಾಕ್ಷಿ ಮಂಚದ ಮೇಲೆ ಕುಳಿತು, ಇಳಿಬಿಟ್ಟ ತನ್ನ ಕಾಲುಗಳ ಸಂದಿಯಲ್ಲಿ ಮಕೂನನ್ನು ಬಿಗಿ ಹಿಡಿದಿದ್ದಾಳೆ. ಅವನು ಕೊಸರಿಕೊಳ್ತಿದ್ದಾನೆ. ಅಕ್ಕನನ್ನು ಕಂಡ ಕೂಡಲೇ ಲೇಪಾಕ್ಷಿ ಅವನ ಚಡ್ಡಿಯೊಳಗೆ ಹಾಕಿದ ತನ್ನ ಕೈಯನ್ನು ಹಿಂದೆಗೆದುಕೊಂಡಳಂತೆ. ಮಕರಂದ ಅವ್ವನ ಬಳಿಗೆ ಓಡಿ ಬಂದು ಅವಳ ಸೆರಗಿನಲ್ಲಿ ಮುಖ ಮರೆಸಿಕೊಂಡ. ನಾಚಿಕೆಯಿಂದ ಲೇಪಾಕ್ಷಿ ತಲೆ ಎತ್ತಿದಳು. ಥೇಟ್ ಉನ್ಮಾದಿನಿ. ಕಣ್ಣುಗಳು ಅದನ್ನೆ ಹೇಳುತಿದ್ದವು. ವಿಮಲಾ ಸಿಟ್ಟಿನಿಂದ ಅವಳ ಕಡೆಗೆ ನೋಡಿದಳು. "ನಿನ್ನ... ನಿನ್ನ..." ಮುಂದೆ ಹೇಗೆ ಅವಳನ್ನು ಗದರಿಸಬೇಕೆಂದು ತಿಳಿಯದೇ ಮಗನೊಂದಿಗೆ ಹೊರಬಂದಳಂತೆ.

ನಾನು ಸಂಜೆ ಮನೆಗೆ ಬಂದಾಗ ಎಂದಿನಂತೆಯೇ ವಾತಾವರಣ ಇತ್ತು. ಮರುದಿನ ಎಲ್ಲರೂ ತಂತಮ್ಮ ಕೆಲಸಗಳಿಗೆ ಹೋದರೂ ವಿಮಲಾ ಅಲ್ಲೇ ಸುತ್ತಾಡುತ್ತಿದ್ದಳು. ನಾ ಊಟಕ್ಕ ಕೂತಿದ್ದೆ "ಯಾಕs. ಹತ್ತೂವರಿ? ಅತು. ಇನ್ನೂ ಹೊಂಟಿಲ್ಲ, ಆಫೀಸಿಗೆ" ಅಂತ ಕೇಳಿದೆ. "ಕಕ್ಕೀ, ನಿಮ್ಮ ಸಂಗ್ತೀ ಸ್ವಲ್ಪ ಮಾತಾಡೋದದ" ಅಂತ ಅನ್ನತಾ ಎದುರಿಗಿನ ಕುರ್ಚಿ ಮ್ಯಾಲೆ ಕುಳಿತು "ಕಕ್ಕೀ, ನೀವು ನಿನ್ನೆ ಮಧ್ಯಾಹ್ನ ಹೊರಗೆ ಹೋಗಿದ್ರೆಲ್ಲ..."

ಎಂದು ಸುರುವು ಮಾಡಿ ಲೇಪಾಕ್ಷಿಯ ನಿನ್ನೆಯ ವರ್ತನೆಯನ್ನು ಚಾಚೂ ಬಿಡದೆ ಹೇಳಿದಳು. ನಡುನಡುವೆ ಮನಸ್ವೀ ಆಕೆಯನ್ನು ಬೈದಳು. "ಇದಕ್ಕ ಏನಾದರೂ ಉಪಾಯ ಮಾಡಬೇಕು" ಎಂದಳು.

ನನಗೆ ಅದೊಂದು ದೊಡ್ಡ ಘಟನೆ ಅಂತ ಅನಿಸಲಿಲ್ಲ. "ಹರೇದ ವಯಸ್ಸು. ಒಂದಿಷ್ಟು ನಾವೇ ಎಚ್ಚರದಿಂದ ಇದ್ದರಾಯ್ತು" ಅಂದೆ. "ಮಕೂ ನಿನ್ನಿನದೆಲ್ಲಾ ಮರತವರ್ಹಾಂಗ ಆರಾಮೇ ಇದ್ದಾನಲ್ಲ" ಅಂತನೂ ಹೇಳಿದೆ. ಆಕೆಗೆ ಸಮಾಧಾನ ಆದ ಹಾಗೆ ಕಾಣಲಿಲ್ಲ. ಆದರೂ ಸುಮ್ಮನಿದ್ದಳು.

ಕೆಲವು ದಿನ ಕಳೆದವು. ಒಂದು ಮೂರೋ ಸಂಜೆ. ನಾನಿನ್ನೂ ಕಾಲೇಜಿನ ಲೈಬ್ರರಿಯಲ್ಲಿ ಇದ್ದೆ. ವಿಮಲಾ ಅಲ್ಲಿಗೇ ಬಂದಳು. "ಇದೇನ ಆಫೀಸಿನ ವ್ಯಾಳ್ಯಾಕ್ಯ?"

"ಇವತ್ತ ಶನಿವಾರ. ಹಾಫ್ ಡೇ ಅಲ್ಲೇನು. ಮನೀಗೆ ಹೊರಟೇನಿ. ಹಂಗೇ ಸಹಜ ಬಂದೆ."

"ಲೇಪಾಟ್ಚಿಯಾಗಿದ್ದಳೇನು?"

"ಇಲ್ಲ. ಆಕಿನೂ ಮನಿಗೆ ಹೋಗಿರಬೇಕು. ನಾ ನಿಮ್ಮ ಕಡೆಗೇ ಬಂದೇನಿ" ಎಂದಳು. ಇಬ್ಬರೂ ಹೊರಗಿನ ಕಟಾಂಜನದ ಮೂಲೆಯಲ್ಲಿ ನಿಂತವು.

"ಕಕ್ಕೀ, ಲೇಪಾಕ್ಷಿಗೆ ಏನರೆ ಮಾಡಲಿಕ್ಕೇ ಬೇಕಾತು. ಊರಿಗೆ ವಾಪಸ ಕಳಿಸಿಬಿಡೋಣೇನು?"

"ಯಾಕ. ಮತ್ತೇ ಏನಾತು ಅಂಥಾದ್ದು?"

"ನಿನ್ನೆ ಸಂಜೆ ಲೇಪಾ ಮನೀಗೆ ಬರಲಿಕ್ಕೆ ತುಸು ತಡಾ ಆತು. ಆಕಿ ಹತ್ತಿರ ಹೋದೆ. ತಡಾ ಯಾಕಂತ ಕೇಳಬೇಕಾಗಿತ್ತು. ಆದರ ತುಂಬಾ ಸಿಗರೇಟಿನ ವಾಸನೆ!"

"ಇದೇನು ಹೇಳ್ತಿ? ಲೇಪಾ ಸಿಗರೇಟ್ ಸೇದತಾಳೇನು?"

"ಹೌದಂತ ಕಾಣಸ್ತದ."

ಆ ಹುಡುಗಿ ಇಷ್ಟು ದೂರ ಹೋಗಬಹುದು ಅಂತ ನನಗೆ ಅನಿಸಲಿಲ್ಲ. ಆದ್ರೂ ಯಾರು ಬಲ್ಲರು? "ತಡಾ ಯಾಕ ಆಯ್ತಂತ?"

"ಕಾಲೇಜದ್ದು ಏನೇನೋ ಕಾರಣಾ ಹೇಳಿದಳು. ಹಿಂಗ ಏನಾದರೂ ಹೇಳ್ತಾಳೇಂತ ಗೊತ್ತಿತ್ತು. 'ನಾ ಆಕಿ ಮ್ಯಾಲೆ ಪಾಳತಿ ಇಟ್ಟೇನಿ' ಅಂತ ಆಕಿಗೆ ತೋರಿಸೋದಿತ್ತು, ಅಷ್ಟೆ. ಆದರ ಆ ಸಿಗರೇಟಿನ ವಾಸನಿ."

"ಅಂದ್ರ ಆಕಿ ಮಾತಾಡುವಾಗ ಬಾಯಿಂದ ಬರ್ತಿತೊ?"

"ಅದೇನೊ ಗೊತ್ತಾಗಲಿಲ್ಲ ಬಿಡಿರಿ."

"ನಾ ಯಾಕ ಕೇಳಿದೆ ಅಂದ್ರ ಸಿಗರೇಟು ಸೇದುವವರ ಹತ್ತಿರ ಬಹಳ ಹೊತ್ತು ನಿಂತರೂ ನಮ್ಮ ಸೀರೆಯ ಮೇಲೆ ಆ ಹೊಗೆ ಹರಡತದ."

"ಅಂಥವರ ಹತ್ತಿರ ಆಕಿ ಬಹಳ ಹೊತ್ತು ನಿಂತಿದ್ದಳೂಂತ ಆಯ್ತಲ್ಲ! ಕಕ್ಕೀ, ನಮ್ಮ ಅವ್ವ ಸಾಯೋ ಮುಂದ ಆಕಿ ಒಂದು ವರ್ಷದ ಕೂಸು ಇದ್ದಳು. 'ನೀನ ನನ್ನ ಜಾಗಕ್ಕ ನಿಂತು, ಈಕಿನ್ನ ಜೋಪಾನ ಮಾಡಬೇಕು' ಅಂತ ಹೇಳಿ ವಚನಾ ತಗೊಂಡಿದ್ದಳು. ಈ ಹೆಣ್ಣರೆ ಹಿಂಗ" ಎಂದು ಹೇಳುತ್ತ ವಿಮಲಾ ಕಣ್ಣಲ್ಲಿ ನೀರು ತಂದಳು.

"ನಿನಗೆ ಯಾರದರ ಮ್ಯಾಲೆ ಸಂಶಯ ಅದ ಏನು?"

"ಹೂಂ, ಆ ಭಾವೂರಾಯ ಗೊತ್ತಲ್ಲ?"

"ಆ ಸಂಗೀತ ಮಾಸ್ತರಾ? ಗಡಸು ಮಾರಿಯವ, ನಮ್ಮ ರಸ್ತೆಯ ಕಡೇ ಮನಿಯೊಳಗ ಇರ್ತಾನಲ್ಲ..."

"ಅವನೇ. ತನ್ನ ಕೆಂಪು ಮಾಸಲೆಯ ಕೂದಲಾ ಇಳೀಬಿಟಗೊಂಡು, ಫುಸ್ ಫುಸ್ ಅಂತ ಸೇದತಾ ನಮ್ಮ ರಸ್ತೇದಾಗ ಹತ್ತು ಬಾರಿ ಓಡಾಡತಿರತಾನಲ್ಲ."

"ಅಂವಗೂ ಈಕಿಗೂ ಏನು ಸಂಬಂಧ, ಬಿಡು."

"ಇಬ್ಬರೂ ಒಂದೆರಡು ಸರೆ ಮಾತಾಡಿದ್ದನ್ನ 'ಹಲೊ' ಅಂದದ್ದನ್ನ ನಾ ನೋಡೇನಿ.

"ಅವನ ಮ್ಯಾಲೇ ಯಾಕ ಸಂಶಯ ಅನ್ನೋದಕ್ಕೆ ಇನ್ನೊಂದು ಕಾರಣಾ ಹೇಳ್ತೇನಿ. ಈಗ ಹತ್ತಿಪ್ಪತ್ತು ದಿವಸದ ಹಿಂದೆ ಲೇಪಾನ ಖಮೀಜನ್ನ ಸಾಬಾಣದ ನೀರಿನೊಳಗೆ ತೋಯಸ್ತಾ ಇದ್ದೆ. ಅದರ ಮ್ಯಾಲೆ ಕೂದಲೆಳೆ. ಅವನ ತಲೆಗೂದಲಿನಂಥಾದ್ದೇ, ಆವಾಗ ನನಗ ಏನೂ ಅನಿಸಿರಲಿಲ್ಲ. ಈಗ..."

ಹೆಣ್ಣು ಗಂಡಿನ ಸಂಬಂಧದ ಬಗ್ಗೆ ಸಂಶಯದ ಹುಳ ಒಮ್ಮೆ ಹೊಕ್ಕಿತೆಂದ್ರ ಏನೇನಲ್ಲಾ ವಿಚಾರ ಬರತಾವ. ಅಂತನೇ ಮುಗ್ಧ ಸ್ವಭಾವದ ನಮ್ಮ ವಿಮೂ ಇಷ್ಟು ಗಂಭೀರವಾಗಿ ತಂಗೀ ವಿಷಯದಲ್ಲಿ ಯೋಚಿಸುವಂತಾಯಿತಲ್ಲಾ. ಕನಿಕರ ಭಾವನೆಯಿಂದ ನಾ ಹೇಳಿದೆ:

"ಏನೋಪ್ಪಾ ನನಗ ಇನ್ನೂ ನಂಬಿಕೆ ಹುಟ್ಟವೊಲ್ಲದು. ಇನ್ನ ಆ ಜವಾಬ್ದಾರಿ ನನಗ ಬಿಡು. ನಾನೇ ಲೇಪಾನ್ನ ಮಾತಾಡಿಸಿ, ಹಾದಿಗೆ ಹಚ್ಚತೇನಿ."

ಆದ್ರ ನಾನೇನು ಹಾಗೆ ಮಾಡಲಿಲ್ಲ. ಮತ್ತೆ ಕೆಲವು ದಿನ ಉರುಳಿದವು. ಎಲ್ಲ ಮರೆತು ಹೋದಂತಿತ್ತು. ಆದರ ಅವತ್ತಿನ ದಿವಸ ನಾ ಲೈಬ್ರರಿಗೆ ಹೋಗಿದ್ದಿಲ್ಲ. ಮಳೆಗಾಲದ ಹವೆಯಿಂದಾಗಿ ಕೆಮ್ಮು ನೆಗಡಿಯ ಕಾಟ. ಒಂದು ನಿದ್ದೀ ತಗದು ಅಡಿಗೆಯ ಮನೆಯಲ್ಲಿರುವ ಡೈನಿಂಗ್ ಟೇಬಲ್‌ನಲ್ಲಿ ಅವತ್ತಿನ ಪೇಪರ ತಿರುವಿ ಹಾಕುತ್ತಿದ್ದೆ. ಅಷ್ಟರೊಳಗೆ ಹೊರಗಿನಿಂದ

ಸ್ಕೂಟರ್ ಸದ್ದು ಮಾಡುತ್ತಾ ನಮ್ಮ ಬಾಗಿಲಿಗೆ ನಿಂತ ಹಾಂಗ ಕೇಳಿಸಿತು. ಅದು ಭೀಮೇಶನದೇ. ಎದ್ದು ಹೋಗಿ ಬಾಗಿಲು ತಗೀಬೇಕು ಅನ್ನುವೊದರೊಳಗೆ ಅವನೇ ಲ್ಯಾಚ್ ಕೀ ತೆಗೆದು ಒಳಗ ಬಂದ. (ನಮ್ಮಲ್ಲೆ ಪ್ರತಿಯೊಬ್ಬರಿಗೂ ಅದರ ಕೈ ಅದ.) ಅರೆ! ಅವನ ಸಂಗತಿ ಒಬ್ಬ ಹೆಂಗಸೂ ಬಂದ ಹಾಂಗ ಕಾಣಸ್ತದಲ್ಲ? ಹೌದು, ಲೇಪಾಕ್ಷಿ! ಅವರು ನನ್ನೇನೂ ನೋಡಿರಲಿಲ್ಲ. ನಾನು ಸರಕ್ಕನೆ ಮೇಜಿನ ಕೆಳಗೆ ಸರಿದು ಕುಳಿತೆ.

ಆಕೆ ತನ್ನ ಕೋಣೆಗೆ ಹೋದಳು. ಇಂವ ಹೊರಗಿನ ದಿವಾನಿನ ಮೇಲೆ ಕುಳಿತುಕೊಂಡ. ಆಮ್ಯಾಲೆ ವಾಸ್ ಬೇಸಿನ್ ಹತ್ತಿರ ಹೋಗಿ ಮುಖ ತೊಳೆದುಕೊಂಡ. ಒರಸಿಕೊಡ. ಕೆಳಗೆ ಕೂತ. ನನಗೆ ಮುಖ ಕಾಣದಿದ್ದರೂ ಆ ಕಾಜಿನ ಸ್ಟ್ಯಾಂಡ್ ಮೇಲೆ ಪೌಡರ್ ಡಬ್ಬಿಯಲ್ಲಿ ಇಟ್ಟಿದ್ದರ ಸಪ್ಪಳದಿಂದ ಗೊತ್ತಾಗ್ತದ. ಆಮೇಲೆ ಫ್ಯಾನ್ ಹಾಕಿ (ಮಳೆಗಾಲದ ದಿನಗಳಲ್ಲಿ) ಆರಾಮ ಕುರ್ಚಿಯ ಮೇಲೆ ಕುಳಿತ.

ಸ್ವಲ್ಪ ಹೊತ್ತಿನ ಮ್ಯಾಲೆ ಆಕೇನೂ ಹೊರ ಬಂದಳು. ದಿವಾನಿನ ಮೇಲೆ ಕೂತಳು. ಇಂಬ ಕೇಳಿದ.

"ಕೀಲಿಕೈ ಮನ್ಯಾಗೇ ಮರತ ಬಂದೇನಿ ಅಂದಿ. ಸಿಕ್ಕಿತೆ?"

"ನನ್ನ ಬ್ಯಾಗಿನೊಳಗೇ ಇತ್ತು. ಒಂದು ನೋಟ್ ಬುಕ್‌ನಲ್ಲಿ ಸಿಕ್ಕೊಂಡಿತ್ತು."

"ಅಬ್ಬಾ ರಿಂಗಿನೊಳಗೆ ಇದ್ದ ಕೀಲಿಕೈ ನಿನಗ ಹೆಂಗ ಸಿಗಲಿಲ್ಲ, ಅಂತೇನಿ?"

"ಖರೇರಿ ಮಾಮಾ, ಆಗ ನನಗ ಸಿಗಲಿಲ್ಲ. ಅಂತ ನಿಮ್ಮ ಆಫೀಸಿಗೆ ಬಂದೆ. ಹೆಂಗೂ ಸ್ಕೂಟರ್ ಅದ. ಮನೀತನಕಾ ತಂದು ಬಿಡ್ತೀರಿ ಅಂತನೂ..."

"ಮತ್ತ ಅಲ್ಲೇ ನಿನ್ನ ಕಾಲೇಜಿನ ಲೈಬ್ರರಿಯೊಳಗ ಕಕ್ಕಿ ಇದ್ದಳಲ್ಲ?"

"ನನಗ ಅವರ್‍ನ ಕಂಡರ ಆಗೋದಿಲ್ಲ. ನನ್ನ ಮ್ಯಾಲೆ ಸದಾ ಸಿಡಿಮಿಡಿ ಹಾಯ್ತದ ಮುದುಕಿ."

(ಏ, ಏ, ನನ್ನ ಹೀಯಾಳಿಸಿ ಮಾತಾಡ್ತೀಯಾ? ಎಷ್ಟು ಸೊಕ್ಕು!)

"ತಿಳಿತು ಬಿಡು. ನಾನೇ ಬೇಕು ಅಂತ ಬಂದಿ ಮುದ್ದಾಂ! ಮನ್ಯಾಗ ಯಾರೂ ಇರೂದಿಲ್ಲ ಅನ್ನೋದೂ ಹೌದು."

"ಹಂಗೇನಿಲ್ಲ."

"ಮತ್ತ ಈ ಮದ್ದತ ಮಾಡಿದ್ದಕ್ಕ ನನಗ ಏನಾದರೂ ಬೇಕಲ್ಲ?"

"ಏನು ಕೊಡಬೇಕು?" ಅವಳ ದನಿಯಲ್ಲಿ ವಿನೋದೀ ಸಂಭ್ರಮ ಇದ್ದಂತೆ ಅನಿಸಿತು.

"ಏನಾದರೂ ಸಿಹೀ ಬೇಕು."

"ಅಕ್ಕ ಬರಲಿ ಕೊಡಸ್ತೀನಿ. I mean ಎಲ್ಲಿ ಇಟ್ಟಾಳೊ ಗೊತ್ತಿಲ್ಲ."

"ಅಕ್ಕನಿಂದ ಪಡೀಲಿಕ್ಕೆ ನಿನ್ನ ಮಧ್ಯಸ್ಥಿಕೆ ಏನೂ ಬೇಡಾ. ಈಗ ನಿನ್ನಿಂದ ಬೇಕು. ಮತ್ತು ಅದು ಎಲ್ಲ್ಯದ ಅನ್ನೋದು ನನಗ ಗೊತ್ತದ" ಹೀಗೆನ್ನುತ್ತ ಅಂವ ಎದ್ದು ಬಂದದ್ದು ಅವನ ನಡಿಗೆಯಿಂದ ಗೊತ್ತಾತು. ಆಗ ಅವಳ ಕಿಲ ಕಿಲ ನಗು. ಮತ್ತು ಇವನ ಲೋಚ್ ಲೋಚ್ ಶಬ್ದ. ನಾಯಿ ನೆಕ್ಕುವಾಗ ಮಾಡುವಂತಹದು.

"ಲೇಪಾ" ಇವನ ಕಾಮಾರ್ತ ದನಿ. "ಲೇಪಾ, ಇಷ್ಟು ದಿನ ಬಚ್ಚಲು ಮನಿಯೊಳಗೊ, ಹಿಂದಿನ ಗ್ಯಾಲರಿಯಲ್ಲೊ ಯಾರೂ ಇಲ್ಲದಾಗ ಅಪ್ಪಿಕೊಂಡು ಮುದ್ದು ಕೊಡತಿದ್ದಿ. ಹೆಚ್ಚಂದ್ರ ಒಂದು ಮಿನಿಟು. ಅದಕ್ಕೂ ಮುಂದುವರಿದಾಗ ತಪ್ಪಿ ಸಿಕೋತಿದ್ದಿ. ಈಗ ಅನಾಯಾಸ ಮನ್ಯಾಗ ಯಾರೂ ಇಲ್ಲ."

(ಈಗಾಗಲೇ ಇಷ್ಟೊಂದು ಮುಂದು ಹೋಗ್ಯಾರಲ್ಲ?)

"ಅಲ್ಲ, ಇಷ್ಟೆಲ್ಲದಕ್ಕೆ response ಕೊಟ್ಟೀದಿ. ಅಪ್ಪಿಕೊಂಡರ, ಮುದ್ದು ಕೊಟ್ಟರ, ಹಿಚಿಕಿದರ ನಿನಗ ಸೇರ್ತದ ಅನ್ನೋದು ಗೊತ್ತು ನನಗೆ" ಎನ್ನುತ್ತ ಅವಳ ಖಮೀಜಿನ ಬಟನ್ ಬಿಚ್ಚಲಿಕ್ಕೆ ಹೋದಾಗ, ಅವನನ್ನ ತಡೆದಳು.

"ಸೇರಲಿ, ಬಿಡಲಿ. ಇದಕ್ಕೂ ಮುಂದ ನೀವು ಹೋಗಬಾರದು. ಅದು ನನ್ನ ಶೀಲದ ಪ್ರಶ್ನೆ ಅದ."

(ಹುಚ್ಚೂ ಮುಂಡೇ, ಶೀಲಂತ ಶೀಲ! ಈಗಾಗಲೇ ಹೋಗಿಬಿಟ್ಟದ)

ಭೀಮ್ಯಾ ಆಕೆಯ ತುಟಿಗೆ ತುಟಿ ಹಚ್ಚಿ, ಗುದಮುರಿಗಿ ಹಾಕುತಿದ್ದ. ಆಗ ಆಕೆ "ಬಿಡಿ ನನ್ನಾ, ಇಲ್ಲಾದರ ಅಕ್ಕಗ ಹೇಳತೇನಿ" ಅಂತ ಗಟ್ಟಿಯಾಗೇ ಕೂಗಿದಳು. ಇಂವ ಬಿಡೂ ಹಂಗ ಕಾಣಲಿಲ್ಲ. ಇನ್ನ ನಾನೇ ಎದ್ದು ಹೋಗಿ ಅವನ್ನ ಸರೀ ಒದಿಬೇಕು ಅನ್ನೋದರೊಳಗೇ ಸುಸ್ತಾದವರಂತೆ ಆಕೆಯ ಮೈ ಬದಿಗೆ ಸುಮ್ಮನೆ ಬಿದ್ದುಕೊಂಡದ್ದು ಕಂಡಿತು.

ಅವರ ಹೇಸಿತನಕ್ಕ ಬ್ಯಾಸತ್ತು ಮಾರೀ ತಿರುಗಿಸಿದೆ. ಆದರ ನನಗ ಒಮ್ಮಿಂದೊಮ್ಮೆ ನನ್ನವರ ನೆನಪು ಉಕ್ಕಿ ಬಂತು. ಇಂಥದೇ ಪ್ರಸಂಗ. ಈಕೆಯದೆ ವಯಸ್ಸು ನನಗ. ಮದುವಿ ಆಗಿದ್ದಿಲ್ಲ. ಆದರ ನಿಶ್ಚಯ ಆಗಿಹೋಗಿತ್ತು. ನನ್ನ ಶಿಕ್ಷಣ (ಬಿ.ಎ.) ಮುಗೀಲಿ. ಆಮ್ಯಾಲೇನS ಮದುವಿ ಆಗತೇನಿ ಅಂದ್ರು. ನನ್ನ ಶಿಕ್ಷಣ, ಅಭ್ಯಾಸದ ಬಗ್ಗೆ ಅವರಿಗೆ ಅತ್ಯಂತ ಕಾಳಜಿ ಇತ್ತು. ಆಗಾಗ ಮನೀಗೆ ಬರತಿದ್ರು, ಪುಸ್ತಕಾ ತರತಿದ್ರು. ಅದರ ಮಹತ್ವದ ಹೇಳಿ ಓದಲಿಕ್ಕೆ ಕೊಟ್ಟು ಹೋಗುತಿದ್ರು.

ಅವರ ಸಂಗ್ತೀ ಜಾಸ್ತಿ ಮಾತಾಡಲಿಕ್ಕೆ ನನಗೆ ನಾಚಿಕೆ. ಅವರದ್ದು ಗಾಂಭೀರ್ಯ. ಮೇಲಾಗಿ ಈಗಿನವರಿಗಿದ್ದಂಗ ಮನೆಯೊಳಗ ಹೆಚ್ಚಿನ ಸ್ವಾತಂತ್ರ್ಯನೂ ಇಲ್ಲ. ಅವರು

ಹೋಗೋ ಮುಂದ ಬಾಗಿಲತನಕಾ ಕಳಸಲಿಕ್ಕೆ ಹೋಗುತ್ತಿದ್ದೆ. ಆವಾಗ ಮೃದುವಾಗಿ ನನ್ನ ಗಲ್ಲ ನೇವರಿಸುತ್ತಿದ್ದರು. ಇವರ ಪ್ರೀತಿ ಇಷ್ಟೇನಾ ಅಂತ ನಾ ಒಮ್ಮೊಮ್ಮೆ ಅಂದುಕೊಂಡಿದ್ದು ಹೌದು. ಹಾಂ ಪತ್ರಾ ಬರೀತಿದ್ದೆ. ಮನಿಗೆ ಬಂದಾಗ ಅವರ ಕೈಯೊಳಗೇ ಕೊಡತಿದ್ದೆ. ಬಾಲಿಶತನದಿಂದ ಏನೇನೂ ಬರೀತಿರಬೇಕು. ಅವರು ಮಾತ್ರ 'ಪ್ರೀತಿಯ' ಅನ್ನುವ ಒಂದು ವಿಶೇಷಣ ಬಿಟ್ರ, ಯಾವುದೇ ಗೊಳ್ಳು ಪ್ರೇಮದ ಮಾತು ಬರೀತಿರಲಿಲ್ಲ. ಯಾಕ ನಮ್ಮ ಹಿರೇ ಅಳಿಯನದೆ ನೋಡತೇನಲ್ಲ. ನನ್ನ ಮಗಳು ಈ ಊರಿಗೆ ಬಂದಾಗ, ಪತ್ರ ಬರೀತಿರತಾನ ಎರಡು ದಿವಸಕ್ಕೊಮ್ಮೆ. ಏನೇನೆಲ್ಲಾ ಹುಚ್ಚುಚ್ಚಾರ ಇರ್ತದೆ. ಆಕೆ ಅದನ್ನ ಒಮ್ಮೆ ಓದಿದಳೂ ಅಂದ್ರ, ಒಗದಬಿಟ್ಟಿರತಾಳ ಸಿಕ್ಕಲ್ಲೇ ಅರ್ಥಾತ್ ಅಷ್ಟು ಗೊಳ್ಳು ಇರ್ತsದ ಅದಿರಲಿ. ಅವತ್ತ ಅವರು ಬಂದರು ಅಂತ ಹೇಳಿದೆನಲ್ಲ. ಅದೇ ನನ್ನ ಬಿ.ಎ. ಪರೀಕ್ಷಾ ಮುಗಿದಿತ್ತು. ಅದರ ಬಗ್ಗೆ ಕೇಳಲಿಕ್ಕೆ ಬಂದೇನಿ ಅಂದ್ರು. 'ಮನಿಯೊಳಗ ಯಾರೂ ಕಾಣ್ತಾ ಇಲ್ಲ?' ಅಂದರು. ನನ್ನ ಕಡೆಯಿಂದ ಪೇಪರ ಇಸಕೊಂಡ್ರು. ನಾ ಒಳಗ ಚಹಾ ಮಾಡಲಿಕ್ಕೆ ಹೋದೆ. ಅವಸರದಲ್ಲೇ ತುಸು ಶೃಂಗಾರ ಮಾಡಿಕೊಂಡು ಸಂಭ್ರಮದಿಂದ ತಗೊಂಡು ಬಂದೆ. "ಪೇಪರ ಹೆಂಗ ಆಗ್ಯಾವ ಅಂತೇನು ಕೇಳೂದಿಲ್ಲ. ಛೊಲೋ ಆಗ್ಯಾವ ಅನ್ನೋ ಮಾಮೂಲಿ ಉತ್ತರ ನನಗ ಬ್ಯಾಡ ನನಗ, ಏನೇನು ಬರೆದಿದ್ದಿ ಅಂತ ವಿವರಿಸು" ಅಂತ ಕೇಳಿದರು. ಹೇಳತಾ ಹೋದೆ. ಅರ್ಧ ತಾಸು. ಎಲಾ! ತನ್ನ ಎದುರಿಗೆ, ಕೈ ಹಿಡಿಯುವ ಹೆಂಡತಿಯೇ ಕೂತಾಳೆ ಅನ್ನುವ ವಿಚಾರನೇ ಅವರಿಗೆ ಇದ್ದಂಗ ಕಾಣಲಿಲ್ಲ. ಮನೀ ಪಾಠಕ್ಕ ಬರೋ ಮಾಸ್ತರರ್ಹಂಗ ಇತ್ತು ಅವರ ವ್ಯವಹಾರ. 'ಚಹಾ ಆರತದ' ಅಂತ ನಾನೇ ನೆನಪು ಮಾಡಬೇಕಾಯ್ತು. ಎಲ್ಲಾ ಮುಗಿದ ಮ್ಯಾಲೆ ಅವರ ಎದುರಿಗೇ ನಿಂತು "ಏನನಸ್ತದ ನಿಮಗ. ಹೆಂಗ ಮಾಡೇನಿ?" ಅಂತ ಕೇಳಿದೆ. ಅವರು ಏನು ಹೇಳ್ತಾರೊ ಅಂತ ತವಕದಿಂದ ಕಾದೆ. ಅವರು ಆಡಿದ್ದು ಒಂದೆ ಶಬ್ದ Good. ಅದು ಅವರ ಮನಸ್ಸಿನ ಆಳದಿಂದೇ ಬಂತೂ ಅಂತ ನನಗ ಅನಿಸ್ತು. ನಾ ಧನ್ಯಳಾದೆ, ಅನ್ನುವ ಭಾವನೆಯಿಂದ ಅವರ ಎದೀಗೆ ತಲೆ ಆನಿಸಿದೆ. ಅವರು ನನ್ನ ಅಪ್ಪಿಕೊಂಡು, ಮಾರಿ ಎತ್ತಿ ಹಿಡಿದರು. ಮುತ್ತಿಟ್ಟರು, ಇನ್ನಷ್ಟು ಗಟ್ಟಿಯಾಗಿ ಅಪ್ಪಿಕೊಂಡರು. ನನಗ ಅವರು ತಮ್ಮ ಮನಸ್ಸಿನಿಂದೇ ನನ್ನ ಅಪ್ಪಿಕೊಂಡ ಹಾಂಗ ಅನಿಸ್ತು. ಮನಿಯೊಳಗ ಯಾರೂ ಇಲ್ಲ. ಮದುವೀನೂ ಆಗಿಲ್ಲ. ಇದಕ್ಕೂ ಮುಂದ ಹೋದರ ಏನು ಗತಿ? ಅಂತ ಮನಸ್ಸಿನಲ್ಲೇ ನಡುಗಿದೆ. ಬಹಳ ಸೂಕ್ಷ್ಮ ನನ್ನ ಯಜಮಾನರು. ನನ್ನ ಭಾವನಾ ಅವರಿಗೆ ಗೊತ್ತಾಗಿರಬೇಕು. ಎಷ್ಟೊಂದು ಅನುನಯದಿಂದ, ನಿಧಾನವಾಗಿ ನನ್ನ ಒಲಿಸಿಕೊಂಡರು. ಅವಸರ ಇಲ್ಲ. ಕಳವಿನ ವ್ಯವಹಾರ ಮಾಡಿದಿವಿ ಅನ್ನುವ ಭಾವನೆಯಂತೂ ಎಷ್ಟೂ ಇಲ್ಲ. ಸಹಜಾ ಸಹಜೇಕ ಎಂಬಂತೆ ಸೇರಿದಿವಿ. ಅಖಂಡ ಎರಡು ತಾಸು ಆಡಿದಿವಿ, ಮಾತಾಡಿದಿವಿ. ನಲ್ವತ್ತು ವರ್ಷದ ಹಿಂದಿನ ಮಾತು. ಇದೀsಗ ಅದು ನಡೀತು ಎನ್ನುವಷ್ಟು ಹಚ್ಚ ಹಸುರಾಗಿ ನನ್ನ ನೆನಪಿನಲ್ಲಿ ಅದ.

ಮರುದಿವಸ ನಾನು ನಮ್ಮ ಅಪ್ಪನೊಡನೆ ಅವರ ಮನಿಗೆ ಹೋಗಿದ್ದೆ. ಒಬ್ಬಳೇ ಸಿಕ್ಕಾಗ ಕೇಳಿದರು : "ನಿನ್ನೆ ನಾ ನಿನಗ ಸಾಕಷ್ಟು ತ್ರಾಸ ಕೊಟ್ಟೆನಲ್ಲ?" ಎಂದು. "ಅದಕ್ಕ ಉತ್ತರ ಇನ್ನೊಮ್ಮೆ ಹಿಂಗೇ ತ್ರಾಸ ಕೊಟ್ಟಾಗ ಹೇಳತೇನಿ" ಅಂದೆ.

"ತುಂಟೀ" ಎನ್ನುತ್ತ ಯಥಾ ಪ್ರಕಾರ ಗಲ್ಲ ನೇವರಿಸಿ ಹೇಳಿದರು : "ಆ ಇನ್ನೊಮ್ಮೆ ಅನ್ನೋದು ಮದುವಿ ಆದ ಮ್ಯಾಲೇನ" ಅಂತ ಗಂಭೀರವಾಗಿ ಹೇಳಿದರು.

ಮುಂದಾದರೂ ಹಾಗೇನೆ. ಈಗಿನವರ ಹಂಗ, ಮುಂಜಾನಿಲ್ಲ, ಮಧ್ಯಾಹ್ನ, ಮೂರೊ ಸಂಜಿ ಅಂತ ಇಲ್ಲ, ಇಬ್ಬರ ಮನಸ್ಸು ಪ್ರಸನ್ನ ಇದ್ದಾಗ, ಒಂದು ನಿದ್ದೀತಗದ ದೇಹಕ್ಕೆ ದಣಿವು ಇಲ್ಲದಾಗ ಮರುದಿನ ಕೆಲಸದ ವಿಶೇಷ ಜಂಜಡ ಇಲ್ಲದಾಗ ರಾತ್ರಿ ನನ್ನ ಹತ್ರ ಬರತಿದ್ರು. ಆಗ ನಮಗೆ ಸಂಪೂರ್ಣ ತೃಪ್ತಿ. ಏಳೆಂಟು ದಿವಸನೂ ಅದರ ಸವಿ ಉಳಿಯೋ ಅಷ್ಟು. ಪ್ರತಿ ಸರೇನೂ ಮೊದಲ ಸಮಾಗಮ ಆದಷ್ಟೇ ಹೊಸತನ. ಹೊರಗಿನ ಯಾವುದೇ ಕೆಲಸ ಇರಲಿ ಅವರು ಅದನ್ನು ಗಟ್ಟಿತನದಿಂದ, ಅಚ್ಚುಕಟ್ಟಾಗಿ ಪೂರೈಸುತಿದ್ದರು. ಅಂತೇ ಏಕಾನಾಮಿಸ್ಟ ಅಂತ ದೊಡ್ಡ ಹೆಸರು ಗಳಿಸಿದರಲ್ಲ! ನಾ ಖರೆ ಹೇಳ್ತೇನಿ. ಶ್ರೀ ಹಾ. ಅವರು ತೀರಿಕೊಂಡರ, ನನ್ನ ಜೊತೆಗಿಲ್ಲ ಅನ್ನುವ ನೋವು ಯಾವಾಗರೆ ಒಂದು ಇರುವೆ ಕಡಿದಷ್ಟು ಬರತದ ಅಷ್ಟೇ. ಆದರೆ ಅವರ ಸಂಗ್ತೀ ನಾ ಕಳೆದ ಒಂದೊಂದು ಪ್ರಸಂಗ, ಆಡಿದ ಮಾತು ಇವನ್ನ ಮನಸ್ಸಿನೊಳಗಿಂದ ಹೊರಗ ತೆಗೆದು ನೆನಪು ಮಾಡಿಕೊಂಡೇ ಅಂದ್ರ, ಅವು ಸ್ಪಷ್ಟವಾಗಿ ಕಣ್ಣ ಮುಂದೆ ನಿಲ್ಲತಾವ. ಅವರು ಜೀವಂತ ಇದ್ದಾರ ಅಂತನೇ ಆ ಕ್ಷಣಕ್ಕ ಭಾವನಾ ಬರತsದ.

ಛೇ, ಮುಖ್ಯ ವಿಷಯ ಬಿಟ್ಟು, ಏನೇನೊ ಹೇಳ್ತಿದ್ದೇನಲ್ಲ. ಈಗಂತೂ ಈ ಪೋಲಿ ಮುಂಡೇ ಮಂಗ ಭೀಮ್ಯಾನ ಹುಚ್ಚುಚ್ಚಾರಕ್ಕ ತಡೆ ಹಾಕಬೇಕು ಅಂತ ನಿರ್ಧಾರ ಮಾಡಿದೆ. ಮರುದಿನ ವಿಮಲಾ ಒಬ್ಬಳೇ ಅಡಿಗೆ ಮನೆಯಲ್ಲಿ ಇದ್ದಾಗ "ಲೇಪಾನ ಬಗ್ಗೆ ನೀ ಹೇಳೋದ ಖರೇ ಅದ. 'ಯಾಕ? ಏನಾಯ್ತು? ಯಾರ ಸಂಗ್ತೀ?' ಅಂತ ಏನೂ ಕೇಳಬೇಡ. ಅಕಿನ್ನ ಈ ಮನಿ ಬಿಡಸಲಿಕ್ಕೇ ಬೇಕು. ಹಾಗಂತ ಊರಿಗೆ ಕಳಿಸೋದಲ್ಲ. ನಿನ್ನ ತವರು ಮನಿಯವರು ಏನಂದಾರು? ಹೆಂಗೂ ಇದು ಕಡೀ ವರ್ಷ ಆಕೆಯದು" ಎಂದು ಹೇಳಿದೆ.

"ಹಂಗಾರ ಏನು ಮಾಡಬೇಕಂತೀರಿ?"

"ಅವರ ಕಾಲೇಜಿನ ಲೇಡೀಸ್ ಹಾಸ್ಟೆಲಿಗೆ ಸೇರಿಸೋಣ."

"ಇದು ಒಳ್ಳೇ ಉಪಾಯು. ಕಕ್ಕೀ, ನಾ ಇವರಿಗೆ ಹೇಳತೇನಿ, ಅಲ್ಲಿಯ ವಾರ್ಡನ್‌ಬಾಯಿಗೆ ಭೆಟ್ಟಿಯಾಗಿ ಫಾರ್ಮ್ ತರಲಿಕ್ಕೆ!

"ಛೇ, ಅಂವಾ ಸರ್ವಥಾ ಬ್ಯಾಡಾ! ನಾನೇ ಹೋಗ್ತೇನಿ. ಆ ವಾರ್ಡನ್ ಬಾಯಿ ಮರಿಯಮ್ಮನ ಗುರ್ತು ಅದ. ಆಕಿ ನನ್ನ ಕ್ಲಾಸ್‌ಮೇಟ್ ಇದ್ದಳು, ಎಂ.ಎ. ಕಲಿಯುವಾಗ."

ಅವತ್ತು ಲೈಬ್ರರಿಗೆ ಹೋಗೋದಕ್ಕೆ ಮುಂಚೆ ಲೇಡೀಸ್ ಹಾಸ್ಟೆಲ್‌ಗೆ ಹೋದೆ. ಆಕೆ ಇದೇ ವರ್ಷ ಹಾಸ್ಟೆಲ್‌ಗೆ ಬಂದಿದ್ದಾಳೆ. ಎಂ.ಎ. ಫೇಲ್ ಆದಾಗ ದಿಲ್ಲಿಯಲ್ಲಿ ಇಂಥದೇ ಕೆಲಸದಲ್ಲಿ ಇದ್ದು ರಿಟೈರ್ ಆದ ಮ್ಯಾಲೆ ನಮ್ಮಲ್ಲೆ ನೌಕರಿ ಹಿಡಿದಳಂತೆ. ಬಂದ ಹೊಸದರಲ್ಲಿ ಕಾಲೇಜಿನ ಕಾರಿಡಾರ್‌ನಲ್ಲಿ ಅಕಸ್ಮಾತ್ ಸಿಕ್ಕಿದ್ದಳು. ಹಳೇದು ಈಗಿನದು ಅಷ್ಟಿಷ್ಟು ಮಾತಾಡಿದ್ದಿವಿ. ಆದರ ಆಕಿ ವಾಚಾಳಿ. ಅದಕ್ಕೆ ಆಕಿನ್ನ ನಾ ಹೆಚ್ಚು ಹಚ್ಚಿಕೊಂಡಿದ್ದಿ, ತನ್ನ ರೂಮಿಗೆ ಅವಳು ಆಮಂತ್ರಿಸಿದ್ದರೂ. ಇರಲಿ.

ಅವತ್ತು ಹೋದೆ, ಆತ್ಮೀಯತೆಯಿಮದ ಕರೆದಳು. ಎದುರಿಗಿನ ಕುರ್ಚಿ ತೋರಿಸಿದಳು. "ನಾ ಮುದ್ದಾಂ ಇಲ್ಲಿ ಒಂದೇ ಕುರ್ಚಿ ಇಡಿಸೇನಿ. ಇಲ್ಲಾದರ ಹುಡುಗಿಯರು ಕೂತುಗೊಂಡು ವಟವಟ ಮಾತಾಡ್ತಾರ. ಅಡ್ಡಡ್ಡ ಕೇಳತಾರ. ನಾ ಬಹಳ ಸ್ಟ್ರಿಕ್ಟು ಅಂತ ಗೊತ್ತಾಗೇದ ಅವರಿಗೆ" ಅಂದಳು. "ಅತಿಥಿಗಳೇ ಇಬ್ಬರು ಬಂದ್ರ ಏನು ಮಾಡ್ತೀ" ಅಂತ ಕೇಳುವಾಕೆ ಇದ್ದೆ. ಕೇಳಲಿಲ್ಲ. ಕೇಳಿದ್ರೆ, ತಾನೇ ವಟ ವಟ ಸುರುವು ಮಾಡುತ್ತಿದ್ದಳು! ಇರಲಿ.

"ಹಾಸ್ಟೆಲಿಗೆ ಎಡ್ಮಿಶನ್ ಫಾರ್ಮು ಬೇಕು" ಅಂದೆ. "ಯಾರಿಗೆ?" ಅಂದಳು. ಹೇಳಿದೆ. "ಎಲ್ಲಾ ಭರ್ತಿ ಆಗ್ಯಾವ. ಇದಕ್ಕೂ ಮುಂಚೆ ಬರಬೇಕಿತ್ತು"

"ಇಲ್ಲ, ಏನಾದರೂ ಮಾಡಿ ಕೊಡಲೇಬೇಕು."

"ನೋಡತೇನಿ. ಆದ್ರ ಏನು ಅಂಥಾ ಅಡಚಣೆ?"

ಆಗ ಲೇಪಾನ ಬಗ್ಗೆ ಎಲ್ಲಾ ವಿವರ ಹೇಳಿದೆ. ಫಕ್ತ ಮನೆಯ ಜನರ ಹೆಸರು ಹೇಳದೆ ನೆರೆ ಮನೆಯವ ಅಂತ ಹೇಳದೆ. "ಮುಗೀತ ನಿಂದು?" ಅಂತ ಅಂದವಳೇ ಜೋರಾಗಿ ನಗಲಿಕ್ಕೆ ಸುರುವು ಮಾಡಿದಳು. ಹೇಳಿದಳು :

"ಇಷ್ಟೇನಽ? ಇವೆಲ್ಲಾ ಈಗಿನ ಕಾಲಕ್ಕ ನಡೆಯೋದೆ. ದಿಲ್ಲಿಯದೊಂದು ಮೋಜು ಹೇಳ್ತೇನಿ ಕೇಳು. ಇದೆ ವಾರ್ಡನ್ ಕೆಲಸಕ್ಕೆ ಸೇರಿ ಮೂರು ನಾಲ್ಕು ವರ್ಷ ಆಗಿತ್ತು. ಒಬ್ಬ ವಿಂಗ್ ಕಮಾಂಡರ್ ತನ್ನ ಮಗಳನ್ನು ಸೇರಿಸಿಯಾದ ಮೇಲೆ 'ಈಕೆ ಇನ್ನೂ ಸಣ್ಣ ಹುಡುಗಿ. ಒಂದಿಷ್ಟು ಪರ್ಸನಲ್ ಕಾಳಜಿ ತಗೋಳಿ' ಅಂತ ಕಳಕಳಿಯಿಂದ ಹೇಳಿ ಹೋದರು. ಎಷ್ಟು ಮುದ್ದಾಗಿ ಇತ್ತು ಅಂದೀ ಆ ಹುಡುಗಿ! ಯಾರಿಗೂ ಅಂತಃಕರಣ ತುಂಬಿ ಬರಬೇಕು. ಕ್ರಮೇಣ ಗೊತ್ತಾಯ್ತು. ಆಕಿಗೆ ಒಬ್ಬ ಲವರ್ ಇದ್ದಾನ ಅಂತ. ಪ್ರತಿದಿನ ತಪ್ಪದೇ ಬರುತ್ತಿದ್ದ. ಹೊರಗಿನ ಗಾರ್ಡನ್ನಿನೊಳಗ ಕೂತು ಮಾತಾಡುತ್ತಿದ್ದರು. ನನಗ ಅದು ಕಾಣಿಸತಿತ್ತು. ಹೀಂಗ ಐದಾರು ಜೋಡಿಗಳು ಇದ್ದೇ ಇರುತ್ತಿದ್ದವು. ಅದು ಲೇಡಿಸ್ ಹಾಸ್ಟೆಲಿನ ಮಾಮೂಲೇ ಅನ್ನು. ನಿನಗ ಗೊತ್ತಲ್ಲ. ಆದ್ರ ಜನವರಿ ಸುಮಾರಿಗೆ ಗೊತ್ತಾತು ಬಸುರ ಆಗ್ಯಾಳಂತ. ಹಾಸ್ಟೆಲ್ ಹುಡುಗಿಯರು ಸ್ವೇಚ್ಛಾಚಾರಿಗಳಾಗದಂತೆ ನೋಡಿಕೊಳ್ಳುವ ಜವಾಬ್ದಾರಿ ನಂದೇ

ತಾನೇ. ನನಗ ಗಾಬರಿ ಆತು. ಪ್ರಿನ್ಸಿಪಾಲರಲ್ಲಿಗೆ ಹೋಗಿ ವರದಿ ಮಾಡಿದೆ. "I am to be held responsible for this mischief" ಅಂದೆ. "No, You are not" ಅಂದರು. ನಾನು ಮತ್ತೆ ಹಾಗೇ ಹೇಳಿದಾಗ ಅವರು "I say, Lady, how can you be responsible for a woman's Pregnancy? it's malls job" ಅಂದರು. Crude joke ಅಲ್ಲ? ಮುಂದ ಅವರು ಹೇಳಿದ ಮಾತಿನ ಸಾರಾಂಶ ಇಷ್ಟೇ ಈ ಬೆಳೆದ ಹುಡುಗಿಯರಿಗೆ ತಮ್ಮ ಜವಾಬ್ದಾರಿ ತಿಳಿದೇ ಇರ್ತದ. ಹೆಚ್ಚು ಕಡಿಮಿ ಏನಾದ್ರೂ ಆದ್ರ ತಾವೇ ಭೋಗಿಸಬೇಕಾಗ್ತದ ಅನ್ನೋದು ಅವರಿಗೆ ಗೊತ್ತು" ಎಂದು.

"ನೀ ಅನ್ನೋದಾದರೂ ಏನು?" ಅಂತ ಮರ್‍ಯಮ್ಮನ್ನ ಕೇಳಿದೆ.

"ನಾ ಹೇಳೋದು ಇಷ್ಟೇ Take it easy. ಈ ನಲ್ವತ್ತು ವರ್ಷದ ಸರ್ವಿಸಿನೊಳಗ ನಾ ಸಾವಿರಾರು ಹುಡುಗಿಯರನ್ನ ಕಂಡೇನಿ. ಅವರ ಮನಸ್ಸು ಹೆಂಗ ವರ್ಕ್ ಆಗತದ ಅನ್ನೋದು ತಿಳದೇನಿ. ಹೊರಗಿನದ್ಯಾಕೆ ನೀನೂ ನಾನೂ ಇರತಿದ್ದ ಹಾಸ್ಟೆಲಿನ ಒಳಗೇ ಕೆಲವು ಹುಡುಗಿಯರು ಹೆಂಗ ಇರುತ್ತಿದ್ರು ಅನ್ನೋದು ನೆನಪು ಮಾಡಿಕೊ. ಅವರ್ನ ಕಂಡು ನಿನಗೆ ಬಹಳ ಸಿಟ್ಟು ಬರತಿತ್ತು. ಆಗ ನಿನಗ ನಾ ಹೇಳಿದ್ದೆ 'ಕಲ್ಯಾಣೀ, ನೀ ಮದುವಿ ಆಗಿ ಗಂಡನ ಸುಖ ಉಂಡು ಬಂದವಳು. ನಿನಗೂ ಅವರಿಗೂ ಅಂತರ ಅದ' ಅಂತ."

"ಹಂಗಂತ, ಅಡ್ಡ ಹಾದೀ ಹಿಡೀಬಾರದು."

"ಒಪ್ಪತೀನಿ. ಅದರ ಹಾದೀನೆ ಇರದಿದ್ದಾಗ? ಹಿಂದಿನ ಕಾಲಕ್ಕ ಹುಡುಗಿಯರು ಮುಟ್ಟಾಗುವುದರ ಒಳ ಹೊರಗಿನ ವಯಸ್ಸಿನಲ್ಲಿ ಮದುವಿ ಆಗಿಬಿಡುತಿದ್ದರು. ಈಗೋ ಕಡಿಗಿ ಸುರುವಾಗಿ ೧೦-೧೫ ವರ್ಷ ಆದರೂ ಮದುವಿ ಯಾನೆ ಪುರುಷನ ಸಂಪರ್ಕ ಆಗಿರುವುದಿಲ್ಲ. ಹೀಂಗಾಗಿ, ನಮಗ ಬೇಕಾದವರು ಒಬ್ಬರನ್ನ ಅಪ್ಪಿಕೊಂಡರ, ಮುದ್ದು ಕೊಟ್ಟರ ಏನು ತಪ್ಪು? ಅಷ್ಟರಿಂದೇನು ನಮ್ಮ ಶೀಲದ ಭಂಗ ಆಗಲಿಲ್ಲ ಅಂತ ತಿಳೀತಾರ. ಒಂದು ಕಾಲಕ್ಕೆ ಪರ ಪುರುಷನನ್ನ ಮನಸ್ಸಿನೊಳಗೆ ತರೋದು ಸಹಿತ ಪಾಪದ ಕೆಲಸ ಆಗಿತ್ತು. ಅದೊಂದು ಬಗೆಯ ಮಾನಸಿಕ ವ್ಯಭಿಚಾರನೇ ಅಲ್ಲೇನು? ಆದರ ಈಗಿನ ದಿನದೊಳಗೆ ಅದು ಪಾಪದ ಕೆಲಸ ಅಂತ ಯಾರರೆ ತಿಳೀತಾರೇನು? ವಿಶೇಷತಃ ಗಂಡಸು ಕೆಟ್ಟ ಇದ್ರ? ಈಗ ಇನ್ನೂ ಒಂದು ಹೆಜ್ಜೆ ಮುಂದ ಹೋಗಿ ಪ್ರೇಮ ಮಾಡತಾರ. ಅದು ಕ್ಷಮ್ಯ ಅಂತ ಅನಿಸೇದ. ಇಷ್ಟೇ ಅಲ್ಲ ಮಾನ್ಯತಾ ದೊರೀಲಿಕ್ಕೆ ಹತ್ತೇದ."

ನಾ ಸಿಟ್ಟಿಗೆದ್ದು ಹೇಳಿದ್ದೆ : "ಯಾರಂತಾರ ಮಾನ್ಯತಾ ಅಂತ? ನಾ ಹೇಳತೇನಿ ಕೇಳು. ವಿಷಮ ದಾಂಪತ್ಯ ಇರಬೇಕು ; ತಕ್ಕ ಸಮರ್ಥನೆ ಇರಬೇಕು ; ಬೇರೆಯವರನ್ನ ಪ್ರೀತಿಸೋದು ತಪ್ಪು ಅಲ್ಲ ಅನ್ನುವ ನೈತಿಕ ಧೈರ್ಯನೂ ಬೇಕು. ಅಂಥವರಿಗೆ ನಾನು ಮರ್ಯಾದಿ ಕೊಡತೇನಿ. ಆದರೆ ಕದ್ದು ಮುಚ್ಚಿ ಮಾಡುವವರು? ಅವರಿಗೆ ಯಾವ

ಧೈರ್ಯನೂ ಇರೂದಿಲ್ಲ. ದೈಹಿಕ ತೀಟೆ ಮಾತ್ರ. ಕಳವಿನ ವ್ಯವಹಾರ ಅದು. ಪುಕ್ಕರು! ಸಿಕ್ಕಿ ಬಿದ್ದಾಗ, ಯಾರರೆ ಒದ್ದರ ಒದಿಸಿಕೋತಾರ."

"ಏನೋವ್ವಾ. ಆ ನಿನ್ನ ಲೇಪಾಕ್ಷಿ ನನಗೇನೊ decent ಆಗಿ ಕಂಡಳು. ಆಕಿನ್ನ ನಾ ಒಮ್ಮೆ ನೋಡೇನಿ. ಯಾರದೊ ಗೆಳತಿ -ಸಂಗತಿ ಇಲ್ಲಿಗೆ ಬಂದಿದ್ದಳು. ಅಲ್ಲ ಕಲ್ಯಾಣಿ, ಮದುವೀಕಿಂತ ಮುಂಚೆ, by chance ಒಬ್ಬನ ಹತ್ತಿರ ಮಲಗಿ ಬಂದ್ರ ಏನು ತಪ್ಪು? ಅಂತ ತಿಳಿಯುವ ಹುಡುಗಿಯರೂ ಇರುವಾಗ, ಈ ಹುಡುಗಿ 'ನನ್ನ ಶೀಲದ ಪ್ರಶ್ನೆ ಅದ' ಅಂತ ಹೇಳಿ ಅದಕ್ಕ ಅವಕಾಶ ಕೊಟ್ಟಿಲ್ಲ. ಇದಕ್ಕೇನಂತಿ?"

"ಇಷ್ಟೆಲ್ಲಾ ಮುಂದ ಹೋದ ಮ್ಯಾಲೆ, ಈಗಲ್ಲ, ಇನ್ನೊಂದು ಸರೇಕ್ಕ, ಇಲ್ಲಾ ಇನ್ನೊಬ್ಬರ ಸಂಗತೀನೂ ಅದು ಮುಗದಹೋಗೋದಕ್ಕ ತಡಾ ಹಿಡೀತsದೇನು. ಶೀಲ! ಅಂತ ಶೀಲ. ಒಂದು ಮಾತು ನೆನಪಿಡು, ಮರ್‍ಯಮ್ಮಾ. ಪ್ರಕೃತಿಸಹಜ ಇದ್ದದ್ದೆಲ್ಲಾನೂ ಕೃತಿಯೊಳಗೆ ತರೋದು ಇರೂದಿಲ್ಲ. ಅದು ಸ್ವೇಚ್ಛಾಚಾರ ಅನಿಸಿಕೋತದ ಅದಿರಲಿ, ನೀ ಆಕೆಗೆ ಹಾಸ್ಟೆಲಿನೊಳಗ ತಗೊಳ್ಳುವಾಕೆಯೋ ಇಲ್ಲವೋ? ಅಷ್ಟು ಹೇಳು."

ಮರಿಯಮ್ಮ ಒಂದು ನಿಮಿಷ ತಡೆದು ಕೇಳಿದಳು : "ಒಂದು ವೇಳೆ ಆಕೆ ಹಾಸ್ಟೆಲಿನಲ್ಲಿ ಇದ್ದುಕೊಂಡೇ, ಗುಟ್ಟಿನಿಂದ ಅವನನ್ನ ಕೂಡಿಕೊಳ್ಳುವುದಿಲ್ಲ ಅನ್ನೋದು ಏನು ಗ್ಯಾರಂಟಿ?"

ಅಂತೂ ಮರಿಯಮ್ಮನಿಗೆ ಲೇಪಾಕ್ಷಿಯನ್ನು ಹಾಸ್ಟೆಲಿಗೆ ಸೇರಿಸಿಕೊಳ್ಳುವುದಕ್ಕೆ ಇಷ್ಟವಿಲ್ಲ!

ಕುರ್ಚಿಯಿಂದ ಏಳುತ್ತ ಹೇಳಿದೆ: "ಆಕೆ ಹಂಗೇ ಮಾಡಲಿ. ಮಾಡಿ ಬಸಿರೂ ಆಗಲಿ! I just don't care. ನನ್ನ ಸಿಟ್ಟು ಎಲ್ಲಾ ಈಗ ನಮ್ಮ ಆ ಭೀಮ್ಯಾನ ಮ್ಯಾಲೆ ಅದ. ಹೇಡಿ, ಕಳ್ಳ! ಪಾಪ, ನಮ್ಮ ವಿಮಲಾನ ಗತಿ ಏನಾದೀತು? ಒಂದು ಕಡೆ ತಂಗೀ, ಇನ್ನೊಂದು ಕಡೆ ಗಂಡಾ. ವಿಷಯ ತಿಳದ್ರ ಮನೆಯಲ್ಲಿಯ ಸುಖ, ಶಾಂತಿ ಹಾಳಾಗಿಹೋದೀತು ಅಂತ ಚಿಂತಿ ಆಗೇದ."

"ಅರೆ! ಇದೆನು ಹೇಳ್ತೀ? ಆ ಮನುಷ್ಯ ನೆರೆಮನೆಯವ ಅಲ್ಲ? ನಿಮ್ಮವನೇ?! ಮತ್ತು ಆಗಳೇ....."

"ಹೌದು. ಮುಚ್ಚಿ ಇಡಬೇಕೆಂದಿದ್ದೆ. ನಾ ಬರತೇನಿ."

"ಕಲ್ಯಾಣೀ ನಿಂದ್ರು. ಅರೆ, ಹೊಂಟೇ ಬಿಟ್ಟೆಲ್ಲ? ಫಾರ್ಮು ಕೊಡತೇನಿ, ತಡೀ"

"ಏನೂ ಬೇಡ. ಇದಕ್ಕೆ ಬೇರೇನೇ ಉಪಾಯ ಮಾಡತೇನಿ."

❄ ❄ ❄ ❄ ❄

೨. ಅವರು

ಕೊನೆಗೂ ಮಾಮಾನ ಮನಸ್ಸಿನಂತೆಯೇ ಆಯಿತು. ಸರಸಕ್ಕನು ಬಹಳಷ್ಟು ಒತ್ತಾಯಪಡಿಸಿದಳೆಂದು, ಅವನು ನಮ್ಮಿಬ್ಬರನ್ನು ಸ್ಟೇಶನ್ನಿನವರೆಗೆ ಕಳಿಸಲು, ಅರೆಮನಸ್ಸಿನಿಂದ ಮೊದಲಿಗೆ ಒಪ್ಪಿದ್ದನು. ಆದರೆ ಅಕಸ್ಮಾತ್ತಾಗಿ ಮೇಲಿನ ಆಫೀಸರರು ಅವನಿಗೆ ಹೇಳಿಕಳುಹಿಸಿದರೆಂದು ನಾನೂ ಸುರೇಶನೂ ಇಬ್ಬರೇ ಹೊರಡಬೇಕಾಯಿತು.

ಮಾಮಾನ ಮೇಲೆ ನನಗೆ ಬಹಳಷ್ಟು ಬೇಸರ ಬಂದಿತು. ಹೆಂಡತಿಯ ಬಾಣಂತಿತನಕ್ಕೆ ನಾನು ಬೇಕಾಯಿತು. ಐದು ತಿಂಗಳ ಹಿಂದೆ ಇದೇ ಪುಣೆಗೆ ಬಂದಾಗ, ಸ್ಟೇಶನ್ನಿನವರೆಗೂ ಬಂದು ಮನೆಗೆ ಕರೆದೊಯ್ದ. ಆಗ ಆದರವಿತ್ತು. ಕೆಲಸ ತೀರಿದ ಮೇಲೆ ಈಗೇನು? ನಾವಿಬ್ಬರೇ ಹುಡುಗರು ಹೇಗೆ ಹೋದೇವು ಎಂಬುದರ ಕಲ್ಪನೆ ಬರಬಾರದೆ? ಅವನ ಇಂತಹ ಸ್ವಭಾವವನ್ನರಿತೆ ಅಪ್ಪನು ಇಲ್ಲಿಗೆ ನನ್ನನ್ನು ಕಳುಹಿಸಲು ಮೊದಲು ಒಪ್ಪಿರಲಿಲ್ಲ. ಆದರೂ ತಂಗಿಯೆಂಬ ಅಭಿಮಾನ ಬೇರೆ ಇರುತ್ತದಲ್ಲ; ಅಲ್ಲದೆ ನನಗೂ ಸರಸಬಚಿಯನ್ನು ನೋಡದೆ ಬಹಳ ದಿನಗಳಾದುದರಿಂದ ಹೊರಟು ಬಂದೆ..... ಸರಸಕ್ಕ ನಮ್ಮವಳಾದರೆ ಮಾಮಾನಿಗೇನು? ತನ್ನ ಕಾರ್ಯವಾಯಿತು, ಮುಗಿಯಿತು..... ಗಂಡಸರೆಂಬವರೇ ಹೀಗೇನೋ!

ನನಗೆ ಸ್ವಲ್ಪ ದೂರದಲ್ಲಿ ಒಬ್ಬ ತರುಣನು ಕೂಲಿಯವನ ಕೈಯಿಂದ ಸಾಮಾನನ್ನು ಇಳಿಸಿದನು. ಅತಿ ದೊಡ್ಡದಾದ ಒಂದು ಟ್ರಂಕು, ಹೋಲ್ಡಾಲು, ಮತ್ತೆ ಒಂದೆರಡು ಚಿಲ್ಲರೆ ಸಾಮಾನುಗಳು. ಮೊದಲಿಗೆ ಗೊತ್ತುಮಾಡಿದಷ್ಟು ಹಣವನ್ನು ಅವನಿಗೆ ಕೊಟ್ಟಿರಬೇಕು. ಆದರೆ ಆ ಕೂಲಿಯವನು ದೈನ್ಯದಿಂದ ಮತ್ತೆ ಹಣ ಕೇಳಿದನು. ಇವನು ಮೊದಲು ಇಲ್ಲವೆಂದ. ಕೂಲಿಯವನು ಕನ್ನಡದಲ್ಲಿ ಮಾತನಾಡತೊಡಗಿದ ಕೂಡಲೆ ಮರುಮಾತೆತ್ತದೆ ಆತನು ಸ್ವಲ್ಪ ಹಣ ಹೆಚ್ಚಿಗೆ ಕೊಡುವುದು ಕಂಡಿತು. ಆ ಕೂಲಿಯವನು ವಿಜಾಪೂರ ತಾಲೂಕಿನವನಂತೆ. ಬರಗಾಲದ ಮೂಲಕ ಕೂಲಿ ಮಾಡುತ್ತಿರುದಾಗಿಯೂ ಪುಣೆಯಲ್ಲಿ

ತನ್ನ ಸಂಸಾರ ಈಗ ನಡೆದಿರುವ ಸ್ಥಿತಿಯನ್ನು ಸ್ವಲ್ಪ ಮಾತಿನಲ್ಲಿ ಇದ್ದಂತೆ ಹೇಳಿದ. ಆದರೂ ಅದು ಎಷ್ಟು ಮನ ಹಿಡಿಯುವಂತಹದಾಗಿತ್ತು! ತರುಣನು ಅವನ ಹೆಗಲನ್ನು ತಟ್ಟುತ್ತ "ಗಾಡೀ ಬಂದ ಕೂಡಲೇ ನೀನೇ ಬಂದು ಸಾಮಾನು ಹಾಕು, ಇನ್ನಷ್ಟು ಹಣ ಕೊಡತೇನಿ" ಎಂದು ಹೇಳಿದನು.

ಆ ತರುಣನು ಇತ್ತ ಕಡೆ ಹೊರಳಿ ಮುಖವನ್ನೊರಸಿಕೊಳ್ಳುತ್ತಿದ್ದ. ನೋಡಿದೆ. ಅಬಬ! ಏನು ಆ ಸ್ವರೂಪ! ಆ ಮುಖದ ಅಂದಗೇಡಿತನ ಒಮ್ಮೆ ನೋಡುವುದಕ್ಕೆ ಕೂಡಾ ಜಿಗುಪ್ಸೆ ತರುವಂತಿದ್ದಿತು. ತೀರ ಕಪ್ಪು ಬಣ್ಣ, ಮೊಂಡವಾದ ಮೂಗು, ಅಗಲವಾದ ಬಾಯಿ, ಅಂತಹದರಲ್ಲೂ ತುಸು ಉಬ್ಬಿದ ಒಸಡೆ, ಕಣ್ಣಿನಲ್ಲಿ ಮಾತ್ರ ಒಂದು ಬಗೆಯ ನಿಚ್ಚಳತೆ ಕಾಣುತ್ತಿತ್ತು.

ನನಗೆ ಇದೇ ಆಶ್ಚರ್ಯ. ಆ ಪ್ರಾಣಿ ತನ್ನ ಸಾಮಾನಿನ ಪರಿವೆಯಿಲ್ಲದೆ, ಬಡಬಡನೆ ಹೊರಗೆ ಹೋಗಿಬಿಟ್ಟನು.

ನಾನು ಅತ್ತ ಇತ್ತ ನೋಡುತ್ತ ಸುಮ್ಮನೆ ವೇಳೆ ಕಳೆಯುತಲಿದ್ದೆ. ಟಿಕೀಟನ್ನು ತರಲು ಹೋದ ಸುರೇಶನು ಇನ್ನೂ ಬಂದಿರಲಿಲ್ಲ. ಪುಣೆಯಲ್ಲಿ ಟಿಕೀಟು ತಗಿಸುವ ಗೋಳನ್ನು ಕೇಳಿದ್ದೆ. ಆದರೂ ನಿರ್ವಾಹವಿಲ್ಲವಲ್ಲ. ಅಷ್ಟರಲ್ಲಿ ಧಾರವಾಡದ ಕಡೆ ಹೋಗಬೇಕಾದ ನಮ್ಮ ಗಾಡಿ ಬಂದಿತು. ಪ್ಲ್ಯಾಟಫಾರ್ಮಿನ ಮೇಲಿದ್ದ ಪ್ರಯಾಣಿಕರು ಸ್ವಲ್ಪ ಜನ. ಏಕೆಂದರೆ ಗಾಡಿ ಬಿಡುವುದಕ್ಕೆ ಇನ್ನೂ ಒಂದು ತಾಸು ಅವಧಿಯಿತ್ತು. ಪುಣೆಯಿಂದಲೇ ಹೊರಡುವುದಷ್ಟೆ. ಗಾಡಿಯಂತೂ ತೆರವೇ ಇದ್ದಿತು. ಇದ್ದವರಷ್ಟು ಜನ ಹತ್ತಿದರು.

ಸುರೇಶನು ಆಗೂ ಬರಲಿಲ್ಲ. ಇವನು ಬೇಗ ಬಂದರೆ. ಸಾಮಾನನ್ನಿಡಿಸಿ ಜಾಗ ಹಿಡಿದು, ಪ್ರಶಸ್ತವಾಗಿ ಕೂಡಬಹುದಲ್ಲ ಎಂದು ಆತುರವಾಯಿತು. ಕೆಲ ಅಂತರದಲ್ಲಿ ಸಾಮಾನನ್ನಿಟ್ಟು ಹೋದ ಆ ತರುಣನೂ ಬಂದಿರಲಿಲ್ಲ. ಕನ್ನಡಿಗರೆಂದರೇ ಹೀಗೆಯೊ? ಸಾಮಾನನ್ನು ಯಾರಾದರೂ ಕೈಯಲ್ಲಿ ಹಿಡಿದುಕೊಂಡು ಹೋದರೆ ಗತಿಯೇನು? ನಾನು ನನ್ನ ಸಾಮಾನಿನ ಹತ್ತಿರವೇ ಇದ್ದರೂ, ತುಸು ಅಂಜುತ್ತೇನೆ. ಅಂತಹದು... ಹುಂಬತನ ಬಹಳ ನಮ್ಮ ಜನರಲ್ಲಿ ಎಂದುಕೊಂಡೆ. ಆದರೆ ಅದನ್ನು ಕಾಯುವ ಹೊಣೆ ನನ್ನ ಮೇಲೂ ತುಸು ಇದ್ದಂತೆನಿಸಿತು. ಒಮ್ಮೆಲೆ ಅವನ ಅಸಹ್ಯ ಮುಖ ಕಣ್ಣಮುಂದೆ ಬಂದು ಹಾಳಾಗಿಹೋಗಲಿ ಎಂದುಕೊಂಡೆ.

ನನ್ನ ಮನಸ್ಸು ಇವತ್ತು ಬಂದ ವಾಯರಿನ ಕಡೆಗೆ ಹರಿಯಿತು. 'ತೋರಿಸುವದದೆ; ಈ ಗಾಡಿಗೆ ಹೊರಟುಬರಬೇಕು' ಎಂದಿಷ್ಟೆ ಅಪ್ಪನು ತಿಳಿಸಿದ್ದಾನೆ. ನನ್ನನ್ನೀಗ ತೋರಿಸುವುದು ಯಾರಿಗೆ ಎಂಬುದನ್ನು ತುಸು ಕಾಣಿಸಬಾರದಿತ್ತೆ? ಅಥವಾ 'ಇಲ್ಲಿ ನನಗೆ ಬೇಸರ ಬರುತ್ತದೆ, ಊರಿಗೆ ಬರಬೇಕೆನ್ನುತ್ತೇನೆ' ಎಂದು ಮೊನ್ನೆ ಸಹಜವಾಗಿ ಪತ್ರದಲ್ಲಿ ಬರೆದಿದ್ದೆ. ಅದಕ್ಕೆಯೆ

'ಬೇಕಾಗಿ ಸುಮ್ಮನೆ ತೋರಿಸುವ' ನೆವಮಾಡಿ ಕರಸಿರಬಹುದೆ? ಎಂಬ ಸಂಶಯವೂ ಮೂಡದಿರಲಿಲ್ಲ. ಬೇಗ ಊರು ಸೇರಿಬಿಟ್ಟರೆ ನೆಟ್ಟಗೆ ಎಂದೂ ಅಂದುಕೊಂಡೆ.

ಸುರೇಶನು ಇನ್ನೂ ಬರಲಿಲ್ಲ. ವೇಳೆ ನೋಡಿದೆ. ಒಂಬತ್ತು ಹೊಡೆಯ ಬಂದಿತ್ತು. ಈಗ ಆ ಕುರೂಪಿಯು ಬಂದನು. ಒಂದು ಸಲ ಪ್ಲ್ಯಾಟಫಾರ್ಮಿನ ಗುಂಟ ಓಡಾಡಿ, ಆ ಕೂಲಿಯವನನ್ನು ಹುಡುಕಿ ತಂದನು. ಪೋಸ್ಟಿನ ಡಬ್ಬಿಗೆ ಹೊಂದಿ ಇದ್ದ ಡಬ್ಬಿಯಲ್ಲಿ ತನ್ನ ಸಾಮಾನನ್ನು ಹಾಕ ಹೇಳಿದನು.

ಅವನು ತನ್ನ ಸಾಮಾನನ್ನು ಒಯ್ದು ಹಾಕಿಸುವಾಗ, ನನ್ನ ಮುಂದೆಯೇ ಹಾದುಹೋದನು. ನನ್ನ ಕಡೆ ನೋಡುವನೆ ಎಂದು ಅವನ ಕಡೆ ನನ್ನ ನೋಟ ತಿರುಗಿಸಿದ್ದೆ. ಅವನ ಕುರೂಪ ಮುಖ ನೋಡಲೆಂದಲ್ಲ, ಸಹಾಯಕ್ಕೆ ಕೇಳಿಯಾನೆ ಎಂದು. ಸಾಮಾನ್ಯವಾಗಿ ಯುವಕರ ಮನಸ್ಸು ಹೆಣ್ಣುಮಕ್ಕಳಿಗೆ ಸಹಾಯ ಮಾಡಲು ತಾವಾಗಿ ಮುಂದುವರಿಯುತ್ತದೆ. ಆದರೆ ಈತನು ಹೊರಳಿ ಕೂಡಾ ನೋಡಲಿಲ್ಲ. ಅಂತೂ ಈ ಪ್ರಾಣಿಗೆ ಗರ್ವವೂ ಇದೆ ಎಂದು ನನ್ನ ಕಲ್ಪನೆಯಾಯಿತು.

ಸುರೇಶನು ಇನ್ನೂ ಬರಲಿಲ್ಲ. ಹದಿನೈದು-ಇಪ್ಪತ್ತು ನಿಮಿಷಕ್ಕೆಯೆ ಗಾಡಿ ಬಿಡಬಹುದು. ಮುಂದೆ ಗತಿಯೇನು?

ಒಂಬತ್ತು ಹೊಡೆದುಬಿಟ್ಟಿತು. ಆಗಲೇ ಮುಂಬೈಯಿಂದ ಮೇಲ್‌ಗಾಡಿ ಬಂದಿತು. ತಡವಿಲ್ಲದೆ ಆ ಗಾಡಿಗೆ ಬಂದ ಜನರು ತಂತಮ್ಮ ಸಾಮಾನುಗಳೊಂದಿಗೆ ನಮ್ಮ ಗಾಡಿಗೆ ನುಗ್ಗಿದರು. ಬರಿದೆಂದು ಕಾಣುತ್ತಿದ್ದ ಗಾಡಿಯು ನೋಡನೋಡುವಷ್ಟರಲ್ಲಿ ತುಂಬಿಹೋಯಿತು. ಇನ್ನು ಕೆಲವರು ಸಾಮಾನುಗಳನ್ನು ಹೊರಿಸಿಕೊಂಡೇ, ಜಾಗ ಎಲ್ಲಿದೆ ಎಂದು ಓಡಾಡುತ್ತಿದ್ದರು.

೯-೨೦ ಆಗಿತ್ತು. ಇನ್ನು ತುಸು ವೇಳೆಯಲ್ಲೇ ಗಾಡಿ ಬಿಟ್ಟುಬಿಡುವದು; ಈಗಾದರೂ ಸಾಮಾನನ್ನು ಹಾಕಿಸಲೇ ಎಂದು ಯೋಚನೆ ಬಂತು. ಆದರೆ ನನ್ನ ಕಡೆ ರೊಕ್ಕವಿಲ್ಲ, ಮೇಲಾಗಿ ಮರಾಠಿ ಬರುವುದಿಲ್ಲ. ಹಮಾಲನಿಗೆ ಏನೆಂದು ಹೇಳಲಿ? ಇಷ್ಟನ್ನು ಮಾಡಿ ಸಾಮಾನನ್ನು ಹಾಕಿಸಿದೆನಾದರೆ ಸುರೇಶನು ನನ್ನನ್ನು ಹುಡುಕಬಾರದು. ಹುಡುಕಿದ ಮೇಲೂ ನಾನು ಸಿಕ್ಕೇನು. ಆದರೆ ಗಾಡಿಯ ವೇಳೆಗೆ ಟಿಕೀಟೇ ದೊರೆಯದೆ ಹೋದರೆ? ಅಥವಾ ಈ ಗದ್ದಲದಲ್ಲಿ ನಾನೊಬ್ಬಳೆ ಹತ್ತುವುದಾದರೆ ಹೇಗೆ?

ಇದು ತಪ್ಪಿದರೆ ರಾತ್ರಿ ಒಂದು ಗಂಟೆಯ ಗಾಡಿಗೆ ಹೋಗಿರಿ, ಎಂದಿದ್ದ ಮಾಮಾ. ನನ್ನ ಹೃದಯ ಇನ್ನಷ್ಟು ಪರಿತಪಿಸಿತು. ನಾನು ಬೇಗ ಬರಬೇಕೆಂದು ಅಪ್ಪನು ಮುದ್ದಾಂ ವಾಯರ್ ಮಾಡಿದ್ದಾನೆ. ಹುಡುಗಿಯನ್ನು ಕೊಳ್ಳುವವರ ಅಂಕೆಯಲ್ಲಿ ಎಷ್ಟೆಂದರೂ ಹೆಣ್ಣು ಹೆತ್ತ ತಂದೆ ಇರಬೇಕಲ್ಲವೆ? ಈ ಗಾಡಿಗಾಗಿ ಧಾರವಾಡ ಸ್ಟೇಶನ್ನಿಗೆ ಬಂದಿರುವುದಾಗಿಯೂ ಅಪ್ಪ ತಿಳಿಸಿದ್ದಾನೆ... ಇದೇ ಗಾಡಿಗೆ ಹೊರಡಲೇಬೇಕು.

ಅಷ್ಟರಲ್ಲಿ ಸುರೇಶನು ಬಂದನು. "ಎಲ್ಲಿ ಹೋಗಿದ್ದ್ಯೋ ಎಷ್ಟೊತ್ತದು?" ಎಂದು ಗದರಿಸಿದೆ. "ಇರ್ಲಿ ನಡಿ. ಅಲ್ಲೇನು ನಾ ಮಲಕೊಂಡಿಲ್ಲಾ, ಭಯಂಕರ ಗದ್ದಲ ಇತ್ತು. ಟಿಕೀಟು ಕೊಡೋದೆ ತಡಾಮಾಡಿ ಕೊಡಲಿಕ್ಕೆ ಹತ್ತಿದರು" ಎನ್ನುತ್ತ ಹಮಾಲನಿಗಾಗಿ ಹುಡುಕಾಡಿದನು. ಅಕಸ್ಮಾತ್ ಒಬ್ಬನು ಸಿಗಲು, ಕರತಂದು ಸಾಮಾನನ್ನು ತೋರಿಸಿದನು. ನಾನು ಸುರೇಶನಿಗೆ "ರೊಕ್ಕ ಗೊತ್ತುಮಾಡಿಬಿಡು. ಹಿಂದಾಗಡೆ ತಂಟೆ ಮಾಡಬಾರದು" ಎಂದೆ. ಹಮಾಲನು ಮರಾಠಿಯಲ್ಲಿ "ಹನ್ನೆರಡಾಣೆ ಕೊಡ್ರಿ, ಬಾಯಿಸಾಹೇಬ" ಎಂದನು. ಅದಕ್ಕೆ ಸುರೇಶನು, "ಉಂಹು. ಇರೋವು ಮೂರ ದೊಡ್ಡ ಸಾಮಾನು, ಆರಾಣೆ ನಿನಗೆ ಕೊಡಬೇಕಾದ್ದು. ಆದರ ಎಂಟ ಆಣೆ ಕೊಡತೇನಿ, ಬೇಕಾದರೆ ಬಾ" ಎಂದು ತಿಳಿಸಿದನು. ಮಾತನಾಡುವುದಕ್ಕೂ ವಿಶೇಷ ವೇಳೆಯಿರಲಿಲ್ಲ. ಹಮಾಲನು ಒಪ್ಪಿ, ಸಾಮಾನನ್ನು ಹೊತ್ತನು.

ಆದರೆ ವಿಪರೀತ ಗದ್ದಲ! ತುಂಬಿದ ಗಾಡಿಯಲ್ಲಿ ನಿಂತೇನೆಂದರೆ ಜಾಗವಿಲ್ಲ. ಯಾವ ಡಬ್ಬಿಯ ಬಾಗಿಲನ್ನೂ ತೆರೆಯುವುದಕ್ಕೂ ಗತಿಯಿಲ್ಲ. ಇಂಥದರಲ್ಲಿ ಇನ್ನೂ ಜನ ನುಗ್ಗುತ್ತಿದ್ದಾರೆ! ಹಮಾಲನು "ಇಲ್ಲಿ ಬರ್ರಿ" ಎಂದು ಗಾಡಿಯ ಹಿಂದಿನ ಮಗ್ಗಲು ಕರೆದುಕೊಂಡು ಹೋದನು.

ಹಿಂಬದಿಗೆ ಕೂಡಾ ನಮ್ಮ ಹಾಗೆ ಬಂದವರಿದ್ದರು. ನಮ್ಮ ಕೂಲಿಯವನು ಒಂದು ಡಬ್ಬಿಯ ಮುಂದೆ ನಿಂತು, ಸುರೇಶನಿಗೆ ಹತ್ತುವುದಕ್ಕೆ ಹೇಳಿದ. ಸುರೇಶನು ನನ್ನ ಕಡೆ ನೋಡಿದ. ಅದಕ್ಕೆ ಹಮಾಲನು "ನೀವು ಮ್ಯಾಲೆ ಹತ್ತಿ ಬಂದು, ಸಾಮಾನು ಇಸಕೊಳ್ರಿ, ಹಿಂದಾಗಡೆ ಇವರ್ನ ಹತ್ತಸತೇನಿ" ಎಂದು ಹೇಳಿದನು. ನಮಗೂ ಹಾಗೆ ಮಾಡದ ಹೊರತು ಗತ್ಯಂತರವಿರಲಿಲ್ಲ.

ಸುರೇಶನು ನಮ್ಮಿಬ್ಬರ ಸಹಾಯದಿಂದ ಒಂದು ಕಿಡಿಕಿಯೊಳಗಿಂದ ಒಮ್ಮೆ ಒಳಗಿಳಿದನು. ಅಲ್ಲಿ ಕುಳಿತವರ ಕಡೆಯಿಂದ ಅವನು ಬೈಸಿಕೊಳ್ಳುವುದು ಕಾಣುತ್ತಿತ್ತು. ಪ್ರತಿ ಕ್ಷಣಕ್ಕೂ ಉದ್ವೇಗದಿಂದ ಹೊಯ್ದಾಡುತ್ತಿದ್ದೆ, ಒಮ್ಮೆ ಹೇಗೆ ಸುಸೂತ್ರ ಒಳಗೆ ಕುಳಿತೇವೊ ಎಂದು. ಇನ್ನು ಒಂದು ಹ್ಯಾಂಡಬ್ಯಾಗು ಉಳಿದಿತ್ತು.

ಕೂಡಲೇ ಆ ಹಮಾಲನು "ಏ ತಮ್ಮಾ, ನಾಕ ರೂಪಾಯಿ ತಗಿ" ಎಂದನು.

"ಸಾಮಾನ ಕೊಡು, ಅವರ್ನ ಹತ್ತಸು; ಕೊಡತೇನಲ್ಲ" ಎಂದು ಸುರೇಶನು ಹೇಳಿದ.

"ಇಲ್ಲಿಲ್ಲ. ನಾಲ್ಕು ರುಪಾಯಿ ಇಡು ಕೈಯಾಗ. ಅಂದ್ರ ಈ ಬ್ಯಾಗ ಕೊಡತೇನಿ, ಇವರ್ನ ಹತ್ತಸತೇನಿ, ಇಲ್ಲಾದ್ರಿಲ್ಲ" ಎಂದು ಮರಾಠಿಯಲ್ಲಿ ಒದರಿದನು.

ಅವನ ಮಾತನ್ನು ಕೇಳಿ ನಮಗೆ ಸಿಡಿಲು ಬಡಿದಂತಾಯಿತು. ಇಂತಹದೇನನ್ನೂ ನಾವು ಊಹಿಸಿರಲಿಲ್ಲ. ನಾವೀಗ ಅವನ ಕೈಯಲ್ಲಿ ಸಿಕ್ಕಿಬಿದ್ದಿದ್ದೇವೆಂಬುದರ ಅರಿವಾಯಿತು. ರೊಕ್ಕದ ಆಸೆಯಿಂದ ಎಷ್ಟು ನೀಚತನಕ್ಕಿಳಸಿದನಲ್ಲ ಎಂದು ಕೋಪದಿಂದ ಕುದಿದೆ. ಅದನ್ನು ದಾಟಿ ಹೆದರಿಕೆಯಿಂದ ಗದಗದ ನಡುಗಿದೆ.

ಸುರೇಶನು ಇದ್ದುದರಲ್ಲೇ ಧೈರ್ಯ ತಂದುಕೊಂಡು ಗದರಿಸಿದನು. ಆದರೆ ಅವನು ಅದಕ್ಕೆ ಎಷ್ಟೂ ಕಿವಿಗೊಡಲಿಲ್ಲ. ನಾ ಹೇಳಿದೆ "ಒಂದು ರುಪಾಯಿ ಕೊಟ್ಟು ಕಳಿಸಿಬಿಡು." ಅದರಂತೆ ಸುರೇಶನು ರೂಪಾಯಿ ಕೊಡಹೋದಾಗ, ಅದನ್ನು ಅವನು ಕಣ್ಣೆತ್ತಿ ನೋಡಲಿಲ್ಲ ಕೂಡ. "ನಾಕು ರುಪಾಯಿ, ಹೂಂ. ಇಲ್ಲಾದ್ರ ಇಲ್ಲ" ಎಂದು ಗಟ್ಟಿ ಸ್ವರದಲ್ಲಿ ಹೇಳಿದನು.

ಎಂತಹ ವಿಪತ್ತು! ಸಹಾಯಕ್ಕಾರೂ ಇಲ್ಲವೆ? ಹಿಂದಿನ ಮಗ್ಗಲು ಕತ್ತಲೆ. ಮಂದಿಯ ಸುಳಿವಿಲ್ಲ. ಅದಕ್ಕೇ ಈ ಕಡೆ ಕರಕೊಂಡು ಬಂದ. ಈಗ ನೆನಪಾಯಿತು. ನಾವು ಹತ್ತಬೇಕಾದ ಡಬ್ಬಿಯಲ್ಲೆ ಆ ಕುರೂಪಿ ತರುಣನು ಹತ್ತಿದ್ದುದು. ಅವನಿಗಾಗಿ ಅಲ್ಲಿ ನೋಡಿದೆ. ಆದರೆ ಆತನು ಕಾಣಲಿಲ್ಲ. 'ಯಾರೂ ಈ ಸಮಯದಲ್ಲಿ ರಕ್ಷಿಸುವವರಿಲ್ಲ. ಎಲ್ಲರೂ ಸ್ವಾರ್ಥಿಗಳೆ!' ಎಂದು ಬೈದೆ.

ನನ್ನ ಕಾಲು ಥರಥರ ನಡುಗತೊಡಗಿದವು. ಭಯದಿಂದ ಕಣ್ಣು ಕತ್ತಲೆಗುಡಿಸಿತು. ಸುರೇಶನು "ನನ್ನ ಕಡೆ ಅಷ್ಟು ರೊಕ್ಕನ ಇಲ್ಲಲೇ. ಟಿಕೀಟಿಗೆ ಖರ್ಚಾಗ್ಯಾವು" ಎಂದು ಕನ್ನಡದಲ್ಲೇ ಚೀರಿದನು. ಅದು ನಿಜವೂ ಇತ್ತು. ತಿಂಗಳ ಕೊನೆಯಾದುದರಿಂದ ಮಾಮಾ ಗಾಡಿ ಖರ್ಚಿನ ಮಟ್ಟಿಗಾಗುವಷ್ಟು ಕೊಟ್ಟಿದ್ದ. ಇದೂ ಒಂದು ತಿಳಿದು ನನಗೆ ಮತ್ತಷ್ಟು ಗಾಬರಿಯಾಯಿತು. ಹಮಾಲನಿಗೆ ಸುರೇಶನ ಮಾತಿನ ಕಡೆ ಲಕ್ಷ್ಯವಿಲ್ಲ. "ಹೂಂ, ಲಗೂ ರೊಕ್ಕಾ ತಗೀರಿ, ಹೊತ್ತಾಗತದ" ಎಂದು ನಮ್ಮನ್ನೇ ಗದರಿಸಿದನು.

ಬ್ಯಾಗನ್ನು ಅವನು ತನ್ನ ಕೈಯಲ್ಲೇ ಹಿಡಿದಿದ್ದ. ಅದರಲ್ಲಿ ಸರಸಕ್ಕನ ಬರುವ ಮುಂದೆ ಉಡಿತುಂಬಿದ ಹೊಸ ಸೀರೆಯಿತ್ತು. ನನ್ನ ಬಿಲವಾರಗಳನ್ನೂ ಸುರೇಶನ ಫೌಂಟನ್ ಪೆನ್ನನ್ನೂ ಅದರಲ್ಲಿಯೇ ಹಾಕಿದ್ದೆ, ಗಾಡಿಯಲ್ಲಿ ಕಳೆದು ಹೋಗಬಾರದೆಂದು. ಇನ್ನೇನು ಗತಿ ಎಂದು ಸಮಸ್ಯೆ. ಪಾರಾಗುವ ದಾರಿಯೇ ಇಲ್ಲವೆಂಬ ಅಂಜಿಕೆಯಿಂದ ಆ ಕ್ಷಣ ನನ್ನಲ್ಲಿ ಪ್ರಜ್ಞೆಯೇ ಉಳಿದಿರಲಿಲ್ಲ.

ಅಷ್ಟರಲ್ಲಿ ಆ ಕುರೂಪಿ ತರುಣನು ಬಂದವನೇ, ಹಮಾಲನ ಕಾಲರನ್ನು ಹಿಡಿದೆಳೆದು ಫಳೀರನೆ ಕೆನ್ನೆಗೆ ನಾಲ್ಕೈದು ಏಟು ಬಿಗಿದನು. "ಬದ್ಮಾಷ್, ಹುಡುಗರ್ನ ಕಂಡು ಇಂಥಾ ಧಂದೆ ಮಾಡತೀ? ಬಾ ನಿನ್ನ ಪೊಲೀಸರ ತಾಬಾ ಮಾಡತೇನಿ" ಎಂದು ಮರಾಠಿಯಲ್ಲಿ ಅಬ್ಬರಿಸಿದರು.

ದೇವರು ಬಂದ ಹಾಗೆ ಬಂದರಲ್ಲ, ಎಂದು ನನ್ನ ಮನಸ್ಸು ಆಗ ಎಷ್ಟು ಆನಂದದಿಂದ ಕುಣಿದಾಡಿತು! ಮನಸ್ಸಿಗೆ ಎಂತಹ ನೆಮ್ಮದಿ ಬಂದಿತು! ಹೋದ ಜೀವ ಮರಳಿ ಬಂದಷ್ಟು ಸಮಾಧಾನಗೊಂಡೆ.

ಅವರು ಅವನ ಕೈಯಲ್ಲಿದ್ದ ಬ್ಯಾಗನ್ನು ಕಸಿದು ಸುರೇಶನ ಕೈಗೆ ಇತ್ತ. ಅದಕ್ಕವನು ಬಹಳಷ್ಟು ಗುದ್ದಾಡಿದ. ಇಬ್ಬರೂ ಸಶಕ್ತ ಮೈಕಟ್ಟಿನವರು. ಆದರೂ ಅವರ ಮುಂದೆ ಅವನು ಈಡಾಗಲಿಲ್ಲ.

“ನೀವ್ಯಾರು ನಡುವ ಬರಲಿಕ್ಕೆ? ನಾವೇನರೆ ಮಾಡತೀವಿ” ಎಂದು ಮುಂತಾಗಿ ಹಮಾಲನು ಒದರಾಡತೊಡಗಿದನು.

“ಜಾಸ್ತಿ ಮಾತಾಡಿದೆಂದ್ರ, ಇಲ್ಲೇ ಜೇಲಿನ್ಯಾಗ ಕೂಡಿಸೇನು ಹುಶಾರಿಂದ ಇರು” ಎಂದರವರು. ಆ ಮಾತಿನಲ್ಲಿ ಎಂತಹ ಎದೆಗಾರಿಕೆ!

“ಕರಾರ ಮಾಡಿದ ಒಂದು ರುಪಾಯರೆ ಕೊಡ್ರಿ.” ನಿಸ್ಸಹಾಯವಾಗಿ ಆತ ನುಡಿದನು.

ಅವನ ಮಾತಿಗೆ ಕಿವಿಗೊಡದೆ ಅವರು ನನ್ನ ಕಡೆ ತಿರುಗಿ “ಹೆಂಗಸರ ಡಬ್ಯಾಗೆ ಹತ್ತೋದೊ, ಏನು ಇಲ್ಲೇನೊ” ಎಂದು ಕೇಳಿದರು. ನಾನು ತುಸು ತಡೆದು ‘ಇಲ್ಲೇ’ ಎಂದೆ.

ಅವರು ಬಾಗಿಲ ಬಳಿಗೆ ಬಂದು, ಅಲ್ಲಿ ನಿಂತವರನ್ನು ಸರಿಸಿದರು. ಬಾಗಿಲು ತಗೆಯಲು ಬರದಂತೆ ಇಡಲಾಗಿದ್ದ ಸಾಮಾನುಗಳನ್ನು ತಗಿಸಿದರು. ಒಬ್ಬ ಹೆಣ್ಣು ಮಗಳು ಹತ್ತಿ ಬರುವಳೆಂದೊ, ಅವರ ಮಾತಿನ ಜೋರಿಗೊ, ಜನ ಅಂತಹದರಲ್ಲೇ ಅನುವುಗೊಟ್ಟಿತು. ಬಾಗಿಲು ತುಸು ತೆರೆಯಬಂತು. ನಾನು ಮೇಲೆ ಹತ್ತಿದೆ.

ನನಗೆ ಇದೇ ಆಶ್ಚರ್ಯ. ಅಷ್ಟು ಜನ ಹೊರಗೆ ನಿಂತು ‘ಜಾಗ ಜಾಗ’ ಎಂದು ಮಿಡುಕಾಡುವಾಗ ಇವರು ತಮ್ಮ ಹೋಲ್ಡಾಲನ್ನು ಬಿಚ್ಚಿ ಪ್ರಶಸ್ತ ಜಾಗ ಹಿಡಿದಿದರು. ನಮಗೆ ಎಂದಾಗಲಿ ಅವರು ಹೋಲ್ಡಾಲನನ್ನು ತೆಗೆಯಲಿಲ್ಲ. ಅದನ್ನೇ ತುಸು ಸರಿಸಿ ಇಬ್ಬರಿಗೂ ಕೂಡ ಹೇಳಿದರು.

ನಾನೊಮ್ಮೆ ಸಹಜವಾಗಿ ಅವರ ಮುಖ ನೋಡಿದೆ. ಅದೇ ವಿಕೃತ ರೂಪ. ನೋಡಲು ತುಂಬ ಜಿಗುಪ್ಸೆ ಬಂದುಬಿಟ್ಟಿತು. ಅಲ್ಲಿಂದ ಸಟ್ಟನೆ ದೃಷ್ಟಿಯನ್ನು ಹೊರಳಿಸಿದೆ. ಆದರೆ, ಅವರು ಕೂಲಿಯವನಿಗೆ ಎರಡೇಟು ಬಿಗಿಯುತ್ತಿರುವುದೂ, ಆಗ ನಾನು ಎಷ್ಟೊಂದು ಆನಂದದಲ್ಲಿದ್ದುದೂ, ಹಾಗೂ ದೂಡಿಸಿಕೊಂಡ ಹಮಾಲನ ದೈನಾಸದ ಚಿತ್ರವೂ, ಕಣ್ಣಮುಂದೆ ಸುಳಿದು, ಮನಸ್ಸು ವ್ಯಥೆಗೊಂಡಿತು.

ಅವರು ತಮ್ಮ ಸಾಮಾನಿನ ಕಡೆ ನೋಡಿದರು. ನನ್ನ ಕಡೆಯೂ ಒಮ್ಮೆ ನೋಡಿ ಸಿಗರೇಟನ್ನು ಹೊತ್ತಿಸಿದರು. ಅವರ ಹೋಲ್ಡಾಲು ಇನ್ನೂ ಹಾಗೆಯೇ ಇತ್ತು. ಅದನ್ನು ನಾ ಸುತ್ತಿ ಇಡಲೇ ಎಂಬ ವಿಚಾರ ಬಂತು. ಅದೇ ಕ್ಷಣ ಅಭಿಮಾನ-ಸಂಕೋಚ ಎರಡೂ ನನ್ನನ್ನು ತಡೆದವು. ನಮಗಾಗಿ ಇಷ್ಟೊಂದು ಮಾಡಿದ್ದಾರೆ, ಏನು ದೊಡ್ಡ ತಪ್ಪು ಎಂದು ಅದನ್ನು ಸುತ್ತಲು ಕೈ ಮುಂದುವರಿದುವು, ಮತ್ತೆ ಬೇಡವೆನಿಸಿತು. ಅವರು ಸಿಗರೇಟನ್ನು ಹಿಡಿದುಕೊಂಡು ತಾವೇ ಸುತ್ತತೊಡಗಿದರು. ಆದರೆ ಸಿಗರೇಟು ತೊಂದರೆ ಕೊಟ್ಟಿತು. ಅದನ್ನೊಮ್ಮೆ ಹೊರಗೆ ಬೀಸಿದರು. ಈ ಪಟ್ಟು ನಿಜವಾಗಿಯೇ ಮುಂದುವರಿದೆ. ‘ಬೇಡ’ ಎಂದಿಷ್ಟೆ ನನ್ನನ್ನು ತಡೆದರು. ಅಷ್ಟು ಸಣ್ಣ ಮಾತನ್ನು ಒಳ್ಳೆಯದಕ್ಕಾಗಿಯಾದರೂ, ಅವರ ಮಾತನ್ನು ವಿರೋಧಿಸಲಿಕ್ಕಾಗಲಿಲ್ಲ.

ಸುರೇಶನು ಅವರ ಕಡೆಯಿಂದ ತುಸು ಬೈಸಿಕೊಳ್ಳಬೇಕಾಯಿತು. ಅವನು ಹಿಡಿದಿದ್ದ ಜಾಗವನ್ನು ಉಳಿದವರು ಅರ್ಧ ಆಕ್ರಮಿಸಿದ್ದರು. ಆದರೂ ಅವರು ಕೇಳಿದ ಮೇಲೆ ಇಲ್ಲೆಂದಾರೆಯೆ? ನಮ್ಮಿಬ್ಬರಿಗೂ ಜಾಗವಾಯಿತು.

ಅಂತಹ ಗದ್ದಲದಲ್ಲಿ ಇನ್ನೂ ಮಂದಿ ಹತ್ತಲು ಹವಣಿಸುತ್ತಿದ್ದರು. ನನ್ನ ಈಚೆಯ ಬದಿಗೆ ಒಬ್ಬ ಹಳ್ಳಿಯವ. ಈ ಬದಿಗೆ ನಿದ್ದೆಹೋದ ಒಬ್ಬ ಸಣ್ಣ ಹುಡುಗಿ, ಇದು ಅಲ್ಲದೆ ಅವರ ಸಿಗರೇಟಿನ ಹೊಗೆ, ಉಸಿರುಗಟ್ಟುವಷ್ಟು ತ್ರಾಸವಾಯಿತು. ಆದರೂ ಅಂಥದರಲ್ಲೇ ಸಮಾಧಾನ, ಊರನ್ನಾದರೂ ಸುರಕ್ಷಿತ ಸೇರುತ್ತೇವಲ್ಲ! ಅದಕ್ಕೆ ಬಹುಮಟ್ಟಿಗೆ ಕಾರಣರಾದವರನ್ನು ಸಾದರದಿಂದ ಮತ್ತೊಮ್ಮೆ ನೋಡಲೆಂದೆ, ಆದರೆ ಜಿಗುಪ್ಸೆಯಿಂದ ಮುಖ ತಿರುಗಿಸಿದೆ.

ಗಾಡಿಯು ಅದೇ ಪ್ಲ್ಯಾಟಫಾರ್ಮ ಬಿಟ್ಟು ಮೆಲ್ಲಗೆ ತೂರಿಕೊಂಡು ನಡೆದಿದ್ದಿತು.

ಆ ಹುಡುಗಿ ನನ್ನ ಮೈಮೇಲೆ ಮೇಲಿಂದ ಮೇಲೆ ಬೀಳುತ್ತಿತ್ತು. ನನ್ನ ತೊಂದರೆ ಅವರಿಗೆ ಕಂಡಿತು. ಎದ್ದು ಆ ಹುಡುಗಿಯನ್ನು ಎತ್ತಿ ತಮ್ಮ ಬದಿಯಲ್ಲಿ ಕೂಡ್ರಿಸಿಕೊಂಡರು. ಸುರೇಶನು ನನ್ನ ಹತ್ತಿರ ಬಂದನು.

ಸುರೇಶನು ಕೇಳಿದನು "ನೀವು ಯಾವೂರಿಗೆ ಹೋಗ್ತೀರಿ?"

"ಹುಬ್ಬಳ್ಳಿ."

"ಹಿಂಗ? ಹಂಗರ ಧಾರವಾಡತನಕಾನೂ ನಮ್ಮ ಜತಿ ಆದ್ರಿ. ನೀವು ಮಿಲಟರಿ ಸರ್ವ್ಹೀಸಿನಲ್ಲಿ ಇದ್ದೀರೇನು?"

"ಇಲ್ಲಪಾ. ಇದು ಟ್ರ್ಯಾವಲಿಂಗ ಡ್ರೆಸ್ಸು. ಯಾಕ, ಇದರಿಂದಾ ಬಹಳ ಕೆಲಸ ಸಾಧಸ್ತದಲ್ಲ?" ಎಂದು ಮುಗುಳ್ನಕ್ಕರು.

"ಪುಣೆಯಿಂದ ಹತ್ತಿದಿರೇನು?"

"ಇಲ್ಲ. ಮುಂಬೈಯಿಂದ ಇಲ್ಲಿಗೆ ಮಧ್ಯಾನಕ್ಕೇ ಬಂದಿದ್ದೆ. ಈಗ ಹತ್ತಿದ್ದು ಇಲ್ಲಿಂದನ."

"ಮುಂಬೈಯೊಳಗೆ ನೌಕರೀ ಮಾಡ್ತೀರಿ ಕಾಣಸ್ತದ" ಎಂದನು ಸುರೇಶ. ನನಗೂ ಈ ಮುಂತಾದ್ದನ್ನೆಲ್ಲ ತಿಳಿಯಲು ಆತುರವಾಗಿತ್ತು.

"ನೌಕರೀನ? ನನಗ ಕಾಯಂ ನೌಕರೀನೇ ಇಲ್ಲ. ಹಿಂಗೇ ಓಡಾಡತೀನಿ ನೋಡು. ಮುಂಬೈಯಿಂದ ಧಾರವಾಡ, ತಪ್ಪಿದರೆ ಹುಬ್ಬಳ್ಳಿ."

"ಬಿ. ಎ. ಆಗೇದ ಕಾಣಸ್ತದ."

ಅವರ ಬಾಯಿಂದ ಬೇಗ ಉತ್ತರ ಬರಲಿಲ್ಲ. ಅವರು ಸುಮ್ಮನಿರುವುದು ತಿಳಿದು ಎದುರಿಗೇ ಕುಳಿತಿದ್ದ ನನ್ನನ್ನು ತುಂಬುಗಣ್ಣಿನಿಂದ ನೋಡುತ್ತಿರಬಹುದೆ ಎಂಬ ಸಂಶಯ

ಬಂದಿತು. ಥಕ್ಕನೆ ಕಣ್ಣು ತೆರೆದೆ... ಛೆ, ಇಲ್ಲ. ಅವರು ಸಿಗರೇಟನ್ನು ಹೊತ್ತಿಸುತ್ತಿದ್ದರು. ಮತ್ತೆ ಕಣ್ಣು ಮುಚ್ಚಿದೆ.

"ಬಿ.ಎ. ಯಾಕೊ ಮಹಾರಾಯ. ಎಂ.ಎ. ನೂ ಆಗೇದ. ಇದ್ದ ಡಿಗ್ರಿ ಕಳಕೊ ಅಂತೀಯೇನು?"

ಇವರ ಮದುವೆಯಾಗಿರಬಹುದೆ ಎಂಬ ಸಣ್ಣ ಸಂಶಯ ಸುಳಿಯಿತು. ಮದುವೆಯಾಗಿದ್ದರೆ ಕೈ ಹಿಡಿದವಳು ಹೀಗೆ ಇವರನ್ನು ಅಂಡಲೆಯ ಬಿಡುತ್ತಿರಲಿಲ್ಲವೆನಿಸಿತು. ಹಾಗೂ ನೌಕರಿಯ ಗಾಳಕ್ಕಿಂತ ಸ್ವತಂತ್ರ ವಾತಾವರಣಕ್ಕೇ ಹೆಚ್ಚು ಒಲಿದವರು, ಅದಕ್ಕೇ ನೌಕರಿ ಇಲ್ಲ ಎಂದು ಊಹಿಸಿದೆ.

ಸುರೇಶನು ಆಕಳಿಸುತ್ತ "ನನಗೆ ನಿದ್ದಿ ಬಂತು" ಎಂದನು.

"ಹೂಂ, ಹಿಂಗ?" ಎಂದು ಇನ್ನೊಮ್ಮೆ ನಗೆಯಲ್ಲಿ ತೇಲಿಸಿ ಹೇಳಿದರು. ಮುಂದೆ ಗಡಬಡ ಸಪ್ಪಳವಾಯಿತು ಮೆಲ್ಲನೆ ಕಣ್ಣು ತೆರೆದೆ; ಒಂದು ಟ್ರಂಕನ್ನು ನಡುವೆ ಇಡುತ್ತಿದ್ದರು. ನಾ ಮತ್ತೆ ಕಣ್ಣು ಮುಚ್ಚಿದೆ.

ಕೆಲವೇಳೆ ಕಳೆಯಿತು. ಸುರೇಶನ ಸೊಲ್ಲೇ ಇಲ್ಲ. ಮತ್ತೆ ಕಣ್ಣು ತೆರೆದೆ. ಸುರೇಶನು ಆ ಟ್ರಂಕಿನ ಮೇಲೆ ಕುಳಿತಿದ್ದಾನೆ. ಬಾಗಿ ಅವರ ತೊಡೆಯ ಮೇಲೆ ನಿಶ್ಚಿಂತೆಯಿಂದ ನಿದ್ರೆ ಹೋಗಿದ್ದಾನೆ! ಅವರು ಕೈಯಲ್ಲಿ ಹಿಡಿದಿದ್ದ ಪತ್ರಿಕೆಯನ್ನು ಓದುತ್ತಿದ್ದಾರೆ.

ಅವರಿಗೆ ನಾನು ಕಾಣುವಂತಿಲ್ಲವಾದ್ದರಿಂದ ಸ್ವಚ್ಛವಾಗಿ ಕಣ್ಣುಬಿಟ್ಟು ನೋಡಿದೆ. ಸುರೇಶನು ಅವರ ತೊಡೆಯ ಮೇಲೆ ಮಲಗಿದುದನ್ನೂ ಹಾಯಾಗಿ ನಿದ್ರೆಹೋದುದನ್ನೂ ಮತ್ತೆ ಮತ್ತೆ ನೋಡುವ ಆಸೆಯಾಯಿತು. ಅದನ್ನು ನೋಡಿ ಕಳವಳಗೊಂಡ ಮನಸ್ಸು ಹರಿದಾಡಿತು. 'ಹೆಣ್ಣು ಜೀವಕ್ಕೆ ಏನು ಬೇಕು?' ಎಂದು ಕೇಳಿಕೊಂಡೆ. 'ಒಂದು ಹೆಮ್ಮರದ ನೆರಳಲ್ಲಿ ಜೀವಿಸುವುದೆ ಅಲ್ಲವೆ? ಆ ಹೆಮ್ಮರದ ಆಸರೆ ಮಾತ್ರ ಬೇಕು. ಗಂಡಸಿನಷ್ಟು ಗಂಡೆದೆ ನಮಗೆ ಇರಬಲ್ಲುದೆ ಅದಿಲ್ಲದಾಗ ಸ್ವಾತಂತ್ರ್ಯದ ಹಂಬಲೇಕೆ? ಕೈ ಹಿಡಿಯುವವರು ಎಂದು ಹೇಳುವಾಗ ಕೈ ಹಿಡಿದವರು ಬಾಳ ದಾರಿಯಲ್ಲಿ ತನ್ನ ಹೆಣ್ಣು ಎಡವದಂತೆ ನೋಡಿಕೊಳ್ಳುವುದಷ್ಟೆ. ಅದಿಲ್ಲದೆ ಹೋದರೆ ಒಬ್ಬಳೇ ಎದೆಗೊಟ್ಟು ನಿಲ್ಲುವ ಸಾಮರ್ಥ್ಯ ನನಗಿದೆಯೆ?'

ಸುರೇಶನ ಕಡೆಗೆ ಇನ್ನೊಮ್ಮೆ ನೋಡಿದೆ.'ನನ್ನ ಕೈ ಹಿಡಿಯುವವನು ಅಂತಹ ಸಮರ್ಥನಾಗಿರುವವನಿರಬೇಕು. ಪ್ರಭಾವಶಾಲಿ ವ್ಯಕ್ತಿತ್ವವುಳ್ಳ ಹಾಗೂ ಪ್ರೇಮಲ ಸ್ವಭಾವದವನು ನನ್ನನ್ನು ತನ್ನವಳನ್ನಾಗಿ ಮಾಡಿಕೊಂಡರೆ ಸಾಕು. ನನಗೆ ಸ್ವಚ್ಛಂದತೆ ಬೇಡ. ಅಂತಹರಿಗೆ ನನ್ನ ಸರ್ವಸ್ವವನ್ನೆಲ್ಲ ಒಪ್ಪಿಸಿ, ನಿಶ್ಚಿಂತಳಾಗುವವರ ನನ್ನಲ್ಲಿಯೆ ಸುಖವಿದೆಯಲ್ಲವೆ?..... ಈಗ ಸುರೇಶನು ಅವರ ತೊಡೆ ಮೇಲೆ ಎಷ್ಟು ಹಾಯಾಗಿ ಮಲಗಿದ್ದಾನೆ. ಅಂತಹ ನೆಮ್ಮದಿ ನನಗೆ ಬೇಕು. ಶಾಂತಿ ಬೇಕು.'

ಅವರು ಪೇಪರನ್ನು ಸರಿಸುವ ಹಾಗೆ ಕಂಡುದರಿಂದ ನಾ ಕೂಡಲೇ ಕಣ್ಣು ಮುಚ್ಚಿದೆ..... ಕಡ್ಡಿ ಕೊರೆದ ಸಪ್ಪಳವಾಯಿತು. ಮತ್ತೆ ಸಿಗರೇಟು ಹೊತ್ತಿಸಿದರು. 'ಅಯ್ಯೋ, ಎಷ್ಟರೆ ಸೇದೋದು? ಹೋಗಿ ಕಸಿದು ಒಗೆಯಲೆ? ದೇಹಬಲ ಕುಗ್ಗುವದೆಂಬ ಕಲ್ಪನೆಯಿರಬಾರದೆ? ' ಎಂದು ನೊಂದೆ. ವಿಚಿತ್ರ! ಅದೇ ಮಾತನ್ನು ಕೆಲವರ್ಷಗಳ ನಂತರ ಮದುವೆಯಾದ ನನ್ನ ಯಜಮಾನರಿಗೆ ನಾ ಹೇಳಿದಂತೆಯೂ, ಅವರು ನನ್ನ ಗಲ್ಲವನ್ನು ಹಿಂಡಿ, 'ಹುಚ್ಚಿ, ಚಟಾ ಅದು ಹೋಗೂದಿಲ್ಲ' ಎಂದಂತೆಯೂ ಭಾಸವಾಯಿತು.

ಒಂದು ಕ್ಷಣ ಅದರ ರಸಾಸ್ವಾದನೆ ಮಾಡುತ್ತಿರುವಾಗ, ಕಾಲಿಗೆ ಒಂದು ಗುಂಗಾಡು ಕಡಿಯಿತು. ಒಮ್ಮೆಲೆ ಬಲವಾಗಿ ಕಡಿದುದರಿಂದ ಒಡನೆಯೆ ಕಾಲು ಸರಿಸಬೇಕಾಯಿತು. ಅದು, ಎದುರಿಗೇ ಕುಳಿತಿದ್ದ ಅವರ ಕಾಲಿಗೆ ತಾಕಿತು. ಅಚಾತುರ್ಯವಾಯಿತಲ್ಲ ಎಂದು ಮಿಡುಕಿದೆ. ಏಕೊ ಮತ್ತೂ ಕಣ್ಣು ತೆರೆಯಬಾರದು ಎಂದೆನಿಸಿತು. ಆದರೆ ಕಡಿದ ಜಾಗ ತುರಿಸಿಕೊಳ್ಳದೆ ನಡೆಯುವಂತಿರಲಿಲ್ಲ! ಕಣ್ಣನ್ನು ತೆರೆದೆ.

ಎದುರಿಗೇ ಅವರು. ಸಿಗರೇಟಿನಿಂದ ಹೊಗೆ ಹಾಯುತ್ತಿದೆ. ನಿರ್ಭಾವದಿಂದ ಒಂದು ಕಡೆ ನೋಡುತ್ತಿದ್ದಾರೆ. ಸಿಗರೇಟನ್ನ ಸೇದುವವರೆಲ್ಲರಿಗೂ ಈ ಬಗೆಯ ಗುಂಗೊ ಏನೊ.

ಅವರಿಗೆ ಹೊಂದಿದ ನನ್ನ ಕಾಲನ್ನು ಸರಿಸಿ ಬಾಗಿ ತುರಿಸಿಕೊಂಡೆ ನಾನು ಮುಖವನ್ನೆತ್ತಿ ಆ ಮೇಲೆ ಅವರ ಕಡೆಗೊಮ್ಮೆ ನೋಡಿದಾಗ ಮುಖದ ಕುರೂಪ ಏಕೊ ಅಷ್ಟು ಅನಿಸಲಿಲ್ಲ. ಆದರೆ ಅವರು ನನ್ನ ದೃಷ್ಟಿಯನ್ನು ಎದುರಿಸಿದ್ದರೆ, ಇದೇ ಬಗೆಯ ಸ್ನಿಗ್ಧಭಾವ ಆಗ ನನ್ನಲ್ಲಿ ಉಳಿಯುತ್ತಿತ್ತೋ ಇಲ್ಲವೋ ಹೇಳಲಾರೆ.

ಸುರೇಶನಿಂದ ಅವರಿಗೆ ತೊಂದರೆಯಾಗುತ್ತದೆಂದು ನನಗನಿಸಿತು. ಈ ನೆವದಿಂದ ಅವರನ್ನು ಮಾತಾಡಿಸಲೆಂದು ಮನಸ್ಸಿನಲ್ಲಿ ಹೇಳಬೇಕೆಂದಿರುವ ವಾಕ್ಯವನ್ನು ರೂಪಿಸಿಕೊಂಡು, ನನ್ನ ಕಡೆ ನೋಡುವುದನ್ನೇ ಕಾಯುತ್ತಿದ್ದೆ. ಹಾಗೆ ನೋಡಿದ ಕೂಡಲೇ ನಾ ಹೇಳಿದೆ. "ಎಷ್ಟೊತ್ತದು ಹಂಗೇ ಮಲಗೋದು. ಮೊದ್ಲS ಜಾಗಾ ಇಲ್ಲ. ಎಬ್ಬಸರಿ ಅವನ್ನ, ನಿಮಗ ಸುಳ್ಳೇ ತ್ರಾಸು. ಮನಿಗೆ ಹೋದಮ್ಯಾಲೆ ಮಲಗೇ ಮಲಗತಾನ."

"ಮಲಗಲಿ ಪಾಪ! ನನಗೇನು ತ್ರಾಸು ಆಗಬೇಕಾಗೇದ ಟ್ರಂಕಿನ ಮ್ಯಾಲೆ ಕೂತಾನ. ಇಲ್ಲೇ ತಲಿ ಇಟ್ಟಾನ ಅಷ್ಟೆ" ಎಂದರು. ತುಸು ತಡೆದು ಸಂಕೋಚವಿಲ್ಲದ ದನಿಯಲ್ಲಿ ಕೇಳಿದರು. "ನಿಮಗ ಈಗ ನಿದ್ದಿ ಹತ್ತಿರಲಿಕ್ಕಿಲ್ಲ."

"ತುಸು ಜಂಪು ಹತ್ತಿತ್ತು.... ಯಾರಿಗೆ ಬೇಕಾಗೇದ ನಿದ್ದಿ? ಕೂಡಲಿಕ್ಕೆ ಇಷ್ಟು ಜಾಗಾ ಸಿಕ್ಕದ, ರಗಡಾತು. ಖರೇ ಅಂದ್ರ ಇವತ್ತ ನನ್ನ ಕೈಕಾಲೇ ಹೋಗಿದ್ದು. ದೇವರೆ ಪಾರುಮಾಡಿದಾ ಅನಬೇಕು" ನಾನಾಡಿದ ಮಾತಿಗೇ ಲಜ್ಜೆ ಒಮ್ಮೆಲೇ ಆಡರಿತು. ಅದನ್ನು ಮರೆಮಾಡಲು ಕಿಟಕಿಯ ಕಡೆ ಮುಖ ತಿರುವಿದೆ.

'ನೀರಾ' ಸ್ಟೇಶನ್ನು ಬಂದಿತು. ಇಳಿಯುವವರು ತಮ್ಮ ಸಾಮಾನನ್ನು ಸಾವರಿಸಿಕೊಳ್ಳತೊಡಗಿದರು. ಇವರು ಸುರೇಶನ ತಲೆಯನ್ನು ನನ್ನ ತೊಡೆಯ ಮೇಲಿರಿಸಿಕೊಳ್ಳಲು ಸೂಚಿಸಿ, ತಟ್ಟನೆ ಎದ್ದು ಜಾಗವನ್ನು ಮಾಡಲು ಅಣಿಯಾದರು. ಪುಣೆಯಿಂದ ಬಂದು, ಇದುವರೆಗೆ ನಿಂತಿದ್ದವರಿಗೆ ಕೂಡ್ರುವ ವಿಷಯದಲ್ಲಿ ಜಾಗ ತೋರಿಸಿಕೊಟ್ಟರು. ಜನ ಶ್ರದ್ಧೆಯಿಂದ ಅವರ ಮಾತನ್ನು ಕೇಳುತ್ತಿತ್ತು.

ಇಳಿಯಬೇಕಾದವರಲ್ಲಿ ಅರ್ಧ ಜನ ಇಳಿಯುತ್ತಲೂ, ಅವರು ಕೂತ ಸೀಟಿನ ತುದಿಯ ಮುಂದೆ ಒಂದು ಟ್ರಂಕು, ಹಾಸಿಗೆ ಸುರಳಿಯನ್ನಿರಿಸಿ, ಉದ್ದಕ್ಕೂ ಜಾಗವಾಗುವಂತೆ ಮಾಡಿದರು. ಮುಗಿದ ಕೂಡಲೇ ನನ್ನ ಕಡೆ ತಿರುಗಿ "ನೀವು ಇಲ್ಲಿ ಮಲಗಬರ್ರಿ" ಎಂದರು. ಅವರ ಆಶಯ ತಿಳಿಯಲಿಲ್ಲ. ತಾವು ಮಲಗುವ ಯೋಚನೆಯೇ ಇಲ್ಲವೆ ಎಂದುಕೊಂಡು "ನಾ ಒಲ್ಲೆ. ನಿಮಗ ಇರ್ಲಿ ಆ ಜಾಗ" ಎಂದೆನು. ಇಷ್ಟಾಗಿ ಅದು ಹೇಗೆ ಮಲಗುವದು, ಇಷ್ಟು ಜನ ನಿಂತಾರೆ, ಮೇಲಾಗಿ ಅವರಿಗೆ ಪ್ರಶಸ್ತ ಸ್ಥಳ ಬೇಡವೇ ಎಂದು ವಿಚಾರಿಸುತ್ತಿರುವಾಗಲೇ, ಅವರು 'ಇಲ್ಲಿ ಬರಬಾರದೆ ಸುಮ್ನೆ. ಹಿಂದಾಗಡೆ ಊರತನಕಾ ಹಿಂಗ ಕೂತುಗೊಂಡೇ ಹೋಗಬೇಕಾದೀತು... ಇಂಥಾದೇನರೆ ಗದ್ದಲಾ ಹಾಕಿದರೇನೆ. ಜಾಗಾ ಆಗ್ತದ" ಎಂದು ನಾ ಹೊರಡುವದನ್ನೇ ಕಾಯುತ್ತ ನಿಂತರು.

ಆಗೂ ನನಗೆ ಮಲಗಬಾರದು ಎನಿಸಿತು. ಆದರೆ ಮರುಮಾತಿಲ್ಲದೆ ಅಲ್ಲಿಗೆ ಮುದುಡಿಕೊಂಡು ಮಲಗಿದೆ. ಆಮೇಲೆ ಹೇಳಿದರು : "ನೀವೀಗ ಜಡ್ಡಿನವರು. ಯಾರು ಬಂದರೂ ಏಳುವ ಹಾಗಿಲ್ಲ"... ಬಹುಶಃ ನನ್ನ ಹೆಸರಲ್ಲಿ ಜಾಗ ಹಿಡಿದು ನಂತರ ತಾವು ಮಲಗುತ್ತಿರಬೇಕು ಎಂದು ಸಮಾಧಾನ ಮಾಡಿಕೊಂಡೆ.

"ನಾ ಏನು ಹೇಳಿದೆ? ಕಣ್ಣು ಮುಚ್ಚರಿ, ಕಾಲು ಇನ್ನಷ್ಟು ಚಾಚರಿ" ಎಂದರು... ಎಷ್ಟದು ಅಧಿಕಾರ ನಡೆಸುವದು!

ಜನ ಇಳಿದಿತ್ತು. ಹತ್ತುವವರು ಆರ್ಭಟಿಸುತ್ತ ಮುನ್ನುಗ್ಗುತ್ತಿದ್ದರು. ಹಿಂದೆ ಇನ್ನೂ ಸಂಖ್ಯೆ ದೊಡ್ಡದಿದ್ದಂತೆ ಕಂಡಿತು. ಇಷ್ಟೆಲ್ಲರನ್ನೂ ಜಪ್ಪಿಸಿ ನಾ ಹಾಗೇ ಮಲಗಿಕೊಳ್ಳಬಹುದೆ? ನನ್ನ ಎದೆ ಡವಡವ ಹಾರುತ್ತಿತ್ತು. ನನ್ನ ದೌರ್ಬಲ್ಯವನ್ನು ಊಹಿಸಿದರು ಎನ್ನುವ ಹಾಗೆ 'ಯಾರು ಎಬ್ಬಿಸಿದರೂ ಏಳಬೇಡಿರಿ' ಎಂದು ಬಾಗಿಲ ಕಡೆಗೆ ನಡೆದರು.

ಮುಚ್ಚಿದ ಕಣ್ಣನ್ನು ಮುಚ್ಚಿಯೇ ಇದ್ದೆ. ಕಾಲುದೆಸೆಯಲ್ಲಿ ಯಾರೊ ಕುಳಿತಂತಾಯಿತು. ಕಣ್ಣಮೇಲಿಟ್ಟ ಕೈಯ ಮರೆಯಿಂದ, ನಸು ನೋಡಿದೆ. ಅವರೇ! ಥಟ್ಟನೆ ತುಸು ಕಾಲು ಸರಿಸಿದೆ. ಮತ್ತೆ ಕಡ್ಡಿಯನ್ನು ಕೊರೆದ ಸಪ್ಪಳ. ಸುರೇಶ ಏನು ಮಾಡುತ್ತಿದ್ದಾನೋ ನೋಡುವ ಹಾಗಾಯಿತು. ಅಲ್ಲಿಂದಲೇ ನೋಟ ತಿರುಗಿಸಿದೆ. ಮೇಲೆ ನೀಳವಾಗಿ ಮಲಗಿ, ಅವರ ಕಡೆ ನಸುನಗೆಯಿಂದ ನೋಡುತ್ತಿದ್ದ.

ಗಾಡಿ ಬಿಟ್ಟಿತು.

ಮಲಗಿಯಾದರೂ ಬಿಡುವ ಎಂದು ಕಣ್ಣು ಮುಚ್ಚಿದೆ. ನಿದ್ದೆ ಹತ್ತಬಾರದೆ? ಇಲ್ಲ. ಇದುವರೆಗಿನ ಘಟನೆಗಳೇ ಅಲ್ಲೊಂದಿಷ್ಟು ಇಲ್ಲೊಂದಿಷ್ಟು ಸುಳಿಯುತ್ತಿದ್ದುವು. ಅದೆಲ್ಲ ಮರೆಯಾಗಿ, ಸರಸಕ್ಕನ ನೆನಪಾಯಿತು. ದಿನವೂ ಈ ವೇಳೆಗೆ ಸ್ವಲ್ಪ ಮುಂಚೆ ಕೂಸಿಗೆ ಹಾಲು ಕುಡಿಸುತ್ತಿದ್ದೆ. ಈಗ ಅವಳೇ ಹಾಕಿಕೊಳ್ಳಬೇಕು. ಅದರ ಮೇಲಿನ ಮುಂಗಡಿ ಕೂಸು ರೇಖಾ, ಈಗ ಮಲಗಿರಬೇಕು. ನಾನು ಚುಕ್ಕೂ ಬಡಿದು ಹತ್ತಿರ ಮಲಗದ ಹೊರತು ರೇಖಾ ಮಲಗುತ್ತಿರಲಿಲ್ಲ. ಆಗ ಎಂತಹ ಕೆಲಸ ಇದ್ದರೂ ಬಿಟ್ಟು ಬಂದು ಮಲಗಿಸುತ್ತಿದ್ದೆ.... ನಾನು ಬರುವಾಗ ಎಷ್ಟು ಅತ್ತಿತು! ಮಾಮಾ ಸ್ಟೇಶನ್ನಿನವರೆಗೂ ಕರೆದುಕೊಂಡು ಬಂದು, ನಮ್ಮನ್ನು ಗಾಡಿಗೆ ಕೂಡ್ರಿಸಿ ಹೋಗುತ್ತಿದ್ದರಾಗುತ್ತಿರಲಿಲ್ಲವೆ? ಇವತ್ತೇನು ಅವನಿಗೆ ಸರಸಕ್ಕನೊಡನೆ ಚಕ್ಕಂದವಾಡಲು ಸಿಕ್ಕಂತಾಯಿತು. ಅವತ್ತು... ಒಮ್ಮೆ ನಡುವೆ ನಾ ಬಂದುಬಿಟ್ಟೆ... ಗೊತ್ತಾಗಲಿಲ್ಲ. ಇವರೂ ಹೀಗೆ ತಮ್ಮ ಹೆಂಡತಿಯೊಡನೆ ಸರಸವಾಡಬಹುದೆ? ಆಡದೆ ಏನು?'

ಅವರನ್ನು ಯಾವನೊ-ಯಾವನೊ ಏಕೆ, ನನ್ನನ್ನು ಎಬ್ಬಿಸಬಂದ ಆ ಮಧ್ಯಮ ವಯಸ್ಸಿನವನು ಮರಾಠಿಯಲ್ಲಿ ಕೇಳುತ್ತಿದ್ದನು : "ಈಗ ನೀವು ಮುಂಬೈಯಿಂದ ಬಂದ್ರೇನು?"

"ಹೌದು."

"ಏನು? ಮುಂಬೈ ಒಳಗ ನೌಕರಿ ಮಾಡಿಕೋತ ಇದ್ದೀರಿ?"

"ಏ, ಇಲ್ಲ."

"ಬಿಸ್‌ನೆಸ್ ಮ್ಯಾಲೆ ಹೋಗಿದ್ರಿ?"

"ಛೆ ಅಲ್ಲ; ರೇಡಿಯೊದೊಳಗ ನನ್ನ ಗಾಯನ ಇತ್ತು. ಹೋಗಿದ್ದೆ"

"ಹಿಂಗ. ನಮ್ಮ ಪೈಕೀನೂ ಒಬ್ಬ ಗವಯಿ ಇದ್ದಾನ. ಅವಂದು ಗುರ್ತದ ಏನು? ಅಂವಾ ಇರೋದು ನೋಡ್ರಿ..."

ಇದೇನು ಹೊಸ ಸಂಗತಿ! ಇವರು ಉತ್ತಮವಾಗಿ ಹಾಡಬಲ್ಲರೆ? ರೇಡಿಯೊದಲ್ಲಿ ಹೇಳುವಷ್ಟು ಇರಬೇಕಾದರೆ! ಇಂತಹ ಕುರೂಪವಿರುವಲ್ಲಿಯೂ ಎಂತಹ ಶಾರೀರ! ನನ್ನ ಮನಸ್ಸು ಬಲವಾಗಿ ಹೊಯ್ದಾಡಿತು. ಮುಂದುವರಿದ ಅವನ ಸಂಭಾಷಣೆಯ ಕಡೆ ಮತ್ತೆ ಲಕ್ಷ್ಯಗೊಟ್ಟೆ.

"ನನಗೇನು ಯಾರೂ ಗುರು ಅಂತ ಹೇಳಿಲ್ಲ. ನನಗೇ ಬಂದ್ಹಂಗ ಧಾಟಿ ಹಚ್ಚಿ ಹಾಡತಿರತೇನಿ. ಶಾಸ್ತ್ರೋಕ್ತ ಸಂಗೀತ ನಾ ಕಲೀಲಿಲ್ಲ. ಈಗೊಂದು ೩-೪ ತಿಂಗಳ ಹಿಂದ ಮುಂಬೈ ಒಳಗೆ ಇದ್ದಾಗ, ರೆಡಿಯೋಕ್ಕ ಸಹಜ ಟ್ರಾಯಲ್ ಕೊಟ್ಟಿದ್ದೆ. ಅಷ್ಟರ ಮ್ಯಾಲಿಂದ ಮೊನ್ನೆ ಒಂದು ಚಾನ್ಸ ಸಿಕ್ಕಿತ್ತು."

"ಮತ್ತ ನಿಮ್ಮನಿಯವರ್ನ, ಹಾಡಿನ ಸಲುವಾಗೇ ಅಂತ ಕರಕೊಂಡು ಹೋಗಿದ್ರ್ಯೊ? ಏನು ಅವರು ಮುಂಬೈಯಾಗ ಇರತಿದ್ರೋ?"

ಅಂ! ವಿಚಿತ್ರ ಪ್ರಶ್ನೆ. ನನ್ನ ಮೇಲೆ ತಿರುಗಿತು. ನಾನು ಇವರ ಮನೆಯವಳೆ? ಮತ್ತೆ ಎದೆಯಲ್ಲಿ ಝಲ್ಲೆಂದಿತು. ಈ ಮನುಷ್ಯ ತುಂಬ ವಾಚಾಳಿಯೆಂದೆಂದುಕೊಂಡೆ. ಅವರು ಉತ್ತರ ಹೇಳುತ್ತಿದ್ದಾರೆ.

"ಇವರs, ಆಗಳೇ ನಿಮ್ಮೆದುರಿಗೆ ಸುಮ್ನೆ ಹೇಳಿದೆ. ನಮ್ಮ ಪೈಕಿಯೇನಲ್ಲ. ಇಲ್ಲೇ ಪುಣೆದೊಳಗೆ ಭೇಟಿ ಆತು. ಕನ್ನಡ ಮಂದಿ ಅಂದ್ರ ತಾನಾಗಿ ಗುರ್ತ ಆಗತದ ನೋಡ್ರಿ. ಅವರ ಪೈಕಿ ದೊಡ್ಡವರು ಯಾರೂ ಬಂದಿಲ್ಲ. ತಮ್ಮ ತಮ್ಮನ್ನ ಅದೊ ಮ್ಯಾಲೆ ಮಲಗ್ಯಾನಲ್ಲ ಅವನ್ನ ಕರಕೊಂಡು ಬಂದಾರ. ಅಷ್ಟೆ"..... ಇಷ್ಟೇನೇ.

ವಿಚಾರ ಮುತ್ತಿ ಮುತ್ತಿ ತಲೆ ಕೀಸರಿಟ್ಟು ಹೋದಂತಾಗಿತ್ತು. ಮೇಲಾಗಿ ಹೃದಯದ ಕಳವಳವೊಂದು. ಇನ್ನು ಮಲಗಿಯೆಬಿಡಬೇಕು ಎಂದು ಗೊತ್ತುಮಾಡಿ, ಒಂದು ಮಗ್ಗುಲಾದೆ. ಕಣ್ಣು ಕುಕ್ಕುವ ದೀಪದ ಬೆಳಕೂ ಕಣ್ಣೆದುರು ಇರಲಿಲ್ಲವೆಂದೇನೊ, ತುಸುಹೊತ್ತಿನಲ್ಲಿ ನಿದ್ದೆ ಹತ್ತಿ ಬಿಟ್ಟಿತು.

ನಾನು ಆಗ ಅಸ್ಪಷ್ಟವಾದ ಕನಸನ್ನು ಕಾಣುತ್ತಿದ್ದೆ. ಕನಸಿನಲ್ಲಿ ನಾನೇ ಯಾರನ್ನೊ "ಹೂಂ, ಏಳ್ರಿ" ಎಂದು ಎಬ್ಬಿಸುತ್ತಿದ್ದೆ. ಮರುಕ್ಷಣ, "ಹೂಂ, ಏಳ್ರಿನ್ನ" ಎಂದು ಗಟ್ಟಿಯಾಗಿ ಅಂದ ಹಾಗೆ ಭಾಸವಾಯಿತು. ಎಚ್ಚರವಾಯಿತು. ಮಬ್ಬು ನನಗೆ. ಅವರೇ ನಿಜವಾಗಿ 'ಏಳ್ರಿ' ಎನ್ನುತ್ತಿದ್ದಾರೆ.

ಈ ಮಾತನ್ನು ಕೇಳಿ ನಾನು ನಾಚಿಕೆಯಿಂದ ಸತ್ತು ಸತ್ತು ಉಳಿದೆ. ಚಟ್ಟನೆ ಎದ್ದು ಕುಳಿತೆ. "ಖೋಡಿ ನಿದ್ದಿ. ನನಗ ಎಚ್ಚರಾನೇ ಇಲ್ಲ. ಯಾಕಿಷ್ಟು ಮೈ ಮರೆವೊ ಏನೊ. ನಿಮ್ಮನ್ನ ಇಷ್ಟೊತ್ತನಕಾ ಹಂಗೇ ಕೂಡ್ರಿಸಬೇಕಾತು."

"ಏನಿಲ್ಲ. ಈಗ ಮಲಗತೇನಲ್ಲ. ನನಗ ನಿದ್ದಿ ಬಂತಂದ್ರ ಎಬ್ಬಿಸತೇನಿ ಅಂತ ಹೇಳೇ ಇದ್ದೆ" ಎನ್ನುತ್ತ ತಮ್ಮ ಬೂಟನ್ನು ತೆಗೆಯತೊಡಗಿದರು. ತಲೆಗೆ ಕರವಸ್ತ್ರವನ್ನು ಬಿಗಿದು, ಯಾವ ಯೋಚನೆಯಿಲ್ಲದೆ ಮಲಗಿದರು. ಬಲು ಬೇಗ ಅವರಿಗೆ ನಿದ್ದೆ ಹತ್ತಿದ ಹಾಗೆ ಕಂಡಿತು.

ಹೊರಗೆ ಕಿಟಕಿಯಿಂದ ತಂಗಾಳಿ ನುಣ್ಣಗೆ ತೀಡುತ್ತಿತ್ತು. ಇನ್ನೂ ನಿದ್ದೆಯ ಅವಶೇಷ ಉಳಿದಂತಾಗಿ, ಕಣ್ಣು ತೆರೆಯಬೇಕೆನಿಸಲಿಲ್ಲ. ಏಕೊ ಅವರ ಕಡೆ ನೋಡಬೇಕೆಂದಿತು ಮನಸ್ಸು. ನೋಡಿದೆ, ಅದೇ ಕಪ್ಪು ಮುಖ. ಕಣ್ಣನ್ನು ಮುಚ್ಚಿದುದರಿಂದ ಅವರ ವಿದ್ರೂಪ ಎದ್ದು ಕಾಣುತ್ತಿತ್ತು. ಆದರೆ ಅದರ ಹಿಂದೆ ಪೂಜನೀಯವಾದ ಸುಂದರ ವ್ಯಕ್ತಿತ್ವದ ಸ್ವರೂಪವೊಂದು ಅರಳಿ ಮತ್ತೆ ಮನಸ್ಸು ಗಾಸಿಗೊಂಡಿತು.

ಅದನ್ನು ಸಹಿಸುವುದಕ್ಕಾಗದೆ, ಏನಾದರೂ ಓದಬೇಕೆಂದು ಸುರೇಶನ ಕೈ ಚೀಲದಲ್ಲಿದ್ದ 'ಕಾರಣಪುರುಷ'ಕಾದಂಬರಿಯನ್ನು ಹೊರತೆಗೆದೆ.

ಈ ಮುನ್ನ ಇದೇ ಜಾಗದಲ್ಲಿ ಅವರು ಕುಳಿತಿದ್ದರು. ನಾನು ಮಲಗಿದ್ದೆನಲ್ಲ. ನಿದ್ದೆಯಲ್ಲಿ ಎಷ್ಟು ಸಲ ಅವರಿಗೆ ನನ್ನ ಕಾಲನ್ನು ತಾಕಿಸಿರಬೇಕು. ಥು, ಎಂತಹ ತಪ್ಪು ಮಾಡಿದೆ. ಅವರು ಏನೆಂದು ತಿಳಿದಿರಬೇಕು? ನಯವಿಲ್ಲದವಳು ಎಂಬ ಭಾವನೆ ಮೂಡಿತೊ ಏನೊ.

ಪುಸ್ತಕವನ್ನು ಓದಬೇಕೆಂದು ನಾನು ತೆರೆದೆನೊ ಇಲ್ಲವೊ ಇನ್ನೊಮ್ಮೆ ನೋಡಬೇಕು ಎನ್ನಿಸಿತು. ಮೊದಲ ಸಲ ಪುಣೆ ಪ್ಲಾಟ್‌ಫಾರ್ಮಿನ ಮೇಲೆ ಯಾವ ಒಂದು ಕೀಳು ದೃಷ್ಟಿಯಿಂದ ನೋಡಿದ್ದೆನೋ, ಅದೀಗ ಇರಲಿಲ್ಲ. ಅದಕ್ಕೆ ವಿರುದ್ಧವಾಗಿ ಒಂದು ಬಗೆಯ ಆದರ ನನ್ನಲ್ಲಿ ಮೂಡಿದೆ ಎನಿಸಿತು. 'ಏನಿದು ಹುಚ್ಚು, ಯಾರೊ ಅಕಸ್ಮಾತ್ ಭೆಟ್ಟಿಯಾಗಿ ತುಸು ನೆರವಾದ ಒಬ್ಬವಗಾಗಿ ಇಷ್ಟೇಕೆ ತೊಳಲಬೇಕು' ಎಂದು ಒಂದು ವಿಚಾರ ಮನಸ್ಸನ್ನು ಕಲ್ಲುಮಾಡಲೆಳಸಿತು.

ಇಲ್ಲ, ಅದು ಬರಿ ಒಂದು ವಿಚಾರ ಅಷ್ಟೆ. ಸ್ಪಷ್ಟವಾಗಿ ನನಗೆ ತಿಳಿಯಿತು. ಅರಿತೊ ಅರಿಯದೆಯೊ ಅವರ ವ್ಯಕ್ತಿತ್ವಕ್ಕೆ ಮನಸೋತವಳಾಗಿದ್ದೇನೆ ಎಂದು. ಇದುವರೆಗೆ ನಡೆದುದೆಲ್ಲ ಒಂದಕ್ಕೊಂದು ಪೋಷಕವಾಗಿ ಏರಿ ಬಂದುಬಿಟ್ಟವೆ. ಇನ್ನು ಆ ಭಾವನೆಯಿಂದ ಹಿಂದೆ ಹೋಗಲಾರದವಳಾಗಿದ್ದೇನೆ ಎಂಬುದೂ ಖಚಿತವಾಯಿತು... ನನ್ನ ವಿಷಯದಲ್ಲಿ ಅವರು ವಿಶೇಷ ಆಸ್ಥೆ ತೋರಿರಲಿಲ್ಲ. ಆದರೆ ನನಗಿಂತ ಆ ಹಾಲುಗಲ್ಲದ ಸುರೇಶನ ಮೇಲೆ ಹೆಚ್ಚು ಮಮತೆಯಿದ್ದಂತೆ ಕಂಡುಕೊಂಡೆ. ಅವನನ್ನು ತಮ್ಮ ತೊಡೆಯ ಮೇಲೆ ಮಲಗಿಸಿಕೊಂಡುದೂ ಆವನೊಡನೆ ಆಡಿದ ನಾಲ್ಕು ಸವಿಮಾತೂ ಎಲ್ಲವೂ ಕಣ್ಣು ಕಟ್ಟಿದುವು.

ನನ್ನ ಕೈಹಿಡಿಯುವವರು ಕುರೂಪಿಯಾಗಿದ್ದಿದ್ದರೆ ಎಂಬ ವಿಚಾರ ಆಗ ಬಂತು. ನಮ್ಮ ಪರಿಚಯಸ್ಥರಲ್ಲೆಲ್ಲ ನಾನೊಬ್ಬ ಚೆಲುವೆಯೆಂದೆನಿಸಿಕೊಂಡಿದ್ದೇನೆ. ಕುರೂಪಿ ಗಂಡನೊಂದಿಗೆ ಹೊರಹೊರಟಾಗ ಗೆಳತಿಯರು, ಉಳಿದವರು ಹೀಗಳೆಯದೆ ಇರುವರೆ? ಚಾಷ್ಟಿ ಮಾಡಲಿಕ್ಕಿಲ್ಲವೆ? ಮಾಡಿದರೆ ಮಾಡಲಿ. ನನಗೆ ಬರಿ ರೂಪ ಬೇಡ, ಇಂತಹ ಎದೆಗಾರಿಕೆಯುಳ್ಳ ಹಾಗು ನಯನಾದ ವ್ಯಕ್ತಿತ್ವವುಳ್ಳವರು ಇರಬೇಕು.

ಇನ್ನೂ ಒಮ್ಮೆ ಅವರ ಕಡೆ ನೋಡಿದೆ.

ಕೆಟ್ಟ ವಿಧಿಯೆ, ಇವರು ಎಷ್ಟೊಂದು ಕುರೂಪಿಯಾಗಿದ್ದಾರೆ! ಸ್ವಲ್ಪಾದರೂ ನೆಟ್ಟಗಿರಬಾರದೆ? ಕಪ್ಪು ಬಣ್ಣವೆಲ್ಲ ಇವರಿಗೇ ಅಂಟಿಕೊಂಡಂತಿದೆಯಲ್ಲ... ಸರಿ, ಕಪ್ಪು ಬಣ್ಣ ಒಂದು ವೇಳೆ ಸಹ್ಯವಾದಿತೇನೊ. ಆದರೆ ಈ ಮೂಗು ಹೀಗೆ ಚಪ್ಪಟೆಯಾಗಿರಬಾರದಿತ್ತು. ಕೊನೆಯ ಪಕ್ಷ, ಹಣೆಯಾದರೂ ಹೀಗೆ ಚೌಕಾಗಿ ಹಲಿಚಾಗಿರದೆ,

ದುಂಡಗಿದ್ದರೆ... ಇದ್ದರೆ, ಈಗ ಇಲ್ಲ. ...ಇನ್ನೆಂದು ಆಗಲಾರದಲ್ಲ... ಸ್ವಲ್ಪಾದರೂ ಸಲಕ್ಷಣತೆ ಇರಬೇಕು ಗಂಡಸಿಗೆ...

ಪಟ್ಟು ಈ ಮನಸ್ಸನ್ನು ಅಣೆಗೊಳಿಸಿ, ಕೈಯಲ್ಲಿದ್ದ ಪುಸ್ತಕವನ್ನು ಓದಲಿಕ್ಕೇ ಸುರುವು ಮಾಡಿದೆ. ಪಾನು ತೆಗೆದೊಡನೆ ಅದರಲ್ಲಿ ಮದುವೆಯ ಮಾತೇ! ವಧೂವರರ ಮೆರವಣಿಗೆ ಹೊರಟಿದೆ. ಬೆಳದಿಂಗಳ ಸೊಂಪಿನಲ್ಲಿ ವರನಿಗೆ ನಿದ್ದೆ ಹತ್ತಿಬಿಟ್ಟಿದೆ. ಮುಂದೆ ಬ್ಯಾಂಡಿನವರು ಇಂಪಾಗಿ ಬಾರಿಸುತ್ತಿದ್ದಾರೆ...

ಮತ್ತೆ ಮನಸ್ಸು ಪುಸ್ತಕವನ್ನು ಬಿಟ್ಟೋಡಿತು. 'ಹಾಂ ಇವರು, ಇಂಪಾಗಿ ಹಾಡಬಲ್ಲರಲ್ಲವೆ? ನನ್ನ ಯಜಮಾನರು ಹಾಡಲು ಬರುತ್ತಿದ್ದ ರಸಿಕರಾಗಿದ್ದರೆ ಎಷ್ಟು ಚೆನ್ನು! ಅಟ್ಟದ ಬಾಲ್ಕನಿಯಲ್ಲಿ, ಸೊಂಪಾದ ಬೆಳುದಿಂಗಳ ದಿವಸ, ಎದೆಗೆ ಆತು ಕುಳಿತು, ನನ್ನವರ ಹೃದಯ ವೀಣೆಯನ್ನು ಮೀಟುತ್ತಿದ್ದೇನೆ! ಇಂಪಾಗಿ ಎಳೆಯಾಗಿ, ಅವರು ಹಾಡುತ್ತಿದ್ದಾರೆ. ಸ್ವತಃ ಬೆಳ್ದಿಂಗಳೇ ಹಿನ್ನೆಲೆಯಲ್ಲಿ ಲಾಸ್ಯವಾಡುತ್ತಿದೆ. ನಾನು ಹಾಗೇ ನಿದ್ರೆ ಹೋಗುತ್ತಿದ್ದೇನೆ. ಅಹ್ಹಾ!

ಥೂ, ಮತ್ತೆ ಅವರ ಕಡೆ ನೋಡುವ.......... ಈ ಪ್ರವೃತ್ತಿ ಬೇಡವೆಂದು, ಎದುರಿಗಿನ ಜಾಗದಲ್ಲಿ ಕೂಡ್ರಬೇಕೆಂದು ಮಾಡಿದೆ. ಸುದೈವದಿಂದ ಅಲ್ಲಿಯೊಬ್ಬ ಹಳ್ಳಿಯಾಕೆ ಕುಳಿತಿದ್ದಳು. ಆಕೆ ಕೂಸಿನ ತಾಯಿ. ಕಿಟಕಿಯ ಗಾಳಿ ಕೂಸಿಗೆ ಬಡಿಯುವುದೆಂದು, ಆಕೆ ನಾ ಕೇಳಿದ ಕೂಡಲೇ ಆ ಜಾಗ ಬಿಟ್ಟಿದ್ದಳು. ಅಲ್ಲಿ ಕುಳಿತ ಮೇಲೆ ಈ ಪಟ್ಟು ನೇರವಾಗಿ ಅವರ ಮುಖ ಕಾಣುವದಿಲ್ಲವಲ್ಲ ಎಂದು ಖಚಿತ ಮಾಡಿಕೊಂಡು ಪುಸ್ತಕದಲ್ಲಿ ಮನಸ್ಸು ಹಾಕಿದೆ. ಓದಿದಂತೆ ಕಾದಂಬರಿ ನನ್ನ ಮನಸ್ಸನ್ನು ಹಿಡಿಯಿತು.

ಅರುಣೋದಯವಾಗತೊಡಗಿದಾಗ, ಗಾಡಿಯು ಕುಡಚಿಯನ್ನು ಬಿಡಲಿತ್ತು.

ಸುರೇಶನು ಎದ್ದು ಕೆಳಗಿಳಿದು ಬಂದಾಗಲೇ ನಾನು ಪುಸ್ತಕ ಬಿಟ್ಟು ಮನಸ್ಸನ್ನು ಹೊರತೆಗೆದೆ. ಅವನು ಎದ್ದವನೆ ನನ್ನ ಹತ್ತಿರ ಬಂದು ಕುಳಿತು ಅವರ ವಿಷಯವಾಗಿ ವಿವರಗಳನ್ನು ಕೇಳಿದನು: "ಮಲಗಿ ಎಷ್ಟೊತ್ತಾತು?" ಎಂದನು. ಮಿರಜದಿಂದ ಮಲಗಿದ್ದಾರೆಂದು ಹೇಳಿದೆ. ಕಾದಂಬರಿಯ ಕಡೆಗೇ ಲಕ್ಷ್ಯವಿದ್ದುದರಿಂದ, ನಾನು ಹೆಚ್ಚು ಅವನೊಡನೆ ಮಾತನಾಡಲಿಲ್ಲ.

ಬಹಳಷ್ಟು ಜನ ಇಳಿಯುವ ತಯಾರಿಯಲ್ಲಿದ್ದುದು ಕಂಡುಬಂತು. ಸುರೇಶನು 'ಅಕ್ಕಾ, ಬೆಳಗಾಂವಿ ಬಂತು' ಎಂದನು. ಆಮೇಲೆ ಒಂದೆರಡು ನಿಮಿಷ ತಡೆದು, "ಸ್ಟೇಶನ್ನ ಬಂತಂದ್ರ ಅವರ್ನ ಎಬ್ಬಿಸೋಣಂತ. ಚಹಾ ಕುಡಿಯೋಣ ಮೂರು ಮಂದಿ ಕೂಡಿ?" ಎಂದು ಹೇಳಿದ. ಹೂಂ ಎಂದೆ. ಮತ್ತೆ ಕೆಲ ನಿಮಿಷ ತಡೆದು ಸುರೇಶನು "ಅವರ ಹೆಸರು ಕೇಳ್ಳಿಕ್ಕೆ ಮರೀತು ನೋಡು ನನಗ, ನೀ ಏನರ ಕೇಳಿದ್ಯೇನು?" ಎಂದನು.

ಅವನ ಮಾತಿಗೆ ನಗೆ ಬಂತು. "ನಾ ಏನ ಕೇಳ್ಲ್ಯೋ ಅವರ ಹೆಸರು?" ಎಂದೆ.

ಬೆಳಗಾಂವಿ ಬಂತು. ಪುಣೆಯಷ್ಟೇ ಗದ್ದಲವಿದೆಯೆಂದೆನಿಸಿತು. ಅವರಿಗೆ ಪೂರ್ಣ ನಿದ್ದೆ ಹತ್ತಿತ್ತು. ಜನದ ಗದ್ದಲಕ್ಕೆ ಅವರೇನು ಏಳಲಿಲ್ಲ, ಸುರೇಶನು ಕಿಟಕಿಯಿಂದ ಇಳಿಯಲು ತಯಾರಾಗಿ "ಅಕ್ಕಾ, ನೀ ಅವರ್ನ ಎಬ್ಬಿಸು. ನಾ ಮಾರಿ ತೊಳಕೊಂಡು ಮೂರು ಚಹಾ ತಗೊಂಡು ಬರ್ತೀನಿ" ಎಂದು, ನನ್ನ ಮಾತಿಗೆ ಉತ್ತರ ಕಾಯದೆ ಕೆಳಗೆ ಜಿಗಿದನು... ತೀರ ಹುಚ್ಚು ಹುಡುಗ. ಏನೇನೂ ಗೊತ್ತಿಲ್ಲ. ನಾನು ಹೇಗೆ ಎಬ್ಬಿಸುವುದು ಎಂಬ ಕಲ್ಪನೆಯಿರಬೇಡವೆ?

ಅವರ ಕಡೆಗೊಮ್ಮೆ ನೋಡಿದೆ. ಸುಖವಾಗಿ ನಿದ್ರೆಮಾಡುತ್ತಿದ್ದರು. ನಾನು ಎಬ್ಬಿಸಬೇಕು ಅವರನ್ನು ಎಂದು ಈಗ ಮನಸ್ಸಾಯಿತು. ಹಿಂಜರಿಯುವ ನಾಲಿಗೆಯನ್ನು ಯಾವುದೋ ಶಕ್ತಿ ಮಾತನಾಡಲು ಎಳೆಯುತ್ತಿತ್ತು. ಕೊನೆಗೆ ಎಡಬಲಕ್ಕೆ ಒಮ್ಮೆ ನೋಡಿ, ಅವರ ತೋಳನ್ನು ತುಸುವೆ ಅಂದರೆ ಅಷ್ಟು ತುಸುವೆ ಅಲುಗಿಸಿ "ಏಳ್ತೀರೇನು" ಎಂದೆ. ಎಚ್ಚತ್ತಿದ್ದವರಿಗೂ ನನ್ನ ಮಾತು ಕೇಳಿಸಿತೊ ಇಲ್ಲವೊ ಎನ್ನುವಷ್ಟು ಹೌರಗಿತ್ತು ನನ್ನ ದನಿ.

"ಬೆಳಗಾಂವಿ ಬಂತು. ಏಳ್ತೀರೇನು?" ಎಂದು ಸ್ವಲ್ಪ ಗಟ್ಟಿಯಾಗಿ ಕೂಡಲೇ ನುಡಿದೆ. ನಿದ್ದೆಯಲ್ಲೇ 'ಹೂ' ಕಾರ; ಬೇರೆ ಮಾತಿಲ್ಲ. ಅಷ್ಟು ನಿದ್ದೆ.

ಇಳಿಯುವವರು ಪೆಚ್ಚಾಗಿ ಇಳಿದಿದ್ದರು. ಹತ್ತುವವರ ಏರಾಟ ಜೋರಾಗಿತ್ತು. ಹತ್ತಿದ ಜನ ಸಾಮಾನ್ನಿಡುವುದರಲ್ಲೂ ತಮಗೆ ಈ ಜಾಗ ನೋಡಿಕೊಳ್ಳುವದರಲ್ಲೂ ತೊಡಗಿದ್ದಿತು. ಅಷ್ಟರಲ್ಲಿ ಸುರೇಶನು ಬಂದನು. ಅವನ ಹಿಂದೆ, ಒಬ್ಬ ಮಾಣಿಯು ತಂದ ಟ್ರೇಯಲ್ಲಿ ಮೂರು ಚಹ, ಒಂದು ಗ್ಲಾಸು ನೀರು.

"ಎಬ್ಬಿಸಲಿಲ್ಲ ಹೌದಲ್ಲೊ. ಬರೇ ನಿಂದೊಂದೆ ನೀ ನೋಡಿಕೋತಿ" ಎಂದು ಮುಂತಾಗಿ ನನ್ನ ಮೇಲೆ ಅವನ ಹರಿದಾಟ!

ಅವನು ನನಗಿಂತ ಜೋರಿನಲ್ಲಿ ಹೇಳಿದ ದನಿಗೆ ಅವರು ಎದ್ದರು. ಅಲ್ಲಿ ಇಲ್ಲಿ ನೋಡಿದರು. ನೀರು ಕೊಡಹೇಳಿದರು. ಬಾಯಲ್ಲಿ ಅಷ್ಟು ಗುಳು ಗುಳು ಮಾಡಿ ಚಹ ಕುಡಿಯತೊಡಗಿದರು. ನಮ್ಮದು ಕುಡಿಯುವದು ಮುಗಿದಿತ್ತು. ಕಪ್ಪುಬಸಿ ಕೊಡಲೆಂದು ಅವರು ಕೈಚಾಚಿದಾಗ ಅದರ ಎದುರೇ ನಾನಿದ್ದೆ. ಇನ್ನೇನು ಎಂದು ನಾ ಇಸಕೊಳ್ಳಲು ಕೈ ಮುಂದೆ ಮಾಡಿದೆ. 'ಸರಿ' ಎಂದವರೆ, ತಾವೆ ಆ ಹುಡುಗನ ಕೈಯಲ್ಲಿತ್ತರು. ಅವರು ಪಾಕೀಟನ್ನು ತೆಗೆಯಹೋಗಲು ಸುರೇಶನು 'ಕೊಟ್ಟೇನಿ' ಎಂದನು.

ಅವರ ನಿದ್ದೆ ಮುಗಿದಿಲ್ಲವೆಂದು ನನಗನಿಸಿತು. ಬೆಳಗಾಗುವವರೆಗೂ ಅವರಿಗೆ ಮಲಗಗೊಡಲಿಲ್ಲ. ಅಲ್ಲದೆ ಈಗ ಸುಮ್ಮನೆ ಎಬ್ಬಿಸಿ ಚಹ ಕುಡಿಸಿ ಇನ್ನ ಅವರ ನಿದ್ದೆ ಹಾಳುಮಾಡಿದ ಹಾಂಗಾಯಿತಲ್ಲ! ಇನ್ನೇನಾದರೂ ಅವರಿಗೆ ಹೇಳಬೇಕು ಎಂದುಕೊಂಡು,

ಯೋಚಿಸುತ್ತಿರುವಾಗಲೇ ಸುರೇಶನು ಮಲಗಿದ್ದ ಜಾಗವನ್ನು ತೆರವು ಮಾಡಿಕೊಂಡು ಮೇಲೆ ಹತ್ತಿದರು. ಅಂತಹ ನಿದ್ದೆಗಣ್ಣಲ್ಲಿಯೂ ಸಿಗರೇಟನ್ನು ಮರೆತಿರಲಿಲ್ಲ.

ಲೋಂಡಾ ಬಂದಿತು. ಈಗ ಅವರನ್ನು ಎಬ್ಬಿಸಕೂಡದು, ನಿದ್ದೆ ಮಾಡಲಿ ಎಂದು ನಿಶ್ಚಯಿಸಿಕೊಂಡೆ. ಸುರೇಶನು ಅವರನ್ನು ಎಳಿಸುವ ಆಶಯ ವ್ಯಕ್ತಮಾಡಿದಾಗ ನಾನೇ ತಡೆದೆ. ನಮ್ಮ ಹೊಟ್ಟೆ ಹಸಿದಿತ್ತಾದ್ದರಿಮದ, ಒಂದಿಷ್ಟು ತಿಂದೆವು. ಅವರಿಗಾಗಿ ನಾಲ್ಕು ಬಾಳೆಹಣ್ಣು ತಂದೆವು.

ಅವರಾಗಿ ಎದ್ದುದು ಅಳಣಾವರಕ್ಕೆ. ಹೋಗಿ ಮುಖ ತೊಳೆದು ಬಂದು, ಬಾಳೆಹಣ್ಣು ತಿಂದಾಯಿತು.

"ಈಕಿ ನೋಡ್ರಿ, ಆರಾಮ ಜಾಗಾ ಮಾಡಿಕೊಟ್ರ ಮಲಗಿಬಿಟ್ಟಳು. ಮಂದಿ ನಿದ್ದೆಗೆಡತಾರ ಅನ್ನೂ ಕಾಳಜಿ ಇದ್ರ ಸೈ ಆಕಿಗೆ" ಎಂದು ಸುರೇಶನು ನುಡಿದನು.

"ಮಗನೇ, ಇನ್ನ ೨-೩ ತಾಸು ನನಗ ನಿದ್ದೀನೆ ಹತ್ತೂದುಲ್ಲ ಅಂದಾವಾ, ಸೀರಾ ಸ್ಟೇಶನ್ನು ಬಿಡಬಿಡತನ ಗೊರಕೆ ಹೊಡದೆಪಾ ನೀ ಯಾಕ ಎಳ್ಳಿಲ್ಲೊ. ಇನ್ನೂ ಅವರು ಮಿರಜಕ್ಕರೆ ಎದ್ದರೆ, ನೀ ಎಲ್ಲೆ, ಬೆಳತನಕ ನಿದ್ದಿಮಾಡೀದಿ" ಎಂದರು. ಸುರೇಶನು ಮಾತಿಲ್ಲದೆ ಸುಮ್ಮನಾಗಬೇಕಾಯಿತು. ಅದನ್ನು ಕಂಡು, ಅವನನ್ನು ನಗಿಸುವ ಆಶಯದಿಂದಲೊ ಏನೊ "ಅದಕ್ಕ ಆದ ತಪ್ಪು ಮುಚಿಕೋಳಿಕ್ಕೆಂದು, ಬೆಳಗಾಂವ್ಯಾಗ ಚಹಾ, ಇಲ್ಲೆ ಬಾಳೆಹಣ್ಣು ಕೊಟ್ಟೆಯಲ್ಲ!" ಎಂದರು. ಸುರೇಶನ ಜೊತೆಗೆ ನಾವೂ ನಕ್ಕೆವು.

ಹೀಗೆಯೇ ಆ ಈ ಮಾತು ಆಡುತ್ತಿರುವಾಗ ಸುರೇಶನು, ನನಗೆ ತಾನು ಅವರ ಹೆಸರನ್ನೇಕೆ ಕೇಳಲೊಲ್ಲ ಎನಿಸಿತು. ಅವರಿಗೆ ಗೊತ್ತಾಗದಂತೆ ಸುರೇಶನಿಗೆ ತಿಳಿಸಬೇಕೆಂದು, ಆ ಸಮಯ ಕಾಯುವದರಲ್ಲಿ ನಾನು ಅವರ ಮಾತಿನಲ್ಲಿ ತೊಡಗಲಿಲ್ಲ. ಕೊನೆಗೊಮ್ಮೆ ಅವನ ಕಿವಿಯಲ್ಲಿ "ಹೆಸರು" ಎಂದೆನು.

"ಅಂದ್ಹಂಗ ನಿಮ್ಮ ಹೆಸರ ಕೇಳ್ಳಿಕ್ಕ ಮರತುಹೋಗಿತ್ತು. ನಿಮ್ಮ ನೆನಪು ಇರಲೆಲ್ಲ" ಎಂದನು.

"ನನ್ನ ಹೆಸರು? ವರದರಾಜ"

ಧಾರವಾಡ ಸಮೀಪಿಸ ಹತ್ತಿದುದರಿಂದ ಸಾಮಾನನ್ನು ಸವರಿಸುವಲ್ಲಿ ತೊಡಗಬೇಕಾಯಿತು. ಸುರೇಶನು ಹೇಳಿದ : "ನಮ್ಮ ಅಪ್ಪ ಬಂದಿರತಾರ ಸ್ಟೇಶನಕ್ಕ. ನಿಮ್ಗ ಗುರ್ತಾ ಮಾಡಿಕೊಡತೇನಿ" "ಆಗಲಿ" ಎಂದರವರು.

ಇನ್ನು ಬಿಟ್ಟುಹೋಗಬೇಕಾದ ಪ್ರಸಂಗವನ್ನು ನೆನೆದು ಇರಬಹುದೆ? ಮನಸ್ಸು ಈಗ ಬಹಳಷ್ಟು ಉದ್ವಿಗ್ನವಾಯಿತು. ಯಾಕಾಗಬೇಕು? ಅವರೇನು ಸಮೀಪದ ಸಂಬಂಧಿಕರೇ?

ವಿಶೇಷ ಪರಿಚಯದವರೇ? ಇನ್ನು ಮುಂದಕ್ಕೆ ನಮ್ಮವರಾಗುವವರೆ? ಏನೂ ಇಲ್ಲ. ಯಾಕ ಬೇಗುದಿಗೊಳ್ಳುತ್ತಿದೆ ಈ ಮನಸ್ಸು ಎಂದುಕೊಂಡೆ. ನಿನ್ನೆಯ ಅವರ ಎದೆಗಾರಿಕೆಯನ್ನು ನೆನಸಿಕೊಳ್ಳುತ್ತಿದ್ದೆ. ಅವರ ಸ್ವಭಾವದಲ್ಲಿರುವ ಮಾರ್ದವತೆಯನ್ನು ಆಗಾಗ ಧೇನಿಸಿಕೊಳ್ಳುತ್ತಿದ್ದೆ. 'ಅವರು ರೂಪವಂತರಿರಬಾರದಿತ್ತೆ? ಇದ್ದಿದ್ದರೆ...? ಅವರು ಎಷ್ಟು ದೊಡ್ಡವರು! ಎಷ್ಟು ಒಳ್ಳೆಯವರು !...ಆದರೆ ಕುರೂಪ!' ಕರುಳನ್ನು ನಿರಿನಿರಿಯಾಗಿ ಹಿಂಡಿದಷ್ಟು ವೇದನೆ ಹೆಚ್ಚಾಯಿತು. 'ಏನು ಮಾಡಲಿ? ಏನು ಮಾಡಲಿ'? ಎಂದುಕೊಂಡೆ,

"ಏ, ಎತ್ಲಾಗ ನೋಡತಿ? ಧಾರವಾಡ ಬಂತು" ಎಂದನು. ಸುರೇಶ. ತಾನು ಕಿಟಕಿಯಿಂದ ಒಮ್ಮೆ ಜಿಗಿದು ತಂದೆಯನ್ನು ಹುಡುಕ ಹೋದನು. ಜನರೊಂದಿಗೆ ನಾನೂ ಇಳಿದೆ. ನಮ್ಮ ಸಾಮಾನನ್ನು ತಾವೇ ಇಳಿಸಿಕೊಂಡಲೆಂದಿದ್ದರು. ಅಷ್ಟರಲ್ಲಿ ಒಬ್ಬ ಕೂಲಿಯವನು ಕಾಣಲು ಅವನನ್ನು ಕೈಮಾಡಿ ಕರೆದು ಸಾಮಾನನ್ನು ಇಳಿಸಿದರು. ಆದರೆ ಈ ಕೊನೆಯ ನೆರವು ಏಕೊ ಬೇಡವಾಗಿತ್ತು.

ಸುರೇಶನು ತಂದೆಯನ್ನು ಕರೆತರಲಿಲ್ಲ, ಬಂದಿಲ್ಲವೆಂದು ಹೇಳಿದನು. ಅದಕಾಗಿ ತನ್ನ ವ್ಯಸನವನ್ನು ವ್ಯಕ್ತಪಡಿಸಿದನು. ಹೋಗಿ ಬರುತ್ತೇವೆಂದು ಇಬ್ಬರೂ ಕೈ ಮುಗಿದೆವು. ಸುರೇಶನು ಮತ್ತೆ ತನ್ನ ತುಂಬು ಹೊಗಳಿಕೆಯನ್ನು ತೋರಿದನು. 'ನೀವಿರದಿದ್ದರೆ ನಾವಿಷ್ಟು ಸುಲಭವಾಗಿ ಊರು ಮುಟ್ಟುತ್ತಲೆ ಇರಲಿಲ್ಲ' ಎಂದೂ ನಾನೂ ಹೇಳಬೇಕು ಎಂದುಕೊಂಡು 'ನೀವಿರದಿದ್ದರೆ.....' ಮುಂದೆ ನಾಚಿಕೆಯಿಂದಲೊ ಬಿಗುಮಾನದಿಂದಲೊ ಮಾತು ಬರಲಿಲ್ಲ. "ನಿಮಗ ಬಹಳ ತ್ರಾಸಕೊಟ್ಟಂಗ ಆತು" ಎಂದು ಅಂದೆ. "ಸುಮ್ನ ಹೋಗ್ರಿನ್ನ" ಎಂದರು.

ಕೂಲಿಯವನು ಮುಂದೆ ನಡೆದೇಬಿಟ್ಟಿದುದರಿಂದ, ನಾವು ಹೊರಟೆವು. ಮತ್ತೊಮ್ಮೆ ಅವರ ಕಡೆ ನೋಡಿ, ಹೋಗಿಬರುತ್ತೇವೆ ಎಂದೆವು. ಟಿಕೇಟು ಕೊಟ್ಟು ಹೋಗುವಲ್ಲಿಗೆ ಬಂದೆವು. ಗಾರ್ಡನ ಸೀಟಿಯಾಯಿತು. ಸುರೇಶನು ಅಷ್ಟರಲ್ಲಿ "ಮರ್ತೇಹೋತು ಅಕ್ಕಾ, ಅವರ ಪತ್ತೆ ತೊಗೊಂಡು ಬರ್ತೇನಿ" ಎಂದು ಓಡಿದ. ಗಾಡಿ ಬಿಡುವದರಲ್ಲಿತ್ತು. ನಾನು ಸಾಮಾನಿನ ಹತ್ತಿರವೇ ಇದ್ದೆ. ತಮ್ಮ ಕಿಸೆಗಳನ್ನು ನೋಡಿಕೊಂಡರು. ಬೇಕಾದುದು ಸಿಗಲಿಲ್ಲ. ಸುರೇಶನು ಅವರಿಗೆ ನಮ್ಮ ಮನೆಯ ವಿಳಾಸ ಹೇಳುವಂತೆ ಕಂಡಿತು. ಗಾಡಿ ಬಿಟ್ಟಿತು. ಸುರೇಶನು ಉತ್ಸಾಹದಿಂದ ಕರವಸ್ತ್ರವನ್ನು ಎತ್ತಿ ಹಿಡಿದಿದ್ದ. ಅವರೂ ಕಣ್ಮರೆಯಾಗುವ ವರೆಗೆ ಸುರೇಶನ ಕಡೆ ಕೈಮಾಡುತ್ತಿದ್ದರು. ಅಯ್ಯೋ, ನನಗೆ ಅವರ ಹತ್ತಿರ ನಿಂತು ಈ ರೀತಿ ಅವರನ್ನು ಬೀಳ್ಕೊಡುವುದಾಗಲಿಲ್ಲ ಎಂದು ಒದ್ದಾಡಿದೆ.

ನಾವು ಟಾಂಗಾದಲ್ಲಿ ಸಾಮಾನನ್ನು ಹಾಕಿಸುವುದಕ್ಕೂ ತಂದೆಯು ತೇಕುತ್ತ ಬರುವುದಕ್ಕೂ ಸಮವಾಯಿತು. ಮನೆಯಲ್ಲಿ ಊಟ ತಡವಾಯಿತಂತೆ. ಎಷ್ಟಿದ್ದರೂ ಅದು ಪೂರ್ತಿ ನಮ್ಮ ಮನೆಯಲ್ಲವಲ್ಲ. ಕಕ್ಕಿ ಯಾವಾಗ ಊಟಕ್ಕೆ ಹಾಕಿ ಕಳಿಸುತ್ತಾಳೆಯೋ ಆಗ

ಅವನು ಬರಬೇಕಷ್ಟೆ. ಅಪ್ಪ ಇದ್ದಿದ್ದರೆ ಹೀಗಾಗುತ್ತಿತ್ತೆ? ಮಕ್ಕಳು ಬರುತ್ತಾವೆಂದು ಅವಳು ದಾರಿ ಕಾಯದೆ ಇರುತ್ತಿದ್ದಳೆ?

ಅವನ ಮಾತಿನಿಂದ ನನಗೆ ಇದೇನೇನೊ ನೆನಪಾಯಿತು. ಮೂವರೂ ಟಾಂಗೆಯಲ್ಲಿ ಕುಳಿತು ನಡೆದೆವು. 'ಗಾಡಿಯಲ್ಲಿ ಪ್ರವಾಸ ಆರಾಮ ಆತೆ?' ಎಂದು ಆತನು ಕೇಳುವುದೊಂದೇ ತಡ, ಇವರ ಶೌರ್ಯದ ಕಥನಕ್ಕೆ ಪ್ರಾರಂಭವಾಯಿತು. ತಂದೆಯು ಬೆರಗುವಡೆದು ಕೇಳುತ್ತಿದ್ದನು.

"ಅವರಿಗೆ ನಿನ್ನ ಭೆಟ್ಟಿ ಮಾಡಿಸಬೇಕು ಅಂತ, ನಿನ್ನ ಸ್ಟೇಶನ್ನ ಮ್ಯಾಲೆ ಬಹಳ ಹುಡುಕಿದೆ. ನೀ ಲಗೂ ಬರಲೇ ಇಲ್ಲ. ಏನು ಮಾಡೋದು?" ಎಂದು ಸುರೇಶನು ಹಳಹಳಿಸಿದನು.

ಮನೆಯ ಮುಂದೆ ಟಾಂಗಾ ನಿಂತಿತು. ನಂದೆಯು "ಅಕ್ಕಾ ಬಂದ್ಲು, ಅಣ್ಣ ಬಂದಾ" ಎನ್ನುತ್ತಾ ಕೈತಟ್ಟ ನಮ್ಮೆಡೆಗೆ ಬಂದಳು. ಅವಳ ಕೈಹಿಡಿದುಕೊಂಡೇ ಒಳಕ್ಕೆ ಹೋದೆವು. ಕಕ್ಕಿಗೆ ನಮಸ್ಕಾರ ಮಾಡಿಯಾಯಿತು. "ಊಟಕ್ಕ ಬರ್ರಿ ಲಗೂನ, ಹೊತ್ತು ಬಹಳ ಆಗೇದ" ಎಂದಳು. ಬಟ್ಟೆ ಬದಲಿಸಲು ಕೋಣೆಗೆ ಹೋದೆ.

ನಂದೆಗೆ ಸರಸಕ್ಕನ ಸುದ್ದಿ ಹೇಳಿದೆ. 'ನಿನ್ನೆ ಬರಬೇಕಾದರ ಭಾಳ ಭಾಳ ಫಜೀತೀ ಆತವಾ' ಎಂದು ನನ್ನ ಮಾತು ಮುಂದರಿಸಲಿದ್ದೆ. ನಂದೆ ನಡುವೇಯೇ ಬಾಯಿ ಹಾಕಿ "ಅಕ್ಕಾ ಇಷ್ಯಾಕೆ ಕೆಂಪಗಾಗೇದ ನಿನ್ನ ಮಾರಿ?" ಎಂದು ಸರಳವಾಗಿ ಕೇಳಿದಳು. ಆಂ ಎಂದೆ, ಕನ್ನಡಿ ನೋಡಿದೆ. ಹೌದು ನನಗೂ ಎನಿಸಿತು. ಗಲ್ಲಗಳೆರಡೂ ಕಿತ್ತಳೆಯ ಹಣ್ಣಿನಂತೆ ತಿಳಿಗೆಂಪಾಗಿವೆ. ಹೌದೌದು, ಎಂದು ಉಲ್ಲಸಿತ ಮನಸ್ಸು ತಾಳ ಹಾಕಿತು. ಅಷ್ಟರಲ್ಲಿ ಸುರೇಶನೂ, ಅಪ್ಪನೂ ಒಳಕ್ಕೆ ಬಂದರು. ನಂದೆಯು ಅಪ್ಪನ ಎದುರೂ ಆ ಮಾತನ್ನು ಹೇಳಿದಳು.

"ಹೌದ? ಆಗಿರಬೇಕು. ಈಗ ಉರಿಉರಿ ಬಿಸಲಾಗಿಂದ ಬಂದಾರ" ಎಂದನಾತ. ಎಂಟು ವರ್ಷದ ಮಗು ಅವಳಿಗೆ ಈ ಉತ್ತರದಿಂದ ಸಮಾಧಾನವಾಗಿರಬೇಕು. ಸುರೇಶನ ಮುಖವನ್ನು ನೋಡಿ, "ಹೌದು. ಅವನ ಮಾರೀನೂ ಕೆಂಪಾಗೇದ" ಎಂದು ಮಾತನ್ನು ಅಲ್ಲಿಗೇ ಮುಗಿಸಿದಳು.

ಕಕ್ಕಿಯು ಹೇಳುತ್ತಿದ್ದಳು. "ಇವತ್ತೇನು ತೋರಿಸಲಿಕ್ಕೆ ಕರಕೊಂಡು ಹೋಗೋದು ಬ್ಯಾಡಾ. ದಣಕೊಂಡು ಬಂದಾಳ. ನಿದ್ದಿ ಬ್ಯಾರೇ ಇಲ್ಲ."

ಅಪ್ಪನು ದನಿಯೆಳೆದನು: "ಮತ್ತೇನಿಲ್ಲ. ಅವರು ಮತ್ತ ನೌಕರೀ ಮ್ಯಾಲೆ ಹೋಗೋವರಂತ ಅದಕ್ಕs ಅಲ್ಲ ಮತ್ತ ವಾಯರ್ ಕೊಟ್ಟು ಕರಿಸಿಕೊಂಡದ್ದು." ಆಮೇಲೆ ನನ್ನ ಕಡೆ ತಿರುಗಿ, "ಹೆಂಗವಾ? ಮತ್ತ ನೀ ನಾಳೆ ಮುಂಜಾನೆ ಹೋಗೋಣ ಅಂತಂದ್ರ,

ಅವರಿಗೆ ಏನಂಬುದು ಕೇಳಿಕೊಂಡು ಬರತೇನಿ" ಎಂದನು. ನಾಯೇನು ಹೇಳಲಿ? "ಇವತ್ತೇ ಮುಗಿದುಬಿಡಲಿ" ಎಂದೆ.

ಆಗ ಐದು ಗಂಟೆಯಾಗಿರಬೇಕು. ನಾವು ಪ್ರವೇಶಿಸಿದ್ದು ಒಂದು ದೊಡ್ಡ ಹಳೆಯಕಾಲದ ಮಹಡಿಯ ಮನೆ. ಈ ಬಗೆಯಾಗಿ ನಾನು ಕಾಲಿರಿಸಿದ ಮನೆಗಳಲ್ಲಿ ಇದು ಎಷ್ಟನೆಯದೋ ಎಂದು ಹೇಳಬರುವಂತಿಲ್ಲ! ಬಾಗಿಲಲ್ಲಿ ನನ್ನ ಕಣ್ಣಿಗೆ ಬಿದ್ದವರು ಸುಮಾರು ಇಪ್ಪತ್ತೈದು ವರ್ಷದ ಒಬ್ಬಳು, ಮತ್ತು ನಂದೆಗಿಂತ ತುಸು ದೊಡ್ಡವಳಾದ ಓರ್ವ ಹುಡಿಗೆ. ನಾವು ಬಂದು ಕೂಡುತ್ತಲೂ ಒಬ್ಬ ಅಮ್ಮ ಬಂದು ಮಾತನಾಡಿಸಿದರು. ನಮ್ಮನ್ನು ಬರಮಾಡಿಕೊಂಡವಳು ಒಳಗೆ ಹೋದುದರಿಂದ, ನಾನು ಮೆಲ್ಲಗೆ ಇವರಾರೆಂದು ಕಕ್ಕಿಯನ್ನು ಕೇಳಿದೆ.

" ವರನ ಅಕ್ಕ ಇರಬೇಕವಾ. ತೌರುಮನೆಗೆಂತ ಬಂದಿದ್ದಾಳು. ಈಗೊಬ್ಬ ಅಮ್ಮ ಬಂದಿದ್ರಲ್ಲಾ, ವರನ ತಾಯಿ ಆಕಿ. ಗುಡಿ ಒಳಗ ಯಾವಾಗರೆ ಭೆಟ್ಟಿಯಾಗತಿರತಾರ"

"ಮನೀ ಮಾತ್ರ ದೊಡ್ಡ ವಾಡೆ ಇದ್ಹಂಗದ ನೋಡು" ಎಂದೆ ನಾನು.

"ಹೌದು, ಇವರಪ್ಪ ಭಾರೀ ಶ್ರೀಂತ ಇದ್ದರಂತ. ಅವರು ಸ್ವತಃ ಕಟ್ಟಿಸಿದ್ದು. ಅವರು ಸಾಯೋತ್ಲೆ, ಮಕ್ಕಳೆಲ್ಲ ಹಾಳುಮಾಡಲಿಕ್ಕೆ ಹತ್ಯಾವಂತ ಸುದ್ದ್ಯವಾ. ಹಿರೇಮಗಾ ಏನೊ ಒಬ್ಬಾವ ಇದ್ದಾನಂತ. ಅವನೇ ಎಲ್ಲಾ ಹಾಳುಮಾಡಿದವಾ ಅಂತ ಹೇಳತಿದ್ರು."

"ಮತ್ತ, ಅವರ ಹೇಣ್ತಿ ಕಾಣಸೂದುಲ್ಲಲ್ಲ?"

"ಎಲ್ಲೀ ಹೇಣ್ತಿ, ಮದುವಿನೇ ಆಗಿಲ್ಲ. ನಾ ಬ್ರಹ್ಮಚಾರಿ ಆಗಿ ಇರತೇನಿ ಅಂತ ಹೇಳಿ ಬಿಟ್ಟುಬಿಟ್ಟಾನ. ಮೂವತ್ತು ವರ್ಷದ ಮ್ಯಾಲೆ ಆಗ್ಯಾವಂತ, ಮೊನ್ನೆ ಮೊನ್ನೆ ಗದುಗಿನ್ಯಾಗ ಏನೋ ನೌಕರಿ ಹಿಡಿದಾನಂತ. ಇಷ್ಟದಿನಾ ಅಣ್ಣನ ಮದುವೀ ಬಿಟ್ಟು ತಮ್ಮಂದು ಹೆಂಗ ಮಾಡೋದು ಅಂತ ಬಿಟ್ಟಿದ್ರು. ಈಗ ಅವನ ದಾರೀನೇ ಬಿಟ್ಟಂಗಾಗೇದಂತ ಹೇಳಿ, ಇವಗೂ ಈಗೀಗ ಕನ್ಯಾಬರಲಿಕ್ಕೆ ಹತ್ಯಾವ..."

ನಮ್ಮ ಕಿವಿಮಾತು ನಿಲ್ಲಬೇಕಾಯಿತು. ಸಭಾಮಂಟಪಕ್ಕೆ ನನಗೆ ಬರಲು ಅಪ್ಪಣೆಯಾಯಿತು.

ಇಂಗ್ಲಿಷ ಸಾಲೆಯ ಮೆಟ್ಟಲು ಹತ್ತಿದರೇನಾಯಿತು. ತಲೆ ತಗ್ಗಿಸಿಕೊಂಡೇ ಹಾಸಿದ ಜಮಖಾನೆಯ ಪಟ್ಟೆಳನ್ನು ನೋಡುತ್ತ ಕುಳಿತೆ. ಪರೀಕ್ಷೆಗೆ ಮೊದಲಾಯಿತು. ನನ್ನ ಕೈ ಹಿಡಿಯಬಹುದಾದವನನ್ನು ನಾ ನೋಡಬೇಡವೆ? ಒಮ್ಮೆ ನೋಡಿದೆ.

ನನಗೆ ಅಚ್ಚರಿಯೂ ಆಯಿತು, ಖೇದವೂ ಆಯಿತು. ಅವನು ನೋಡುವುದಕ್ಕೆ ಚೆನ್ನಾಗಿರಲಿಲ್ಲ. ಆ ಕ್ಷಣವೇ ಗಾಡಿಯಲ್ಲಿ ಕಂಡ, ಅವರ ಮೂರ್ತಿ ಕಣ್ಣಮುಂದೆ ಸುಳಿಯಿತು.

ಇವನೂ ಕುರೂಪಿ, ಅವರೂ ಕುರೂಪಿ! ಆದರೆ ಅವರದು ಸಶಕ್ತ ಮೈಕಟ್ಟು, ಇವನದು ತುಸು ಬಡಕಲು. ಮಾತ್ರ, ಈತನು ಅವರಷ್ಟು ಕಪ್ಪಲ್ಲ.

ನನ್ನ ಮನಸ್ಸಿನಲ್ಲೊಂದು ವಿಚಾರ ತೇಲಿತು. ಅವರೇ ಕನ್ಯಾಪರೀಕ್ಷೆಗೆ ಕುಳಿತಂತೆಯೂ, ಅವರ ಕಡೆ ಹೀಗೇ ಒಮ್ಮೆ ನೋಡಿದಾಗ, ಗಾಡಿಯಲ್ಲಾದ ಪರಿಚಯದ ನಿಮಿತ್ತ, ಇಬ್ಬರೂ ಕಣ್ಣಲ್ಲಿ ನಕ್ಕಂತೆಯೂ ಭಾಸವಾಯಿತು! ಈ ವಿಚಾರ ಬಂತೋ ಇಲ್ಲವೊ, ಮನಸ್ಸಿನ ಕಳವಳ ಹೆಚ್ಚಾಗತೊಡಗಿತು. ಅವರಷ್ಟು ಒಳ್ಳೆಯವರೂ, ಕರ್ತೃತ್ವಶಾಲಿಗಳೂ, ರಸಿಕರೂ ಇವರಿರಬಹುದೆ? ಇಲ್ಲ, ಇಲ್ಲ. ಅದು ಯಾರಿಗೂ ಸಾಧ್ಯವಾಗಲಾರದ ಮಾತೆಂಬುದರಲ್ಲಿ ಸಂಶಯವೇ ಇಲ್ಲ.

ಪುಸ್ತಕ ವಾಚನ, ಹೆಸರುದೆಸೆ, ತುಸು ನಡೆದ ಮೇಲೆ, ಎಲ್ಲರೂ ಮುಂದೇನು ಮಾತಾಡಬೇಕು ಎಂಬುದನ್ನು ನೆನೆಸುತ್ತಾ ಸುಮ್ಮನಿದ್ದರು. ಕಡೆಗೆ ನಮ್ಮ ಕಾಕಾ ವರನನ್ನು ಕೇಳಿದರು : "ನೀವು ಇವತ್ತ ರಾತ್ರಿ ಶಿಗ್ಗಾವಿಗೆ ಹೋಗಲಿಕ್ಕೇ ಬೇಕೇನು, ಟೂರಿಂಗ ವರ್ಕ ಬಹಳ ಇರತದ ಕಾಣ್ತದ ನಿಮಗ."

"ಹಂಗೇನಿಲ್ಲ. ನಾಳೆ ಅಲ್ಲೊಂದು ಕರ್ನಾಟಕ ಸಂಘ ಸ್ಥಾಪನಾ ಮಾಡಬೇಕಂತ ವಿಚಾರದಿಂದ ಹೋದ ಸಲ ಹೋದಾಗ ಮೀಟಿಂಗ ಕರದು ಬಂದಿದ್ದೆ. ಅದಕ್ಕ ಹೋಗೋದದ, ಕಚೇರಿ ಕೆಲಸನೂ ಅದ ಮತ್ತ."

ಮತ್ತೆ ಒಂದು ಕ್ಷಣ ಎಲ್ಲರೂ ಸುಮ್ಮನಿದ್ದರೂ ಈ ಪಟ್ಟು ನಮ್ಮ ಪುರೋಹಿತರ ದನಿ ಕೇಳಿತು: "ಹಂಗ ತಲಿ ತಗ್ಗಿಸಿಕೊಂಡು ಕೂಡಬ್ಯಾಡವಾ, ತಂಗೀ ಈಗಿನ ಕಾಲಕ್ಕ ಕನ್ಯಾನೂ ವರಾ ಪಾಸ ಮಾಡೋದೊಂದು ಅವಶ್ಯನ ಆಗೇದ."

ನನಗೆ ಸಿಟ್ಟು ಬಂತು. ನಮ್ಮ ಪುರೋಹಿತರ ಕಡೆಗೆ ಒಮ್ಮೆ ನೋಡಿದೆ. ಹಾಗೇ ವರನ ಕಡೆಗೂ ನೋಡಿದೆ. ಅವನೂ ಕಣ್ಣಗಲಿಸಿದುದು ಕಂಡುಬಂತು. ಏಕೆಂದರೆ ಅವನು ನನಗಿಂತ ಕುರೂಪಿಯಿರುವನೆಂದೇ ಪುರೋಹಿತರು ಸೂಚ್ಯವಾಗಿ ಹಾಗೆ ಹೇಳಿದರಲ್ಲವೆ? ಮಾತು ಸತ್ಯದಿಂದ ಕಟುವಾಗಿತ್ತು. ಕಾಕಾ ಅದಕ್ಕೆ ಬೇರೊಂದು ಸ್ವರೂಪ ಕೊಟ್ಟು, "ನಮ್ಮ ಹುಡುಗಿ ಹಂಗೇ ನಿಲ್ಲೇಳ್ರಿ" ಎಂದನು.

ಕೂತ ವರನು ನನಗೇ ಉದ್ದೇಶಿಸಿ ಹೇಳಿದಂತಾಯಿತು : 'ಹಂಗೇನಿಲ್ಲ. ನಾ ನಿನಗೆ ಸುಖವನ್ನೇ ಕೊಡಬಲ್ಲೆ. ನೋಡು, ನೀ ಗಾಡಿಯಲ್ಲಿ ಎಂತಹ ಗಂಡನು ಬೇಕು ಎಂದು ರೂಪಿಸಿಗೊಂಡಿದ್ದೆ? ರೂಪವನ್ನು ಗಣಿಸುವದಿಲ್ಲ ಎಂದಿದ್ದೆಯಲ್ಲ. ಅಲ್ಲವೆ?'

'ಹೂಂ'

'ನೋಡು ಮತ್ತೆ, ಗಾಡಿಯಲ್ಲಿ ನೀನು ಕಂಡ ಅವರಿಗಿಂತಲೂ ನಾ ಸುರೂಪಿಯಾಗಿಲ್ಲವೆ?'

'ಹೌದೌದು, ಯಾಕಿರಬಾರದು? ರೂಪವಂತರು ಒಳ್ಳೆಯುವರಿರಲಿಕ್ಕಿಲ್ಲ. ಒಳ್ಳೆಯವರಾದವರು ರೂಪವಂತರಾಗಿರಲಿಕ್ಕಿಲ್ಲ. ಹಲ್ಲಿಲ್ಲದಲ್ಲಿ ಕಡಲೆ... ಒಂದು ಇದ್ದಲ್ಲಿ ಇನ್ನೊಂದು ಇಲ್ಲದಿರುವದು ಜಗತ್ತಿನ ಧರ್ಮ... ಇವರಿಗೂ ಅವರಂತೆ ಕನ್ನಡ ಪ್ರೇಮವಿದೆ. ಅವರಂತೆಯೇ ಇವನೇಕಿರಬಾರದು?'

'ನಾ ಒಪ್ಪಬೇಕೇ ಇವರನ್ನು?... ಇದೇನು, ಅವರೇ ಬಂದು ಕುಳಿತರು. ಆ ಜಾಗದಲ್ಲಿ! 'ನೀ ಇವನನ್ನು ಮದುವೆ ಮಾಡಿಕೊಳ್ಳಲು ಒಪ್ಪಿಬಿಡು, ಎಂದರಲ್ಲ...!'

ನನ್ನ ತಲಿ ಅಗ ಸಿಡಿದುಹೋಗುವಷ್ಟು ದಿಗ್ಭ್ರಮೆಗೊಂಡಿತು. ಅರಿವೆನ್ನುವದು ಇರಲಿಲ್ಲ. ಉಡಿತುಂಬಲೆಂದು ಆ ಹೆಣ್ಣುಮಗಳು ಬಂದು ನಿಂತು, 'ಹಿಡಿ ತಂಗಿ' ಎಂದಾಗಲೇ ಎಚ್ಚರ. ನಮಸ್ಕಾರದ ಶಾಸ್ತ್ರ ಮುಗಿದ ಮೇಲೆ ಹೊರಗೆ ಬಂದೆ.

ಮನೆಗೆ ಹೊರಟೆವು. ಅಪ್ಪ ಮತ್ತು ಕಾಕಾ ಕುಳಿತ ಟಾಂಗಾ ನಮ್ಮ ಹಿಂದೆ ಬರುತ್ತಿತ್ತು.

ಅವರ ಓಣಿಯನ್ನು ದಾಟಿ ಬರುತ್ತಲೂ ಕಕ್ಕಿ ಹೇಳಿದಳು. "ಹುಡುಗ ಏನು ಛಂದಿಲ್ಲವಾ. ಅದಕ್ಕS ಇನ್ನೂವರಿಗೆ ಲಗ್ನ ಆಗಿಲ್ಲಾ. ನೋಡಿದರ ಆಸ್ತಿಯದ, ದೊಡ್ಡ ಪಗಾರದ. ಹಾಂ, ಈಗ ನೆನಪಾಗತದ. ಆ ಕೌಜಲಗಿ ರಾಮಣ್ಣನ ಮಗಳು, 'ಇವನ್ನ ಏನಾದರೂ ಲಗ್ನ ಆಗುದುಲ್ಲ' ಅಂತ ಅವರಪ್ಪನ ಮುಂದ ಹಟಾ ಹಿಡಿದಳಂತ. 'ತಾ ನೋಡಿದರ ಏನಂಥಾ ಚೆಲುವಿ, ಗಂಡರಾಮಿನ್ನ ತಂದು,' ಅಂತ ನಾನ ಬೈದಿದ್ದೆ. ಇವನ್ನ ನೋಡಿದರ ಆಕಿ ಅನ್ನೋದು ಖರೇನೋಡು, ಸುಳ್ಳಲ್ಲ... ಮಾರೀ ಮ್ಯಾಲೆ ಕಳೇ ಅಂಬೋದೆ ಇಲ್ಲ."

ಇನ್ನೊಂದು ಟಾಂಗಾದಿಂದ ಮಾತು ತೇಲಿ ಬರುತ್ತಿತ್ತು : "ಹೋಗಲಿ ಬಿಡೋ. ಸುಮ್ನ ಒಣಾ ವಿಚಾರಮಾಡಿ ಯಾಕ ತಲಿ ಕೆಡಿಸಿಗೋತೀದಿ? ನಾವರೆ ಕಾಣಾ ಕಾಣಾ ಅಂಥಾ ವರಗ, ಹೆಂಗ ಕನ್ಯಾ ಕೊಡೋದು?"

ಅಪ್ಪನು ಈಗ ನಿಡಿಯುಸಿರನ್ನೆಳೆದು "ಖರೇನ ಅದ. ರಮಾ ಒಪ್ಪೊದಿಲ್ಲ. ಆಕಿ ಅರೆ ಹೆಂಗ ಒಪ್ಪಬೇಕು?" ಎಂದನು.

ಅವನ ಮಾತಿನ ರೀತಿ ನನ್ನ ಹೃದಯವನ್ನು ಅಲುಗಿಸಿತು. ನನಗಾಗಿ ಅವನು ವರಶೋಧನೆಯಲ್ಲಿ ಇಷ್ಟೊಂದು ತೊಳಲಾಡಿಯೇ ಅಲ್ಲವೆ, ಈಗ ಅವನು ನಿಟ್ಟುಸಿರನ್ನು ಬಿಡುವುದು? ಅದೆಂತಹ ಕಲ್ಲುಬಂಡೆಯಾಗಿ ನಾನು ಅವನ ಹೆಗಲನ್ನು ಅಡರಿದಂತಾಗಿದೆ. ಇಳಿಯ ವಯಸ್ಸಿನಲ್ಲಿ ಅವನು ನನ್ನಿಂದ ಎಂತಹ ಚಿಂತೆಗೊಳಗಾಗಬೇಕಾಯಿತು ಎಂದು ಕಣ್ಣಲ್ಲಿ ನೀರು ತುಂಬಿತು.

ಮನೆಯಲ್ಲಿ ಈ ವರನ ಬಗ್ಗೆ ಏನು ಮಾತಾಗುವದೊ, ನಾನು ಏನು ಉತ್ತರ ಹೇಳುವುದೊ ಎಂದು ಇಡೀ ಸಂಜೆಯೆಲ್ಲ ನಾನು ಹೊಯ್ದಾಟದಲ್ಲಿದ್ದೆ. ಆದರೆ ನನ್ನ

ಆಶ್ಚರ್ಯಕ್ಕೆ, ಮನೆಯಲ್ಲಿ ರಾತ್ರಿ ಈ ಬಗ್ಗೆ ಯಾವ ರೀತಿಯಿಂದಲೂ ಮತು ಬರಲಿಲ್ಲ. ಅಪ್ಪನೂ ಮೌನಿಯಾಗಿದ್ದ. ಅಂತೂ ಎಲ್ಲರಿಗೂ ಗ್ರಹಿಕೆಯಾಗಿಬಿಟ್ಟದೆ, ನಾನು ವರನನ್ನು ನಪಾಸ ಮಾಡಿರುವೆನೆಂದು!

ಸರಿ, ಅಡಿಗೆಯಾಗಿತ್ತು. ಹುಡುಗರು ಮತ್ತು ಕಾಕಾ ಊಟಕ್ಕೆ ಕುಳಿತರು. ತಡವಾಗಿ ಊಟವಾದ ಮೂಲಕ ಹಸಿವೆಯಿಲ್ಲವೆಂದೂ, ನಿದ್ದೆ ಬಹಳಷ್ಟು ಬಂದಿದೆಯೆಂದೂ ನಾನು ಹೇಳಿದೆ. ಅಪ್ಪನದಂತೂ ರಾತ್ರಿ ಊಟವಿಲ್ಲವಷ್ಟೆ.

ಹೊರಗೆ ಪಡಸಾಲೆಯಲ್ಲಿ ಹಾಸಿಗೆ ಸುರುಳಿಗೆ ಆತು. ಅಪ್ಪನು ಕಚೇರಿಯ ಕಾಗದಗಳನ್ನು ಹರವಿಕೊಂಡು ಕುಳಿತಿದ್ದನು. ಅವನ ಕಡೆ ನೋಡಿದೆ. ಈ ಆರು ತಿಂಗಳಲ್ಲಿ ಮಾತ್ರ ನಾ ನೋಡದೆ ಇದ್ದೆ. ಇಷ್ಟು ಅಲ್ಪ ಅವಧಿಯಲ್ಲೇ ಆತನು ಮೊದಲಿಗಿಂತ ಇಳಿದುಹೋಗಿರುವುದನ್ನು ಕಂಡೆ.

ಉಳಿದವರ ಹಾಸಿಗೆಯನ್ನು ಹಾಸಿಟ್ಟು, ಪಡಸಾಲೆಗೆ ಬಂದೆ. ಅವನಿಗೆ ಏಳಲು ಹೇಳಿದೆ. "ಇರ್ಲಿ ಬಿಡು, ನಾಯೆಲ್ಲ ಹಾಸಿಗೋತೇನಿ. ನೀ ಮಲಗು ಹೋಗು, ನಿನ್ನೆ ರಾತ್ರಿ ನಿದ್ದಿ ಆಗಿಲ್ಲ" ಎಂದನು. ನಾ ಹಾಸಿಯೇ ಹೋಗುವವಳು ಎಂದು ನಿಂತೆ. ನಿರ್ವಾಹವಿಲ್ಲದೆ ಸರಿದನು. ಅವನ ಹಾಸಿಗೆಯೆಲ್ಲ ತುಂಬ ಧೂಳಿಮಯ. ಅವ್ವನು ತೀರಿದ ಮೇಲೆ ಯಾರು ತಾನೆ ಅವನ ಚಾಕರಿ ಮಾಡುವವರು? ನಾನಿಲ್ಲಿ ಇದ್ದಾಗ ಇದು ನನ್ನ ಕೆಲಸ... ಈ ಆರು ತಿಂಗಳು ಯಾರೂ ಇವಗೆ ಹಾಸಿಯೆ ಕೊಟ್ಟಿಲ್ಲವೇನೊ ಎನಿಸಿತು.

ನಾ ಅದರಲ್ಲಿ ತೊಡಗಿರುವಾಗ "ಯಾಕ ಅಕ್ಕಮ್ಮಾ, ಊಟಾಮಾಡೂದಿಲ್ಲ ಅಂದಿಯಾ? ಒಂದು ತುತ್ತು ಮಸರು ಅನ್ನ ಆದ್ರೂ ಉಣಬೇಕಿತ್ತು" ಎಂಸು ವಾತ್ಸಲ್ಯದಲ್ಲಿ ಹೇಳಿದನು. "ಹಸಿವಿ ಇಲ್ಲ" ಎಂದೆ. ಹಾಸುವದು ಮುಗಿದ ಮೇಲೆ "ಒಂದಿಷ್ಟು ಕುಡಿಯಲು ನೀರು ತಂದಿಡು, ಆತು" ಎಂದನು.

ನೀರು ತರಲೆಂದು ಒಳಗೆ ಹೋಗುವಾಗ, ಕಕ್ಕಿಯು ಅರಳಹಿಟ್ಟಗೆ ನೀರನ್ನು ಹಾಕುತ್ತಿರುವದು ಕಂಡಿತು. ಆ ತಿನಿಸು ರಾತ್ರಿ ಊಟವಿಲ್ಲದ ಅಪ್ಪನಿಗಷ್ಟೆ. ನೀರ ಹಿಟ್ಟನ್ನು ಕಂಡು ನನಗೆ ಸಂತಾಪವಾಯಿತು. ಒಂದಿಷ್ಟು ಹಾಲಿಗೂ ಅವನು ಭಾಗಿಯಲ್ಲವೆ? ಇಳಿವಯಸ್ಸಿನ ಅವಗೆ ಇದು ತಡೆಯಬಹುದೆ? ತನ್ನ ಗಂಡನಿಗೆ ಕೆನೆಯ ಮೊಸರು ಬಡಿಸುವದಕ್ಕೆ ಬಂತು, ಒಂದು ತುಸು ಹಾಲು ಇಟ್ಟಿರಬಾರದೆ? ಅಪ್ಪನು ಏನನ್ನು ತಾನೆ ಅವರಿಗೆ ಕಡಿಮೆ ಮಾಡಿದ್ದಾನೆ? ಬರುವ ೧೫೦ ರೂ. ಪಗಾರವನ್ನೆಲ್ಲ ಇವರ ಮಡಿಲಲ್ಲಿ ಹಾಕುತ್ತಾನೆ... ನನ್ನ ತಲೆ ಕಾಯಿತು.

ನಾ ಒಳಗೆ ಬಂದುದನ್ನು ಕಂಡ ಕೂಡಲೇ ಕಕ್ಕಿಯು, "ರಮಾ, ಒಂದು ತುತ್ತು ಉಂಡು ಮಲಗಲ್ಲ" ಎಂದಳು. ಒಲ್ಲೆನೆಂದೆ. ಸುರೇಶನು ಕೈಯೊರಸಿಕೊಳ್ಳುತ್ತ ಅಲ್ಲಿ ನಿಂತುದುನ್ನು ಕಂಡು, "ಕರಿಯಪಾ ನಿಮ್ಮಪ್ಪನ, ಫಳಾರಕ್ಕ" ಎಂದಳು.

ಕಾಕಾ ನನ್ನನ್ನು ಒದರಿ, ಅಡಿಕೆ ಕೊಡಲು ಹೇಳಿದನು. ತಂದುಕೊಟ್ಟೆ. ಇತ್ತ ಅವನ ಕಡೆಪುಟ್ಟಿನ ಕೂಸು ಊಟ ಮಾಡುವಾಗ, ಅಂಗಿಯನ್ನೆಲ್ಲ ಒದ್ದೆಮಾಡಿಕೊಂಡು ಅಳುತ್ತಿತ್ತು. ಬೇರೆ ಅಂಗಿಯನ್ನು ಹಾಕಿದೆ. ಅದನ್ನು ತೊಟ್ಟಿಲಲ್ಲಿ ಮಲಗಿಸಿದೆ. ಎಂಜಲು ಗೋಮ ಮಾಡಲೆಂದು ಮತ್ತೆ ಅಡಿಗೆಯ ಮನೆಗೆ ನಡೆದೆ. ಊಟಕ್ಕೆ ಬಡಿಸಿಕೊಳ್ಳುತ್ತಿದ್ದ ಕಕ್ಕಿ, "ಅಯ್ಯಾ ಬಿಡು. ದಣಕೊಂಡೀದಿ, ಹೋಗಿ ಮಲಗಬಾರದ? ನಾಯೆಲ್ಲಾ ಮಾಡತೇನಿ" ಎಂದಳು. ಆ ಕೂಡಲೇ ಹೊರಗೆ ಓದುತ್ತಿದ್ದ ತನ್ನ ಮಗ ಅರವಿಂದನಿಗೆ "ಕರಿಯೊ ನಿಮ್ಮ ಕಾಕಾನ್ನ. ಹಿಂಗS ಎಷ್ಟೊತ್ತು ಕೂಡಲಿ, ಬೆರತುಹೋಗತದ ಹಿಟ್ಟು. ತಿಂದು ಬಂದು ಕೆಲಸಾ ಮಾಡಿದರ ಆಗೂದಿಲ್ಲ?" ಏನು ಅಡ್ಡಿ ಆಗೇದ ಬಿಡು, ಅವನಿಂದಾ? ಊಟಕ್ಕ ಕೂಡು, ಇಷ್ಟಾಗಿ ನೀರೊಳಗ ಕಲಸಿದ ಹಿಟ್ಟು. ಬೆರತು ಹೋಗಲಿಕ್ಕೆ ಅದಕ್ಕೇನು ಹಾಲು ಹಾಕೇದೆ?" ಎಂದೆನು.

ಕಕ್ಕಿಯ ಮನಸ್ಥಿತಿ ನಾ ಊಹಿಸಿದಂತೆಯೇ ಆಯಿತು. "ಹೂಂ, ಹಿಂಗೇನು? ಹಾಲು ಹಾಕಿದರ ಮಾತ್ರ ಹಿಟ್ಟು ಬೆರೀತದ? ನನಗೊತ್ತಿದ್ದಿಲ್ಲ ಬಿಡು. ಪುಣೇದಿಂದ ಬರ್ತ ಕಲಕೊಂಡು ಬಂದಿ ಕಾಣಸ್ತದ?... ಎಷ್ಟ ನಿನ್ನ ಮಾತು! ಕೂಸಿಗೆ ಹಾಕೇನು ಅಂದ್ರ ಒಂದ ಹನಿ ಹಾಲಿಲ್ಲ ಮನ್ಯಾಗ ಇಟಗೊಂಡು ಭೇದ ಮಾಡತೇನಿ ಅನ್ನುವರ್ಹಾಂಗ ಮಾಡತೀಯಲ್ಲ?" ಎಂದು ದನಿಯೇರಿಸತೊಡಗಿದಳು.

'ಏನು, ಏನದು' ಎನ್ನುತ್ತಾ ಕಾಕಾ ಒಳಗೆ ಬಂದನು. ಕಕ್ಕಿಯು ಮಾತೊಂದಲ್ಲದೆ, ಕಣ್ಣೀರಿನ ಅಸ್ತ್ರದಿಂದಲೂ ಪರಿಸ್ಥಿತಿಯನ್ನು ಎದುರಿಸುತ್ತಿದ್ದಳು. ಅಪ್ಪನು ಆಗ ಬಂದನು. "ಹೋಗಲಿ ಬಿಡು, ಆ ಹುಡುಗಿ ಸಂಗತೀ ಏನು?" ಎಂದಂದು ನನ್ನ ಕಡೆ ತಿರುಗಿ, "ನಡಿ ಹೋಗು, ಸುಮ್ನೆ ಕೂಡಲಿಕ್ಕೆ ಬರೂದುಲ್ಲ?" ಎನ್ನುತ್ತ ಕಾಲು ತೊಳೆಯ ಹೋದನು.

ಹಾಸಿಗೆಯ ಮೇಲೆ ಹೋಗಿ ಮಲಗಿಕೊಂಡೆ. ದೇಹ, ಮನಸ್ಸು ಎರಡೂ ಸಾಕಷ್ಟು ತ್ರಾಸಗೊಂಡದ್ದರಿಂದ, ಸುರುವಿಗೆ ಬೇಗ ನಿದ್ದೆ ಹತ್ತಿತ್ತೇನೋ ನಿಜ. ಆದರೆ ಮುಂದೆ ತಗಣೆಗಳ ಕಾಟಕ್ಕೆ ನಡುರಾತ್ರಿಯಲ್ಲಿ ಯಾವಾಗಲೋ ಎಚ್ಚರವಾಯಿತು. ಕಣ್ಣು ತೆರೆದೆ. ಎಲ್ಲ ಕಡೆಗೂ ನಿಶ್ಶಬ್ದ. ಸಣ್ಣ ಮಾಡಿದ ಚಿಮಣಿಯ ದೀಪವೊಂದು ಉರಿಯುತ್ತಿದೆ. ಮಗ್ಗುಲ ಕೋಣೆಯಲ್ಲಿ ಗಂಡನೊಡನೆ ಕಕ್ಕಿಯ ಒಳಮಾತು ನಡೆದಿತ್ತು. ಆಕೆ ಹೇಳುವುದು ಸ್ಪಷ್ಟವಾಗಿ ಕೇಳುತ್ತಿರಲಿಲ್ಲ, ಹೆಚ್ಚು ಲಕ್ಷ್ಯಗೊಟ್ಟೆ. "ಈ ಆರು ತಿಂಗಳು... ಎಂಬೊಂದೆರಡು ಶಬ್ದ ಕೇಳಿಸಿದವು... "ಛಂದ ಇದ್ದೇನಿ ಅಂತ ಗರ್ವ ಭಾಳದ." ಎಲ್ಲವೂ ನನಗೆ ಸಂಬಂಧಿಸಿದುವೇ ಎಂದು ಗೊತ್ತಾಯಿತು. ಕೆಲಹೊತ್ತು ಮಾತು ಕೇಳಬರಲಿಲ್ಲ. ಹಾಳಾಗಲಿ ಎಂದು ಈ ಕಡೆ ತಿರುಗಿದೆ. ಮಲಗಲೆಂದೆ, ನಿದ್ರೆ ಬರಲಿಲ್ಲ.

'ನಮಗೆ ಮನೆಯೆಂಬುದಿಲ್ಲದ್ದಕ್ಕೆ ಎಷ್ಟು ಕಷ್ಟಪಡಬೇಕು? ಸರಳ ಸ್ವಭಾವದ ಅಪ್ಪನ ಕಷ್ಟ ನೋಡಲಾರೆ. ಇಲ್ಲ, ಇಲ್ಲ... ಭಾವನೆಂದು ಅವಗೆ ಸ್ವಲ್ಪಾದರೂ ಕಕ್ಕಿ ಬೇಲಿ

ಕೊಡಬೇಡವೆ? ಅವನ ಮುಪ್ಪಿನ ಕಾಲದ ಸಂರಕ್ಷಣೆಯನ್ನು ಹಿರಿಯವಳಾದ ನಾನು ಮಾಡಬೇಕು. ಬೇಗ ಮದುವೆಯಾಗಿ ಇಲ್ಲಿಂದ ಪಾರು ಮಾಡುವೆ' ಎನ್ನುವುದರ ಉತ್ಕಟತೆ ಬಲಿಯಿತು. 'ನಂದೆಯು ನಾನಿಲ್ಲದೆ ಎಷ್ಟು ಕಷ್ಟಪಟ್ಟಳೊ. ಇನ್ನೂ ಇಬ್ಬರದೇ ಭೆಟ್ಟಿಯಾಗಿಲ್ಲ. ಆಗ ಅದೆಷ್ಟು ಕಣ್ಣೀರನ್ನು ಕರೆಯುವಳೊ! ಅಪ್ಪನಿಗೆ ಬೇರೆ ಮನೆ ಮಾಡು ಎಂದು ಹೇಳಲೇ? ಹಿಂದೆಯೆ ಈ ಮಾತು ಹೇಳಿದ್ದೆ. ಆಗ ನೀ ಮದುವೆಯಾಗಿ ಹೋಗುವವಳು. ಆಮೇಲೆ ನಾನೆಲ್ಲಿ ಒದ್ದಾಡಲಿ ಎಂದಿದ್ದ. ....ಇವತ್ತು ಹೋಗಿದ್ದ ಮನೆ ಅದೆಷ್ಟು ದೊಡ್ಡದಾಗಿದೆ, ಛಂದಾಗಿದೆ. ನಾ... ಅಲ್ಲಿ ಹೋದರೆ, ನಂದೆಗೆ ಆಡಲು ಗೆಳತಿ ಸಿಕ್ಕುತ್ತಾಳೆ. ಅಪ್ಪನೂ ಅಲ್ಲಿಯೆ...'

ಆದರೆ ಆ ಮನೆಯ ಯಜಮಾನ ಅವರಷ್ಟು ಸುಗುಣಿ ಇರಬಹುದೆ? ಅವರಷ್ಟು ಧೀರನಿರಬಹುದೆ? ಸುರೂಪಿಯಿಲ್ಲ ಎಂದು, ಸದ್ಗುಣಗಳು ಇರಲೇಬೇಕೆಂಬ ಆಶೆಯನ್ನು ಅದೇಕೆ ತಾನೆ ಮನಸ್ಸು ಎತ್ತಿ ಎತ್ತಿ ಹೇಳುತ್ತಿದೆ? ದೈವದ ಮೇಲೆ ಒಳ್ಳೆಯದಕ್ಕಾಗಿ ವಿಶ್ವಾಸವಿಡಲೆ? ನನ್ನ ಆಶೆ-ಆಕಾಂಕ್ಷೆಗಳನ್ನು. ದೇವರು ಮಣ್ಣುಗೂಡಿಸಲಿಕ್ಕೆ ನಾನೇನು ಯಾರಿಗೆ ಕೆಟ್ಟದು ಮಾಡಿದ್ದೇನೆ? ತಾಯಿ ಕೈಬಿಟ್ಟಂದಿನಿಂದ ಸಾಕಷ್ಟು ತೊಳಲಿದುದನ್ನು ಅವನು ಕಾಣನೆ? ಇನ್ನು ನಮಗೆ ಸುಖದ ದಿನಗಳೇ ಬರಬೇಕು... ಅವರ ಮನೆಗೇ ಹೋಗುವದಕ್ಕೆ ಮನಸ್ಸು ಇಷ್ಟಾಗಿ ಅಪೇಕ್ಷೆ ಪಡುತ್ತಿದೆಯೆಂದ ಮೇಲೆ ಅದು ಒಳ್ಳೆಯದಕ್ಕೇ ಇರಬಹುದು! ಅವ್ವ, ನೀನೀಗ ಇರಬೇಕಿತ್ತು. ಇದ್ದರೆ ನಾನಿಷ್ಟು ನಿಸ್ಸಹಾಯಳಾಗುತ್ತಿದ್ದೆನೆ?..... ಏಕೆ ನಮ್ಮನ್ನು ಬಿಟ್ಟುಹೋದೆ? ಇವತ್ತೊಂದು ದಿನವಾದರೂ ನನ್ನ ಕಡೆ ಬಂದು ಸಂತೈಸುವುದಿಲ್ಲವೆ?

ನೀರವವಾಗಿ ಬಹಳಷ್ಟು ಅತ್ತೆ. ಹತ್ತಿರದಲ್ಲಿ ನಂದೆಯಲ್ಲೇ ನನ್ನ ತಾಯಿಯನ್ನು ಕಂಡೆಯೇನೊ ಎನ್ನುವಂತೆ, ಅವಳ ಕೊರಳನ್ನಪ್ಪಿ ನಿದ್ದೆ ಹೋದೆ.

ಮರುದಿನ ಬೆಳಗಿನಲ್ಲಿ ನಾನು ನಳದಿಂದ ನೀರು ತುಂಬುತ್ತಿದ್ದೆ. ಕೊಡವನ್ನು ಸುರುವಲು ಅಡಿಗೆಯ ಮನೆಗೆ ಬಂದಾಗ ಎಲ್ಲರೂ ಪಡಸಾಲೆಯಲ್ಲಿದ್ದರು. ನಿನ್ನೆ ನಾವು ಹೋದ ಮನೆಯಿಂದ ನಮ್ಮ ಪುರೋಹಿತರು ಬಂದು, ಕನ್ಯೆಯನ್ನು ವರನು ಪಾಸು ಮಾಡಿರುವನು; ಮುಂದಿನ ಮಾತುಕತೆಗೆ ಬರಬೇಕೆಂದು ಸುದ್ದಿಯನ್ನು ತಂದಿದ್ದುದು ತಿಳಿಯಿತು. ಕಾಕಾನಿಗೆ ಪುರೋಹಿತರು ಹೇಳುತ್ತಿದ್ದರು : "ಶಾಮಣ್ಣಾ, ಸಂಗತೀ ನೀವೂ ಬಂದುಬಿಟ್ರ ನೆಟ್ಟಗಾಗತದ. ನಾವು ಎಷ್ಟಂದ್ರೂ ಹೊರಗಿನವರಾಗತೇವಿ."

"ಅದಕೇನ್ರಿ ಆಚಾರ್ರ, ನಾವು ವರನ್ನ ನಪಾಸು ಮಾಡೇವಿ ಅಂತ ಹೇಳಲಿಕ್ಕೂ ನಾವು ಹೆಂಗ ಬರಬೇಕು? ಮತ್ತ ಇಂಥಾದರೊಳಗೆ ನಾವು ಇರದಿದ್ರ ನೆಟ್ಟಗ."

ಅಪ್ಪನ ಕಡೆಗೊಮ್ಮೆ ನೋಡಿ, ಧೈರ್ಯ ತಂದುಕೊಂಡು ನಾ ನಿಂತಲ್ಲಿಯೆ ತುಸು ಗಟ್ಟಿಯಾಗಿ ಹೇಳಿದೆ: "ಹಂಗೇನು ಹೇಳಿ ಕಳಿಸಬ್ಯಾಡ್ರಿ."

ಕೆಲವರಿಗೆ ಇತ್ತ ಲಕ್ಷ್ಯವಿತ್ತು, ಕೆಲವರಿಗಿರಲಿಲ್ಲ. ಅಪ್ಪನು 'ಏನು?' ಎಂದ. ಕಕ್ಕಿಯು 'ಹಂಗಂದ್ರೇನ?' ಎಂದು ಕೇಳಿದಳು.

ಸಂಕೋಚ ಬಿಟ್ಟು ನಾ ಹೇಳಲೇಬೇಕಾಯಿತು. "ನಿಶ್ಚಯದ ಬಗ್ಗೆ ಮಾತಾಡಲಿಕ್ಕೆ ಬರತೇವಿ ಅಂತ ಪುರೋಹಿತರು ಹೇಳಲಿ" ಎಂದೆ.

ಎಲ್ಲರ ಮುಖದ ಮೇಲೂ ಅಚ್ಚರಿ. ವರನನ್ನು ನಾನು ಪಾಸು ಮಾಡಿರುವೆನೆಂದು ಸ್ಪಷ್ಟೀಕರಣ ತೆಗೆದುಕೊಂಡರು. ವಾತಾವರಣವೇ ಬದಲಿಸಿತು. ಒಂದು ಕ್ಷಣ ಎಲ್ಲರೂ ಸುಮ್ಮನಿದ್ದರು.

ಅದೊ! ಅಪ್ಪನ ಕಣ್ಣಲ್ಲಿ ನೀರಾಡುತ್ತಿದೆ. ಆ ಮುಖದಲ್ಲಿ ಎಷ್ಟೊಂದು ನೋವಿದೆ! ನನ್ನ ಮಾತಿನ ಪರಿಯನ್ನು ಆತ ಏನೆಂದು ತಿಳಿದನೊ! ಇನ್ನೂ ವರ ಹುಡುಕುವ ದುರ್ದಮ್ಯ ಪರಿತಾಪ ಬೇಡವೆಂದು ನಾ ಒಪ್ಪಿದುದಾಗಿ, ಆತನಿಗೆ ಅನಿಸಿರಬೇಕು. ಹೌದು, ಅದು ಬಿಟ್ಟು ಇನ್ನಾವುದಿರಬೇಕು ಅವನ ದೃಷ್ಟಿಯಲ್ಲಿ? ಆದರೆ ಅದೇ ಅಲ್ಲ, ಅಲ್ಲ ಎಂಬುದನ್ನು ಆತನಿಗೆ ನಾ ಹೇಗೆ ತಾನೇ ತಿಳಿಹೇಳಲಿ? ನನ್ನ ಸಮ್ಮತಿಯ ಅರ್ಥವನ್ನು ಸುಮ್ಮನೆ ಬೇರೆಯಾಗಿ ತಿಳಿದುಬಿಟ್ಟ. ...ಇದಕ್ಕೆ ಬೇರೆ ಕಾರಣ ಯಾವುದೆಂಬುದನ್ನು ನಾನಾದರೂ ಸ್ಪಷ್ಟವಾಗಿ ಗುರುತಿಸಬಲ್ಲೆನೆ?... ಹೇಗೊ ಒಪ್ಪಿದೆ. ನನ್ನ ಹೆಜ್ಜೆಯಲ್ಲಿ ತಪ್ಪಿದೆನೇನು ಮತ್ತೆ ಅಂ...'

ಅವನ ಕಣ್ಣ ಕೆಳಗಿನ ತಗ್ಗನ್ನು ನೀರಹನಿ ತುಂಬಿತು. ಪುರೋಹಿತರಿಗೆ ಹೇಳುವಾಗ ಅವನ ದನಿ ಗದ್ಗದವಾಯಿತು. ನನಗೆ ತಡೆಯಲಾಗಲಿಲ್ಲ. ಅಲ್ಲೇ ಅಳು ಬಂದಂತಾಗಿತ್ತು. ಹಿತ್ತಲ ಕಡೆಗೆ ಭರದಿಂದ ನಡೆದೆ. ತುಳಸೀ ಕಟ್ಟೆಗೆ ಕುಳಿತು ಮನದ ಉಮ್ಮಳವನ್ನು ಹೊರಹೊಮ್ಮಿಸಿದೆ... ಆಗ ವಿಚಾರ ಬಂದಿತು. ಅಂತೂ ಒಮ್ಮೆ ಅಪ್ಪನ ತ್ರಾಸ ಕಡಿಮೆ ಮಾಡಿದೆನಲ್ಲ ಎಂದು ಸಮಾಧಾನಗೊಂಡೆ.

ಇಂದು ಮನೆಯಲ್ಲಿ ನಿಶ್ಚಯದ ಸಮಾರಂಭ. ಮನೆಯಲ್ಲೆಲ್ಲ ಗದ್ದಲ. ಪಡಸಾಲೆಯಲ್ಲಿ ಪೊರಗೆ ನಿಶ್ಚಯದ ಯಾದಿ ಸಿದ್ಧವಾಗುತಲಿತ್ತು. ನಾ ಅಡಿಗೆಯ ಮನೆಯಲ್ಲಿ ಕೆಲಸದಲ್ಲಿ ತೊಡಗಿದ್ದೆ. ಮದುವೆಯಾಗುವವಳಾದರೇನಾಯಿತು, ಇನ್ನೂ ಪೂರ್ಣ ಮದುಮಗಳಾಗಿಲ್ಲವಲ್ಲ.

ಅಡಿಗೆಯವನಿಗೆ ಸಾಮಾನುಗಳನ್ನು ಒದಗಿಸಿ ಕೊಡುತ್ತಿದ್ದೆ. ಹೊಗೆಯಿಂದ ಕಣ್ಣಾಲೆಗಳು ಒದ್ದಾಡಿದುವು. ಒಂದು ಕ್ಷಣ ರಸ್ತೆಗೆ ಹೊಂದಿರುವ ನಮ್ಮ ಕಿಟಕಿಗೆ ಹೋಗಿ ನಿಂತೆ. ಸಂಜೆಯ ವಿಹಾರ ತೀರಿಸಿಕೊಂಡ ಜನ ಮರಳುತ್ತಿರುವುದು ಕಂಡಿತು.

ಆ ದೀಪದ ಕಂಬದ ಹತ್ತಿರ ಯಾರೊ ಗುರುತಿನವರು ಬರುತ್ತಿರುವ ಹಾಗಿದೆಯಲ್ಲ. ಎನಿಸಿ ಕಣ್ಣಲ್ಲಿ ನೀರು ತುಂಬಿದ್ದರಿಂದ ಸೆಟ್ಟಿಗೆ ಒರೆಸಿಕೊಂಡು ಆ ಕಡೆ ನೋಡಿದೆ.

'ಅವರ ಹಾಗೆ ಕಾಣುತ್ತಾರಲ್ಲ! ಆ ಅವರು! ನಡಿಗೆ ಅವರದೇ. ಅದೇ ಕಪ್ಪು ಬಣ್ಣ. ಬಿಳಿಯ ಅರಿವೆ ಧರಿಸಿದ್ದಾರೆ. ಗಾಡಿಯಲ್ಲಿ ನಾವು ಕಂಡಿದ್ದ ಅದೇ' ನಗೆ ಮುಖದ ಮೇಲಿದೆ. ಹುಬ್ಬಳ್ಳಿಯಿಂದ ಯಾವಾಗ ಬಂದರು? ಯಾರದೊ ಮನೆ ಹುಡುಕುತ್ತಿರುವ ಹಾಗೆ, ಅಲ್ಲಲ್ಲಿ ನೋಡುತ್ತ ಬರುತ್ತಿದ್ದಾರೆ... ಅದೇ ಗಾಂಭೀರ್ಯದ ನಡಿಗೆ!'

ಮುಖವನ್ನು ಸೆರಗಿನಿಂದ ನೆಟ್ಟಗೆ ಒರಸಿಕೊಂಡೆ. ಇದುರಿಗೇ ಬಂದರು.

"ಇದೇ ಅಲ್ಲs ನಿಮ್ಮ ಮನಿ? ಗುಣಾ ಆತು. ಮಂದಿನ್ನ ಕೇಳಿಕೋತ ಹೋಗೋದು ತಪ್ಪಿತು. ಹ, ಏನು ವಿಚಿತ್ರ ಅದ ಮನಿ ಇದು. ಅಡಿಗೀಮನಿ ರಸ್ತೇಕ್ಕ ಅದ. ಪಡಸಾಲೆ ಬಾಗಿಲು ಒಳಮಗ್ಗಲು ಅದ" ಎಂದು ಮಾತನಾಡಿಸಿದರು.

"ಸುರೇಶನಿಗೆ ಮಾತು ಕೊಟ್ಟ ಪ್ರಕಾರ, ನಮ್ಮ ಭೆಟ್ಟಿಗೆಂದು ಈಗ ಬಂದರೆ? ಎಂತಹ ಅಡ್ಡ ದಿನದಲ್ಲಿ ಬಂದರು? ಸುರೇಶ ಎಲ್ಲಿ? ಅವರಿಗೆ ಮತ್ತಾರೂ ಇಲ್ಲಿ ಗುರುತಿನವರಿಲ್ಲ. ನಾ ಹೇಗೆ ಹೊರಗೆ ಹೋಗಿ ಮಾತನಾಡಿಸುವುದು? ಸುರೇಶನನ್ನು ಹುಡುಕಲೆಂದು ಬಾಗಿಲಿಗೆ ಬಂದೆ.

'ಬರ್ರಿ,' ಎಂದು ಅಪ್ಪನು ಅವರನ್ನು ಸ್ವಾಗತಿಸಿದನು. 'ಯಾರು ಬೇಕಾಗಿತ್ತು?' ಎಂದು ಕೇಳಿದನು!

ಅಲ್ಲಿಯೇ ಇದ್ದ ಪುರೋಹಿತರು "ಇದೇನು ರಾಯರ ಯಾರು ಬೇಕಾಗಿತ್ತು ಅಂತ ಕೇಳತೀರಲ್ಲ? ಇವರೆ ನಿಮ್ಮ ಅಳಿಯಂದಿರ ಅಣ್ಣಂದಿರು. ರಾಜಣ್ಣಾ, ಮ್ಯಾಲೆ ಬರ್ರಿ. ಇಲ್ಲಿ ಬರ್ರಿ. ಇಷ್ಟೊತ್ತನಕಾ ನಿಮ್ಮದೇ ದಾರಿ ಕಾಯತಿದ್ವಿ. ಅಡಿಗಿ ಆಗಿಬಿಟ್ಟದ" ಎಂದರು.

ನನ್ನ ಎದೆ ಭೀಕರವಾಗಿ ಹೊಯ್ದಾಡಿತು. ಕಾಲುಗಳು ಗದಗದ ನಡುಗತೊಡಗಿದವು. ಇವರು ನಾ ಕೈ ಹಿಡಿದವರ ಅಣ್ಣ!

ಸುರೇಶನು ಹೊರಗಿನಿಂದ ಬಂದವನೇ, ಅವರನ್ನು ಕಂಡು ಒಮ್ಮೆಲೆ ಅನಂದದಿಂದ ಅವರ ಹತ್ತಿರವೇ ಕುಳಿತು, "ಯಾವಾಗ ಬಂದ್ರಿ? ಅಪ್ಪಾ," ಏ ಅಪ್ಪಾ, ಇವರ ನೋಡು, ನಮ್ಮನ್ನ ಅವತ್ತ ಪುಣೇ ಸ್ಟೇಶನ್ನದೊಳಗ ಪಾರು ಮಾಡಿದ್ರು ಅಂತ ಹೇಳಿದ್ನೆಲ್ಲ" ಎಂದು ಹುರುಪಿನಿಂದ ಹೇಳಿದನು. ಹುಡುಗನಾದ ಸುರೇಶನಿಗೆ ಅದಿನ್ನೂ ಅಚ್ಚಳಿಯದ ನೆನಪು. ಅಪ್ಪನು ಅವರಿಗೆ ಕೈ ಮುಗಿಯುತ್ತ, "ಋಣಾನುಬಂಧ ಕೂಡೋದಿದ್ರ, ದೈವ ಹೀಂಗ ಮುಂಚೇನೆ ಸಹಾಯ ಆಗ್ತದ. ನೀವು ಬರೋವ್ರು ಇದ್ದೀರಿ ಅಂತ ನಿಮ್ಮ ತಾಯಿಯವರು ಹೇಳಿದ್ರು" ಎಂದನು. ಪುಣೆಯಲ್ಲಿ ನಡೆದ ಘಟನೆಯನ್ನು ಮನೆಯಲ್ಲಿ ಸುರೇಶನೂ ನಾನೂ ವಿಶೇಷ ಆಸ್ಥೆಯಿಂದ ಹೇಳಿದ್ದೆವು. ಅವರೇ ಈಗ ಬಂದವರೆಂಬುದು ಹೆಣ್ಣು ಮಕ್ಕಳಲ್ಲೆಲ್ಲ ಹಬ್ಬಿತು.

ನಾನು... ನಾನೆಲ್ಲಿದ್ದೆ? ಹೊಯ್ದಾಟದಿಂದ ತತ್ತರಿಸುತ್ತಿದ್ದೆ. ಅವರ ಕಡೆಗೊಮ್ಮೆ ನೋಡಿದೆ. ಸುರೇಶ ಮತ್ತು ನನ್ನ ಆಪ್ತತ್ವ ಉಂಟಾದುದಕ್ಕೆ ಅವರು ಹಾರ್ದಿಕವಾಗಿ ಸಂತೋಷಪಟ್ಟಂತಿದ್ದರು.

ನಾನು ಒಮ್ಮೆಲೆ ಕುಸಿದುಬಿದ್ದೆ. ಮತ್ತೆ ಎದ್ದು ಕಂಬವನ್ನು ಹಿಡಿದು ನಿಂತೆ. ಕಕ್ಕಿ ನಾ ಅಲ್ಲಿ ನಿಂತುದನ್ನು ನೊಡಿ, 'ಇಲ್ಲ್ಯಾಕ ನಿಂತೀದಿ?' ಎಂದಳು. 'ಯಾಕೂ ಇಲ್ಲ' ಎಂದೆ. ನನಗೆ ಯಾರೂ ಮಾತಾಡಿಸುವದು ಬೇಡವಾಗಿತ್ತು. ಕೋಠಿಯ ಕೋಣೆಗೆ ನಡೆದೆನು.

'ಎಂತಹ ಆಘಾತ! ಅವರು ಇವರ ಖಾಸ ಅಣ್ಣನೆ? ಅಯ್ಯೋ, ತಿಳಿಯದೆ ಹೋದೆ. ವಿಧಿ ಮೋಸ ಮಾಡಿತ್ತು.... ಆದರೆ ದುಃಖಪಡುವದೇಕೆ? ಆದ ತಪ್ಪಾದರೂ ಏನು?....ತಪ್ಪೆ? ಏನು ಅದು, ನಿರ್ದಿಷ್ಟವಾಗಿ ಹೇಳಲು ಬಾರದು. ಹೃದಯಕ್ಕೆ ನೋವು ಮಾತ್ರ ಆಗಿದೆ. ಸಂಕಟ... ಸಂಕಟ' ಕಣ್ಣೀರು ಸಳಸಳನೆ ಸುರಿಯಿತು.

ನಂದೆಯು ನನ್ನ ಹುಡುಕುತ್ತ ಅಲ್ಲಿಗೇ ಬಂದು, "ನೀ ಇಲ್ಲಿ ಇದ್ದೀಯೇನು? ಅಣ್ಣ ನಿನ್ನ ಕರೀತಿದ್ದಾ" ಎಂದಳು. ಮಾತಿಲ್ಲದೆ ನಾನು ಅಲ್ಲಿಯೆ ಲೋಡುತೆಕ್ಕೆಗಳ ಮೇಲೆ ಕೈಯೂರಿ ಕುಳಿತಿದ್ದೆ. ನಂದೆಯು ಹತ್ತಿರ ಬಂದು ನನ್ನ ಕೂದಲನ್ನು ನೇವರಿಸಿ, 'ತಲೆ ನೋಯ್ತದೇನು' ಎಂದು ಕೇಳಿದಳು. ಏಕೆ ಹಾಗೆ ಕೇಳಿದಳೋ ಎನಿಸಿತು. ಈ ಪಟ್ಟು ಬಿಕ್ಕುಗಳಲ್ಲಿ ದುಃಖ ಏರೇರಿ ಬಂತು. ನಂದೆಗೆ ತಿಳಿಯಲಿಲ್ಲ. ನನ್ನ ಹತ್ತಿರ ಸರಿದಳು. ಮುಖವನ್ನು ಆಚೆಗೆ ಮಾಡಿ ನಾನು ಅಳತೊಡಗಿದೆ. ನಂದೆ ತುಸು ಹೊತ್ತಿನ ಮೇಲೆ ಎದ್ದು ಹೋದಳು.

'ಅವರು ಇವರ ಅಣ್ಣ. ಎಷ್ಟು ಹತ್ತಿರ ಬಂದೆ, ಅದೆಷ್ಟು ಹತ್ತಿರ ಬಂದಿದ್ದೆ. ನನ್ನ ಆರಿಸುವಿಕೆಯಲ್ಲಿ ನಾನು ತಪ್ಪಿದೆನೆಂದು ಈಗ ಅನಿಸುತ್ತದೆಯಲ್ಲ! ತಪ್ಪಿದೆನೆ ನಾನು? ಇಡೀ ನನ್ನ ಆಯುಷ್ಯದಲ್ಲೇ ಇನ್ನು ಕೊನೆವರೆಗೆ ತೊಳಲಬೇಕಾಯಿತೆ? ಅವರ ಹಾಗೆ ಇವರ ಪರಿಚಯವೂ ಮೊದಲಿಗೆ ತುಸು ಆಗಿದ್ದರೆ ನೆಟ್ಟಗಿತ್ತೇನೊ! ಅವರನ್ನೇ ಆರಿಸಿದ್ದರೆ... ಆದರೆ ಅವರ ಕುರೂಪ ಮುಖ. ಏನಿದ್ದರೂ ನನ್ನ ಭಾವನಾಗಿ, ನಾನಿರುವ ಮನೆಯಲ್ಲೇ ಇರುವವರಾಗಬಾರದಿತ್ತು. ಇವರ ಸಂಬಂಧವೇ ಇಲ್ಲವಾಗಿದ್ದರೆ ನಾನು ನೆಮ್ಮದಿಯಿಂದ ಇರಬಹುದಾಗಿತ್ತು...'

ಸುರೇಶನು 'ಅಕ್ಕಾ, ಏ ಅಕ್ಕಾ' ಎನ್ನುತ್ತ ಬಂದನು. ಅವರು ಬಂದದನ್ನು ತಿಳಿಸಲು ನನ್ನನ್ನು ಹುಡುಕುತ್ತಿದ್ದಾನೆ! ಕತ್ತಲೆಯಲ್ಲಿ ನಾನು ಮಲಗಿದ್ದು ಕಾಣಲಿಲ್ಲ. ನನಗೂ ಓಗೊಡುವ ಮನಸ್ಸಿರಲಿಲ್ಲ. ಹಾಗೇ ಹೊರಟುಹೋದನು.

ನೌಕರಿ ಇಲ್ಲ ಎಂದು ಅವರಂದರು. ಉಳಿದವರು ಗದುಗಿನಲ್ಲಿ ನೌಕರಿ ಸಿಕ್ಕಿದೆ ಎಂದರು. ಮನೆಯವರ ಛಿಡೆಗೆ ಹಾಗೆ ಹೇಳಿರಬಹುದೆ? ಮನೆಯಿದ್ದೂ ಧಾರವಾಡಕ್ಕೆ

ಬರಲಿಲ್ಲವಲ್ಲ... ಹೆಸರು ವರದರಾಜ, ಕರೆಯುವ ಹೆಸರು ರಾಜಣ್ಣ. ಇವೆಲ್ಲ ವಿಧಿಯ ದುರ್ವಿಲಾಸವಲ್ಲದೆ ಇನ್ನೇನು?

ಸಿಗರೇಟನ್ನು ಸೇದುತ್ತಿರುವ ಅವರ ನಿಲುವು ಸುಳಿಯಿತು. 'ಇವರ ಜನ್ಮಕ್ಕೆ ನಾಚಿಕೆಯಿಲ್ಲ' ಎಂದಿದ್ದೆ ಅ ಕ್ಷಣವೇ ಯಾರೊ ಗಲ್ಲ ಚಿವುಟಿ, 'ಹುಚ್ಚೀ ಚಟಾ ಅದು, ಹೋಗೂದಿಲ್ಲ' ಎಂಬ ಮಾತೂ ನೆನಪಿಗೆ ಬಂತು. ಈ ಪಟ್ಟು ಜೋರಾಗಿ ಅಳತೊಡಗಿದೆ.

ನನ್ನ ಇನ್ನೊಬ್ಬ ಅಬಚಿಯು ನಂದೆಯೊಡನೆ ಒಳಗೆ ಬಂದು, 'ಎಲ್ಲಿ ಮಲಗ್ಯಾಳ?' ಎಂದು ನಾನು ಅಳುವ ಸ್ವರವನ್ನೇ ಹಿಡಿದುಕೊಂಡು ಬಂದು ಹತ್ತಿರ ಕುಳಿತಳು. ಇನ್ನೂ ಒಬ್ಬಳು ಬಂದು ಮೆಲ್ಲಗೆ ಮಾತಾಡತೊಡಗಿದಳು. ಆಕೆ ನಮ್ಮ ಮನೆಯ ಒಕ್ಕಲುಗಿತ್ತಿ. "ಇಂತಾ ಸುಖದ ಕೆಲಸ. ಅವರ ತಾಯಿ ನೋಡಿ ಸಂತೋಷಪಡಬೇಕಿತ್ತು. ಅವ್ವನ್ನ ನೆನಸಿಗೊಂಡು ಅಳಾಕ ಹತ್ಯಾಳ ಆತು" ಎಂದಳು. 'ಹೌದು' ಎಂದು ಅಬಚಿಯೂ ಗದ್ಗದಿತಳಾದಳು.

ನನಗದು ನಿಜ ಎನ್ನಿಸಿತು. 'ತಾಯಿ ಇರಬೇಕಿತ್ತು. ಇದ್ದಿದ್ದರೆ ಆಕೆ ಎದುರು ಎಲ್ಲವನ್ನೂ ಹೇಳುತ್ತಿದ್ದೆ. ಹೀಗೆಲ್ಲ ಆಪತ್ತು ಬರುತ್ತಿರಲಿಲ್ಲ, ಅವ್ವಾ, ಹೊರಗಿನವರಿಗೆ ಕೇಳಿಗೀಳಿತೆಂದು, ಹೆದರಿ ಅಬಚಿ ಬಾಗಿಲನ್ನು ಮುಂದೆ ಮಾಡಿದಳು.

"ಅವ್ವ ಇದ್ದದ್ದಾಗಿದ್ದರೆ, ಆಕೆಗೆ ಅವರ ಮೈಯನ್ನು ತಟ್ಟಿ" 'ಬೆಳಗಾಂವಿ ಬಂತು, ಏಳ್ರಿನ್ನ' ಎಂದು ನಾ ಅಂದುದನ್ನು ಹೇಳುತ್ತಿದ್ದೆ. ತಾಯಿಯ ಎದುರು ಹೇಳುವುದಕ್ಕೆ ಸಂಕೋಚವೆಲ್ಲಿಯದು. ಸುರೇಶನು ತುಸು ಬೀಳುವ ಹಾಗೆ ಕಂಡನಿಲ್ಲವೊ, ಚಟ್ಟನೆ ಅವರು ಎದ್ದು ಸರಿಯಾಗಿ ಮಲಗಿಸಿದುದನ್ನು ಹೇಳುತ್ತಿದ್ದೆ, ಅವರು ಪುಣೆಯಲ್ಲಿ ಹಮಾಲನಿಂದ ನಮ್ಮನ್ನು ಬಿಡುಗಡೆ ಮಾಡಿ ಎಲ್ಲಕ್ಕೂ ಮೊದಲು ಅವರನ್ನು ಕಂಡಾಗ, ಅವರ ಕುರೂಪ ಮುಖ ನೋಡಿ ಹೇಸಿಗೊಂಡುದನ್ನು ಹೇಳುತಿದ್ದೆ. ಅವ್ವ ಇಲ್ಲ.'

ಅಬಚಿಯು ಈ ಸಲ 'ಎಷ್ಟದು ಅಳುವದು' ಎಂದು ತುಸು ಗದರಿಸಿದಳು. ಹೌದು, ನಾನೇಕೆ ದುಃಖಿಸಬೇಕು? ಅವರು ಮದುವೆಯನ್ನೇ ಆಗುವದಿಲ್ಲ ಎಂದು ನಿಶ್ಚಯಿಸಿರುವದಾಗಿ ಕಾಕಾ ಅನ್ನಲಿಲ್ಲವೆ? ತಾವು ಕುರೂಪಿ ಇರುವುದಾಗಿ ಕನ್ಯೆಯರು ಬರುವುದಿಲ್ಲವೆಂಬ ಅಭಾವ ವೈರಾಗ್ಯವೊ? ಇಲ್ಲ, ತಾವು ಕುರೂಪಿ ಇರುವುದಾಗಿ, ಬಂದ ಹೆಂಡತಿಯ ಜೀವನದಲ್ಲಿ ವಿರಸವನ್ನುಂಟು ಮಾಡಬಾರದಾಗಿ ಅವರ ಆಶಯವೆ? ಇಷ್ಟು ಅವರನ್ನು ಮೆಚ್ಚಿಯೂ ನನಗೆ ಅವರನ್ನೇ ಮದುವೆಯಾಗಬೇಕೆಂದು ಆಸೆಯೇನೂ ಇರಲಿಲ್ಲ. ಏನು ಇತ್ತೇ...? ಏನಾದರೂ ಅವರು ಮದುವೆಯಾಗುವವರೇ ಅಲ್ಲವಲ್ಲ.

ಮೊದಲಿನ ಬಿಕ್ಕು ಕಡಿಮೆಯಾಗತೊಡಗಿತು. ಒಂದು ಕ್ಷಣ ಮೌನಿಯಾಗಿದ್ದೆ. ಒಕ್ಕಲುಗಿತ್ತಿಯು ಬಾಗಿಲನ್ನು ತೆರೆದುಕೊಂಡು ಹೊರಗೆ ಹೋದಳು.

ಪಡಸಾಲೆಯಿಂದ ಕಾಕಾ ಮತ್ತು ಅವರ ನಡುವೆ ಮಾತು ನಡೆದುದು ಕೇಳಿಸುತ್ತಿತ್ತು. ನಡುವೆ ಪುರೋಹಿತರು ಹೇಳಿದರು.

"ಅದ್ಯಾಕ ಶಾಮಣ್ಣಾ, ಅವರು ಭಾಳ ಛಲೋ ಹಾಡು ಹಾಡತಾರ. ಆ ರೆಡಿಯೋದೊಳಗೆ ಹೇಳಿದ್ದು ತೊಗೊಂಡು ಏನು ಮಾಡತೀರಿ? ಲಗ್ನದೊಳಗೆ ಅವರದೊಂದು ಬೈಠಕ ಆಗಿಬಿಡ್ಲಿ. ಯಾಕ್ರಿ ರಾಜಣ್ಣ?"

'ಆ ರಾಜಮಹಲು, ಭವ್ಯ ಬೆಳದಿಂಗಳು! ಅಟ್ಟದ ಮೇಲಿನ ಅಂಗಣದಲ್ಲಿ ನನ್ನವರ ಎದೆಗೆ ತಲೆ ಆನಿಸಿ, ಅವರ ಹೃದಯ ವೀಣೆ ಮೀಟುತ್ತಿದ್ದೇನೆ! ಅವರು ಆಲಾಪನೆಯಲ್ಲಿ ಮಗ್ನರಾಗಿದ್ದಾರೆ. ಆ ಇರುಳು ಚಿರಂತನವಾಗಿ ಉಳಿಯಲಿ ಎಂದು, ಅಂದು ಗಾಡಿಯಲ್ಲಿ ಕಲ್ಪನೆಯನ್ನು ಕುದುರಿಸಿದ್ದೆನಲ್ಲವೆ?...'ಈಗ ಕಣ್ಣೀರು ಬರಲಿಲ್ಲ, ಅಳುವ ಶಕ್ತಿಯೇ ಉಡುಗಿಹೋಗಿತ್ತು.

ಸುರೇಶನು ಬಂದು "ಇಲ್ಲಿದ್ದೀರೇನು? ಏನು ಮಾಡತೀರಿ? ಇಲ್ಲೆ ಹರಟೆ ಹೌದಲ್ಲೊ? ಎಷ್ಟು ಹುಡುಕಬೇಕು, ಅಕ್ಕಾ ನಿನ್ನ? ಅವರು ಹುಬ್ಬಳ್ಳಿಯಿಂದ ಬಂದಾರ, ಭಟ್ಟಿ ಆಗ ಬಾ ನಿನ್ನ ಕರಕೊಂಡು ಬರ್ತೇನಿ ಅಂತ ಹೇಳಿ, ಪಡಸಾಲ್ಯಾಗ ಒಬ್ಬರ್ನೇ ಕೂಡಿಸಿ ಬಂದೇನಿ" ಅಂದನು.

"ನಾ ಒಲ್ಲೆ" ಎಂದು ಹೇಳಿದೆ.

"ಹೋಗು ಹೋಗು. ಇನ್ನೇನು ಅವರು ನಿನಗ ಭಾವನೇ ಆಗಬೇಕಲ್ಲ. ಸಂಕೋಚ ಯಾಕ? ಏನು ಗುರ್ತಿಲ್ಲಾ ಅಂತಲ್ಲಾ" ಎಂದು ಅಬಚಿಯು ಹೇಳಿದಳು.

ಮುಖವನ್ನೊರಸಿಕೊಂಡು ಮುಂಗುರುಳನ್ನು ಸರಿಪಡಿಸಿಕೊಂಡು, ನಂದೆ ಸುರೇಶರೊಂದಿಗೆ ಅವರ ಮುಂದೆ ಹೋಗಿ ನಿಂತೆ. "ನಮಸ್ಕಾರವಾ" ಎಂದರು. ನಾ ಮಾತೇನಾಡಲಿಲ್ಲ, ಕೈಮುಗಿದೆ ಮಾತ್ರ.

❄ ❄ ❄ ❄ ❄

೩. ಸ್ವಪ್ನ ಮುರಲಿ

ಸುಂದರಿಗೆ ಬಾಲ್ಯದಿಂದಲೂ ಕೃಷ್ಣಮೂರ್ತಿಯ ಹುಚ್ಚು ಹಿಡಿದಿತ್ತು.

ಕೃಷ್ಣಮೂರ್ತಿ! ಈ ಕೃಷ್ಣಮೂರ್ತಿ ಪದವೀಧರ ತರುಣನಲ್ಲ. ಕಲಾವಿದನೆಂದೊ, ಗಾಯಕನೆಂದೊ, ಸಾಹಿತಿಯೆಂದೋ, ಸುಂದರಿ ಅವನ ಮೇಲೆ ಇಷ್ಟೊಂದು ಮೋಹಗೊಂಡವಳಲ್ಲ. ಆತ ರಾಜಕಾರಣ ಪಟುವಲ್ಲ, ಸಮಾಜಸೇವಾಧುರಂಧರನಲ್ಲ. ಇನ್ನೇನೂ ಅಲ್ಲದಿದ್ದರೂ, ಕೃಷ್ಣಮೂರ್ತಿಯ ಮೇಲೆ ಇಷ್ಟೊಂದು ಪ್ರೇಮ ಅವಳಿಗೆ!

ಎಂದರೆ ಆತ ದ್ವಾಪರಯುಗದ ಕೃಷ್ಣ! ಅದೂ ಪಾಂಡವ ಪಕ್ಷಪಾತಿಯಾಗಿ, ಅರ್ಜುನನ ಸಾರಥಿಯಾಗಿ ಮೆರೆದ ಕೃಷ್ಣನಲ್ಲ. ಅವಳ ಮೋಹವಿದ್ದುದು ಬಾಲಕೃಷ್ಣನ ಮೇಲೆ; ಗೋಪಾಲಕೃಷ್ಣನ ಮೇಲೆ; ರಾಧಾಕೃಷ್ಣನ ಮೇಲೆ. ಸಣ್ಣವಳಿದ್ದಾಗಿನಿಂದಲೇ ಆ ಮೋಹ.

ವರು-ವರುಷಕ್ಕೆ ಮರಳಿ ಬರುವಂತೆ ಆ ವರ್ಷವೂ ಗಣೇಶ ಚವತಿಯ ಹಬ್ಬ ಬಂತು. ಅದು ಸುಂದರಿಯ ಏಳನೆಯ ಹುಟ್ಟು ಹಬ್ಬದ ದಿನವೂ ಅಹುದು. ಎಂದಿನಂತೆ ಗಣೇಶನ ಆಗಮನದ ಪೂರ್ವತಯಾರಿಗಾಗಿ, ಮನೆಗೆ ಸುಣ್ಣ ಹಚ್ಚುತ್ತಿರುವಾಗ, ಗೋಡೆಗೆ ಸಾಲಾಗಿ ಹಾಕಿದ ಪಟಗಳನ್ನೆಲ್ಲ ಕೆಳಗಿಸಿದರು. ಅಲ್ಲೇ ಅವಳ ಕೈಗೆ ಮೊದಲ ಸಲ ಕೃಷ್ಣನು ಸಿಕ್ಕಿಬಿದ್ದುದು. ಹಳೆಯ ಕಾಲದ ಮನೆ-ಮನೆಗೆ ಇರುವ ರವಿವರ್ಮ ರೇಖಿತ ಚಿತ್ರ ಅದು.

ಅತ್ಯಂತ ಸುಂದರವಾದ ನಗೆಮೊಗ; ಅರಳಿದ ಆ ಕಣ್ಣುಗಳು; ತಿಳಿ ನೀಲವರ್ಣ; ಹಿಂದೆ ಜೋಲು ಬಿದ್ದಿರುವ ಕೂದಲಿಗೆ ಒಪ್ಪುವಂತೆ ಕಟ್ಟಿದ ಆ ನವಿಲುಗರಿಯ ಕಿರೀಟ. ತಿಳಿನೀಲಿಯದೇ ಶಿಲೆಯಿಂದ ಕೆತ್ತಿ ಕಡೆದಂತಿದ್ದ ಕೈ, ಹಾಗೂ ಬೆರಳುಗಳು. ಅವುಗಳ ಮಧ್ಯೆ ಆ ಕೊಳಲು! ತನ್ನೆರಡೂ ಕೈಗಳಿಂದ ಮುದ್ದಾಗಿ ಆಕಳ ಕರುವನ್ನು ತಬ್ಬಿಕೊಂಡ ಆ ಮನ್ಮನೋಹರ ನೋಟ!

ತನ್ನ ಬಾಲಭಾವವನ್ನು ಅಚ್ಚರಿಗೊಳಿಸಿದ ಆ ಚಿತ್ರವನ್ನು ಎತ್ತಿಕೊಂಡು ಬಂದು ಸುಂದರಿಯು, ಅಲ್ಲೇ ಮಾಸಿದ ಲೋಡಿಗೆ ಆತು ಕುಳಿತು ಎಲೆ ಅಡಿಕೆಯನ್ನು ಅರಿಯುತ್ತಲಿದ್ದ ಅಜ್ಜನ ತೊಡೆಯ ಮೇಲೆ ಮಂಡಿಸಿ, 'ಈತ ಯಾರು?' ಎಂದು ಕೇಳಿದಳು. ಮಕ್ಕಳನ್ನು ಬಿಟ್ಟು ಇನ್ನಾರೂ ಮಾತನಾಡಿಸದೇ ಉಳಿಯುತ್ತಿದ್ದ ಅವಳ ಅಜ್ಜ, ಆತ ಯಾರು ಎಂಬುದನ್ನು ಹೇಳಿದರು. ಅಣ್ಣ ಬಂದು ಆ ಚಿತ್ರವನ್ನು ತೆಗೆದುಕೊಂಡು ಹೋದ ಮೇಲೂ ಅವಳು, ಅವರ ಬಾಯಿಂದ ಕೃಷ್ಣನ ಬಾಲಲೀಲೆಗಳನ್ನು ಕಿವಿತುಂಬ ಕೇಳುತ್ತಿದ್ದಳು. 'ಗಣೇಶನನ್ನು ಕೂಡ್ರಿಸಿ ಆರತಿ ಮಾಡುತ್ತಾರೆ. ಎಲ್ಲರೂ ಬನ್ನಿ' ಎಂದು ಪಟಾಕಿ ಹಾರಿಸುವ ಹುಡುಗರನ್ನು ಗಣೇಶನ ಮುಂದೆ ನೆರೆಯಿಸಿದಾಗ, ಸುಂದರಿ ಆರತಿಯ ಬೆಳಕಿನಲ್ಲಿ, ಮೇಲಿದ್ದ ಕೃಷ್ಣನನ್ನು ನೋಡುತ್ತಿದ್ದಳು. ಹಿರಿಯರ ಅಪ್ಪಣೆಯಂತೆ 'ವಿದ್ಯಾಬುದ್ಧಿ ಕೊಡಪ್ಪಾ, ಗಣಪ್ಪಾ!' ಎಂದು ನಮಸ್ಕರಿಸಲು ತಲೆಯೆತ್ತಿದಾಗ! 'ನನ್ನನ್ನು ನೋಡಿ ನಗುತ್ತಾನಲ್ಲ, ಕೃಷ್ಣ' ಎಂದುಕೊಂಡಳು.

ಅಲ್ಲಿಂದ ಹೋಗಬರುವಾಗೊಮ್ಮೆ ತಲೆಯೆತ್ತಿ ಆ ಚಿತ್ರದ ಕಡೆ ಆಕೆ ನೋಡುತ್ತಿದ್ದಳು. 'ಬಹಳ ಎತ್ತರದಲ್ಲಿದ್ದಾನೆ ಕೃಷ್ಣ; ನನ್ನ ಸನಿಹದಲ್ಲಿಲ್ಲ' ಎಂಬ ಯೋಚನೆ ಬಂತು ಅವಳಿಗೆ. ಅಜ್ಜನ ಬಳಿ ಹೋಗಿ, 'ಈಗ ಕೃಷ್ಣ ಇದ್ದಾನೆಯೆ?' ಎಂದು ಕೇಳಿದಳು. ಅಜ್ಜ ನಗುತ್ತ 'ಇಲ್ಲ ಕೂಸೂ, ಆತ ಎಷ್ಟೆಂದರೂ ದೇವರು! ಬೇರೆ ಬೇರೆ ರೂಪದೊಳಗೆ ಬರುತ್ತಾನೆ. ನಮ್ಮ ಪಾಪ ಹೆಚ್ಚಾತಂದ್ರ ನಮ್ಮ ಉದ್ಧಾರಕ್ಕೆ ಮತ್ತೆ ಹುಟ್ಟಿ ಬಂದಾನು!' ಎಂದರು. ಅದರ ಸ್ಥೂಲ ಅರ್ಥವನ್ನು ಗ್ರಹಿಸಿದ ಆಕೆ 'ಅವನು ಒಂದು ವೇಳೆ ಹುಟ್ಟಿ ಬಂದದ್ದಾದರೆ ನನಗೆ ಹೇಗೆ ಗೋತ್ತಾಗಬೇಕು?' ಎಂದೆಲ್ಲ ಯೋಚಿಸುತ್ತ ಶಾಲೆಗೆ ಹೋಗುವಳು. ವರ್ಗದಲ್ಲಿ ಕುಳಿತು ಹುಡುಗಿಯರೆಲ್ಲ ಬೇರೀಜು ವಜಾಬಾಕಿಯ ಲೆಕ್ಕ ಮಾಡುತ್ತಿದ್ದರೆ, ಈಕೆಯ ಮನಸ್ಸು, ಬೆಳಿಗ್ಗೆ ಬೆಣ್ಣೆ ಕಡೆಯುತ್ತಿದ್ದ ತಾಯಿಯನ್ನು ನೆನೆದು, ಅಲ್ಲಿಂದ ದನದ ಕೊಟ್ಟಿಗೆಯಲ್ಲಿದ್ದ ಹಸುವನ್ನು ಧೇನಿಸಿ, ನೆಟ್ಟಗೆ ದ್ವಾಪರಯುಗದಷ್ಟು ದೂರ ಹಿಂದೋಡುತ್ತಿತ್ತು.

ಅದಾಗಿ ಹಲವು ತಿಂಗಳ ಮೇಲೆ, ಅವಳಿಗೆ ಸುಂದರವಾದ ಕೃಷ್ಣನ ಮೂರ್ತಿಯೇ ದೊರಕಿತು. ಅಂದು ಗೋಕುಲಾಷ್ಟಮಿಯ ಪೂಜೆ. ರಾತ್ರಿಯೆಲ್ಲ ಜಾಗರಣೆ ಮಾಡಿ, ಪೂಜೆಯ ಭಕ್ತಿಭಾವದಲ್ಲಿ ಮೈಮರೆತಾಗ, ಅವಳಿಗೆ ವಿಚಿತ್ರ ಆನಂದವಾಗಿತ್ತು. ಅಜ್ಜನ ಕೃಪೆಯಿಂದ ಈ ಮೂರ್ತಿ ದೊರೆತ ಮೇಲೆ, ಕೆಲ ತಿಂಗಳಿನಿಂದ ಗೊಂಬೆಯಾಟ ಬಿಟ್ಟಿದ್ದ ಆಕೆ ತನ್ನ ತಂಗಿಯೊಡನೆ ಅದನ್ನು ಪ್ರಾರಂಭಿಸಿದಳು. ಆದೇ ಮಕ್ಕಳ ಗೊಂಬೆಯಾಟ ನಾವು ನೀವೆಲ್ಲ ನೋಡಿರುವಂಥದೇ! ಆಟದಲ್ಲಿ ಕೃಷ್ಣನ ಆ ಮಣ್ಣು ಮೂರ್ತಿಯೇ ಗಂಡ; ತಾನು ಅವನ ಹೆಂಡತಿ ರಾಧಾ...

ರಾಧೆ! ದೀವಳಿಗೆ ಮುಂದೆ ಬಾಲಿಕೆಯರೆಲ್ಲ ಕೋಟೆ ಕಟ್ಟಿ ಕೋಲಾಟವಾಡುವಾಗ ಇವಳೇ ರಾಧಾ ಆಗಿದ್ದಳು; ೨-೩ ವರ್ಷ ಅವಳಿಗಿಂತ ಹಿರಿಯವಳಾದ ವನಜಾಕ್ಷಿಗೆ ಕೃಷ್ಣನ ವೇಷ. ಈ ಸಲ ವನಜಾಕ್ಷಿ ತನ್ನ ಸೋದರ ಮಾವನ ಮನೆಗೆ ಹೋಗಿದ್ದುದರಿಂದ,

ಗೆಳತಿಯರಲ್ಲಿ ಕೃಷ್ಣನು ಸಮಸ್ಯೆಯನ್ನೆಬ್ಬಿಸಿದಾಗ, ಸುಂದರಿ ತಾನು ಕೃಷ್ಣನಾಗುವೆನೆಂದು ಹೇಳಿಕೊಂಡಳು. ಅತ್ತು ಕರೆದಳು. ಅವಳಿಗೆ ಆಶೆ ಕೃಷ್ಣನ ಹಾಗೆ ಕಿರೀಟ ಧರಿಸಿ, ಶಲ್ಲೆಯನ್ನು ಹೊದ್ದು ಕೊಳಲನ್ನು ಹಿಡಿದು ತಾನು ಬರುವಂತಾಗಬೇಕು ಎಂದು! ಕೃಷ್ಣನಂತೆಯೇ ಗಾಂಭೀರ್ಯದ ನಗೆಯನ್ನು ಬೀರುತ್ತ ನಡೆದು ಬರಬೇಕೆಂಬ ವಿಚಿತ್ರ ಹಂಬಲ. ಕೊನೆಗೆ ತನ್ನಿಚ್ಛೆಯಂತೆಯೇ ಆದಾಗ, ಅವಳ ಸಂಭ್ರಮ ಹೇಳತೀರದು. 'ಕೋಟೆ'ಯ ತಿರುಗಾಟ ಮುಗಿಸಿಕೊಂಡು, ಅದೇ ವೇಷದಲ್ಲಿ ಮನೆಗೆ ಬಂದು, ಗೊಂಬೆಯ ಕೃಷ್ಣನಿಗೆ 'ಈ ಸಲ ನೀ ರಾಧೆಯಾಗು' ಎಂದು ಹೇಳಿ, ಅದಕ್ಕೆ ಬಟ್ಟೆಯ ತುಂಡಿನ ಸೀರೆ ಉಡಿಸಹೋದಾಗ, ಅವಳಿಗೆ ಏಕೋ ಪ್ರಶಸ್ತವೆನಿಸಲಿಲ್ಲ. 'ಊಂಹು! ನೀನೇ ಮುದ್ದು ಕೃಷ್ಣನಾಗಿರು, ನಾ ನಿನ್ನ ರಾಧೆಯಾಗೇ ಇರುತ್ತೇನೆ' ಎಂದು ಎದೆಗವಚಿಕೊಂಡಳು.

ಮನೆಯಲ್ಲೊಂದು ಸಲದ ದೀವಳಿಗೆಯ ದಿನ; ತಾಯಿ ಇವಳಿಗೆ ಎಣ್ಣೆ ಹೂಸಿ, ಎರೆದು ಕೊನೆಯ ತಂಬಿಗೆಯ ನೀರನ್ನು ಹಾಕುತ್ತ, ವಾತ್ಸಲ್ಯ ತುಂಬಿದ ದನಿಯಲ್ಲಿ 'ಆಯುಷ್ಮಂತಿಯಾಗು, ಮುತ್ತಿನಂಥಾ ಗಂಡ ಸಿಗಲಿ. ಗಂಡಸು ಮಗನ...' ಎನ್ನುವಾಗ, ಸುಂದರಿ ತಾಯಿಯ ಕೈ ತಡೆದು 'ಅವ್ವಾ, ನಾ ಕೃಷ್ಣನ್ನ ಮದುವೆಯಾಗ್ತೀನಿ' ಎಂದಳು. ಹತ್ತು ವರ್ಷದ ಹುಡುಗಿಯ ಬಾಯಲ್ಲಿ ಇಂಥ ಮಾತು? ಅವಳ ತಾಯಿಗೆ ನಗು ಬಂತು. 'ಯಾವ ಕೃಷ್ಣನೇ ಆತ? ಹಾಗೆ ಕಂಡಕಂಡ ಗಂಡು ಹುಡುಗರ ಹೆಸರು ತೊಗೋಬಾರ್ದು!' ಎಂದರು.

ಆಡಬಾರದೆ ಆಡಿದಾಗ, ಅವಳ ಕೋಮಲ ಭಾವನೆಯೊಂದು ಇಷ್ಟು ಸಣ್ಣ ಮಾತಿಗೇ ಕಮರಿಹೋಯಿತು. 'ಇನ್ನು ಯಾರ ಹತ್ತಿರವೂ ಬಾಯ್ಬಿಡುವುದಿಲ್ಲ. ಕೆಟ್ಟ ಅವ್ವ!' ಎಂದು ಮುನಿದುಕೊಂಡು ತಾನೇ ತಲೆಯೊರಸಿಕೊಳ್ಳಲು ತೊಡಗಿದಳು.

ಇಂಥದೇ ಕಟು ಅನುಭವ ಮುಂದೆಯೂ ಅವಳಿಗೆ ಬರಬೇಕೆ? ಗೆಳತಿಯರಲ್ಲಿ ಮಾಲತಿ ಅವಳಿಗೆ ಅತ್ಯಂತ ಸ್ನೇಹಮಯಿ. ಅವಳೆದುರು ಕೃಷ್ಣನ ಬಗ್ಗೆ, ಅದು, ಇದು ಅನೇಕ ಮಾತುಗಳನ್ನು ಆಡಬೇಕು.

ಒಂದು ಸಲ ಪುಸ್ತಕ ಪೂಜೆಯಲ್ಲಿ ಗಂಧದ ಕಟ್ಟಿಗೆಯ ಕೃಷ್ಣನ ಸೊಗಸಾದ ಗೊಂಬೆಯನ್ನು ಮುಂದೆ ಇಟ್ಟು, ಮಂಗಳಾರತಿ ಮಾಡುವಾಗ, ಕೃಷ್ಣನು ಜೀವಂತವಾಗಿ ಇವಳೆಡೆ ಕಣ್ಣು ಬಿಟ್ಟು ನೋಡುವಂತೆಯೇ ಭಾಸವಾಯಿತು. ಅವತಾರ, ದೇವರು ಪ್ರತ್ಯಕ್ಷನಾಗುವದು ಇವುಗಳನ್ನು ತನ್ನ ಸಂಪ್ರದಾಯಸ್ಥ ಮನೆಯಲ್ಲಿ ಕೇಳಿದ್ದ ಆಕೆ, 'ಕೃಷ್ಣನಿಂದು ನನಗೆ ಪ್ರತ್ಯಕ್ಷನಾದ! ಅವನೇ ನನಗೆ ಗಂಡನಾಗುವವ!' ಎಂದು ಉದ್ವೇಗದಲ್ಲಿ ಹೇಳಿದಾಗ ಮಾಲತಿ 'ಅತಿಯಾಯಿತು ನಿನ್ನ ಹುಚ್ಚು! ನೀ ಇನ್ನೊಬ್ಬ ಮೀರಾಬಾಯಿ ಆಗುವಾಕೆಯೇನು?' ಎಂದುಬಿಡಬೇಕೆ? ಸುಂದರಿಯ ಭಾವನಾವೇಶ ಝುರ್ರನೆ ಇಳಿಯಿತು. ಹಾಗೇ ಮಾಲತಿಯ ಮೇಲೆ ಕೋಪ ಏರಿತು.

ಆದರೆ ಅದು ಅವಳ ಕಣ್ಣನ್ನು ತೆರೆಯಿಸಿತ್ತು. ಕೃಷ್ಣ ತನ್ನ ಗಂಡನಾದಾನೆ? ಎಲ್ಲಿಂದ ಬರಬೇಕು ಆತ? ಪುನಃ ಅವತಾರವೇ? ಆಗದ ಮಾತು...

ಕೊನೆಗೆ, ಕೃಷ್ಣನಂತೂ ಸಾಧ್ಯವಿಲ್ಲ, ಆದರೆ ಅವನಂತಹ ಗಂಡ ತನಗೆ ಸಿಗಬೇಕು. ಅಷ್ಟು ಸುಂದರನಿರಬೇಕು; ಅದಕ್ಕಿಂತ ಸುಂದರವಾಗಿ, ಸ್ಮಿತವದನನಿರಬೇಕು; ಸದಾ ಕಣ್ಣಿನಿಂದಲೇ ನಗುತ್ತಿದ್ದರೆ ಇನ್ನೂ ಚೆನ್ನು! ಇದರ ಜೊತೆಗೆ ರಸಿಕತನ ಬೇಕು! ಎಂಬ ನಿಲುವಿಕೆಗೆ ಆಕೆ ಬಂದು ಮುಟ್ಟಿದಳು. ಅಲ್ಲಿಗೆ ಅವಳ ಎಳೆಯ ಮನದ ಅನಿಮಿತ್ತ ತೊಳಲಾಟ ನಿಂತಿತ್ತು. ವಾಸ್ತವತೆಯ ತಳಪಾಯದಲ್ಲಿ ತನ್ನ ಭಾವನಾಮಯತೆಯ ಕನಸನ್ನೆ ಆಕೆ ಹೆಣೆಯುತ್ತಿದ್ದಳು.

ಕೃಷ್ಣನಂತಹ ರಸಿಕ ಜೊತೆಗಾರ! ಅವನಿಗೆ ಕೊಳಲೂದಲು ಬರುತ್ತಿದ್ದರೆ ಇನ್ನೂ ಚೆನ್ನು, ಕೊನೆಯ ಪಕ್ಷ ಹಾಡಲು ಬಂದರೂ ಸರಿ. ಜೊತೆಗೆ ತಾನು ರಾಸಲೀಲೆಯಲ್ಲಿಯಂತೆ ನೃತ್ಯವನ್ನು ಮಾಡಬೇಕು. ಆದರೆ ಹಳ್ಳಿಯಂತಹ ಈ ನಗರದಲ್ಲಿ ಹೇಗೆ ಸಾಧ್ಯ? ಧಾರವಾಡ, ಮುಂಬೈಯಂತಹ ದೊಡ್ಡ ಊರುಗಳಲ್ಲಿದ್ದವನಾಗಿರಬೇಕು! ರಾಧೆಯಂತೆ ಅವನು ನನ್ನನ್ನು ಛೇಡಿಸಬೇಕು; ಆಳಿಸಬೇಕು. ಮತ್ತೆ ರಮಿಸಬೇಕು; ನಗಿಸಬಲ್ಲವನಾಗಿರಬೇಕು....

ಅವಳ ಮದುವೆಯ ವಿಚಾರ ಮನೆಯಲ್ಲಿ ಗಂಭೀರ ಸ್ವರೂಪ ತಾಳುವವರೆಗೂ ಇದೇ ಕನಸು ಅವಳಲ್ಲಿ. ಅದರಲ್ಲಿ ದುಃಖವಿಲ್ಲ. ನೋವಿಲ್ಲ. ಆಕೆ 'ಕೃಷ್ಣ ಸಿಗದಿದ್ದರೆ ಹೇಗೆ?' ಎಂದು ಒಮ್ಮೆಯೂ ಎಣಿಸಿದವಳಲ್ಲ! ಬರಿ ಕಲ್ಪಿಸುವುದರಲ್ಲೇ ನಲವಿನ ಮಂದಗಾಳಿ ಅವಳ ಮನವನ್ನರಳಿಸಿತು. ಅವಳ ಮೈಮಾಟ ಈ ಮಧ್ಯದಲ್ಲೇ ಅರಳಿ, ಅವಳ ಕನಸು ನೆನಸಿನ ಪೂರ್ಣತೆಗೆ ಕಾದು ನಿಂತಿತ್ತು.

ಮೇ ತಿಂಗಳ ಬಿಸಿಲು ಇಳಿಮುಖವಾಗುತ್ತ ಬಂದಾಗ, ಅವಳ ಮನೆಗೆ ಒಬ್ಬ ತರುಣ ಬಂದ. ಬಂದವನು ಇನ್ನಾರೂ ಅಲ್ಲ; ತನ್ನ ಪ್ರೀತಿಯ 'ಅತ್ಯಾ'ನ ಮಗ ಎಂಬುದೂ ತಿಳಿಯಿತು. ಈ ಮುನ್ನವೆ ಅವನ ಬರವನ್ನು ಅವಳ ತಂದೆ ತಾಯಿಗಳು ತುಂಬಾ ಕಾಯುತ್ತಿದ್ದರೆಂಬುದನ್ನು ಅವಳು ತಿಳಿದುಕೊಳ್ಳ ಹೋಗಲಿಲ್ಲ.

ನಾನಿ ತುಸು ತೆಳ್ಳನೆಯ ಮೈಕಟ್ಟಿನ ಎತ್ತರದ ಆಳು. ನೀಳ ಮೂಗು ಅವನ ಮುಖದ ಮುಖ್ಯ ಲಕ್ಷಣ. ಸ್ವಲ್ಪೇ ಏರು ಹಣೆ, ಕೃಷ್ಣನ ಹಾಗೆ ದುಂಡುಮೈ ಇಲ್ಲ, ದುಂಡುಗಲ್ಲಗಳಿಲ್ಲ. ಕಣ್ಣಿನಲ್ಲಿ ನಗು? ಊ ಹು; ಆದರೆ ಸೌಮ್ಯ ಹಾಗೂ ಹೊಳಪಿನ ಕಣ್ಣುಗಳು. ಮಾತಿನಲ್ಲಿಯೂ ಸೌಮ್ಯ; ಅಂತೆಯೆ ಮಿತಭಾಷಿ. ತಾರುಣ್ಯದ ಮಾತಿನ ಅಬ್ಬರವೆ, ಏರುನಗೆಯೆ? ಬಿಂಕವೆ! ಏನೂ ಇಲ್ಲ. ಸುಂದರಿ ಎಣಿಸಿಕೊಂಡ ರಸಿಕತನ ಇದೆ ಎಂದು ಹೇಳಲೂಬಾರದು.

ಆ ಒಂದು ವಾರದಲ್ಲಿ ಸುಂದರಿ ಅವನನ್ನು ಕದ್ದು ಕದ್ದು ತುಂಬಾ ನೋಡಿದಳು. ಗುಣ-ಸ್ವಭಾವವನ್ನು, ನಡತೆಯನ್ನು ಪರೀಕ್ಷಿಸಿದಳು. ತನ್ನ ಕೃಷ್ಣನಿಗೆ ಸ್ವಲ್ಪವೂ ಹೋಲಿಕೆ ಕಾಣದಾಗಲು, ಅವಳಿಗೆ ನಿರಾಶೆಯಾಯಿತು. ಹೋಲಿಕೆ ಇದ್ದರೆ ಒಳ್ಳೆಯದಿತ್ತು ಎಂಬ

ಸುಳಿ ಯಾವಾಗ ಬಂತೋ, ಆಗ ದುಃಖ ಕೋಡಿವರಿದು ಅವಳ ಕಣ್ಣನ್ನು, ಮತ್ತೊಂದು ಸಲ ಕೈಬಳೆಗಳನ್ನೂ, ದಿಂಬನ್ನೂ ತೋಯಿಸಿತು. ಅದೇ ಮೋಜು! ಆತ ತನ್ನ ಪ್ರೀತಿಯ ಅತ್ಯಾನ ಮಗ. ಹೆಚ್ಚೆಚ್ಚು ಪರೀಕ್ಷಿಸಿದ ಹಾಗೆಲ್ಲ, ಯಾವುದೋ ಕಂಡೂ ಕಾಣದ ಸೆಳೆತ ಅವನಲ್ಲಿದೆ. ಇಂಥವನು ಸ್ವಲ್ಪಾದರೂ ರಸಿಕ ವೃತ್ತಿ ಇಲ್ಲದವನಾಗಿರುವುದೆ? ಎಂದು ಯೋಚಿಸುವಳು. 'ಛೀ, ಇಂಥ ಗಂಡ ಬೇಡ, ನಾ ಮದುವೆಯನ್ನೆ ಆಗುವುದಿಲ್ಲ' ಎಂದು ನಿರ್ಧರಿಸುವಳು.

ಹಾಗಾದರೆ ಅಪ್ಪನೆದುರು ಏನೆಂದು ಕಾರಣ ಹೇಳುವುದು? ಏನು ಕೊರತೆ ಅವರಲ್ಲಿದೆ? ಜಗತ್ತು ತನ್ನ ಭಾವನೆಗಳಿಗೆ ಅಷ್ಟು ಬೆಲೆ ಕೊಡುವುದಿಲ್ಲ ಎಂಬುದರ ಅರಿವು ಒಂದು ಬಿಟ್ಟು ಪತ್ತು ಸಲ ಅವಳಿಗಾಗಿತ್ತು. ಇಷ್ಟಕ್ಕೂ 'ನನಗೇನು ಒಲ್ಲೆ ಎನ್ನಬೇಕೆಂದಿಲ್ಲ. ಆದರೆ ನನ್ನ ಬಾಳಿನ ಹಂಬಲಗಳು ಇವರಲ್ಲಿ ಪೂರ್ಣವಾಗುವ ಹಾಗೆ ಯಾಕೆ ಇವರಿರಕೂಡದಿತ್ತು?' ಎಂದು ಸಂಕಟಪಟ್ಟಳು.

ಮನೆಯಲ್ಲಿಯದೆ ಸಂಬಂಧವೆಂದಾಗಿ ನಿಶ್ಚಯದ ವಿಶೇಷ ತಯಾರಿಯಿಲ್ಲದೆ ನಾನಿಯು ಮುಂಬೈಗೆ ಹೊರಟುಹೋದ. ಅವನು ಮರೆಯಾದ ಮೇಲೆ 'ಹೌದು, ಅವನೇ ನನ್ನ ಸ್ವಾಮಿ' ಎಂಬ ನಿರ್ಧಾರಕ್ಕೆ ಬಂದಿದ್ದಳು ಸುಂದರಿ! ತನ್ನಲ್ಲಿ ಪ್ರೇಮಬಲವಿದ್ದರೆ, ಕೃಷ್ಣನ ಕೃಪೆ ಇದ್ದರೆ ಅವರನ್ನೇ ನನ್ನ ಮೋಹನ ಮುರಲಿಯನ್ನಾಗಿ ಪರಿವರ್ತಿಸಿಯೇನು ಎಂದುಕೊಳ್ಳುವಳು!

ಮರುವರ್ಷದ ಅದೇ ಮೇ ತಿಂಗಳ ಇಳಿಬಿಸಿಲಿನ ಒಂದು ಸಂಜೆ ಸುಂದರಿಯ ಮದುವೆ ನೆರವೇರಿತು.

ಯಾರೊಬ್ಬರೂ ಅವಳ ಆಶಯಗಳಿಗೆ ಬೆಲೆ ಕೊಡದಿದ್ದು, ತನ್ನದೇ ಒಂದು ವಸ್ತುವಿನ ಬರುವಿಕೆಗಾಗಿ ಆಕೆ ಅದೆಷ್ಟು ದಿನದಿಂದ ಕಾದಿದ್ದಳು. ನಾನಿಯೊಡನೆ ಏನೆಲ್ಲ ಮಾತನಾಡಬೇಕೆಂದು ಹವಣಿಸಿದ್ದಳು. ಆದರೆ ಹಸೆಮಣೆಯಲ್ಲಿರುವಾಗಲೇ ಹತ್ತು ಜನರೆದುರು, ಎದ್ದು ಕಾಣದಂತೆ ಮಾತನಾಡುವ ಪ್ರವೃತ್ತಿಗೆ ನಾನಿ ಒಗ್ಗಿದವನಲ್ಲ. ಅವಳಿಗೆ ತುಂಬ ನಿರಾಶೆಯಾಯಿತು.

ಹೆಸರಿಡುವ ಸಮಯ ಬಂದಾಗ, ಬೀಗರಲ್ಲಿ ಚರ್ಚೆ ನಡೆಯುತ್ತಿತ್ತು. ನಾನಿಯ ಅಕ್ಕ ಬಂದು, "ನಾನೀ, ನಿನಗಾವ ಹೆಸರು ಇಷ್ಟ?" ಎಂದು ನಗುತ್ತ ಕೇಳಿದಾಗ, ಇತ್ತ ಯಾರೋ ಅವನ ಪಕ್ಕೆಯನ್ನು ಚಿವುಟಿದ ಹಾಗೆನಿಸಿತು. ಆಕೆ ಸುಂದರಿ! ಅವಳೆಡೆ ಮುಖ ಹೊರಳಿಸಿ, "ಆಂ" ಎಂದ. ಸುಂದರಿ "ಏನೂ ಇಲ್ಲ" ಎಂದುಬಿಟ್ಟಳು. ಹಾಳು ಲಜ್ಜೆ ಅವಳ ಇಂಗಿತವನ್ನು ಹೊರಗೆಡಹಗೊಡಲಿಲ್ಲ.

ಅವಳಿಗೆ ತನ್ನ ಇನಿಯ ತನ್ನನ್ನು 'ರಾಧೇ' ಎಂದು ಕರೆಯುವುದು ಬೇಕಾಗಿತ್ತು. ಅತ್ತೆಯ ಮನೆಯ ಹೆಸರು ರಾಧೆ ಎಂದಾದರೆ ಎಷ್ಟು ಚೆನ್ನು! ತನ್ನ ಅತ್ಯಾ ಈಗ ಅತ್ತೆ

ಅಲ್ಲೇ ನಿಂತು ಚರ್ಚಿಸುತ್ತಿದ್ದಾಳೆ. 'ಮೊದಲೇ ಲಕ್ಷ್ಯಕ್ಕೆ ಬಂದಿದ್ದರೆ ಹೇಳಿಬಿಡಬಹುದಿತ್ತು' ಎಂದು ಹಳಹಳಿಸಿದಳು. ಇನ್ನೇನು? ಎಂದು ಆಕೆ ಯೋಚಿಸುವಾಗಲೇ ಪುರೋಹಿತರ ಗಡಿಬಿಡಿಯಿಂದಾಗಿ, ಬೇಗ ಹೆಸರು ಸೂಚಿತವಾಯ್ತು : ರುಕ್ಮಿಣಿ ಎಂದು!

ಹಿರಿಯರ ದೃಷ್ಟಿಯಲ್ಲಿ ರುಕ್ಮಿಣಿ ಸರಿ! ಅದು ನಾನಿಯ ಅಜ್ಜಿಯ ಹೆಸರು ಅಲ್ಲದೆ ರುಕುಮಾನಿ ಅವರ ಕುಲದೇವತೆ. ಆದರೆ ಎಂಥ ಅರಸಿಕ ಹೆಸರು! ರಾಧೆಯೆಲ್ಲಿ, ರುಕ್ಮಿಣಿಯೆಲ್ಲಿ? ಅದೂ ತನಗೆ ಅಣಕ ಮಾಡುವ ಹಾಗೆ ರುಕ್ಮಿಣಿಯೆಂದೇ ಇಡುವುದೆ?

ಅಂದೇ ರಾತ್ರಿ ಸುಂದರಿ ನಾನಿಯರನ್ನು ಕೋಣೆಯೊಳಕ್ಕೆ ದೂಡಿದಾಗ, ಸುಂದರಿ ಸಿಟ್ಟಿನ ಅಳುವನ್ನು ಅಳತೊಡಗಿದಳು. ಅಳುತ್ತಲೇ, "ನೀವ್ಯಾಕೆ ಸುಮ್ಮನಿದ್ದಿರಿ, 'ರುಕ್ಮಿಣಿ' ಎಂದು ಹೆಸರಿಡುವಾಗ ರಾಧಾ ಎಂದು ಕರೆದಿದ್ದರೆ ಏನಾಗುತ್ತಿತ್ತು?" ಎನ್ನುತ್ತ ಮಂಚದ ಮೂಲೆಗೆ ಕುಳಿತಳು.

ನಾರಾಯಣನಿಗೆ ಅರ್ಥವಾಗಲಿಲ್ಲ. ತನಗೆ ಕೃಷ್ಣ ಬಹಳ ಇಷ್ಟವೆಂಬ ಮಾತಿನ ಹಿನ್ನೆಲೆಯನ್ನು ಆಕೆ ಹೇಳಿಯಾದ ಮೇಲೆ ನಾನಿ 'ರುಕ್ಮಿಣಿ ಕೃಷ್ಣನ ಹೆಂಡತಿಯ ಹೆಸರೇ ಅಲ್ಲವೆ?' ಎಂದಾಗ, ಅವಳಿಗೆ ಮುನಿಸಿನ ಅಳು ಹೆಚ್ಚಾಯಿತು! ನಾನಿ ತನ್ನ ಸ್ವಭಾವಕ್ಕನುಸರಿಸಿ, ಶಾಂತಗೊಳಿಸಿ ಕೇಳಿದಾಗ, ಅವಳು ತನ್ನ ಅಳಲನ್ನೆಲ್ಲ ತೋಡಿಕೊಂಡಳು. 'ಇದೊಂದು ವಿಚಿತ್ರ ಹುಡುಗಿ!' ಎಂಬ ಕರುಣೆ ಅವನಲ್ಲಿ ಹುಟ್ಟಿ 'ನಾನು ನಿನ್ನನ್ನು ರಾಧಾ ಎಂದೇ ಕರೆಯುವೆ ಮುಂಬೈಯಲ್ಲಿ; ಆಯಿತೆ?' ಎಂದು ರಮಿಸಿದ.

ಸತ್ಯ ಸಂಗತಿಯೆಂದರೆ ಅವಳ ವಿಚಾರ ಸರಣಿ ಅವನಿಗೆ ತಿಳಿದಿತ್ತು. ಆದರೆ ಹೃದಯಕ್ಕೆ ತಾಗಿರಲಿಲ್ಲ. ಇತ್ತ ಸುಂದರಿಗೂ ಹೊಸ ಜೀವನವೇರ್ಪಟ್ಟು, ಮುಂಬಯಿಯಲ್ಲಿ ಸಂಸಾರ ಪ್ರಾರಂಭವಾದಾಗ, ಅವಳಿಗೆ ತನ್ನ ಗಂಡ ಮಾತುಕೊಟ್ಟಂತೆ 'ರಾಧಾ' ಎಂದು ಕರೆಯಲಿಲ್ಲವಲ್ಲ ಎಂದು ಎನಿಸಲಿಲ್ಲ. ಹೊಸ ಹೊಸ ಅನುಭವಗಳನ್ನು ಅರಗಿಸಿಕೊಂಡು ಶಾಂತ, ಸರಳ ಹಾಗೂ ಅಷ್ಟೇ ಗಟ್ಟಿ ಮನಸ್ಸಿನ ನಾನಿಯ ವಾತ್ಸಲ್ಯದ ಬೆಳಕಿನಲ್ಲಿ ಸುಂದರಿ ಹೆಜ್ಜೆ ಇಡುತ್ತಿದ್ದಳು. ಅವಳ ಕೃಷ್ಣ ಅಷ್ಟಾಗಿ ತೊಂದರೆ ಕೊಡಲಿಲ್ಲ ಅವಳಿಗೆ. ಈ ಮಧ್ಯೆ ಸುಂದರಿ ಊರಿಗೆ ಹೋಗಿ ಗೌರಿ ಹಬ್ಬ, ನಾಗರಪಂಚಮಿ ಮುಗಿಸಿಕೊಂಡು ಬಂದಳು.

ಯಾವಾಗ ನಾನಿಯ ತಮ್ಮ ಮೋಹನ ತನ್ನ ಅತ್ತಿಗೆಯ ಪ್ರಯಾಣದ ಜೊತೆಗಾರನೆಂದು ಬಂದವ, ಮುಂಬಯಿಯಲ್ಲೇ ಒಂದು ತಿಂಗಳು ಉಳಿದನೋ, ಸುಂದರಿ ನಾನಿಯರ ದಾಂಪತ್ಯದ ಉಬ್ಬರ ಇಳಿಯಿತೆನ್ನಬೇಕು. ಮನೆಯಲ್ಲಿ ಆಗಾಗ ರಗಳೆ ರಸಕಸಿ, ಒಂದೆರಡೇ ಮಾತುಗಳ ಚಕಮಕಿ ನಡೆಯತೊಡಗಿದವು. ಇವು ಆಗಾಗ ಬರುತ್ತಿದ್ದುವಷ್ಟೇ ಅಲ್ಲದೆ, ವಿನೋದ, ಸುಖ ತೃಪ್ತಿಗಳ ಗಳಿಗೆಗಳೇನೂ ಇರಲಿಲ್ಲವೆಂದಲ್ಲ. ಆದರೆ ಒಂದು ಹೂವು ಅರಳಿದುದನ್ನು ಕಂಡರೆ ಸಹ ತುಂಬ ಮನ ಸಂತಸಪಡುವ ಸುಂದರಿಯ ಸ್ವಭಾವ, ಅದೇ ಹೂವು ಬಾಡಿದರೆ ಅದರೊಟ್ಟಿಗೆ ಅವಳ ಮನವೂ ಬಾಡುವಂತಹದಾಗಿತ್ತು.

ಆ ಸಂಜೆ ಅಕೆ ಅಡಿಗೆಯ ಕೆಲಸದಲ್ಲದ್ದಳು. ನಾನಿ ಮನೆಗೆ ಬರುವಾಗ ಒಂದು ಕಟ್ಟು ಹಾಕಿದ ಫೋಟೋವನ್ನು ತಂದ. ಅಡಿಗೆಯಿಂದ ಬಿಡುವು ಮಾಡಿಕೊಂಡು ಗಂಡನ ನಿತ್ಯ ಸ್ವಾಗತಕ್ಕೆ ಸುಂದರಿ ಹತ್ತಿರ ಬಂದಾಗ, ನೋಡುತ್ತಾಳೆ : ಕೃಷ್ಣನ ಫೋಟೋವನ್ನು ತಂದಿದ್ದನಾತ! ಆದರೆ ಅದರ ಮೊಳೆಗಳನ್ನು ಬಿಚ್ಚಿ ಕನ್ನಡಿಯಿಂದ ಆ ಚಿತ್ರವನ್ನು ಬೇರ್ಪಡಿಸುವುದರಲ್ಲಿದ್ದ!

ಬಹಳ ದಿನಗಳವರೆಗೆ ಹೊರಟುಹೋಗಿದ್ದ ಪ್ರಿಯತಮ ಮುರಳಿ ಬಂದಾಗ ಉಂಟಾಗುವ ಒಂದು ಬಗೆಯ ರೋಮಾಂಚನ ಅವಳಲ್ಲಿ ಉಂಟಾಯಿತು. ಕಳೆದುಹೋಗಿದ್ದ ಪ್ರೀತಿಯ ವಸ್ತುವೊಂದು ಮರಳಿ ದೊರಕಿದಂತಾಯಿತು. ಈವರೆಗೆ ಎಲ್ಲಿ ಹೋಗಿದ್ದ ಆ ಕೃಷ್ಣ?

ಯುವಕ ಗೋಪಾಲನ ಚಿತ್ರವದು. ನಿಸರ್ಗದ ರಮ್ಯ ಹಿನ್ನೆಲೆಯಲ್ಲಿ ಈ ಗೋಪಾಲ ಗಿಡದಡಿಯ ಕಲ್ಲಿನ ಮೇಲೆ ಕುಳಿತಿದ್ದಾನೆ. ತೀರ ಚಿಕ್ಕವನಲ್ಲ ಈತ; ಸ್ವಲ್ಪ ಎತ್ತರನಾಗಿದ್ದಾನೆ. ಆದರೂ ಅದೇ ಸುಂದರ ನಗೆ. ಬಲಗೈಯಲ್ಲಿ ಕೊಳಲು; ಎಡಗೈಯಿಂದ ಬಳಿಯಲ್ಲಿ ನಿಂತಿದ್ದ ಬಿಳಿಯ ಹಸುವಿನ ಮೈ ಮೇಲೆ ಕೈಯಾಡಿಸುತ್ತಿದ್ದಾನೆ. ಕುಡಿಗಣ್ಣಿನ ಒಂದು ಎಳೆ, ಆ ಹಸುವಿನ ಮೇಲಿದ್ದ 'ನಿನಗೆ ಕೊಳಲೂದಲಿ?' ಎಂದು ಕೇಳುವ ಹಾಗಿದೆ. ಆದರೆ ಇನ್ನೊಂದು ನೋಟದಿಂದ 'ಅಕೋ ಬೇಡ. ಅಲ್ಲಿ ಸುಂದರಿ ನಿಂತಿದ್ದಾಳೆ. ಇಷ್ಟು ದಿನ ಅವಳು ನನ್ನನ್ನು ತನ್ನ ಮನದಿಂದ ಹೊರಗೆ ಹಾಕಿದ್ದಳು. ಅವಳು ಹೋಗಲಿ!' ಎಂದು ಹೇಳುತ್ತಿದ್ದಾನೆ!

ಮಾತಿಲ್ಲ ಕತೆಯಿಲ್ಲದೆ, ಚಿತ್ರವನ್ನು ಎದೆಗಚಿಕೊಂಡು ಒಳಗೆ ಹೋಗಿಬಿಟ್ಟ ಹೆಂಡತಿಯನ್ನು ನೋಡಿ, ಅವನಿಗೆ ಸಿಟ್ಟೇ ಬಂತು. ಆ ಕಟ್ಟಿನಲ್ಲಿ ತಮ್ಮಿಬ್ಬರ ಜೋಡು ಚಿತ್ರವನ್ನು ಹಾಕಿ, ನಾಳೆ ಊರಿಗೆ ಹೊರಡಲಿರುವ ಮೋಹನನೊಟ್ಟಿಗೆ ಕಳಿಸಬೇಕೆಂದುಕೊಂಡಿದ್ದ ಅವನಿಗೆ, ಇದು ಹೆಂಡತಿಯ ಹುಡುಗತನದ ವಿಚಿತ್ರ ನಡತೆಗಳಲ್ಲಿ ಒಂದು ಎನಿಸಿ, "ಅದನ್ನೇನು ಮಾಡತಿಯೆ ತಗೊಂಡು?" ಎಂದು ಕಸಿದುಕೊಳ್ಳಲು ಬಂದ.

"ಈ ಫೋಟೋ ನನಗೆ ಬೇಕು. ಅದನ್ನ ತಗೀಬ್ಯಾಡ್ರಿ."

"ನಿನಗೆ ಬೇಕಾದರೆ ಬೇರೆ ತಂದು ಕೊಡತೀನಂತ; ಸುಮ್ಮನೆ ಕೊಡಬಾರದೆ?"

"ಇಲ್ಲ, ನನಗೆ ಈ ಕೃಷ್ಣನದೇ ಬೇಕಾಗೇದ."

"ಚಲೋ ಆತು. ಅದನ್ನೇ ತರತಽದಂತ, ಈಗಂತೂ ಕೊಡು."

ಅವಳು ಹೆಚ್ಚು ವಿರೋಧವನ್ನು ಮಾಡಲಿಲ್ಲ; ಕೊಟ್ಟು ಬಿಟ್ಟಳು. ಸುಮ್ಮನೆ ಅಡಿಗೆಗೆ ಮತ್ತೆ ಅಣಿಯಾದಳು. ಅಸಹಾಯತೆಯು ಕೆಂಡದ ಮೇಲಿನ ಜ್ವಾಲೆಗಳಂತೆ ಅವಳ ಮನಸ್ಸನ್ನು ಹರಿದು ತಿನ್ನುತ್ತಿತ್ತು. ಅದನ್ನು ಸಹಿಸಲಾಗದೆ ಕಣ್ಣು ಅಳುತ್ತಿದ್ದವು.

ನಾನಿ ತನ್ನ ಕೆಲಸ ಮುಗಿಸುವಾಗ ಲಕ್ಷ್ಯಕ್ಕೆ ಬಂತು ಹೆಂಡತಿಯ ಕೃಷ್ಣನ ಮೇಲಿನ ಮೋಹ, ರಾಧೆಯೆಂದು ಕರೆಯಿಸಿಕೊಳ್ಳುವ ಅವಳ ಇಷ್ಟ ಅದೆಲ್ಲ. ಆಕೆ ಬಹಳ ನೊಂದುಕೊಂಡಳೇನೋ ಎಂದು ಯೋಚಿಸುತ್ತ ಒಳಗೆ ಬಂದ. ಹೆಂಡತಿಯ ಮುಖ ತುಂಬ ಊದಿಕೊಂಡಿದೆ. ಅವಳನ್ನು ಬಳಿ ಸೆಳೆದು, "ಬಹಳ ಸಿಟ್ಟು ಬಂತೆ?" ಎಂದ. ನಗಲೆಂದೆ ಯತ್ನಿಸಿ ಅಳುತ್ತಲೇ "ನೀವು ಹಿಂಗ್ಯಾಕ ಹಟ ಮಾಡತೀರಿ?" ಎಂದು ಕೇಳಿದಳು, ಆಕೆ.

ಒಪ್ಪಂದವಾಯಿತು. ರಾತ್ರಿ ಅವಳ ಸಮಕ್ಷಮವೇ ಮತ್ತೆ ಅದರಲ್ಲಿ ಕೃಷ್ಣನನ್ನು ಪ್ರತಿಷ್ಠಾಪಿಸಿದಾಗ, ಸುಂದರಿ ಅವನ ಕೊರಳನ್ನು ತಬ್ಬಿಕೊಂಡು 'ನೀವೆಷ್ಟು ಒಳ್ಳೆಯವರು!' ಎಂದಳು. ತಿರುಗಿ ೧೨ ಘಂಟೆಯವರೆಗೂ ಅವಳು ತನ್ನ ಕೃಷ್ಣನ ಕನವರಿಕೆಯನ್ನೆಲ್ಲ ಪುನಃ ತೋಡಿಕೊಂಡಳು. ದಯವಿಟ್ಟು ಈ ವಿಷಯದಲ್ಲಿ ತನಗೆ ಸ್ವಾತಂತ್ರ್ಯಕೊಡಬೇಕೆಂದು ಕೇಳಿದಳು. ನಾನಿ, ಸಹಾನುಭೂತಿ ಯಿಂದ ಅಲ್ಲ, ಮರುಕದಿಮದ ಅವಳ ಮಾತನ್ನೆಲ್ಲ ಆಲಿಸಿದ. ಅವಳ ಕೇಳಿಕೆಗೆ 'ಹೂಂ' ಎಂದ.

ಸುಂದರಿಯಲ್ಲಿ ಈಗ ಅಂದೆಂಥ ಹೊಸ ಚೈತನ್ಯ! ಬೆಳಿಗ್ಗೆ ೯ ಗಂಟೆಗೆ ನಾನಿ ಕಚೇರಿಗೆ ಹೋದನಂದರೆ ಸಂಜೆ ೬ರವರೆಗೆ ಅವಳು ಏಕಾಕಿನಿಯಾಗಿರಬೇಕಾದ ಅಗತ್ಯವಿರಲಿಲ್ಲ. ಜೊತೆಗೆ ಕೃಷ್ಣನಿದ್ದ. ರಾಧೆಗೆ ಗಂಡನಿದ್ದ ಹಾಗೆ ತನಗೂ ಒಬ್ಬ ಗಂಡನಿರುವ. ತನ್ನನ್ನು ಪ್ರೀತಿಸುವ; ತಾನು ಅವನನ್ನು ಪ್ರೀತಿಸುತ್ತಿದ್ದಾಳೆ. ಆದರೆ ತನ್ನ ಜೀವನ ಸರ್ವಸ್ವವೆಲ್ಲ ಕೃಷ್ಣನಿಗೇ ಮೀಸಲು, ಅವನೇ ತನ್ನ ನಿಜಸ್ವಾಮಿಯೆನ್ನುವ ಹಾಗಿತ್ತು ಅವಳ ಭಾವನೆ.

ಊಟ ಕೆಲಸ ಮುಗಿಸಿಕೊಂಡು ಬಂದು, ಗೋಡೆಗೆ ತೂಗುಹಾಕಿದ್ದ ಚಿತ್ರವನ್ನೂ ಎರಡೂ ಕಣ್ಣು ಸಾಲದಂತೆ ನೋಡುವಳು. ಎಂಥೆಂಥದೋ ಕಲ್ಪನೆಗಳನ್ನು ಹೆಣೆಯುವಳು. ಅವನ ಪ್ರೀತ್ಯರ್ಥವಾಗಿ ಹಾಡಲು ಹೋಗುವಳು. ಅವಳಿಗೆ ಶಾರೀರವೇ ಇಲ್ಲ! 'ನೀ ಹಾಡುವವರೆಗೆ ನಾ ಕೊಳಲು ಬಾರಿಸುವುಲ್ಲ ಎಂದು ಹಟ ಹಿಡಿದಿಯಾ?' ಎಂದು ಮುನಿಸುಗೊಳ್ಳುವಳು. ಅವಳ ಈ ಸರಸ ದಿನಕೊಂದು ಛಂದವಾಗಿ, ಗಳಿಗೆಗೊಂದು ಬಗೆಯಾಗಿ ಹರಿಯುತ್ತಿತ್ತು.

ಇದೆಲ್ಲ ಸರಿ. ರಾಧೆಗೆ ಕೃಷ್ಣನ ನಿಜರೂಪ ಬಳಿಯಲ್ಲಿತ್ತು. ತನಗೋ, ಈ ಚಿತ್ರ. ಇಲ್ಲಿ ಅಸ್ತಿತ್ವದ ಒಂದಂಶವೂ ಇಲ್ಲ! ಎಲ್ಲವೂ ಇವಳ ಊಹನೆಯಿಂದೆ ಪೂರ್ಣವಾಗಬೇಕು. ಈ ಊಹನೆ ಅತಿಯಾಗಿ, ತೃಪ್ತಿಯನ್ನು ಕಾಣಹೋದರೆ ಅಲ್ಲೇನಿದೆ, ಬರಿದೊ, ಬರಿದು!. ಅಂಥ ಪ್ರತಿ ಗಳಿಗೆಯಲ್ಲೂ ನಾನಿಯು ಥಟ್ಟನೆ ಅವಳ ಕಣ್ಣೆನ ಮುಂದೆ ಬರುವ.

'ಅಯ್ಯೋ, ನನ್ನ ಇವರಲ್ಲಿ ಸ್ವಲ್ಪವಾದರೂ ಈ ಅಂಶವಿರಕೂಡದೇ' ಎಂದು ಅಳುವಳು. 'ಅವರನ್ನು ಕೃಷ್ಣನನ್ನಾಗಿ ಪರಿವರ್ತಿಸಬೇಕೆಂದಿದ್ದೆ. ಸಾಧ್ಯವಿಲ್ಲ' ಎಂದು ಈ ೫-೬ ತಿಂಗಳ ಅನುಭವ ಸಾರಿ ಹೇಳುತ್ತಿತ್ತು.

ಒಂದು ಶನಿವಾರ ಮಧ್ಯಾಹ್ನ ಹೆಂಡತಿ ಮಲಗಿರಬಹುದೇನೋ ಎಂದು ನಾನಿ ಮೊದಲು ಕಿಡಿಕಿಯಲ್ಲಿ ಹಣಿಕಿ ಹಾಕಿದ. ಆದರೆ ವಿಚಿತ್ರವೊಂದನ್ನು ಕಂಡ: ಆರಾಮ ಕುರ್ಚಿಯ ಮೇಲೆ ಒರಗಿ, ಕೈಯಲ್ಲಿ ಆ ಚಿತ್ರವನ್ನು ಹಿಡಿದುಕೊಂಡು ಸುಂದರಿ ಅದಕ್ಕೆ ಮುತ್ತಿಡುತ್ತಿದ್ದಳು!

ಆದರೆ ತುಸು ವೇಳೆಯ ನಂತರ ಬೆಲ್ ಬಾರಿಸಿದ ನಾನಿಗೆ ಬಾಗಿಲು ತೆರೆದು ಅವಳು ಅವನಿಗೆ ನಗುಮೊಗದ ಸ್ವಾಗತ ನೀಡಿದಳು.

"ಈವತ್ತು ಮಧ್ಯಾಹ್ನ ನಿಮ್ಮ ಫಲಾಹಾರಕ್ಕೆ ಏನು ಮಾಡಿರಬಹುದು, ಹೇಳಿ?" ಎಂದು ಕೇಳಿದಳು. ಬಾಳೆ ಹಣ್ಣಿನ ಹಲ್ವಾ, ಹಿಂದಿನ ಸಲದಂತೆ ಕೆಟ್ಟಿಲ್ಲ; ರುಚಿಕರವಾಗಿದೆ ಎಂಬ ಹೆಮ್ಮೆ ಅವಳಿಗೆ. ಜೊತೆಗೆ ಅವನ ಪ್ರೀತಿಯ ಉಪ್ಪಿಟ್ಟನ್ನೂ ಮಾಡಿದ್ದಳು. ಎಲ್ಲವೂ ಎಂದಿನಂತೆಯೇ ಹೊಸತೇನಿಲ್ಲ ಅವಳ ನಡತೆಯಲ್ಲಿ!

ಆದರೆ ನಾನಿಯ ಮನಸ್ಸು ಬೇರೆ ವಿಚಾರದಲ್ಲಿ ಸುತ್ತುತಲಿತ್ತು. ನಾನಾಗಿ ಕೇಳದ ಹೊರತು ಆಕೆ ತನಗೆ ಮುದ್ದು ಕೊಟ್ಟವಳಲ್ಲ, ಅಂಥದು ಈವತ್ತು ಮಧ್ಯಾಹ್ನ ಏನನ್ನು ತಾನು ಕಂಡದ್ದು?

ರಾತ್ರಿ ಊಟವಾದ ಮೇಲೆ, ನಾನಿ ತಾನು ಕಂಡುದನ್ನೂ ತನಗನಿಸಿದನ್ನೂ ಅವಳಿಗೆ ಹೇಳಿದ. ಈ ಹೃದಯ ಸರಳತೆಯೇ ಅಲ್ಲವೆ, ಅವಳನ್ನು ಅವನೆಡೆ ಸೆಳೆದದ್ದು? ಸುಂದರಿ ಒಂದೇ ಪ್ರಶ್ನೆ ಕೇಳಿದಳು :

"ನಿಮ್ಮನ್ನು ನಾನು ಪ್ರೀತಿಸುವುದಿಲ್ಲವೆಂದು ನಿಮಗನಿಸುವುದೇನು?"

ಎಂಥ ಮಾತು! ಅವಳ ಹೃದಯದಲ್ಲಿ ಅವನ ಬಗ್ಗೆ ಇರುವ ಪ್ರೀತಿಯ ಆಳ ಎಂಥದು ಎಂದು ಅವನು ಅರಿತಿಲ್ಲವೆ?

"ನೀವು ನನಗೆ ಯಜಮಾನರು! ನನ್ನಿಂದ ಆದರ ಪಡೆಯಬಲ್ಲವರು! ನಾನಾಗಿ ನಿಮಗೆ ಕೊಡಲು ಇನ್ನೂ ನಾಚಿಕೆ ಬರುತ್ತದೆ. ಕೃಷ್ಣನಾದರೆ, ಬಾಲ್ಯದಿಂದಲೂ ಅವನೊಟ್ಟಿಗೆ ನಾನು ಆಟವಾಡಿದ್ದೇನೆ. ನನ್ನೊಟ್ಟಿಗೆಯೇ ಅವನೂ ಬೆಳೆದಿದ್ದಾನೆ. ನನಗೆ ಸಂಕೋಚವೆಲ್ಲಿಯದು?"

ಮತ್ತೆ ಆಕೆ ಉದ್ವೇಗವಿನಿತೂ ಇಲ್ಲದೆ ತನ್ನ ಮಧ್ಯಾಹ್ನದ ದಿನಚರಿ ಒಪ್ಪಿಸಿದಳು :

"ನಿಮ್ಮನ್ನೇ ಪರಿವರ್ತಿಸಬೇಕೆಂದಿದ್ದೆ. ನಿಮ್ಮಲ್ಲಿ ಕೃಷ್ಣನನ್ನು ಕಾಣಬೇಕೆಂದಿದ್ದೆ. ಅದು ಸಾಧ್ಯವಾಗಲಿಲ್ಲ. ನನಗೆ ಅದರಿಂದ ದುಃಖವೇನೂ ಇಲ್ಲ. ನನ್ನ ವಿಚಿತ್ರ ಹಂಬಲವನ್ನು ಹೇಗಾದರೂ ನೀಗಿಸಬೇಕೆಂದರೆ, ಇದು ನಿರ್ಜೀವ ಫೋಟೋ ಎಂದು ಈಗೀಗ ಬಹಳ ಕಸಿವಿಸಿಯಾಗುತ್ತಲಿದೆ" ಎಂದು ಹೇಳುವಾಗ, ಅವಳ ಗಂಟಲು ತುಂಬಿ ಬಂದಿತ್ತು. ದೇವಲೋಕದ ಅಪ್ಸರೆಯೋರ್ವಳು ಯಾವುದೋ ಪೂರ್ವ ಶಾಪದಿಂದ ಭೂಮಿಯಲ್ಲಿ ಮರ್ತ್ಯಳಾಗಿ ಜನಿಸಿದಾಗ ಆಗುವ ಅವಳ ತೊಳಲಾಟದಂತೆ ಕಂಡಿತಿದು, ನಾನಿಗೆ.

"ಏನಿಲ್ಲ, ಇದಕ್ಕೆ ಒಂದೇ ಒಂದು ದಾರಿ. ನಿನಗೊಂದು ಮುತ್ತಿನಂತಹ ಮಗು ಹುಟ್ಟಬೇಕು" ಎಂದ ನಾನಿ.

ಹಾಂ. ಹೌದು! ಬಹಳ ಸರಿಯಾದ ಮಾತು. ಕಣ್ಣು ಕಟ್ಟಿ ಮಗುವೊಂದನ್ನು ಅತ್ತಿತ್ತ ಅಲೆದಾಡಿಸಿ, 'ಎಲ್ಲಿದ್ದೀದಿ? ಎಲ್ಲಿದ್ದೀದಿ?' ಎಂದು ಮಗು ಹಿರಿಯರನ್ನು ಕೇಳುವಾಗ "ನಾ ಇಲ್ಲೇ ಇದ್ದೀನಿ" ಎಂದು ಅವನ ಬದಿಗೆ ನಿಂತು ಹೇಳಿವರೆ ಅದಕ್ಕೆಷ್ಟು ಸಂತಸವಾಗಬೇಡ!ನಾನಿಯ ಆ ಮಾತಿನಿಂದ ಸುಂದರಿ ಅಷ್ಟೇ ಹಿಗ್ಗಿದಳು. ಆದರೆ, 'ಏನಾದರೂ ತನ್ನಲ್ಲಿ ಅದು ಸಾಧ್ಯವಿಲ್ಲ' ಎಂಬ ಮಾತನ್ನು ಪರ್ಯಾಯವಾಗಿ ಅವರು ಸ್ಥಿರೀಕರಿಸಿದರಲ್ಲ ಎಂದುಕೊಂಡಳು.

"ಕೃಷ್ಣನನ್ನು ಇಷ್ಟು ಧೇನಿಸುತ್ತೀ, ಅವನಂತಹನೇ ನಿನಗೆ ಹುಟ್ಟಿಬಂದಾನು" ಎಂದ ನಾನಿ.

"ಹೌದು. ಅವತ್ತು ಮೊದಲ ಸಲ ನಿಮ್ಮ ಬಳಿ ಬರುವಾಗ, ಅವ್ವ ಹೇಳಿದ್ದಳು : ದೇವರನ್ನು ನೆನೆಸುತ್ತಿರು ಎಂದು. ಮತ್ತೆ... ನಾನೊಂದು ರಾತ್ರಿಯೂ ನನ್ನ ಕೃಷ್ಣನನ್ನು ನೆನೆಸಿಕೊಳ್ಳದೇ ನಿಮ್ಮ ಬಳಿ ಮಲಗಿಲ್ಲ!"

"ಎಲಾ ಕಳ್ಳ ಹುಡುಗೀ! 'ನನಗೆ ಇಷ್ಟು ಬೇಗ ಮಕ್ಕಳಾಗುವದಿಲ್ಲ, ನನಗೆ ಬೇಡವೇ ಬೇಡ' ಎನ್ನುತ್ತಿದ್ದಿಯಲ್ಲ! ಅಂತೂ ಒಳಗೊಳಗೇ ಖಾತ್ರಿ ಹಿಡಿದಿದ್ದೆಯನ್ನು! ಕೊಡುವ ದೇವರು ಛಕ್ಕನೇ ಮಗುವನ್ನು ಕೊಟ್ಟುಬಿಟ್ಟರೆ, ಎಂದೇನು!"

ಅವನ ನಗೆಯಾಟದಲ್ಲೇ ಅರ್ಥ ಬೆರೆತು ಸುಂದರಿ ಹೇಳಿದಳು :

"ನನ್ನ ಹೊಟ್ಟೆಯಲ್ಲಿ ಕೃಷ್ಣನೇ ಬಂದಾನೆಂಬ ನಂಬಿಕೆ ಇದೆ. ಆದರೆ ಆತ ಅವತಾರ ತಾಳಲು ಇನ್ನೂ ಕಲಿಯುಗದ ಪಾಪ ತುಂಬಿಲ್ಲ!"

"ಅದು ಹೇಗೆ?"

"ನಿಮ್ಮಂಥ ಸದ್ಗುಣಿಗಳು ಇನ್ನೂ ಇದ್ದೀರಲ್ಲ!"

ಇದಾಗಿ ಐದಾರು ತಿಂಗಳ ನಂತರ ನಾನಿಯ ತಾಯಿ ಬರೆಸಿದ ಒಂದು ಪತ್ರ ಬಂತು : "ಕು.ಸೌ. ರುಕ್ಮಿಣಿಯ ಪ್ರಕೃತಿಯ ವಿಚಾರ ಹೆಚ್ಚಿಗೇನೂ ತಿಳಿದಿಲ್ಲ. ನಾಚಿಕೆಯಿಂದಲೋ ಏನೋ ನೀನೇನೂ ಅವಳ ಬಗ್ಗೆ ಬರೆದಿಲ್ಲ. ಆದರೆ ನಿನ್ನ ಅತ್ತೆಯ ಮನೆಯವರಿಂದ ಸುದ್ದಿ ಬಂತು. ಸೀಮಂತ ಜಲದೇವರು ಅಂತ ಮಾಡುವುದಿರುತ್ತದೆ. ಕೂಡಲೇ ಕರೆದುಕೊಂಡು ಬಾ" ಎಂದು. ಪತ್ರವನ್ನು ಓದಿಕೊಂಡು ಇಬ್ಬರೂ ನಕ್ಕರು.

ಸುಂದರಿ ಈಗ ಗರ್ಭವತಿ. ಮುದ್ದು ಮುರಲಿಯೇ ಒಳಗಿದ್ದಾನೆ; ಕೊನೆಯ ಪಕ್ಷ ಅವನ ಅಂಶವಾದರೂ ಇದೆ ಎಂದುಕೊಳ್ಳುವಳು. ಅವನು ಹುಟ್ಟಿ ಬಂದ ಮೇಲೆ, ಅವನಿಗೆ

ಏನೇನು ಉಪಚಾರ ಮಾಡಬೇಕು ಎಂದು, ಏನೇನೋ ಹೆಣೆಯುವುದರ ಜೊತೆಗೆ ಇದನ್ನೂ ಹೆಣೆಯುತ್ತಿದ್ದಳು. ಅಖಂಡ ಹತ್ತು ವರ್ಷದ ತಪಸ್ಸು ಸಿದ್ಧಿಯನ್ನು ಕೊಡಲಿದೆಯೆಂಬ ತೃಪ್ತಿ ಅವಳಿಗೆ.

ಗರ್ಭಲಾಂಛನದಿಂದ ಅವಳ ಮಾಟನ್ನ ಮೈಕಟ್ಟಿಗೆ ಇನ್ನಷ್ಟು ಕಳೆ ತುಂಬಿ ಬಂದಿತು. ಹಳದಿಗೆಂಪಿನ ವರ್ಣದಿಂದ ಕೂಡಿದ ಶುಭಲಕ್ಷ್ಮಿಯಂತೆ ಮಗಳು ಮನೆಗೆ ಬಂದಾಗ, ತಂದೆತಾಯಿಯರ ಕಣ್ಣಲ್ಲಿ ಸಂತೋಷವು ಅಳುವನ್ನು ತರಿಸಿತ್ತು. ನಾನಿಯ ಮನೆಯಲ್ಲಿ ಅವನ ತಂಗಿಯೋರ್ವಳು ಬಾಣಂತಿತನಕ್ಕೆ ಬಂದುದರಿಂದ ಸುಂದರಿಯ ಅತ್ಯಾನೂ ಅಲ್ಲಿಗೇ ಬಂದಿದ್ದಳು.

ವಾರಕ್ಕಿಂತ ಹೆಚ್ಚು ರಜೆಯಿಲ್ಲದೆ ನಾನಿ ಹೊರಡುವನೆನ್ನುವಾಗಿನ ರಾತ್ರಿ, ಆತ ಹೆಂಗರುಳಿನ ಪ್ರತೀಕವಾಗಿದ್ದ. "ಹಾಗೆಲ್ಲ ಮುಖ ಸಣ್ಣದು ಮಾಡಬೇಡಿ. ನಿಮ್ಮನ್ನು ಅಗಲುವ ದುಃಖ ನನ್ನಲ್ಲಿ ಹೆಚ್ಚಿದ್ದರೂ ನಾನೀಗ ತಡೆದುಕೊಂಡಿಲ್ಲವೆ? ನನ್ನ ಹಾಗೆ ನೀವೂ ಕೃಷ್ಣನನ್ನು ನಂಬಿದ್ದರೆ ವಿರಹ ಇಷ್ಟೆನಿಸುತ್ತಿರಲಿಲ್ಲ. ಚಿಂತೆಯಿಲ್ಲ, ನಿಮ್ಮ ವಂಶವನ್ನೇ ಬೆಳಗುವ ಮಗುವನ್ನು ತಂದು ನಿಮಗೊಪ್ಪಿಸುತ್ತೇನೆ" ಎಂದಳು.

"ಇದೆಲ್ಲ ಸರಿ. ನಿನಗೆ ಹೆಣ್ಣು ಹುಟ್ಟಿದರೆ?"

"ಹೆಣ್ಣು ಹುಟ್ಟಿದರೆ! ಛೆ, ಅದೆಂದಿಗೂ ಇಲ್ಲ. ಅಲ್ಲಿಂದ, ಹಡೆದ ತಪ್ಪಿಗೆ ನಿಮ್ಮ ವಸ್ತುವನ್ನು ನಿಮಗೊಪ್ಪಿಸಿ ಪ್ರಾಣ ಬಿಡುತ್ತೇನೆ!"

'ಭಾವನಾವೇಶಕ್ಕೂ ಒಮ್ಮೊಮ್ಮೆ ಬೆಲೆ ಕೊಡಬೇಕಾಗುತ್ತದೆ' ಎಂದುಕೊಂಡ ನಾನಿ.

ಗಾಡಿಯವರೆಗೂ ಅವನನ್ನು ಬಿಟ್ಟು ಮನೆಗೆ ಬಂದು, ಕೋಣೆಯಲ್ಲಿ ದಿಂಬಿಗೊರಗಿ ಅತ್ತಳು ಆಕೆ. ತುಸು ಹೊತ್ತಿನ ಮೇಲೆ ಧೈರ್ಯ ತಂದುಕೊಂಡಳು. 'ಅವರು ಊರಿಗೆ ಹೋದರೆಂದು, ನಾನೇಕೆ ದುಃಖಪಡಲಿ? ಸ್ವತಃ ಕೃಷ್ಣನೇ ನನ್ನವನೆಂದು ಬಳಿ ಇರುವಾಗ ನನಗಿನ್ನು ಯಾರ ಹಂಗು ಇದೆ?' ಎಂದು ಹೆಮ್ಮೆಯನ್ನು ತಂದುಕೊಳ್ಳಲು ಯತ್ನಿಸಿದಳು.

ಆದರೆ ರಾತ್ರಿ ನಡುವೆ ಭಯದಿಂದ ಝುಕ್ಕನೆ ಎದ್ದು ಕುಳಿತಳು. ಭಯಂಕರವಾದ ಕನಸು! ಎದೆ ಇನ್ನೂ ಧಕ್ ಧಕ್ ಎನ್ನುತ್ತಿತ್ತು. ಕನಸನ್ನು ಜ್ಞಾಪಿಸಿಕೊಳ್ಳಬಾರದೆಂದರೂ ಅದು ನೆನಪಿಗೆ ಬರುತ್ತಿತ್ತು. ಸುಂದರಿಗೆ ತಾನು ಕಬ್ಬಿಣದ ಸಲಾಕಿಗಳಿರುವ ಯಾವುದೊ ಕೋಣೆಯಲ್ಲಿದ್ದ ಹಾಗೆ ಅನಿಸಿಕೆ. ಅದೇ ಹುಟ್ಟಿದ ತನ್ನ ಮಗುವನ್ನು 'ಹೇಗಿದೆ, ನೋಡುವಾ' ಎಂದು ಕೈಗೆತ್ತಿಕೊಳ್ಳುವಾಗ, ಯಾರೋ ಕಸಿದುಕೊಂಡರು! ಮುಖ ಯಾರದೆಂದು ತಿಳಿಯದು. ಆದರೆ ಕರಾಳವಾದುದು. ಪೊಲೀಸರ ಕಾಲಿಗಿರುವಂತಹ ಪಟ್ಟಿಗಳುಳ್ಳ ಕಾಲು ಮಾತ್ರ ಕಾಣುತ್ತಿವೆ. ಆಕೆ ಅಳುತ್ತಿದ್ದಾಳೆ. ಅವಳ ತಾಯಿ "ಅದು ಹೆಣ್ಣು ಕೂಸೋ! ಕೊಲ್ಲಬೇಡಪ್ಪಾ" ಎಂದು ಹಲುಬುತ್ತಿದ್ದಾಳೆ. ಕೂಸು ಅವನ ಕೈಯಿಂದ ನುಣುಚಿಕೊಳ್ಳಲು ಯತ್ನಿಸುತ್ತದೆ! ಕಂಸನ ಕೈಯಿಂದ ದುರ್ಗೆ ಪಾರಾಗುವಂತೆ!...

ಆಗ ಸುಂದರಿಗೆ ಎಚ್ಚರವಾಗಿದ್ದಿತು. ಆ ಹೆಣ್ಣು ಕೂಸು ನುಣುಚಿಕೊಳ್ಳುವ ದೃಶ್ಯ ಅವಳ ಮನಸ್ಸಿಗೆ ಉಲ್ಬಣವನ್ನು ಹೆಚ್ಚಿಸಿ ಕನಸಿನಿಂದ ಎಚ್ಚರಗೊಳಿಸಿತು. ಈ ಭಯದ ಜೊತೆಗೆ ಇನ್ನೊಂದು ಭಯ 'ತನಗೆ ಹೆಣ್ಣು ಹುಟ್ಟಿದರೆ?'

ಅದರಿಂದ ತನಗೆ ಎಂತಹ ಅಪಮಾನ! ಅದೂ ನನ್ನಂತೆಯೇ ಮುಂದೆ ತೊಳಲಾಡಬೇಕೇನು? ಛೀ, ನನ್ನ ಕೃಷ್ಣ ಅಷ್ಟು ದಯಾಹೀನನಲ್ಲ. ನನ್ನ ತಪಸ್ಸು ಕಡಮೆ ಇರಬಹುದು. ಆದರೆ ವ್ಯತಿರಿಕ್ತ ಫಲವನ್ನು ಕೊಡುವಷ್ಟು ತಾನು ಯಾರಿಗೆ ಕೆಟ್ಟದು ಮಾಡಿದ್ದೇನೆ? "ದೇವರೇ, ನನ್ನನ್ನು ಹೀಗೆ ಕೊಲ್ಲಬೇಡ" ಎಂದು ಅತ್ತಳು. ಗೋಡೆಗೆ ತೂಗುಹಾಕಿದ್ದ ಕೃಷ್ಣನನ್ನು ಹಲು ಹಲುಬಿ ಕೇಳಿಕೊಂಡಳು. ಆದರೂ ಹೆಣ್ಣು ಹುಟ್ಟಿದರೆ? ಎಂಬ ದುಗುಡ ಪ್ರಶ್ನಾಕಾರದಲ್ಲಿ, ಕೊನೆಯ ದಿನದ ವರೆಗೂ ಕಾಡುತ್ತಿತ್ತು.

ಅದೇ ಕೋಣೆ, ಅದೇ ಜಾಗದಲ್ಲೇ ಕೃಷ್ಣ. ಅದೇ ಚಿಂತೆಯಲ್ಲೇ ಸುಂದರಿ ಒಂಬತ್ತನೆಯ ತಿಂಗಳಲ್ಲಿ ಬೇನೆಯನ್ನು ಎದುರಿಸಲು ಸಿದ್ಧಳಾದಳು. ನಾಲ್ಕು ತಾಸಾಯಿತು, ಐದಾಯಿತು. ಬೆಳಗಾಗುತ್ತ ಬಂತು. ಮನೆಯವರ ವ್ಯಾಕುಲ ಹೆಚ್ಚಿತು. 'ಹೆರಿಗೆ ಇಷ್ಟು ತ್ರಾಸವಾಗುತ್ತಿದೆ. ಕೃಷ್ಣನೇ ಬರುವನೆ?' ಎಂದುಕೊಳ್ಳುವಳು, ಸುಂದರಿ. "ಛೇ, ಇಲ್ಲ. ಹಾಗಿದ್ದರೆ ಬೇಗ ಇದರಿಂದ ಮುಕ್ತಳಾಗಿಬಿಡುತ್ತಿದ್ದೆ" ಎಂದು ಮತ್ತೆ ನೋವಿನಿಂದ ನರಳುವಳು.

ಆದರೆ ಮಗುವಿನ ಮೊದಲ ದನಿ ಕೇಳುವಾಗ ಅವಳಿಗೆ ಎಚ್ಚರವಿರಲಿಲ್ಲ. ಅತಿಸ್ರಾವದಿಂದ ಅವಳಿಗೆ 'ಕೋಮಾ' ಬಂದಿತ್ತು. ಇದೆಲ್ಲಿಯ ಹೊಸ ವಿಪತ್ತು, ಎಂದು ಎಲ್ಲರೂ ಹೆದರಿರುವಾಗ ಮನೆಯ ಡಾಕ್ಟರರು ಚುಚ್ಚುಮದ್ದನ್ನು ಕೊಡುತ್ತ "ಖಂಡಿತ ಅವಳಿಗೆ ಎಚ್ಚರವಾಗುತ್ತದೆ. ಜೀವಕ್ಕೇನೂ ಅಪಾಯವಿಲ್ಲ. ಯಾರಾದರೂ ಅತ್ತಿರೆಂದರೆ ನೋಡಿರಿ!" ಎಂದು ಗದರಿಸಿ, ಅಲ್ಲಿಯೇ ಇದ್ದ ದಾದಿಗೆ ಇನ್ನಷ್ಟು ಉಪಚಾರಕ್ರಮ ಹೇಳಿ ಹೋದರು.

ಬೆಳಗಿನಲ್ಲಿ ಜನನವಾದ ಮೇಲೆ ಸಂಜೆಯವರೆಗೂ ಸುಂದರಿಗೆ ಎಚ್ಚರವಾಗದ್ದನ್ನು ಕಂಡು ಹೆದರಿಕೆಯಾಗಿ, ಮತ್ತೆ ಡಾಕ್ಟರರಿಗೆ ಹೇಳಿ ಕಳಿಸಿಯಾಯಿತು. ಅದೇ ಆಶ್ವಾಸನೆ, ಅವರಿಂದ. ಬಟ್ಟಲ ತುಂಬ ಹಾಲನ್ನು ಹಿಡಿದುಕೊಂಡು, ಕುಡಿದಾಳೆಯೇ ಎನ್ನುತ್ತ ಅವಳ ತಾಯಿ ಮತ್ತೆ ಬಂದು, ತಲೆಯನ್ನು ನೇವರಿಸಿದರು. ದಾದಿ ಹೊರಟುಹೋಗಿದ್ದಳು. ಸುಂದರಿಯ ಅಂಗಾಲಿಗೆ ಮತ್ತೆ ಕಾವು ಕೊಟ್ಟರು. "ನನಗೆ ಹೆದರಿಕೆಯಾಗುತ್ತದೆ ತಾಯೀ. ಏಳಮ್ಮಾ ಸುಂದರೀ!" ಎನ್ನುತ್ತ ಸೆರಗಿನಿಂದ ಕಣ್ಣೀರನ್ನೊರಸಿಕೊಂಡರು.

ಮಧ್ಯ ರಾತ್ರಿಯು ಗಡುವು ಮೀರಿದೆ. ದಣಿದಿದ್ದ ಸುಂದರಿಯ ತಾಯಿ ನಿದ್ದೆಹೋಗಿದ್ದಾರೆ. ಲೋಭಾನದ ಮಂದ ವಾಸನೆ ಇಡುಗಿದೆ. ಚಿಕ್ಕ ದೀಪದ ಸೌಮ್ಯ ಬೆಳಕು ರಾತ್ರಿಯ ನೀರವತೆಗೆ ಇನ್ನಷ್ಟು ಶಾಂತತೆಯನ್ನು ತಂದಿದೆ.

ಸುಂದರಿ ಮೆಲ್ಲನೆ ಕಣ್ಣು ಬಿಡಿಸಿದಳು! ಅರ್ಧ ದಿನದ ವಿಶ್ರಾಂತಿ ಹೊಂದಿ 'ಕೋಮಾ' ಸ್ಥಿತಿಯಿಂದ ಎಚ್ಚರಾದಳು. ದಣಿವಿತ್ತು; ಆದರೆ ಮೈ ಹಗುರಾಗಿತ್ತು.

ಥಟ್ಟನೆ ಬದಿಗೆ ಹೊರಳಿದಳು ಸುಂದರಿ! ಬಳಿಯಲ್ಲಿ ಮಲಗಿತ್ತು ಅವಳ ದೇಹದ ಜೀವಾಂಶ. ಮೊದಲ ನೋಟಕ್ಕೆ, ರಕ್ತಗೆಂಪಿನ ಮಾಂಸದ ಮುದ್ದೆಯ ಹಾಗೆ ಕಂಡಿತು ಅವಳಿಗೆ. ಆದರೆ? ಆದರೆ, ಹೆಣ್ಣೋ? ಗಂಡೊ? ಮಲಗುವಾಗ ಅದರ ಅಜ್ಜಿ ಮೈತುಂಬ ದುಪ್ಪಟಿಯನ್ನು ಹೊದಿಸಿ ಮಲಗಿಸಿದ್ದರು.

ಹೆಣ್ಣೋ, ಗಂಡೊ? ದುಪ್ಪಟಿಯನ್ನು ಓಸರಿಸುವಾಗ, ಸುಂದರಿಯ ಕೈಗಳಲ್ಲಿ ನಡುಕ! ಎದೆ ಡವಡವ ಎನ್ನುತ್ತಿತ್ತು.

ಗಂಡು ಮಗು! ಹೆಣ್ಣಾಗಲಿಲ್ಲ, ಆಗಲಿಲ್ಲ ಅಲ್ಲವೆ? ಕೃಷ್ಣ ಅವಳ ಮೊರೆ ಕೇಳಿದ. ಇಷ್ಟು ದಿನ ಸಲ್ಲಿಸಿದ ಮೂಕ ಪ್ರಾರ್ಥನೆ ವ್ಯರ್ಥವಾಗಲಿಲ್ಲ! ತನ್ನ ಕನಸು ನನಸಾಯಿತು. ಅಂದು ಬಿದ್ದ ಸ್ವಪ್ನ ಸುಳ್ಳಾಯಿತು. ಇನ್ನು ನನಗೆ ಯಾರ ಹಂಗೂ ಬೇಡ. ನಾನೀಗ ದೇವರ ದೇವಕಿ! ನನ್ನ ಹಾಲಿನಿಂದ ಬೆಳೆದು ದೊಡ್ಡವನಾಗುತ್ತಾನೆ ಕೃಷ್ಣ. ನನ್ನ ಮೋಹನ ಮುರಲಿಯಾಗಿ, ಅವರ ಕಣ್ಮಣಿಯಾಗಿ, ಲೋಕಕ್ಕೆ ಬೆಳಕಾಗಿ ಕೃಷ್ಣ ಬೆಳೆಯುತ್ತಾನೆ... ನನ್ನ ಮಗು, ಮುದ್ದು ಮಗು!

ಅದನ್ನು ಎದೆಗವಚಿಕೊಂಡು, ಕಣ್ಣು ಮುಚ್ಚಿ, ಒಂದು ಕ್ಷಣ ಅನಂತ ಸುಖವನ್ನು ಅನುಭವಿಸಿದಳು. ಕಣ್ಣು ತೆರೆದಾಗ, ಎದುರಿಗೇ ಕೃಷ್ಣ ಕಂಡ. ಅವಳಿಗೆ ತನ್ನ ಮಗುವು ಎದುರಿಗಿರುವ ಆ ಅವನಂತೆಯೇ ಸುಂದರವಾಗಿದೆಯೇ ಎಂದು ನೋಡಬೇಕೆನಿಸಿತು. ಹೊಳಪಿನ ಕಣ್ಣುಗಳು ದುಂಡು ಗಲ್ಲ. ನಗೆಯೇ ನಗೆಯಾಗಿ, ರಸಿಕತೆಯೇ ಜೀವ ಜೀವನವಾಗಿರುವಂತೆ ಇದ್ದೀತೇ ಎಂದು ಹಂಬಲಿಸಿ ಮಗುವನ್ನು ಬೆಳಕಿಗೆ ಮೆಲ್ಲಗೆ ಹೊರಳಿಸಿದಳು.

ಆದರೆ ಇದೇನು? ಮೂಗು! ಫೇಟ್ ಅವರ ಹಾಗೆ ನಿಡಿದಾದ ಮೂಗು! ಅದೇ ಏರು ಹಣೆ, ಅವರದೇ ಹಣೆ! ಅಂದರೆ? ಅವರ ಹಾಗೇ ಇದೆ? ದೊಡ್ಡದಾದ ಮೇಲೆ ಇದು ಅವರ ಪ್ರತಿಮೂರ್ತಿಯೇ ಆಗುತ್ತದೆ! ನನ್ನ ಕೃಷ್ಣನೆಲ್ಲಿ? ಕೃಷ್ಣ ಬರಲೇ ಇಲ್ಲವೆ? ಅಯ್ಯೋ ಕೆಟ್ಟೆನಲ್ಲ ನಾನು!

ದುಃಖದ ಉತ್ಕಟ ಆವೇಶದಲ್ಲಿ ಬಿಳಿಚಿಕೊಂಡ ಅವಳ ಕಣ್ಣುಗಳು ಉರಿಗಣ್ಣಾಗಿದ್ದವು. ಅದರ ಕಾವಿಗೆ ಎನ್ನುವಂತೆ ಮಗು ಎಚ್ಚರಾಗಿ ಅಳುವ ಹವಣಿಕೆಯಲ್ಲಿತ್ತು. ಕೈಕಾಲು ಸಡಲಿಸಿತು.

"ಶುದ್ಧ ಅನ್ಯಾಯ ಇದು! ಕೃಷ್ಣನಂತೆ ಕೃಷ್ಣ! ಅವನಿಲ್ಲವೇ ಇಲ್ಲ. ಇದ್ದುದಾದರೆ ಇದು ಮೋಸದ ಪರಮಾವಧಿ! ಎಲ್ಲರೂ ಮೋಸಗಾರರೇ! ಇವರೂ, ಕೃಷ್ಣನೇ ನನ್ನಲ್ಲಿರುವ ಎಂದರು. ಆದರೆ ಮರೆಯಲ್ಲಿ ಕೊಟ್ಟುದ್ದು ತಮ್ಮನ್ನೇ. ಏನೆಂದು ತಲೆಯೆತ್ತಿ ನಾ ಮರೆಯಲಿ? ಏನೆಂದು ಭೂಮಿಯ ಮೇಲೆ ಬದುಕಿರಲಿ?

'ಹತ್ತು ವರ್ಷದವರೆಗೆ ಕೃಷ್ಣನನ್ನು ಬೆಳೆಸಿ ನನ್ನ ಹೃದಯದಲ್ಲಿ ಪೋಷಿಸಿಕೊಂಡು ಬಂದೆ. ನನ್ನ ಹೃದಯ ಸರ್ವಸ್ವವನ್ನೇ ಕೊಳ್ಳೆ ಹೊಡೆದು ಹೋಗುವಾಗ ನನ್ನ ಮುಖಕ್ಕೆ ಮಸಿ ಬಳಿದು ಹೋದನಾತ."

ಮಗು ಕೇಳಿಸಿಯೂ ಕೇಳಿಸದಂತೆ ಅಳುತ್ತಿತ್ತು.

"ಥೂ ಶನಿ! ತೊಲಗು ಇಲ್ಲಿಂದ! ಯಾಕಾದರೂ ಹುಟ್ಟಿ ಬಂದಿ? ನಿನ್ನಂಥ ಪಾಪಿಯ ತಾಯಾಗಿ ಬಾಳಬೇಕೆ ನಾನು? ಸಂತಾಪ ತುಂಬಿ ಬಂದು, ಅವಳಲ್ಲಿ ಮಗುವಿನ ವಿಷಯವಾಗಿಯೂ ನಿರ್ಭರ್ತ್ಸನೆ ಮೂಡಿ ಬಂತು. ಮಗು ಅಳುತ್ತಿದ್ದರೂ ಉರಿ, ಸಂಕಟ ಅವಳ ಹೃದಯವನ್ನು ತುಳಿಯುತ್ತಿದ್ದುವು.

ಇದ್ದಕ್ಕಿದ್ದಹಾಗೆ ಎದೆಯಲ್ಲಿ ಏನೋ ಒಂದು ಬಗೆಯ ನೋವು! ತಡೆದಿಟ್ಟ ನೀರಿನ ಶಕ್ತಿಯಂತೆ ಅದು ಅವಳಿಗೆ ತನ್ನಲ್ಲೇ ಎನಿಸುತ್ತಲಿದೆ. ಈ ಕಡೆ ಅಳುತ್ತಿರುವ ಮಗು. ಅದನ್ನು ನಾ ಶಮನ ಮಾಡಬೇಕು ಎನ್ನುವಂತೆ ತಾಯ್ತನವೇ ಅವಳ ಎದೆಯಿಂದ ಹರಿದು ಬರುವಂತೆ ತಹತಹಿಸುತ್ತಿದೆ. ಸುಂದರಿಯ ಭಗ್ನಹೃದಯ ಅದಕ್ಕೆ ಅವಕಾಶ ಕೊಡಲಿಲ್ಲ!

ಏನೆಂದು ಕೊಡಬೇಕು? ಅದೆಷ್ಟು ದಿನದ ಹಂಬಲ ಅವಳದು! ಅತ್ಯಂತ ಶುಭ್ರವರ್ಣದ ಹಿಮ ಒಂದುಗೂಡಿ, ದಟ್ಟವಾಗಿ ತೇಲಿಬಂದು ವಾಸ್ತವತೆಯ ಬಂಡೆಗೆ ರಭಸದಲ್ಲಿ ಅಪ್ಪಳಿಸಿ, ಆದರೆ ತಾನೇ ಚೂರು ಚೂರಾಗಿ, ನೀರು ನೀರಾಗಿ ಹರಿದುಹೋಯಿತಲ್ಲವೆ? ಅಂಥ ಆ ಘರ್ಷಣಕ್ಕೆ ಅವಳ ಹೃದಯ ಸಾಗರ ಅಲ್ಲೋಲಕಲ್ಲೋಲವಾಗಿತ್ತು.

ಪುಟಿದೆದ್ದ ಭಾವನಾತರಂಗಗಳೀಗ ಮೆಲ್ಲಮೆಲ್ಲನೆ ಹರಿಯತೊಡಗಿದವು. ಸುಂದರಿ ತನಗರಿಯದಂತೆಯೇ ತೊಟ್ಟ ಬ್ಲೌಜನ್ನು ಸರಿಸಿ, ಮಗುವಿನ ಬಾಯಿಗೆ ಹಿಡಿದಿದ್ದಳು. ಉಕ್ಕಿ ಬಂದ ತಾಯ್ತನದ ನಿತಾಂತ ಸಂತತ ರಸಧಾರೆಗೆ ಜಯವಾಗಿತ್ತು.

ಮಗು ನಿರಾತಂಕವಾಗಿ ಹಾಲು ಕುಡಿಯುತ್ತಿತ್ತು. ಎದುರಿಗಿದ್ದ ಕೃಷ್ಣ ಅದೇ ಸಸ್ಮಿತದಲ್ಲಿದ್ದ. ಸುಂದರಿಯ ನೀರವವಾದ ಅಳು ಒಂದೇ ಧಾರೆಯಾಗಿ ಕೆನ್ನೆಗಳಲ್ಲಿ ಹರಿದು ಕುತ್ತಿಗೆಯನ್ನು ತೋಯಿಸಿತ್ತು.

❄ ❄ ❄ ❄ ❄

೪. ವಾತ್ಸಲ್ಯ ಪರೀಕ್ಷೆ

ಬೆಳಗಿನಲ್ಲಿ ಗಂಡನಿಗೆ ಚಹ ಮಾಡಿ ಕೊಡುವುದು ಧರ್ಮಿಣಿಯ ಸಹ ಧರ್ಮ. ಆದರೆ ಎದ್ದ ಕೂಡಲೇ 'ಚಹಾಕ್ಕೆ ಇಡು' ಎಂದೇಕೆ ತಾನಾಗಿ ಅವಳಿಗೆ ಹೇಳಬೇಕು?

ವಾಶಿಂಗ್ ಕಂಪನಿಗೆ ಹೋಗಲಾಗದ ಕರವಸ್ತ್ರವನ್ನು ಒಗೆದು ಗಂಡನು ಮರುದಿನ ಕಚೇರಿಗೆ ಹೋಗುವಾಗ ಕೈಯಲ್ಲಿ ಹೆಂಡತಿಯಾದವಳು ಕೊಡಬಲ್ಲಳು. ಆದರೆ ಸ್ನಾನಮಾಡುವಾಗ ಜೊತೆಗೇ ಕರವಸ್ತ್ರವನ್ನು ಒಗೆದುಕೊಂಡರೆ ಹೆಂಡತಿ ಏನು ಮಾಡಬೇಕು?

ಮಗು ಅಳುತ್ತಿದ್ದರೆ, ಹೊಟ್ಟೆಗೆ ಕೊಟ್ಟು ಸುಮ್ಮನಿರಿಸುವುದನ್ನು ತಾಯಿಯಾದವಳು ಮಾಡಿಯೇ ಮಾಡುತ್ತಾಳೆ. ಕೆಲಸದಲ್ಲಿದ್ದರೆ ಕೆಲವು ನಿಮಿಷ ಆ ಕೈಂಕರ್ಯಕ್ಕೆ ತಡವಾದೀತು, ಅಷ್ಟೆ. ಅಷ್ಟಕ್ಕೇನೆ ಇಲ್ಲದ ರಗಳೆ ಎಬ್ಬಿಸಿ, ತಾನು ಹೋಗಿ ಕರೆದುಕೊಂಡು, ಮಗುವಿಗಿಂತ ಅವನೇ ಹೆಚ್ಚಾಗಿ ಅವಳ ಮೇಲೆ ಆರ್ಭಟ ಮಾಡಿದರೆ ಹೇಗೆ?

ಇಂಥ ಒಂದು ದಾಂಪತ್ಯವನ್ನು ರಾಘಣ್ಣಾ ಹಾಗೂ ಸರಸಾ ನಡೆಯಿಸುತ್ತಿದ್ದರು. 'ಸಂಸಾರ ಮಾಡುವುದರಲ್ಲಿ ನೀನು ಅಯೋಗ್ಯಳು'; 'ನಿನ್ನ ಕೈಯಿಂದ ಏನಾಗುತ್ತದೆ'; 'ನೀನು ತುಂಬ ಆಲಸಿ' ಎಂದೆಲ್ಲ ರಾಘಣ್ಣಾ ಆಕೆಗೆ ಹೇಳದ ದಿನವೇ ಇಲ್ಲ. ಆಕೆ ಅದರಿಂದ ಕೋಪಗೊಳ್ಳಬೇಕು. 'ಚಹಕ್ಕೆ ಇಡು ಎಂದು ಹೇಳದೆ ಇದ್ದು ನೋಡಿರಿ, ಚಹಮಾಡಿ ಕೊಡುವೆನೊ ಇಲ್ಲವೊ' ಎಂದು ಅವಳು ಉತ್ತರಿಸುತ್ತಿದ್ದಳು. 'ಒಂದು ವಸ್ತ್ರವನ್ನು ಒಗೆಯಲಾರದಷ್ಟೂ ನಾನು ಅಯೋಗ್ಯಳೆಂದು ನಿಮಗನಿಸಿದ್ದರೆ, ಬೇರೆ ಮದುವೆಮಾಡಿಕೊಳ್ಳಿ' ಎನ್ನುತ್ತಿದ್ದಳು. ಮತ್ತೊಂದು ಸಂದರ್ಭದಲ್ಲಿ ಹೊಟ್ಟೆ ಹೊತ್ತು ಹಡೆವ ಕರುಳಿಗಿಂತ, ಮಗುವಿನ ಮೇಲೆ ನಿಮ್ಮದೇ ಕಕ್ಕುಲಾತಿ ಹೆಚ್ಚೇನೊ' ಎಂದು ತಾಯ್ತನದ ಭಾವನೆಯಿಂದ ಬೀಗುತ್ತಿದ್ದಳು.

ವಸ್ತುಸ್ಥಿತಿ ಈಚೆಗೆ ರಾಘಣ್ಣನಿಗೆ ತಿಳಿದೇ ಇತ್ತು. ತನಗೇ ಮೇಲುಬಿದ್ದು ಮನೆಗೆಲಸಮಾಡುವ ಉಮೇದು ಇದೆ ಎಂದು! ಇಂಥ ಸಾಂಸಾರಿಕ ಕೆಲಸಗಳಲ್ಲಿ ರಾಘಣ್ಣನಿಗೆ

ಚಿಕ್ಕಂದಿನಿಂದೂ ಆಸಕ್ತಿ ಹೆಚ್ಚು. ಇದರ ಜೊತೆಗೆ ಅವನದು ಸ್ವಲ್ಪ ಔರಂಗಜೇಬನ ಗೋತ್ರ. ಸಂಶಯ ಬಹಳ. ತನ್ನ ಮನಸ್ಸಿಗೆ ತಕ್ಕ ಹಾಗೆ ಕೆಲಸವಾಗಿರಬಹುದೆ, ಎಂದು. ಸಾಧ್ಯವಿದ್ದಲ್ಲಿ, ಅದಕ್ಕೆಂದೇ ಸ್ವಯಂ ಮಾಡಿಬಿಡುತ್ತಿದ್ದ.

ಇದರಿಂದ ಆಕೆ ಅನೇಕ ಸಮಯಗಳಲ್ಲಿ ಬಲು ಬೇಗ ಸಿಟ್ಟಿಗೇಳುತ್ತಿದ್ದಳು. ಮತ್ತಲ್ಲದೆ ರಾಘಣ್ಣ ಸರಸಿಗಿಂತ ಚೆನ್ನಾಗಿ ಮಾಡಿ ತೋರಿಸಿದನೆಂದರೆ, ಅವಳ ಮನಕ್ಕೆ ಅದು ಬಹಳ ಕಚ್ಚೆನಿಸುತ್ತಿತ್ತು. ಆಗ ಅವಳಿಗೆ ತನ್ನ ಮೇಲೆ ಹೀನಾಯ ಬಂದುಬಿಡುತ್ತಿತ್ತು. ಅಲ್ಲದೆ ಹೇಗೂ ಕೆಲಸ ಮಾಡುವವರು ಸಿಕ್ಕರೆ ಯಾರು ಬೇಡ ಎನ್ನುತ್ತಾರೆ? ಅವನು ಮಾಡುತ್ತಿದ್ದರೆ ಕೆಲ ಸಂದರ್ಭಗಳಲ್ಲಿ ಮುದುಡಿಕೊಂಡು ಬಿಟ್ಟು 'ಆಲಸಿ'ಯೂ ಆಗುತ್ತಿದ್ದಳು.

ಮಗುವಿನ ವಿಷಯವೂ ಹಾಗೆಯೇ. ಅವಳು ತನ್ನ ಜೀವಮಾನದಲ್ಲಿ ಹೆಚ್ಚಾಗಿ ಎತ್ತಿ ಆಡಿಸಿದ ಮಗುವೆಂದರೆ ಅದೊಂದೇ! ರಾಘಣ್ಣನಿಗೊ ತನ್ನ ಅಕ್ಕನ ಮಕ್ಕಳು, ಗುಂಡೂರಾಯರ ಮಕ್ಕಳನ್ನು ಆಡಿಸಿ ಆಡಿಸಿ 'ಟ್ರೇನಿಂಗ್' ಸಿಕ್ಕಿಬಿಟ್ಟಿದೆ. ಹೀಗೆ ಅಳುವ ಮಗುವನ್ನು ಸುಮ್ಮನಿರಿಸುವ ವಿಧಾನಗಳನ್ನು ಕೂಡ ಅನೇಕ ಸಲ ಅವನಿಂದ ಕಲಿತುಕೊಳ್ಳುತ್ತಿದ್ದುದು ಅವಳಿಗೆ ಬೇಡವಾಗಿತ್ತು. ತಾಯಿ ಮಗುವನ್ನು ಜೋಗರಿಸುವಷ್ಟೇ, ಅಷ್ಟೇಕೆ ಅದರ ಹಿರಿಯಕ್ಕನಷ್ಟು ಕೂಡಾ ತಂದೆ ಲಾಲಿಸಿ ಪಾಲಿಸುವುದು ಎಲ್ಲಿ ಕಂಡುಬರುತ್ತದೆ? ಗಂಡಸರು ಮಗುವನ್ನು ಆಡಿಸುವುದು, ನಗುತ್ತಿರುವ ಮಗುವನ್ನು ಮಾತ್ರ.

ಉಳಿದ ಹೆಂಡಂದಿರು, ಈ ಸಂಬಂಧದಲ್ಲಿ 'ಹೆಂಡತಿಗೆ ನೆರವಾಗದ, ಕೆಟ್ಟ ಗಂಡಸರು ನೀವೆಂದು' ಬೈಯುತ್ತಿದ್ದರೆ, ಸರಸಿಗೆ ಆ ಪರಿಸ್ಥಿತಿ ಇರಲಿಲ್ಲ. ರಾಘಣ್ಣ ಉಳಿದ ಗಂಡಂದಿರಿಗೆ ಅಪವಾದವಾಗಿದ್ದುದೇ ಅವಳ ದುಃಖಕ್ಕೆ ಕಾರಣವಾಗಿತ್ತು. ಇಲ್ಲವಾದರೆ ಹೇಗೂ ಮಾಡಿಕೊಳ್ಳುತ್ತಾರಲ್ಲ ಎಂದು ಅವರ ಮೇಲೇ ಹೆಚ್ಚಾಗಿ ಮಗುವಿನ ಭಾರವನ್ನು ಹಾಕಿಬಿಡುತ್ತಿದ್ದಳು.

ಒಂದು ವರ್ಷದವರೆಗೂ ಮಗು ನೋಡಲಿಕ್ಕೆ ಚೆನ್ನಾಗಿಯೇ ಇತ್ತು. ಆದರೆ ಹಲ್ಲು ಒಡಮೂಡುವ ನೆಪ ಮಾಡಿಕೊಂಡು, ಮಗುವಿಗೆ ಲಿವ್ಹರ ಬೆಳೆಯಿತು. ದಿನದಿನಕ್ಕೆ ಅಶಕ್ತವಾಗತೊಡಗಿತು. ಒಂದೇ ಒಂದು ಮಗುವಿಗೆ ಈ ರೀತಿ ಬಂದ ಪೆಟ್ಟು ಗಂಡ ಹೆಂಡಿರನ್ನು ತುಂಬ ಕಳವಳಕ್ಕೀಡುಮಾಡಿತು. ಜಮ್ಮಿಯವರ ಔಷಧ ಪ್ರಯೋಗ ನಡೆಯಿತು.

ರಾಘಣ್ಣ ಮನೆಯಲ್ಲಿದ್ದ ಪ್ರತಿ ಕ್ಷಣಕ್ಕೆ ಆರೈಕೆ ಮಾಡುತ್ತಿದ್ದ. ಕಚೇರಿಯಲ್ಲಿ ೮ ತಾಸು ದುಡಿತವಾದ ಮೇಲೆ, ರಾತ್ರಿಯೂ ಆತ ನಿದ್ದೆಗೆಟ್ಟು ಮಗುವಿನ ಉಪಚಾರ ಮಾಡುವುದನ್ನು, ಕಂಡು ಸರಸಿಗೆ ಗಂಡನ ಮೇಲೆ ತುಂಬ ಅನುಕಂಪ ಮೂಡುತ್ತಿತ್ತು. ಅದರಲ್ಲೇ, ಇದು ನಾನು ಮಾಡುವ ಕೆಲಸ; ನನಗಿಂತ ಅವರು ಇದರಲ್ಲಿ ಮುಂದಾಗಿರುವರಲ್ಲ! ನನ್ನ ಅಂತಃಕರಣ ಕಡಿಮೆಯೆ? ಎನ್ನುವ ಕಹಿಗಾಳಿಯೊಂದು ಮನಸ್ಸಿನ ಮೇಲೆ ಬೀಸಿ ಒಡನೆಯೇ

ಮಾಯವಾಗುತ್ತಿತ್ತು. ಆ ಕ್ಷಣವೇ ಇದನ್ನು ಹತ್ತಿಕ್ಕಿಟ್ಟು, ಏನಾದರೆನಂತೆ, ಮುದ್ದಿನ ಮಗುವಿಗೆ ಬೇಗ ಗುಣವಾಗಲಿ, ಎಂಬ ತಾಯ್ತನದ ಹೊಣೆ ಜಾಗೃತವಾಗುತ್ತಿತ್ತು.

ಮಗುವಿನ ಜಡ್ಡು ತುಂಬ ಏರಿಕೆಯ ಮಟ್ಟವನ್ನೇರಿತು. ರಾಘಣ್ಣನ ಶುಶ್ರೂಷೆ ಹೆಚ್ಚಿತು.

ಜಮ್ಮಿಯವರ ಔಷಧ ಹಾಕುವವರಿಗೆಲ್ಲ ಇದು ಗೊತ್ತಿರಬೇಕು. ಮಧ್ಯಾಹ್ನಕ್ಕೊಂದು ಅದರ ಪಾಳಿ ಇರುತ್ತದೆ. ಬೆಳಗು ಮತ್ತು ಸಂಜೆ ಆತ ಮನೆಯಲ್ಲಿರುವಾಗ ಔಷಧ ಹಾಕುತ್ತಿದ್ದ. ಮಧ್ಯಾಹ್ನ ಅದು ಸರಸಳ ಕೆಲಸ. ಜಡ್ಡು ಹೆಚ್ಚಾದಾಗ ಏಕೊ ಮಧ್ಯಾಹ್ನದ 'ಡೋಜು' ಕಾರಿಸಿ ಬಿಡುತ್ತಿತ್ತು. ಅದನ್ನು ಕಂಡು ರಾಘಣ್ಣ ಆ ಕೆಲಸವನ್ನೂ ತಾನೇ ಒಪ್ಪಿಸಿಕೊಂಡ. ಎಂದರೆ ಚಹದ ವೇಳೆಯಲ್ಲಿ ಕಚೇರಿಯಿಂದ ಮನೆಗೆ ಬಂದು ಹೋಗುತ್ತಿದ್ದ.

ನಿಜಕ್ಕೂ ರಾಘಣ್ಣನ ಶುಶ್ರೂಷೆಯ ತತ್ಪರತೆ, ಅವಳಿಗೆ ಸಹಿತ ಮನ ಹಿಡಿಯಿತು. ಆಗ, ಸಂಸಾರದ ಜವಾಬ್ದಾರಿಯ ಅಳುಕು ಏಕೆ ನನಗೆ ಇಂತಹ ಗಟ್ಟಿಗರಿರುವಾಗ ಎಂದುಕೊಳ್ಳುತ್ತಿದ್ದಳು. ಮುಂದೆ ಮಗುವಿನ ಆರೈಕೆಯ ಎಲ್ಲ ಕೆಲಸವನ್ನೂ ಆತನೆ ಮಾಡುತ್ತಿದ್ದ ಎಂದರೂ ಸಲ್ಲುವುದು. ಮಂದಿ ಬಂದಾಗ ಸಹಿತ, ರಾಘಣ್ಣ ಮುದುಡಿಕೊಳ್ಳುತ್ತಿರಲಿಲ್ಲ.

ಕೊನೆಗೊಮ್ಮೆ ಲಿವ್ಹರ ಕರಗಿದ ಸೂಚನೆಯನ್ನು ಡಾಕ್ಟರರು ಕೊಟ್ಟರು. ಇಬ್ಬರ ಸಂತೋಷ ಮೇರೆ ಮೀರಿತ್ತು. ಇನ್ನು ಟಾನಿಕ್ ಸೇವನೆಯಿಂದ, ಮಗುವಿಗೆ ಶಕ್ತಿ ಬರುವ ವರಗೂ ಎಚ್ಚರಿಕೆಯಿಂದ ನೋಡಿಕೊಂಡರಾಯಿತು.

ಅಗಲೂ ರಾಘಣ್ಣನ ಪೋಷಣೆ ತಪ್ಪುವಂತಿರಲಿಲ್ಲ. ಹಾಲಿನ ಬಾಟಲಿಯನ್ನು ಒಂದು ದಿನ ಚೆನ್ನಾಗಿ ತೊಳೆದಿಲ್ಲವೆಂದು ಅವಳನ್ನು ಗದರಿಸಿ ಅದನ್ನೂ ತಾನೇ ಕೈಕೊಂಡ. ಟಾನಿಕ್ ಸೇವನೆ, ಬೆಳಗಿನ ಹೊತ್ತಿನ ೩-೪ ಚಮಚೆ ಓವಲ್‌ಟನ್, ೯-೩೦ ಗಂಟೆಗೆ ಹಾಲು ಹಾಕುವುದು, ನಾಲ್ಕು ದಿನಕ್ಕೊಮ್ಮೆ ತಪ್ಪದೆ ಎರೆಯಿಸುವುದು, ಸಂಜೆಯ ಮುಂದೆ ಮಗುವನ್ನು ತಿರುಗಾಡಿಸಿಕೊಂಡು ಬರುವುದು ಎಲ್ಲವೂ ರಾಘಣ್ಣನ ಕೆಲಸ.

ಈಗೀಗ ಅವಳಿಗೆ ಅನಿಸತೊಡಗಿತು. ಮಗುವಿನ ತಾಯಿಯ ಸ್ಥಾನವನ್ನು ಅವರು ಕ್ರಮೇಣ ಕಸಿದುಕೊಳ್ಳುತ್ತಿದ್ದಾರೆ ಎಂದು. ಇಂಥ ಒಂದು ಕೊಸರು ಬೀಜ, ನಿತ್ಯವೂ ಅದಕ್ಕೆ ಪೋಷಕವಾಗುವಂತಹ ಸಂಗತಿಗಳೇ ನಡೆಯುತ್ತಿರುವಾಗ, ಬೇರು ಬಿಟ್ಟಿತು.

ಮಗುವಿನ ಮುಖದಲ್ಲಿ ಈಗ ನಗೆಮಲ್ಲಿಗೆ ಅರಳತೊಡಗಿ, ಆ ಎಳೆಯ ಕಣ್ಣುಗಳಲ್ಲಿ ಬೆಳಕು ತುಂಬಿ, ಗಲ್ಲಗಳು ಕಾಂತಿಗೊಂಡವು. ಎಷ್ಟು ಬೇಗ ಸೊರಗಿತ್ತೋ, ಅಷ್ಟು ಬೇಗ ಮೊದಲಿನಂತೆ ಮೈ ಕೈ ತುಂಬಿಕೊಂಡಿತು. ಒಂದು ಸಲಕ್ಕೆ ಅಪ್ಪನ ಬೆನ್ನ ಮೇಲೆ ಏರಿ, ಕುದುರೆ ಸವಾರನಾಗಿದ್ದರೆ, ಮತ್ತೊಮ್ಮೆ ಕಾಲ್‌ಬಂಡಿಯನ್ನು ಹಿಡಿದುಕೊಂಡು ದೂಡುತ್ತಾ, ಮುಂದೋಡಿ ಕರೆಯುತ್ತಿದ್ದ ತಂದೆಯನ್ನು, ಕೇಕೆ ಹಾಕಿ ಹಿಡಿಯ ಹೋಗುತ್ತಿತ್ತು.

ಮಗು ಹೀಗೆಲ್ಲ ಮಾಡುವಾಗ, ಅವಳು ಟೊಂಕದ ಮೇಲೆ ಕೈಯಿಟ್ಟುಕೊಂಡು ನೋಡಿ ತಾನೂ ನಗುತ್ತಿದ್ದಳು. ಮರುಕ್ಷಣ ಒಳಗೆ ಹೋದ ಮೇಲೆ ಏನೊ ಕಸಿದುಕೊಳ್ಳಲ್ಪಟ್ಟಂತೆ ಎನಿಸುತ್ತಿತ್ತು.

ಅನ್ನಕ್ಕಿಡುತ್ತಿದ್ದ ಹೆಂಡತಿಯನ್ನು, ಒಂದು ದಿನ ರಾಘಣ್ಣನು ಕೂಗಿ, ಮೊಗಸಾಲೆಗೆ ಕರೆದ. ಮಗು ಗೋಡೆಯನ್ನು ಹಿಡಿದುಕೊಂಡು ನಡೆಯಲು ಪ್ರಾರಂಭ ಮಾಡಿತ್ತು. ಆಮೇಲೆ ಗಕ್ಕನೆ ಸಾಗರಬಿದ್ದು ಮುಂದಿದ್ದ ತಂದೆಯ ಬಳಿ ಸಾರಿತು. ಈ ನಡಿಗೆಯ ಸಂಭ್ರಮ ಅವಳಿಗೂ ಅತಿಯಾದ ಸಂತೋಷವನ್ನು ಕೊಟ್ಟಿತು. ರಾಘಣ್ಣ ಮಗುವನ್ನು ಎತ್ತಿಕೊಂಡು, ಹೆಂಡತಿಯ ಮುಂದೆ ನಿಂತು ತನ್ನ ತೋಳುಗಳಿಂದ ಮಗುವನ್ನು ಎದೆಗವಚಿಕೊಂಡೇ "ಅವ್ವನ ಹತ್ತಿರ ಹೋಗ್ತೀಯೇನು?" ಎಂದನು.

ತಾಯಿಯನ್ನು ಒಂದು ಕ್ಷಣ ನೋಡಿತು.

"ನೀವು ಕೈ ಬಿಡಿರಲ್ಲ. ಹೇಗೆ ಬರಬೇಕು ಅಂವ" ಎಂದಳು. ರಾಘಣ್ಣ ತನ್ನ ಹಿಡಿತವನ್ನು ಸಡಲಿಸಿದ. ಮಗುವಿನ ಕೈಗಳು ತಂದೆಯ ಕಡೆಗೇ ಇದ್ದುವು. ತಾಯಿ 'ಬಾ' ಎಂದು ನಗೆ ಸೂಸಿ, ಕಣ್ಣಿನಲ್ಲಿ ಆಸೆ ತುಂಬಿಕೊಂಡು ಕರೆದಳು. ಮಗು ಆಗ ತಂದೆಯ ಮುಖವನ್ನು ಒಮ್ಮೆ ನೋಡಿತು. ಅಲ್ಲಿ ನೆಚ್ಚಿಕೆ ಹೆಚ್ಚು ಕಾಣಿಸಿತೇನೊ, ಒಲ್ಲೆನೆಂದು ಮುಖ ತಿರುಗಿಸಿತು.

ಅವಳಿಗೆ ಒಂದು ಕ್ಷಣ ನೋವೆನಿಸಿತು. ಅದರಲ್ಲಿ ರಾಘಣ್ಣ "ನೋಡು, ನೋಡು, ನಾನೇ ಹೆಚ್ಚು ಮಗುವಿಗೆ. ನಿನ್ನ ಹತ್ತಿರ ಒಲ್ಲೆ ಎನ್ನುತ್ತದೆ. ಯಾಕೆ ಹೋಗಬೇಕು ಎನ್ನುತ್ತಾನೆ. ಈ ಮನೆಗೆ ಹಕ್ಕುದಾರ ನಾನು, ಮತ್ತು ತಾನಂತೇ. ನೀ ಎಷ್ಟೆಂದರೂ ಹೆಣ್ಣು, ಹೊರಗಿನಿಂದ ಬಂದವಳು" ಎಂದುಬಿಟ್ಟ.

ಇಡೀ ದಿನವೂ ಅವಳ ಮನಸ್ಸಿಗೆ ಚೈನೆಂಬುದು ಇರಲಿಲ್ಲ. ಅದಕ್ಕೆ ಊರಿಂದ ಬರೆಸಿ ಬಂದ ತಾಯಿಯ ಪತ್ರವೂ ಕಾರಣವಾಗಿತ್ತು. ಮಗುವಿಗೆ ಜಡ್ಡು ಹೆಚ್ಚಾದಾಗ ಆಕೆ ಒಮ್ಮೆ ಬಂದು ಹೋಗಿದ್ದಳು. ಆಗ ಅಳಿಯನ ವಿಶೇಷ ಶುಶ್ರೂಷೆಯನ್ನೂ, ಮಗಳ 'ಅಷ್ಟಕ್ಕಷ್ಟೆ'ಯಾಗಿರುವ ವೃತ್ತಿಯನ್ನೂ ಆಕೆ ಗಮನಿಸಿದ್ದಳು. ಅಳಿಯನನ್ನು ಹೊಗಳಿ, 'ಅವರಿಂದಲೇ ಮಗು ಬದುಕಿತೆಂದು' ಹೇಳಿ, ಮಗಳನ್ನು ಬೈದು, ಸಂಸಾರದ ಜವಾಬ್ದಾರಿಯನ್ನು ಹೆಚ್ಚೆಚ್ಚು ಹೊರಬೇಕೆಂದು, ಕಲಿಯಬೇಕೆಂದು ಉಪದೇಶಿಸಿದ್ದಳು.

ಗಂಡನು ಹಂಗಿಸಿದ ಆ ದಿನ ಅವಳು ಒಮ್ಮೆಲೇ ಒಳಗೆ ಹೋಗಿಬಿಟ್ಟಳು. ಇಂಥ ಸಿಟ್ಟಿನ ಬೆಲೆ ಎಷ್ಟು ಎಂಬುದನ್ನು ಅರಿತವನಂತೆ, ರಾಘಣ್ಣ ಮಗುವಿನೊಟ್ಟಿಗೆ ಮತ್ತೆ ನಲಿದಾಡಿದ. ಹತ್ತು ನಿಮಿಷದ ನಂತರ ಮಗುವಿಗೆ ಹಸಿವಾಗಿದೆಯೆಂದು ತಿಳಿಯಲು, ಒಳಗೆ ಬಂದು ಹೊಟ್ಟೆಗೆ ಕೊಡಲು ಅವಳ ಕಡೆಗೆ ಮಗುವನ್ನು ಕೊಡಹೋದ.

"ಯಾಕೋ ನೀಚಾ, ಈಗ ಬೇಕಾಯಿತೇನೋ ನಾನು? ಹೋಗ್ಹೋಗು. ನಾ ನಿನಗೆ ಏನೂ ಅಲ್ಲ; ಅವರ ಕಡೆಗೇ ಹೋಗು. ಅವರೇ ಹಾಕತಾರೆ ಹೊಟ್ಟೆಗೆ" ಎಂದಳು.

"ಅದಕ್ಕೂ ತಯಾರಿದ್ದೇನಿ ನಾನು. ಆದ್ರ ಏನು ಮಾಡೋದು ದೇವರು ಅದೊಂದು ಅನುಕೂಲತಾ ಕೊಟ್ಟಿಲ್ಲ" ಎಂದನು.

ಸಿಟ್ಟಿನಲ್ಲಿಯೂ ನಗೆ ತಡೆಯದೆ ಬಂದಿತ್ತು, ಸರಸಳಿಗೆ. ಹುಸಿ ಮುನಿಸು, ಎಂದು ರಾಘಣ್ಣನಿಗೆ ಇನ್ನಷ್ಟು ಅನಿಸುವಂತಾಯಿತು ಅದರಿಂದ.

ಊಟಕ್ಕೆ ಕುಳಿತರು. ಮಗುವಿಗೆ ಮೆತ್ತನೆಯ ಅನ್ನ ಮಾಡಲಾಗಿತ್ತು. ಉಣಿಸುವವ ರಾಘಣ್ಣನೇ.

ಅದನ್ನು ಕಂಡು ಬೇಸರದ ಮನಸ್ಸು ಇನ್ನಷ್ಟು ಅಸಾಧುವಾದ ವಿಚಾರಗಳಿಗೆ ಎಡೆ ಕೊಟ್ಟಿತು. ಮಗುವಿನ ವಿಷಯದಲ್ಲಿ ನಾನು ತಾಯಿಯೇ ಅಲ್ಲ, ತೊತ್ತಿನ ಹಾಗೆ. ಅದರ ಬಟ್ಟೆಬರೆಗಳನ್ನೊ, ಎರೆಯುವುದನ್ನೊ ಅಷ್ಟು ಮಾಡುತ್ತೇನೆ. ತಬ್ಬಲಿ ಮಕ್ಕಳಿಗೆ, ಹಾಲಿದ್ದ ಹೆಣ್ಣು ಮಕ್ಕಳಿರುವಂತೆ, ನಾನು ಮಗುವಿಗೆ ಇದ್ದೇನೆ. ಮಗು ನನ್ನ ಹತ್ತಿರ ಬರುವುದಿಲ್ಲ ಎಂದುಕೊಂಡಳು. ಆ ರಾತ್ರಿಯೆಲ್ಲ ಈ ವಿಚಾರ ಒಳಗೊಳಗೇ ಹೆಡೆಯಾಡಿಸುತ್ತಿತ್ತು.

ಮರುದಿನವೇ ಬೆಳಿಗ್ಗೆ ಎದ್ದು ಮಗುವಿಗೆ ಎರೆದಾದ ಮೇಲೆ ಅದು ಅಳತೊಡಗಿತು. ಹಟ ಹಿಡಿಯಿತು. ಅವಳ ಹತ್ತಿರ ಸುಮ್ಮನಾಗಲಿಲ್ಲ. ಬಹಳ ಹೊತ್ತು ಅಳುವುದನ್ನು ಕಂಡು ರಾಘಣ್ಣ ಸಿಟ್ಟುಗೊಂಡು "ಬುದ್ಧಿ ಎಲ್ಲಿಟ್ಟೀದಿ? ಕೂಸು ಒಂದೇ ಸಮನೆ ಅಳತದೆ. ಸುಮ್ಮನಿರಿಸಲಿಕ್ಕೆ ಸಹಿತ ಬರುವುದಿಲ್ಲ ನಿನಗೆ" ಎಂದ. ತಾನು ಕರೆದುಕೊಂಡು, ೫-೧೦ ಮಿನಿಟು ರಮಿಸಿದ. ಅಳುವಿನ ಭರ ಕಡಿಮೆಯಾದಾಗ ತೊಟ್ಟಿಲಲ್ಲಿ ಮಲಗಿಸಿ ತೂಗಿದ. ಬಿಕ್ಕುಗಳಲ್ಲೇ ನಿದ್ದೆ ಯಾವಾಗಲೋ ಬಂದಿತ್ತು, ಮಗುವಿಗೆ. ಸುಮ್ಮನೇ ಇದ್ದಳು ಸರಸಿ.

ಉಂಡು ಕಛೇರಿಗೆ ಹೋದ ರಾಘಣ್ಣ. ಮತ್ತು ಕೆಲಸದ ಮೂಲಕ 'ಮಧ್ಯಾಹ್ನ ಸಾಧ್ಯವಾದರೆ ಬಂದೇನು' ಎಂದು ಹೇಳಿ ಹೋದ. ಔಷಧ ಹಾಕಲು ಮೂರು ಮೂರು ಸಲ ಸೂಚನೆ ಕೊಟ್ಟ. ಅದರಿಂದ ಆಕೆ ಅಕ್ಕಸಗೊಂಡು, "ಹಾಕತೇನಿ ಹೋಗ್ರಿ, ನಾ ಏನು ಕೂಸಿಗೆ ಬ್ಯಾರೇದೇನು ಹಾಕೂದಿಲ್ಲ" ಎಂದಳು.

ರಾಘಣ್ಣ ಬರಲಿಲ್ಲ. ಅವಳೇ ಔಷಧ ಹಾಕಿದಳು. ಐದು ಹೊಡೆಯಲು ಬಂದಿತ್ತು. ಮಗು ಹಸಿವೆಯಾಗಿ ಅಳತೊಡಗಿತು. 'ಅಳಲೊಲ್ಲದೇಕೆ' ಎಂದುಕೊಂಡು ಸುಮ್ಮನೆ ಕೂತಳು. 'ಉಣಿಸುವುದಕ್ಕೆ ಅವರು ಬೇಕು, ಆಡಿಸಲಿಕ್ಕೆ ಬೇಕು, ಮಲಗಿಸಲಿಕ್ಕೂ ಅವರು ಬೇಕು, ಅಂಗೀ ಹಾಕುವುದಕ್ಕೂ ಅವರೆ ಬೇಕಲ್ಲ? ಅವರು ಬರಲಿ' ಎಂದು ಹೇಳಿದಳು, ಮಗುವಿಗೆ.

ಮಗು ಅಳುತ್ತಿತ್ತು, ಅದನ್ನು ಕೇಳಿ ಏನೋ ಒಂದು ಕಳವಳವಾಗುತ್ತಿತ್ತು. ಆದರೂ ಸುಮ್ಮನೆ ಕೂತಿದ್ದಳು. ಕುತ್ಸಿತ ಕೋಪದಲ್ಲಿ ಆ ಕಳವಳ ಮೇಲೆದ್ದು ಬರಲಿಲ್ಲ.

ಹೀಗೆ ನಡೆಯಿತು ಪೂರ್ಣ ೩ ಮಿನಿಟು. ಮಗು ನಿಸ್ಸಹಾಯವಾಗಿ ಅಳುತ್ತಿತ್ತು. ಆರ್ತ ಮುಖವನ್ನು ನೋಡಿ ನೋಡಿದ ಹಾಗೆಲ್ಲ ಒಳಗಿನ ಕುದಿ ಹೆಚ್ಚಾಯಿತು. 'ಯಾಕೆ ಹಾಂಗ ಒದರಿಕೋತೀದಿ ಹಿಡಿ' ಎಂದು ತೊಡೆಯ ಮೇಲೆ ಮಲಗಿಸಿಕೊಂಡಳು. ನಡುನಡುವೆ ಅಳುವನ್ನು ನಿಲ್ಲಿಸಿದರೂ ಬಿಕ್ಕುತ್ತ ಮಗು ಹೊಟ್ಟೆ ತಿನ್ನುತ್ತಿತ್ತು. ಕಕ್ಕುಲಾತಿ ಬಂದಂತಾದರೂ ಯಾವದೋ ನಂಜು ಅದನ್ನು ತಡೆಹಿಡಿಯುವದೂ ಅವಳಿಗೆ ಸ್ವತಃ ಅನಿಸದಿರಲಿಲ್ಲ.

ಅಷ್ಟರಲ್ಲಿ ಯಾರೋ ಬಾಗಿಲು ತಟ್ಟಿದರು. ತಟ್ಟಿದ ರೀತಿ ಪರಿಚಿತವಾದುದೇ. ಅವರೇ ಬಂದರು ಎನ್ನುತ್ತಲೇ ಮಗುವನ್ನು ಮತ್ತೆ ಅದರ ಹಾಸಿಗೆಯ ಮೇಲೆ ಮಲಗಿಸಿ ಎದ್ದು ಬಾಗಿಲು ತೆರೆದಳು. ಮಾತನ್ನೂ ಆಡದೆ ಗಂಟುಮೊಗದಿಂದ ಸ್ವಸ್ಥ ಮೊದಲಿನ ಜಾಗದಲ್ಲಿ ಕುಳಿತು ಬಿಟ್ಟಳು. 'ಹೂಂ, ಬಂದರಲ್ಲ ಅದರ ತಾಯಿ' ಎಂದು ಹೇಳಿತು ಮನಸ್ಸು.

ಅರ್ಧಕ್ಕೆ ಬಿಡಿಸಿದುದರಿಂದ ಮಗು ಹೆಚ್ಚಾಗಿ ಕೀಸರಿಟ್ಟಿತು. ಮೊದಲೇ ರಾಘಣ್ಣ ಮಧ್ಯಾಹ್ನಕ್ಕೆ ಬರಕ್ಕಾಗಿರಲಿಲ್ಲವೆಂದು, ಬೇಗ ಬಂದಿದ್ದ. ಈ ಮಗುವಿನ ವಿಷಯದಲ್ಲಿ ತಿಳಿದೂ ಅಲಕ್ಷ್ಯ ಮಾಡಿ ಅಳಿಸುವುದು ಅವನಿಗೆ ತಡೆಯಲಾಗಲಿಲ್ಲ. ಸಿಕ್ಕಾಪಟ್ಟೆ ಬೈದ. ಬೂಟನ್ನು ಕೂಡ ತೆಗೆಯದೆ ಮಗುವನ್ನು ಕರೆದುಕೊಂಡ. 'ಔಷಧ ಹಾಕೀಯಿಲ್ಲೊ' ಎಂದು ಕೇಳಿದ. ಆಕೆ ಉತ್ತರ ಕೊಡಲಿಲ್ಲ. 'ಬರಬರುತ್ತ ಕತ್ತಿ ಆಗಲಿಕ್ಕೆ ಹತ್ತಿರುವಿ' ಎಂದ. "ಹೌದು, ತಿಳಿದೂ ಏಕೆ ಮದುವಿ ಮಾಡಿಕೊಂಡಿರಿ?" ಎಂದು ಇವಳ ಉತ್ತರ. ಮಗುವಿನ ಅಳುವಿನ ಹಿನ್ನೆಯಲ್ಲಿ ನಡೆದಿತ್ತು ಈ ರಭಸದ ತಿಳಿಗೆಟ್ಟ ವಾದ. ಮಗು ಸುಮ್ಮನಾಗದಿದ್ದುದನ್ನು ಕಂಡು, 'ತೊಗೊ, ಹೊಟ್ಟೆ ಕೊಡು' ಎಂದನು. 'ಇಲ್ಲ, ಎಷ್ಟೆಂದರೂ ನಾ ಕೊಟ್ಟದ್ದು, ಅದಕ್ಕೆ ವಿಷ' ಎಂದಳು.

ಎಂಥ ಮಾತು! ಸರಸಿಯ ಕೆನ್ನೆಗೆ ರಾಘಣ್ಣ ಎರಡೇಟು ಬಿಗಿದ. 'ಬಿಡು ಹೋಗು' ಎಂದು ಮಗುವಿನ ಕೈಯಲ್ಲಿ ಗ್ಲೂಕೊ ಸಕ್ಕರೆ ಅದ್ದಿದ ಚಮಚ ಕೊಟ್ಟು, ಹಾಲು ಬಿಸಿ ಮಾಡತೊಡಗಿದ.

ಸರಸಿ ಗಂಡನ ಕೈಯಿಂದ ಹೊಡೆತ ತಿಂದದ್ದು ತೀರ ಕಡಿಮೆ. ಒಂದೋ, ಎರಡೋ ಸಲ ಇರಬೇಕು. ಹೊಡೆಸಿಕೊಂಡ ಅಪಮಾನದಿಂದ ಬೇಯುತ್ತ ಸರಸಿಯು 'ಇಲ್ಲ, ಇವತ್ತು ಮುಗಿದುಹೋಗಲಿ ಕೂಸಿನ ಲಾಲನೆ ಪಾಲನೆಯನ್ನು ತಾನೇ ಮಾಡುತ್ತೇನೆ ಎಂಬ ಇವರ ದಿಮಾಕನ್ನು ಮುರಿಯದಿದ್ದರೆ ತಾನು ಸರಸಿಯೇ ಅಲ್ಲ. ಸಡಿಲು ಬಿಟ್ಟರೆ, ನಾನು ಮನೆಯಲ್ಲಿ

ಇರುವ ಅಗತ್ಯವೂ ಇಲ್ಲ ಎಂದಾರು! ನಾನು ಈ ಮನೆಗೆ ಗೃಹಿಣಿ! ಗಂಡಸು ಮಗನ ತಾಯಿ ನಾನು ಏನೂ ಅಲ್ಲದವರಂತೆ, ಯಾತಕ್ಕೂ ಬಾರದವರಂತೆ ಕೀಳಾಗಿ ಬಾಳ್ವೆ ನಡಸಲಿಕ್ಕೆ ಈ ಮನೆಗೆ ಬರಲಿಲ್ಲ...'

ಸರಸಿಯು ಸಂತಾಪದ ಕುಲುಮೆಯಲ್ಲಿ ಇಂಥ ಎಷ್ಟೋ ಕಿಡಿಗಳು ಹಾರತೊಡಗಿದ್ದುವು.

ರಾತ್ರಿ ಹತ್ತು ಹೊಡೆಯುವವರೆಗೂ ಈ ಜಗಳದ ಹೊಗೆ ಅಡಗಲಿಲ್ಲ. ಅಡುಗೆಯನ್ನು ಮಾಡುತ್ತಿದ್ದಾಗ ಆಕೆ 'ನನ್ನದೇನು ತಪ್ಪು? ನನಗೇನು ತಿಳಿಯಲೊಲ್ಲದು' ಎಂದು ಒಲೆಯ ಮುಂದೆ ಕಣ್ಣೀರು ಹಾಕಿದಳು. 'ತಾಟು ಹಾಕಿದೆ,' 'ಹಾಲಿನ ಪಾತ್ರೆಯವ ಬಂದ' ಎಂಬ ಬಗೆಯ ಸಾದಾ ಹಾಗೂ ಅನಿವಾರ್ಯದ ಮಾತುಗಳನ್ನು ಬಿಟ್ಟರೆ ವಾತಾವರಣ ಮೌನದಲ್ಲೇ ಕುದಿಯುತ್ತಿತ್ತು.

ಅದೇ ಸಿಟ್ಟಿನಲ್ಲೇ ಮುಸುಕೆಳೆದು ಇಬ್ಬರೂ ಮಲಗಿಕೊಂಡರು. ಸರಸಳಿಗೆ ಬೇಗ ನಿದ್ದೆ ಬರಲಿಲ್ಲ. ಯೋಚನೆಗಳ ಜೊತೆಗೆ ಅವಳೂ ಹೊರಳಾಡುತ್ತಿದ್ದಳು.

ರಾತ್ರಿ ವೇಳೆ ಎಷ್ಟಾಗಿದ್ದಿತೋ ಏನೋ, ಬಳಿಯಲ್ಲೇ ತೊಟ್ಟಿಲಲ್ಲಿ ಮಲಗಿದ್ದ ಮಗು ಅಳಲು ತೊಡಗಿತು. ದಿನವೂ ತೀರ ನಿದ್ದೆಗಣ್ಣಿದ್ದರೆ ರಾಘಣ್ಣನೇ ಆ ಕೂಗಿಗೆ ಏಳುವ. ಆಗ ಹೆಂಡತಿಯನ್ನಾದರೂ ಎಬ್ಬಿಸುತ್ತಿದ್ದ. ತಾನಾದರೂ ತೊಟ್ಟಿಲು ತೂಗುತ್ತಿದ್ದ. ಇವತ್ತು ಕೇಳಿಯೂ ಸುಮ್ಮನಿದ್ದ.

ಸುರುವಿನ ಅಳುವಿಗೆ, ಅವರೇ ಏಳಲಿ ಎಂದು ಸರಸಿಯೂ ಸುಮ್ಮನೆ ನಿದ್ದೆ ಹತ್ತಿದವರಂತೆ ಮಲಗಿದ್ದಳು.

ರಾಘಣ್ಣ ಕಲ್ಲು ಮನಸ್ಸು ಮಾಡಿದ್ದ.

ಇವರಿಗೆ ಖಂಡಿತ ಎಚ್ಚರವಾಗಿದೆ. ಇವರೇ ಕರೆದುಕೊಳ್ಳಲಿ ಎಂದು ಇವಳ ಹಟ.

ರಾಘಣ್ಣ ಮುಸುಕಲಿಲ್ಲ ಕೂಡ.

ನಮ್ಮ ಜಗಳದಲ್ಲಿ ಮಗು ಇನ್ನೂ ಅಳಬೇಕೆ? ಎಂದುಕೊಂಡಳು ಸರಸಿ.

ಅಳುವಿನ ಏರೆಲ್ಲ ಹೋಗಿ ನಿತ್ರಾಣವಾಗಿ ಅಳುತ್ತಿತ್ತು. ಅಷ್ಟು ಸಂಕಟಪಟ್ಟು ಅಳುವುದನ್ನು ಆಕೆ ಕೇಳಿರಲಿಲ್ಲ.

ದಿಗ್ಗನೆ ಎದ್ದು ಮಗುವನ್ನು ಕರೆದುಕೊಂಡಳು. ಅದು ಹೊಟ್ಟೆ ತಿನ್ನಲಿಲ್ಲ. ಅಂಗಿ ತೆಗೆದು ನೋಡಿದಳು. ತಗಣೆಯೊಂದು ಅದರ ಕೆಂಪ ಮೈಯ ರಕ್ತ ಹೀರಿ, ತಾನು ಕೊಬ್ಬಿದ ಗುರುತನ್ನು ಬಿಟ್ಟು ಹೋಗಿತ್ತು. 'ನನಗೇಕಿಷ್ಟು ಹಟ ಬರಬೇಕು ಮಗುವಿನ ಮೇಲೆ' ಎಂದು ಒಂದೆರಡು ಕ್ಷಣದಲ್ಲಿ ಸಾವಿರ ಸಲ ಬೈದುಕೊಂಡಳು.

ಬಳಿಯಲ್ಲಿ ಮಲಗಿಸಿಕೊಂಡು, ಮರೆಯಲ್ಲಿ ಮಗುವಿನ ಹಸಿವನ್ನು ಕಳೆಯುತ್ತಿದ್ದಳು. ಗಂಡನ ಕಡೆಗೆ ನೋಡಿದರೆ, ಆತ ಇನ್ನೂ ಮೌನ. 'ಎಂಥ ಧಿಮಾಕೋ ಏನೋ, ಕೇಳಿಸಿಯೂ ಸುಮ್ಮನಿರಬೇಕೆಂದರೆ' ಎಂದು ಗೊಣಗಿದಳು.

ಮಾತು ಕೇಳಿಸಿತೆಂದೇ ರಾಘಣ್ಣ ಗಕ್ಕನೆ ತಿರುಗಿದ. ನಗತೊಡಗಿದನು.

"ಈಗ ಹೇಳು ನಾ ಹೆಚ್ಚೋ, ನೀ ಹೆಚ್ಚೋ ಕೂಸಿಗೆ?"

"ಸಾಕು ಹೋಗ್ರಿ, ಹೇಳೋ ಹಂಗಿಲ್ಲ ನಿಮ್ಮದು" ಎಂದಳು.

"ಸರಸೂ ಕೂಸು ಅಳುವುದು ಯಾರಿಗೆ ಹೆಚ್ಚು ನೋಯಿಸಿತು? ಯಾವ ಕಾಲಕ್ಕೂ ತಾಯಂದಿರ ಕಕ್ಕುಲಾತಿಯೇ ಹೆಚ್ಚು ಅಂತ ಈಗಲಾದರೂ ಖಾತ್ರಿಯಾಯಿತಲ್ಲ" ಎಂದನು.

ಅವಳ ಮುಖ ಅದನ್ನು ಹೇಳಿಯೇ ಇತ್ತು. ಆದರೆ, ಹೊಟ್ಟೆ ತುಂಬಿದ ಮಗು ತಾಯ ಅಪ್ಪುಗೆಯಿಂದ ಕದಲದೆ, ತಿಳಿಯದೆಯೇ ತಂದೆಯ ಕಡೆ ಕೈಚಾಚಿದುದನ್ನು ಕಂಡು,

"ಇಲ್ಲ, ನೀವಂತೆ. ನೋಡಿರಿ; ಮತ್ತೆ ನಿಮ್ಮ ಕಡೆಗೇ ಹೋಗಬೇಕೆನ್ನುತ್ತದೆ" ಎಂದು ಸಣ್ಣ ನಗೆಯಲ್ಲಿ ತೇಲಿಸಿ ಹೇಳಿದಳು ಸರಸವತಿ ಸರಸಿ.

❄ ❄ ❄ ❄ ❄

೫. ಸಂಭಾವಿತ

“ನಿಮ್ಮ ಮನೆಯ ಮುಂದೆ ಒಂದು ಚಿಕ್ಕ ಕೈದೋಟವಿದೆ; ತುಸು ಅಂತರದಲ್ಲಿ ಇನ್ನೊಂದು ಮನೆಯ ಮುಂದೆಯೂ ಒಂದು ಕೈದೋಟವಿದೆಯೆಂದು ಒಂದಿಷ್ಟು ಭಾವಿಸಿಕೊಳ್ಳಿ. ನಿಮ್ಮಲ್ಲಿಯೂ ಹೂವಿನ ಬಳ್ಳಿಗಳಿವೆ. ಅವರಲ್ಲಿಯೂ ಇವೆ. ನಿಮ್ಮ ಹೂಗಳ ಕಂಪನ್ನು ಯಥಾಪ್ರಕಾರ ನಿತ್ಯದಂತೆ ಸೇವಿಸಿ, ಮುಂದೆ ಹೊರಟಾಗ ದಾರಿಯಲ್ಲಿ ಆ ಮನೆಯ ಮುಂದಿನ ಕೈದೋಟದಲ್ಲಿಯ ಒಂದು ಗುಲಾಬಿಯ ಹೂ ತನ್ನ ಮನಮೋಹಕ ಸೌಂದರ್ಯದಿಂದ, ಸುವಾಸಿಕ ಪರಿಮಳದಿಂದ ನಿಮ್ಮನ್ನು ‘ಎಳೆ’ಯುತ್ತದೆ. ನೀವು ಒಂದು ಕ್ಷಣ ನಿಂತು ನೋಡಿದರೆ, ಅದರ ವಾಸನೆಯನ್ನು ಹೀರಿದರೆ ತಪ್ಪೇನಿದೆ? ಅದು ನಿಮ್ಮ ಮಾಲ್ಕಿಯದಲ್ಲ, ನಿಜ. ಅದನ್ನು ನೀವು ಹರಿದು ನಿಮ್ಮ ಕೈಯಲ್ಲಿ ತೆಗೆದುಕೊಂಡು ಮನಬಂದಂತೆ ಅದರ ಉಪಯೋಗ ಮಾಡಿಕೊಳ್ಳಲಾರಿರಿ; ನಿಜವೇ. ಆದರೆ ಅದನ್ನು ನೋಡುವುದಕ್ಕೂ ಕೂಡ ಆಗದು ಎನ್ನುವುದು ಸರಿಯಾದೀತೆ? ‘ನಮ್ಮದಲ್ಲ’ ಎನ್ನುವ ಏಕಮೇವ ಕಾರಣದಿಂದ, ಬಿಡಬೇಕೆಂದಾದರೆ ಆ ಮನೆಯ ಮಾಲಿಕರು ಅದನ್ನು ತಮ್ಮ ಹಿತ್ತಲದಲ್ಲಿ, ಮರೆಯಲ್ಲಿ ಏಕೆ ಬೆಳೆಯುವುದಿಲ್ಲ? ನಾಲ್ಕು ಜನರೆದುರು ಪ್ರದರ್ಶಿಸಲೆಂದೇ ಅವರು ತಮ್ಮ ಸೌಂದರ್ಯವೃತ್ತಿಯನ್ನು ಹೊರಗಿಡುತ್ತಾರಲ್ಲವೆ? ಇದರಲ್ಲಿ ನಿಮ್ಮ ತಪ್ಪು ಇಲ್ಲ, ಊಂಹು ಇಲ್ಲ.”

ಇದು ನಮ್ಮ ವಿಜಯೀಂದ್ರನ ವಾದಸರಣಿ. ಇಷ್ಟೇ, ಮೇಲಿನ ದೃಷ್ಟಾಂತವನ್ನು ಅವನು ಸ್ತ್ರೀ ಸೌಂದರ್ಯದ ತನ್ನ ಅರಾಧನೆಗೆ ಅನ್ವಯಿಸುತ್ತಾನೆ. ಅವನ ಹೆಂಡತಿ ಕಿಟ್ಟಿ ಮನೆಯಲ್ಲಿ ಇದ್ದಾಳೆ. ಆದರೂ ಮುಂಬಯಿಯಂತಹ ಬೆಡಗಿನ ನಗರದಲ್ಲಿ ತಮ್ಮ ಬಿನ್ನಾಣಗಳಿಂದ ಪ್ರದರ್ಶನೀಯ ರೀತಿಯಲ್ಲಿ ಮಹಿಳಾವೃಂದವು ಮೆರೆಯುತ್ತಿರುವಾಗ, ತನ್ನಂತಹ ಜಾತ್ಯಾ ಸೌಂದರ್ಯಾರಾಧಕನು ಹಕ್ಕಿನಿಂದ ಅವರೆಡೆಗೆ ನೋಡಬಲ್ಲನು ಎಂಬ ಮಾತನ್ನು ಹೆಂಡತಿ ಮತ್ತು ಇತರರೆದುರು ಘಂಟಾಘೋಷವಾಗಿ ಸಾರುತ್ತಿದ್ದ ವಿಜಯೀಂದ್ರನು,

ತಾನು ಸಂಭಾವಿತನೇ ಎಂದು ತಿಳಿದಿದ್ದ. ಅವನ ಈ ಸಂಭಾವಿತತನಕ್ಕೆ ರವಿವಾರವು ಅತ್ಯಂತ ಸುಯೋಗ್ಯವಾದುದಿತ್ತು.

ಅಂಥ ಒಂದು ರವಿವಾರದ ಬೆಳಿಗ್ಗೆ, ಮುಂಬಯಿಯ ಶಿವಾಜಿ ಪಾರ್ಕಿನ 'ತರಂಗ' ಆಲೋಕ'ವೆಂಬ ದೊಡ್ಡ ಕಟ್ಟಡದಲ್ಲಿಯ ಎರಡು ಕೋಣೆಗಳ ತನ್ನ ಮನೆಯಲ್ಲಿ ಪ್ರಾತರ್ವಿಧಿಗಳನ್ನು ತೀರಿಸಿ, ದಿನಪತ್ರಿಕೆಯನ್ನು ತಿರುವಿಹಾಕುತ್ತ ಕುಳಿತಿದ್ದಾಗ ಶಾಮಣ್ಣನ ಆಗಮನವಾಯಿತು. ವಿಜಯನಿಗಿಂತ ೬-೭ ವರುಷಕ್ಕೆ ಹಿರಿಯನಾದ ಶಾಮಣ್ಣನು ಆ ಕುಟುಂಬಕ್ಕೆ ಒಬ್ಬ ಗೆಳೆಯನಂತಿದ್ದ.

ಗಂಡನ ಗಡ್ಡದ ಚಾಕರಿಗೆ ಬಿಸಿ ನೀರನ್ನು ತಂದುಕೊಡುತ್ತಿದ್ದ ಕಿಟ್ಟಿಗೂ ಶಾಮಣ್ಣನನ್ನು ಕಂಡು ಬಹಳ ಸಂತೋಷವಾಯಿತು. ಅವನ ದಾಡಿಯ ತಯಾರಿಯನ್ನು ನೋಡಿ ಶಾಮಣ್ಣನು

"ಇವತ್ತು ಯಾಕೋ ನಿನ್ನ ದಾಡಿ, ಆದಿತ್ಯವಾರ ದಿವಸ" ಎಂದನು.

"ಕಾಕಾ, ಅವರಿಗೆ ಬಾಕೀ ದಿವಸ ಬಿಟ್ಟರೆ ನಡೀತದ. ಆದಿತ್ಯವಾರ ದಾಡೀ ಆಗಲಿಕ್ಕೇ ಬೇಕು" ಮರುನುಡಿದಳು ಕಿಟ್ಟಿ.

ಅವಳ ಮಾತಿನ ಅರ್ಥ ಇಬ್ಬರು ಗಂಡಸರಿಗೂ ತಿಳಿಯದೇ ಇರಲಿಲ್ಲ.

"ಹಂಗಾರ ಇನ್ನೂ ಹಡುಗಿಯರನ್ನ ನೋಡುವ ಚಟ ಬಿಟ್ಟಿಲ್ಲ ಅನ್ನು?" ಎಂದ ಶಾಮಣ್ಣ.

"ಅದು ಹೆಂಗ ಬಿಡತಾರ? ಚಟಾ ಯಾವಾಗಲೂ ಚಟಾನೇ" ಎನ್ನುತ್ತ ಕಿಟ್ಟಿ ಚಹಾ ತರಲು ಒಳಗೆ ಹೋದಳು.

ವಿಜಯೀಂದ್ರನಿಗೆ ತನ್ನ ನಿಲುಮೆಯನ್ನು ಸಮರ್ಥಿಸುವ ಪ್ರಸಂಗವೀಗ ತಾನಾಗಿ ಒದಗಿಬಂತು.

"ಯಾವುದೇ ತರದ ಖರ್ಚು ಇಲ್ಲದ ಚಟಾ ಅದು, ಶಾಮಣ್ಣಾ. ತಾನಾಗೇ ಮನರಂಜನ ಆಗತದ. ಮುಖ್ಯ ಅಂದ್ರ ನಮ್ಮ ಸೌಂದರ್ಯ ದೃಷ್ಟಿ ಬೆಳೀತದ ಹಾ, ಹಾ. ನೀ ಹೇಳಬೇಕೆನ್ನೋದು ತಿಳೀತು. ರಸ್ತೇದಾಗಿನ ಹುಡುಗಿಯರ ಕಡೆ ಕಣ್ಣು ಹೊಡೆದು, ಅವರ ಬೆನ್ನು ಹತ್ತಿದರ ಹಿಂದೆ ಪೊಲೀಸರು ನಮ್ಮ ಬೆನ್ನು ಹತ್ತತಾರ ಅನ್ನೋದು ನನಗೆ ಗೊತ್ತು. ಅಂಥಾ ಮವಾಲಿಯಲ್ಲ ನಾ. ಬೀದಿಯ ಕಾಮಣ್ಣ ನಾ ಎಂದಿಗೂ ಆಗೂದಿಲ್ಲ! ತಾನಾಗೇ ನನ್ನ ಕಣ್ಣಿನ ಅಳವಿನೊಳಗೆ ಬಂದ ಹುಡುಗಿಯರನ್ನ ಬರೇ ನೋಡತೀನಿ. ಅಂತೇ ನನ್ನ ಹೆಂಡತಿಯ ಪರವಾನಿಗಿ ಅದ ಇದಕ್ಕ."

"ಬರೇ ನೋಡುದಲ್ಲದ, ಅದಕ್ಕೂ ಮುಂದ ಹೋಗುವ ಯೋಗ್ಯತಾ ನಿಮ್ಮಲ್ಲೆ ಇಲ್ಲ ಅನ್ನುವುದನ್ನ ತಿಳದೇ ನಾ ನಿಮಗೆ ಪರವಾನಗಿ ಕೊಟ್ಟೇನಿ!" ಎಂದು ಒಳಗೆ ಕುಳಿತೇ ನುಡಿದಳು ಕಿಟ್ಟಿ.

“ಆದರೂ ಮನಿವಳಗ ಕಿಟ್ಟಮ್ಮ ಇರತನS, ಹೀಂಗ ನೀ ಹೊರಗ ನೋಡ್ಯಾಡೂದು ನೆಟ್ಟಗೆ ಕಾಣೂದಿಲ್ಲ.”

“ಏ, ನೀ ತಪ್ಪು ತಿಳದೀ ಶಾಮಣ್ಣಾ. ಇವತ್ತಿಗೂ ನನ್ನ ಹೆಂಡತಿಯಂಥಾ ರೂಪವತಿಯರು ಯಾರೂ ನನಗ ನೋಡಲಿಕ್ಕೆ ಸಿಕ್ಕಿಲ್ಲ. ಹೊರಗಡೆ ನನಗ ಸೌಂದರ್ಯದ ಒಂದೊಂದೇ ಅಂಶ ನೋಡಲಿಕ್ಕೆ ಸಿಗತಿದ್ರ ನನ್ನ ಹೆಂಡತಿ ಸೌಂದರ್ಯದ ಅಖಂಡ ಮೂರ್ತಿ ಇದ್ದಾಳ!”

ಸ್ಟೋವಿನ ಸಪ್ಪಳದಲ್ಲಿ ಕಿಟ್ಟಿಗೆ ಈ ಮಾತು ಕೇಳಿಸಿದಂತೆ ಕಾಣಲಿಲ್ಲ. ಶಾಮಣ್ಣ ಮಾತ್ರ ಹೇಳಿದ.

“ಹೌದೊ. ಅಂದ್ಹಂಗ ಒಮ್ಮೆ ನೀ ಹೋಗುವ ಬಸ್ಸಿನಿಂದಲೇ ಸ್ತ್ರೀಯರನ್ನ ಎಣಿಸತಿದ್ದೆಲ್ಲ. ಅಭ್ಯಾಸ ಅನಕೋತ?”

“ಹೌದು! ಅದರಿಂದ ನಾ ಕೆಲ ನಿರ್ಣಯಕ್ಕೆ ಬಂದೇನಿ. ಒಂದು ನೂರು ಜನ ಮಹಿಳೆಯರೊಳಗೆ ಎಷ್ಟು ಜನ ಗರ್ಭಿಣಿಯರು ಹೊರಡತಾರ, ಇದರ ಮ್ಯಾಲಿಂದ, ನಮ್ಮಲ್ಲಿ ಜನನ ಸಂಖ್ಯಾ ಯಾವ ಪ್ರಮಾಣದೊಳಗೆ ಅದ ಅಂತ ಹೇಳಬಲ್ಲೆ. ಅವರಿಗೆ ಎಷ್ಟು ತಿಂಗಳು ತುಂಬಿವೆ ಅನ್ನುವುದರ ಮೇಲಿಂದ ಯಾವ ಋತುಮಾನದೊಳಗೆ ಹೆಚ್ಚು ಮಕ್ಕಳಾಗತಾವ; ಅದರಿಂದ ಹೆರಿಗೆಯ ಆಸ್ಪತ್ರೆಯ ಕೆಲಸದೊಳಗೆ ಏನ ಹೆಚ್ಚು ಕಡಿಮೆ ಆಗತದ ಅದರದೂ ಅಂದಾಜು ಕಟ್ಟಬಹುದು...”

ಹೆಂಡತಿಯ ಅಂದಿನ ಕೊಂಕು ಮಾತನ್ನೆ ನೆನೆಯುತ್ತ ವಿಜಯೀಂದ್ರನು ೯-೩೦ ಗಂಟೆಯ ಸುಮಾರಿಗೆ ‘ಹರಿನಿವಾಸ’ದ ಬಸ್ ಸ್ಟಾಪಿನಲ್ಲಿ ನಿಂತುಕೊಂಡು, ಬಸ್ ಬರುವವರೆಗಾದರೂ ತಾನು ಯಾರನ್ನೂ ನೋಡುವುದಿಲ್ಲ ಎಂದು ನಿರ್ಧರಿಸಿಕೊಂಡು ನಿಂತನು!

ಆದರೆ ಮುಂಬಯಿಯಂತಹ ಬೆಡಗಿನ ನಗರದಲ್ಲಿ ಸ್ತ್ರೀಯರು ಓಡಾಡಿಯೇ ಓಡಾಡುತ್ತಾರೆ. ಬೇಡವೆಂದರೂ ಕಣ್ಣಿಗೆ ಬೀಳುತ್ತಾರೆ. ಸಹಜವಾಗಿ ಅವನು ಮುಖವೆತ್ತಿದಾಗ, ಎದುರಿಗೇ ಎರಡು ಕಣ್ಣಿನ ಸಮ್ಯಕ್ ನೋಟದ ತೀಕ್ಷ್ಣ ಪ್ರಕಾಶವೊಂದು ಬಸ್ಸಿನ ಕ್ಯೂವಿನಲ್ಲಿ ನಿಂತಿದ್ದವರ ಮೇಲೆಲ್ಲ ಹಾಯ್ದಿತು. ಅದೆಂಥ ಕಣ್ಣಿನ ಹೊಳಪು! ಕ್ಯೂವಿನಲ್ಲಿ ನಿಂತಿದ್ದವರೆಲ್ಲರ, ಎದೆಯು ಝಲ್ ಎಂದು ಪುಕಾರಿಸಿ ಆ ಕಣ್ಣುಗಳ ಒಡತಿಯೆಡೆಗೆ ಸತೃಷ್ಣನಯನರಾಗಿ ನೋಡಿದರೆಂದೇ ವಿಜಯೀಂದ್ರನಿಗೆ ಭಾಸವಾಯಿತು. ತನ್ನ ಹೆಂಡತಿ, ಮತ್ತು ಶಾಮಣ್ಣ ಇಬ್ಬರು ಅರಸಿಕ ಶಿಖಾಮಣಿಗಳೆಂದು ಮನಸ್ಸಿನಲ್ಲಿ ಚೆನ್ನಾಗಿ ಹೀಗಳೆದು ಸುತ್ತಲೂ ತಲೆಯೆತ್ತಿ ನೋಡುತ್ತ ನಿಂತ.

ಆಗ ಒಂದೇ ಸಮನೆ ಸಾಗಿದ ಜನಸಮುದಾಯದಲ್ಲಿ, ವೈವಿಧ್ಯಪೂರ್ಣವಾಗಿ ಅಲಂಕರಿಸಿ ಕೊಂಡು ವನಿತೆಯರೂ ಹುಡುಗಿಯರೂ ಎಲ್ಲರೂ ತನ್ನ ಮುಂದೆ ಪರೇಡ್ ಮಾಡುತ್ತಿದ್ದಾರೆ

ಎನ್ನಿಸಿತು. ನಡೆದು ಹೋಗುವವರಲ್ಲದೆ ಟ್ಯಾಕ್ಸಿಗಳಲ್ಲಿ ಕುಳಿತ ಲಲನಾಮಣಿಯರೂ ತನಗೆ ಮುಖ ತೋರುತ್ತಿದ್ದಾರೆ ಎಂದವನ ಅನಿಸಿಕೆ, ಲಿಮಿಟೆಡ್ ಬಸ್ಸುಗಳಲ್ಲಿಯ ಸ್ತ್ರೀ ಮುಖಗಳನ್ನು ಸಹಿತ ನೋಡಿಯೆ ಮುಂದಕ್ಕೆ ಕಳಿಸುತ್ತಿದ್ದ. ಕೆಲವರು ಫುಟ್‌ಪಾತಿನ ಮೇಲೆ ಅವನ ಹಿಂದಿನ ಬದಿಯಲ್ಲಿ ನುಸುಳಿಕೊಂಡು ಹೋದರೆ, ವಿಜಯನು ಏನನ್ನೋ ಕಳೆದುಕೊಂಡವರಂತೆ ಹುಡುಕಾಡಿ ನಿನ್ನ ಹಿಂದಿನ ಬದಿಯನ್ನಾದರೂ ನೋಡಿದೆನಲ್ಲ ಎಂದು ಹೇಳುವವನಂತೆ ಹುಬ್ಬೇರಿಸುತ್ತ ನಿಂತಿದ್ದನು.

ಅಷ್ಟರಲ್ಲಿ ಬಸ್ಸು ಬಂದಿತು.

ಯಾವುದೇ ಬಸ್ಸಿನಲ್ಲಿ ಅವನು ಪ್ರಯಾಣಿಸಲಿ. ಏಳೆಂಟು ಜನ ಲಲನೆಯರಾದರೂ ಅದರಲ್ಲಿ ಇದ್ದೇ ಇರುತ್ತಿದ್ದರು. ಸಮಗ್ರದರ್ಶನ ಸಾಧ್ಯವಾಗಲೆಂದು ಅವನು ಯಾವಾಗಲೂ ತುಸು ಎತ್ತರದಲ್ಲಿ ನಾಲ್ಕು ಜನ ಕೂಡ್ರಲು ಬರುವಂಥ ಸೀಟಿನ ಮೇಲೆಯೇ ಕೂಡುತ್ತಿದ್ದನು.

ಒಂದು ಸೀಟಿನಲ್ಲಿ ಗಂಡ-ಹೆಂಡಿರ ಜೋಡಿಯೊಂದು ಸರಸಗೈಯುತ್ತ ಕುಳಿತಿದ್ದಿತು. ಕಿಟಕಿಯ ಬದಿಗೆ ಕುಳಿತ ಆಕೆ ಗಂಡನೆಡೆ ಮುಖಮಾಡಿ ಏನನ್ನೋ ಹೇಳುತ್ತಿದ್ದಳು. ವಿಜಯೀಂದ್ರನಿಗೆ ನೋಡಲಿಕ್ಕೆಂದು ತನ್ನ 'ಸೈಡ್ ಪೋಜ್' ಕೊಟ್ಟಿದ್ದಳು. ಅವಳನ್ನು ನೋಡುತ್ತಿದ್ದಂತೆ ಅವಳ ಗಂಡನ ಮುಖವೂ ಕಂಡಿದ್ದರೆ ಅವನಿಗೆ ಸಮಾಧಾನವಾಗುತ್ತಿತ್ತು! ಅವಳಿಗೆ ಅವನು ಅನುರೂಪನೇ ಎಂಬುದನ್ನು ನೋಡುವುದು ಬೇಡವೆ?

ಅವನ ಎದುರಿಗೇ ಒಬ್ಬ ಪಾರ್ಸೀ ಹುಡಿಗೆ ಕುಳಿತಿದ್ದಳು. ಮುಖಮಾಟ ಚೆನ್ನಾಗಿರದಿದ್ದರೂ, ತನ್ನ ಯೌವನದ ಇದ್ದ ಅಲ್ಪ ನಿಧಿಯನ್ನು ಮೊನೆಯುಳ್ಳ 'ಬಾಡೀಸಿ'ನಿಂದ ಚೆನ್ನಾಗಿರಿಸಿಕೊಂಡಿದ್ದಾಳೆ ಎಂದುಕೊಂಡನು. ತನ್ನ ಹೆಂಡತಿ, ಎಷ್ಟು ಹೇಳಿದರೂ ಇಂಥ ಬಾಡೀಸನ್ನು ಹಾಕಿಕೊಳ್ಳುವುದಿಲ್ಲ...

ಟಿಳಕ್ ಬ್ರಿಜ್ ಬಂದಿತೆಂದು ಅವನು ಬಸ್ಸಿನಿಂದ ಇಳಿದು ದಾದರ ಪೇಟೆಯತ್ತ ಸಾಗಿದನು. ಪೇಟೆಯೊಳಗೆ ಕಾಲಿಡುವುದಕ್ಕೆ ಮುಂಚೆಯೇ ಅಲ್ಲಿಯೊಂದು ವಿಶೇಷ ಘಟನೆ ನಡೆಯಿತು. ಅವನು ಹೂ ಮಾರುವವಳೊಬ್ಬಳ ಮುಂದೆ ನಿಂತುಕೊಂಡಿದ್ದ ಒಬ್ಬ ರಮಣಿಯನ್ನು ನೋಡಿದ. ಆಹ! ರೂಪ, ಹರೆಯ ಎರಡೂ ಹಿತಮಿತವಾಗಿ ಬೆರೆತದ್ದರ ಸಾರ್ಥಕವೇ ಇವಳಲ್ಲಾಗಿದೆ ಎಂದು ಅವನಿಗನಿಸಿತು.

ಆಕೆ ತನ್ನ ಎರಡೂ ಕೈಗಳನ್ನೆತ್ತಿ ಮಾಲೆಯೊಂದನ್ನು ತುರುಬಿನಲ್ಲಿ ಮುಡಿದುಕೊಳ್ಳುತ್ತಿದ್ದಳು. ಆ ನಿಂತ ಭಂಗಿಯೂ ಮುಖಲಕ್ಷಣವೂ ಅವನಿಗೆ ಇನ್ನೊಂದು ವ್ಯಕ್ತಿಯ ನೆನಪು ಮಾಡಿಕೊಟ್ಟಿತು, ಯಾರು?... ಹಾ, ಅವಳೇ! ಸಿನೆಮಾ ನಟಿ ಸಂಧ್ಯಾ. ಅವಳ ರವಕೆಯ ಅಂದಚಂದವನ್ನು ಅವನು ಹಿಂಬದಿಗೆ ಹತ್ತಿರದಲ್ಲೇ, ಆದರೆ ೪೦ ಡಿಗ್ರಿಯ ಕೋನದಲ್ಲಿ ನಿಂತು ನೋಡುತ್ತಿದ್ದಾಗಲೂ ಅದು ಹೇಗೋ ಅವಳಿಗೆ ಗೊತ್ತಾಯಿತು.

ತನ್ನ ಸೆರಗನ್ನು ಸರಿಪಡಿಸಿಕೊಳ್ಳುತ್ತ, ಫಕ್ಕನೆ ಅವನನ್ನು ನೋಡಿದಳು. ಅವಳ ಕಣ್ಣುಗಳು ಯಾವುದೊ ವಿಚಾರದಿಂದ ಅರಳಿದವು. ಕೊನೆಗೆ ತನ್ನ ಸಾವಧಾನವನ್ನು ಕಾಯ್ದುಕೊಳ್ಳಲು ಒಂದು ವೇಣಿಯನ್ನು ಕೊಂಡುಕೊಳ್ಳಲು ತಾನು ಮುಂದೆ ಬಂದ. ಹೆಂಡತಿಯೇನು ಹೇಳಿರಲಿಲ್ಲ. ಒಂದನ್ನು ಆರಿಸಿದ. ತಾನು ಮವಾಲಿಯಲ್ಲ. ಸಂಭಾವಿತ. ತನಗೊಬ್ಬ ಹೆಂಡತಿ ಇದ್ದಾಳೆ ಎಂದು ಯಾರಿಗಾದರೂ ಇದರಿಂದ ಅನಿಸುವುದಲ್ಲವೆ? ಆದರೂ ಮನಸ್ಸಿನ ಹುರಹುರಿ ಹೋಗಲಿಲ್ಲ. ಆ ವೇಣಿಯನ್ನಲ್ಲದೆ ದೇವರ ಪೂಜೆಯ ತುಳಸಿ ಹಾಗೂ ಬಿಡಿಹೂಗಳ ಪೊಟ್ಟಣವನ್ನೂ ಕಟ್ಟಿಸಿಕೊಂಡನು.

ಆ ಸುಂದರಿ ಇನ್ನೂ ಅಲ್ಲೇ ನಿಂತಿದ್ದಳು. ಹೂವಿನಾತ ಅವಳಿಗೆ ಚಿಲ್ಲರೆ ಹಣವನ್ನು ಕೊಟ್ಟಿರಲಿಲ್ಲ. ತಾನು ಮಾತ್ರ ರೊಕ್ಕವನ್ನು ಕೊಟ್ಟವನೇ ಮುಂದೆ ನಡೆದುಬಿಟ್ಟನು. ಒಂದು ಸ್ಟಾಲಿನ ಮುಂದುಗಡೆ ಇವನು ನಿಂತಾಗ ಇವನನ್ನು ಆಕೆ ಇನ್ನೊಮ್ಮೆ ನೋಡಿ ಮುಂದೆ ಸಾಗಿದಳು. ಅದೇಕೋ ಅವನ ಹೃದಯ ಒಂದೇ ಸಮನೆ ಟಕ್ ಟಕ್ ಎಂದು ಸದ್ದುಗೊಡುತ್ತಿದ್ದುದರಿಂದ ಪೇಟೆಯಲ್ಲಿ ಬೇರೆಡೆಗೆ ಲಕ್ಷ್ಯವಿಟ್ಟು ಅಡವಿಯೊಳಗಿನ ಮಿಣುಕು ಹುಳಗಳಂತೆ ಅದಿಬದಿಗೆ ಹಾಯ್ದುಹೋಗುವ, ಮೈತಾಗಿಸುವ ಸ್ತ್ರೀವೃಂದದ ರೂಪಾಂಶದತ್ತ ನೋಡುವುದು ಅವತ್ತು ಆಗಲೇ ಇಲ್ಲ. ಯಾಕೋ ಅವನಿಗೆ ಬೇಗ ಮನೆಗೆ ಹೋಗಿ ಈ ಸಂಧ್ಯಾಳನ್ನು ಕುರಿತು ವರ್ಣಿಸಬೇಕು ಎಂದೆನಿಸತೊಡಗಿತು. ಹೊರಟುಬಿಟ್ಟನು.

ಸಂಧ್ಯಾಳ ಮಾತು ಬಂದಾಗ ಕಿಟ್ಟಿಯು 'ನೂತನ ಸಮರ್ಥ'ಳ ನೆನಪು ಮಾಡಿಕೊಟ್ಟಳು. ನೂತನ ಎಂದರೆ ಕಿಟ್ಟಿಯ 'ಅತ್ಯಾ'ನ ಮಗಳು ಕಮ್ಮಾ! ಕಮಲಾಗೆ ೧೩-೧೪ ವರುಷ ವಯಸ್ಸು. ತೀರ ತೆಳ್ಳಗೆ ಇದ್ದರೂ ಆರೋಗ್ಯವಂತೆ ಇದ್ದಳು. ಮುಖವು ಚಂದ್ರಮನಂತೆ ದುಂಡಗಿರದೆ ಕೋಳಿ ತತ್ತಿಯಾಕಾರದ್ದಾಗಿತ್ತು. ಇವೆರಡರ ಸಾದೃಶ್ಯದಿಂದ ವಿಜಯೀಂದ್ರನು ಅವಳ ತಂದೆತಾಯಿಗಳ ಸಮಕ್ಷಮವೇ ಅವಳಿಗೆ ನೂತನ ಸಮರ್ಥ ಎಂದು ನಾಮಕರಣ ಮಾಡಿದ್ದನು. ಇಂದು ರವಿವಾರವಾದುದ್ದರಿಂದ ಆ ಕಮ್ಮಾನ ಮನೆಗೆ ಹೋಗೋಣವೆಂದು ಕಿಟ್ಟಿ ಸೂಚಿಸಿದಳು. ಬಾಲ್ಯ ಕೌಮಾರ್ಯಗಳ ಮಧ್ಯಾಂತರದಲ್ಲಿದ್ದ ಕಮ್ಮಾನೊಡನೆ ಅತ್ಯಂತ ಸಲುಗೆಯಿಂದ ಹರಟುವುದಕ್ಕೆ ಅವಕಾಶ ಸಿಗುವುದಲ್ಲ ಎಂಬ ಕಾರಣವಿದ್ದರೂ ಇವರಬಹುದು, ವಿಜಯೀಂದ್ರನು ಅದಕ್ಕೊಪ್ಪಿದನು.

ಆದರೆ, ಮಧ್ಯಾಹ್ನ ನಿದ್ರೆಮಾಡಿ, ಅವರಸದಲ್ಲಿ ಚಾ ಕುಡಿದು ೪ ಗಂಟೆಯ ಸುಮಾರಿಗೆ ಬಾಂದ್ರಾದಲ್ಲಿಯ ಅತ್ಯಾನ ಮನೆಯಲ್ಲಿ ಈ ಜೋಡಿ ಕಾಲಿಟ್ಟಾಗ ಕಮ್ಮಾ ಇರಲೇ ಇಲ್ಲ. ಅತ್ಯಾ, ಅವಳ ಗಂಡ ಇದ್ದರು. ಅವರು ಕಿಟ್ಟಿ ವಿಜಯರನ್ನು ಆದರದಿಂದಲೇ ಸ್ವಾಗತಿಸಿದರು. ಗೊಳ್ಳುಮಾತು ಆದ ಮೇಲೆ ಅತಿ ಸಹಜವೆಂಬಂತೆ "ನಮ್ಮ ನೂತನ ಕಾಣುವುದಿಲ್ಲವಲ್ಲ?!" ಎಂದು ವಿಜಯ ಕೇಳಿದನು.

ಕಮ್ಮ್ಾ ತನ್ನ ಗೆಳತಿಯರೊಡನೆ ಪಿಕ್‌ನಿಕ್ ಎಂದು ಪಾಲೀ ಹಿಲ್‌ನತ್ತ ಹೋಗಿರುವಳೆಂದು ತಿಳಿಯಬಂತು. ಮುಂದೆ ವಿಜಯೀಂದ್ರನು ಉಪಚಾರಕ್ಕೆ ಅದು, ಇದು ಮಾತನಾಡಿದ. ಪೇಪರನ್ನು ತಿರುಪಿಹಾಕಿದ. ಹಾಳಾದ ಕಿಟ್ಟಿ ಅಡುಗೆಯ ಮನೆಯಲ್ಲಿ ಅತ್ಯಾನ ಸಂದಿಯಲ್ಲಿಯೇ ಕುಕ್ಕರಿಸಿ ಗುಜು ಗುಜು ಮಾತಾಡುತ್ತಿದ್ದಳು. ಅರ್ಧ ತಾಸಿನ ಮೇಲೆ ಫಲಾಹಾರದ ತಟ್ಟೆ, ಬಿಸ್ಕೀಟು ಬಂದಿತು. ಅದೂ ಹಿಂದಿನ ದಿನ ಮಾಡಿ ಇಟ್ಟಿದ್ದ ತಣ್ಣಗಿನ ಫಲಾಹಾರ. ತಂದವಳು ಕಿಟ್ಟಿಯೇ.

"ಹೇಗಾಯಿತು ನಿಮಗೆ! ಕಮ್ಮ್ಾ ಪಾಲೀಹಿಲ್‌ಗೆ ಹೋಗುವಳೆಂದು ಮುಂಚೆಯೇ ತಿಳಿದಿತ್ತು. ನಾನೇ ಹೇಳಿರಲಿಲ್ಲ" ಎಂದು ಒಳದನಿಯಲ್ಲಿ ಗುಣುಗಿದಳು.

"ಐ ಕೇರ್ ಎ ಹೂಟ್ಸ್, ಕಸರತ್ ಮಾಡಿದಿ" ಎಂದು ವಿಜಯ ಸೆಡವಿನಿಂದಲೇ ಉತ್ತರ ಕೊಟ್ಟ.

ಕಿಟ್ಟಿಯ ಅತ್ಯಾ ಕಾಫಿಯ ಕಪ್ಪನ್ನು ತೆಗೆದುಕೊಂಡು ವಿಜಯೀಂದ್ರನ ಮುಂದೆ ಇಟ್ಟರು. ಆಕೆ ಎಂದೂ ನೇರವಾಗಿ ವಿಜಯನೊಂದಿಗೆ ಸಂಭಾಷಿಸುವುದಿಲ್ಲ. ಉದಾಹರಣೆಗೆ ಆಕೆಗೆ ವಿಜಯನ ಅಣ್ಣನ ಹೆಂಡತಿ ಹಡೆದಳೊ ಹೇಗೆ ಎಂಬುದನ್ನು ತಿಳಿಯಬೇಕಾಗಿತ್ತು, ಅದಕ್ಕೆ ಕೇಳಿದುದೇನಂದರೆ.

"ನಿಮ್ಮ ಅಣ್ಣನವರ ಪತ್ರ ಏನು ಸಮೀಪದಲ್ಲಿ ಬಂದಿರಲಿಕ್ಕಿಲ್ಲ."

ಮತ್ತೊಂದು ಪ್ರಶ್ನೆ. ನೇರವಾಗಿ ವಿಜಯನಿಗೆ ಸಂಬಂಧಿಸಿದುದು. ಆದರೆ ಕೇಳಿದುದು ಕಿಟ್ಟಿಗೆ.

"ಘಾಟಕ ಡಾಕ್ಟರಿಣೀ ಕಡೆ ಹೋಗಿದ್ದೇನ? ಆದಿತ್ಯವಾರ ಆಕಿ ಕಡೆ ಕರಕೊಂಡು ಹೋಗತೇನಿ ಅಂತ ಮೊನ್ನೆ ಅಂದಿದ್ದರು."

ಈ ಪ್ರಶ್ನೆಯ ಮಥಿತಾರ್ಥವೇನೆಂದರೆ ಕಿಟ್ಟಿಗೆ ಮದುವೆಯಾಗಿ ಐದು ವರುಷಗಳಾದರೂ ಮಕ್ಕಳಾಗಿರಲಿಲ್ಲ. ಒಮ್ಮೆ ಪರೀಕ್ಷೆ ಮಾಡಿಸಿಕೊಳ್ಳುವುದು ನೆಟ್ಟಗೆ ಎಂಬುದಾಗಿ ಅತ್ಯಾ ಕಿಟ್ಟಿಗೆ ಹೇಳಹತ್ತಿ ವರುಷದ ಮೇಲೆ ಆಗಿತ್ತು. "ತನ್ನ ಪ್ರಕೃತಿ ಸರಿ ಇದೆ. ಏನೆಂದು ಡಾಕ್ಟರಿಣೆಗೆ ತೋರಿಸುವುದು?" ಇದು ಕಿಟ್ಟಿಯ ವಿಚಾರ.

ಯಥಾರೀತಿ ಹಾರಿಕೆಯ ಉತ್ತರ ಕೊಟ್ಟ ವಿಜಯೀಂದ್ರ. ಅಲ್ಲಿಂದ ಅವನಿಗೆ ಬಹಳಷ್ಟು ಬೇಸರ ಬರತೊಡಗಿತು; ಅತ್ಯಾನ ಮಗ್ಗುಲನ್ನು ಬಿಟ್ಟು ಕಿಟ್ಟಿ ಬೇಗ ಹೊರಡುವುದಿಲ್ಲ ಎಂಬುದಾಗಿ ಅವಳನ್ನು ಬೈಯುತ್ತ ತಾನು ಹೊರಟು ನಿಂತನು.

"ಅರ್ಜೆಂಟ್ ಒಬ್ಬರ ಭೆಟ್ಟಿ ಆಗೋದದ... ಇಲ್ಲ, ಊಟಕ್ಕೆ ಬಂದೇ ಬರ್‍ತೀನಿ... ಕಮ್ಮ್ಾ ಎಂಟು ಗಂಟೇಕ್ಕ ಬರತಾಳ? ಒಳ್ಳೇದು..." ಎಂದು ಟೆಲಿಫೋನಿನಲ್ಲಿ ಉತ್ತರ ಕೊಡುವಂತೆ ಹೇಳಿ ಎದ್ದುಬಿಟ್ಟನು.

ತಾನಿನ್ನು ಎಲ್ಲಿಗೆ ಹೋಗಬೇಕು ಎಂದು ಯೋಚಿಸುತ್ತಿದ್ದಾಗ, 'ಮಾಮಿ' ವರೇರಕರಳ ನೆನಪು ಬಂತು. ಮಿಸೆಸ್ ವರೇರಕರ ಅವನ ಕಚೇರಿಯಲ್ಲಿಯೆ ನೌಕರಿ ಮಾಡುತ್ತಿದ್ದಳು. ೩೫-೩೮ ವರುಷ ವಯಸ್ಸಿರಬೇಕು. ತುಸು ಬೊಜ್ಜು ಮೈ, ಅತಿ ಕೆಂಪು ವರ್ಣ. ಬಂಗಾರದ ಕಟ್ಟಿನ ಕನ್ನಡಕವನ್ನು ಧರಿಸುವ ಆಕೆಗೆ ಇವನ ಕಚೇರಿಯಲ್ಲಿಯೇ 'ಮಾಮೀ' ಎಂಬ ಅಭಿದಾನ ಬಿದ್ದಿತ್ತು. ಅವಳನ್ನು ನೋಡಿದರೆ ಅವಳ ಗಂಡನಿಗೂ ಕಾಮುಕ ವಿಚಾರ ಬರಲಿಕ್ಕಿಲ್ಲ ಎಂದು ಅಂದುಕೊಳ್ಳುತ್ತಿದ್ದ ವಿಜಯೀಂದ್ರನು ಇಲ್ಲೇ ಮಾಹಿಮದಲ್ಲಿ ಇರುವ ಅವಳ ಮನೆಗೆ ಹೋಗಿ ಇಸ್ಪೀಟು ಆಡುತ್ತ ಹೊತ್ತು ಕಳೆಯುವಾ ಎಂದು ಯೋಚಿಸಿ ಸ್ಟೇಶನ್ನಿಗೆ ಬಂದು ನಿಂತಿದ್ದಾಗ,

ಝುಗ್ಗನೆ ಅವನ ಗಮನವು ಎದುರಿಗಿನ ಪ್ಲ್ಯಾಟ ಫಾರ್ಮಿನ ಮೇಲೆ ನಿಂತಿದ್ದ ಒಂದು ಸ್ತ್ರೀ ದೇಹದ ಮೇಲೆ ಹೋಯಿತು. ಕೆಂಪು ಬಣ್ಣದ ಕುಪ್ಪಸ, ಬಿಳಿಯ ವೈಲನ್ನು ಉಟ್ಟು ನಿಂತಿದ್ದಳು ಆಕೆ. ಜೊತೆಗೊಬ್ಬ ಪುರುಷ. ಅರೆ, ಅವನ್ನು ಎಲ್ಲಿಯೊ ನೋಡಿದಂತಿದೆ. ಮುಖ ನೆಟ್ಟಗೆ ಕಾಣುವುದಿಲ್ಲ. ಹಾ! ಅಂವ ನಮ್ಮ 'ಡೀಯೆಸ್'! (ಡಿ. ಎಸ್. ಕುಲಕರ್ಣಿ) ಕಾಲೇಜಿನಲ್ಲಿ ಸಹಪಾಠಿ. ಬಹಳ ದಿನಗಳ ನಂತರ ಅವನನ್ನು ಕಂಡು ವಿಜಯನಿಗೆ ಆನಂದವಾಯಿತು. ಕೂಡಲೇ ಅಲ್ಲಿಗೆ ಜಿಗಿದ.

ಡೀಯೆಸ್ಸನೆಂದರೆ ಅತ್ಯಂತಿಕ ಗೆಳೆಯ. ಆತ್ಮೀಯರಿದ್ದರೂ ಇಬ್ಬರಲ್ಲಿ ಸಂಬಂಧ ಸಂಪರ್ಕಗಳು ಇದ್ದಿರಲಿಲ್ಲ.

"ಹಲೋ."

"ಹ್ಹೆ ಲ್ಲೋ."

ಇಬ್ಬರೂ ಕೈ ಕುಲುಕಿಯೇ ಕುಲುಕಿದರು. 'ಡೀಯಸ್ಸಿ'ಯು ನಿಂತು ನೋಡುತ್ತಿದ್ದಳು. ಅಲ್ಲಿಂದ ಆ ಮಿತ್ರನು.

"ಇವರು ನಮ್ಮ ಹೆ ಹೇ..." ಎಂದು ಚೇಷ್ಟೆಯಲ್ಲಿ ವಿಜಯನಿಗೆ ತನ್ನ ಹೆಂಡತಿಯ ಪರಿಚಯ ಮಾಡಿಕೊಟ್ಟನು. ಅವರಿಬ್ಬರೂ ಹೊಸದಾಗಿ ಮದುವೆಯಾದವರಂತೆ ಕಂಡರಾದ್ದರಿಂದ.

"ಏನಪ್ಪಾ, ನಮಗೊಂದು ಆಮಂತ್ರಣ ಸಹಿತ ಕಳಸಬಾರದ?" ಎಂದು ವಿಜಯೀಂದ್ರನು ಕೇಳಿದ್ದಕ್ಕೆ "ನಿನ್ನ ಪೂರ್ಣ ವಿಳಾಸ ಗೊತ್ತಿರಲಿಲ್ಲ, very sorry" ಎಂದು ಅವನು ಉತ್ತರಿಸಿ, "ಅಂದ್ಹಂಗ ನಮ್ಮ ಶ್ರೀಮತಿ ನಿಮ್ಮ ಹೆಂಡತಿಯ ಊರಿನವರೇ" ಎಂದನು.

"ಹಾಂ. ಹೀಂಗೇನು? ನಿಮ್ಮ ಮನಿ ಎಲ್ಲಿತ್ತು ಅಲ್ಲೆ? ನನ್ನ ಹೇಣ್ತೇ, ನೀವು ಕೂಡೇ ಕಲಿತಿರಬೇಕಲ್ಲ. ಯಾರ ಪೈಕಿ ಹೇಳ್ರಿ, ನಾ ಹೇಳತೇನಿ."

ಮಿತ್ರ ಡೀಯೆಸ್ಸನು ತನ್ನ ಹೆಂಡತಿಯ ಅಪ್ಪನ, ಅರ್ಥಾತ್ ತನ್ನ ಮಾವನ ಅಡ್ಡ ಹೆಸರನ್ನು ಹೇಳಿದ. ಇಷ್ಟರವರೆಗೆ ಸುಮ್ಮನಿದ್ದ ಆಕೆ,

"ನಿಮ್ಮ ಮನೆಯವರು ಯಾರ ಪೈಕಿ?" ಎಂದು ಸೀರಾದ ಆದರೆ ಮಧುರವಾದ ದನಿಯಲ್ಲಿ ವಿಜಯೀಂದ್ರನನ್ನು ಕೇಳಿದಳು.

ಹೀಗೆಯೇ ಮಾತು ಮುಂಬರಿಯಿತು. ವಿಜಯೀಂದ್ರ ಅತ್ಯಂತ ಉತ್ಸಾಹಿತನಾಗಿ ಮಾತನಾಡುತ್ತಿದ್ದ. ಆಗಾಗ ಅವಳಿಗೂ ಪ್ರಶ್ನೆ ಹಾಕುತ್ತಿದ್ದ. ಎರಡು ಮೂರು ಬಾರಿ ಕಣ್ಣನ್ನು ಎತ್ತೆತ್ತಿ ಅವಳೆಡೆಗೆ ನೋಡಿದ.

ಗೆಳೆಯನ ಹೆಂಡತಿ! ಶಾಂತಂ ಪಾಪಂ. ಸ್ವಲ್ಪ ನಿರ್ವಿಕಾರ ಬುದ್ಧಿಯನ್ನು ಎಳೆದು ತಂದ. ಏನಿದ್ದರೂ ಅಲಭ್ಯ ಲಾಭ! ತನ್ನ ಹೆಂಡತಿಯ ಊರಿನವಳೆಂಬುದಷ್ಟೇ ಸಲಿಗೆ ಅಲ್ಲದೆ, ತನಗೂ ಡೀಯೆಸ್ಸನಿಗೂ ಆತ್ಮೀಯ ಗೆಳೆತನವಿತ್ತೆಂಬುದನ್ನು ತೋರಿಸಿಬಿಡುವುದೇ ಅವನ ಒಟ್ಟಿನ ಮಾತಿನ ತಾತ್ಪರ್ಯವಾಗಿತ್ತು.

ಅದೆಲ್ಲ ನಿಜ. ಆದರೆ ಪ್ಲ್ಯಾಟ್‌ಫಾರ್ಮಿನ ಮೇಲೆ ಹೀಗೆಯೆ ಎಷ್ಟು ಹೊತ್ತು ನಿಲ್ಲುವುದು? "ನಡೆಯಿರಿ ಮನೆಗೆ ಹೋಗೋಣ" ಎಂದು ಅವಳು ಗಂಡನಿಗೆ ಸೂಚಿಸಿದಳು.

ಆಹಾ. ಏನು ಜಾಣ ಹೆಣ್ಣು! ತಾನು ಅವರ ಮನೆಗೆ ಬರಬೇಕು ಎಂಬುದನ್ನು 'ಹೋಗೋಣ' ಎಂಬ ಪದದಿಂದ ಗಂಡನಿಗೆ ಪರ್ಯಾಯವಾಗಿ ಸೂಚಿಸಿದಳಲ್ಲವೆ?

ಮೂವರೂ ದಾರಿಯಲ್ಲಿ ಹೊರಟಾಗ ವಿಜಯೀಂದ್ರನಿಗೆ ತನ್ನ ಹೆಂಡತಿಯ ನೆನಪಾಯಿತು. ಸದ್ಯದ ಲಕ್ಷಣ ನೋಡುತಿರಲಿಕ್ಕಾಗಿ ರಾತ್ರಿಯ ಊಟ ಇವರ ಮನೆಯಲ್ಲಿಯೇ ಆಗುವಂತಿದೆ. ಅದೆಷ್ಟು ಸಲ ಡೀಯೆಸ್ಸನು ತನ್ನ ಅತಿಥಿಯಾಗಿ ಹಾಸ್ಟೆಲಿನಲ್ಲಿ ಊಟಕ್ಕೆ ಬಂದಿದ್ದ! ಹಾಗೆಂದು ಇದೇನೂ ಕಡವಲ್ಲ. ಆದರೂ ಕಿಟ್ಟಿಯ ಅತ್ಯಾನ ಎದುರು ಊಟಕ್ಕೆ ಬರುತ್ತೇನೆ ಎಂದು ತಿಳಿಸಿದ್ದ. ಏನೇ ಅಗಲಿ, ತಾನು ಊಟಕ್ಕೆ ಬರುವುದಿಲ್ಲ ಎಂದು ಅವರಿಗೆ ತಿಳಿಸುವುದು ಉತ್ತಮವೆಂದು ಕಂಡಿತಾದ್ದರಿಂದ ಅವರಿಬ್ಬರನ್ನು ಫುಟ್‌ಪಾತಿನಲ್ಲಿ ನಿಲ್ಲಿಸಿ, ಮಗ್ಗುಲಿನಲ್ಲಿಯ ಇರಾಣಿ ಹೋಟೆಲ್ಲಿಗೆ ಹೋಗಿ, 'ಅತ್ಯಾ'ನ ನೆರೆಮನೆಯ ನಂಬರನ್ನು ತಿರುಗಿಸಿದನು. ಹೀಗೆ ಫೋನ್ ಬಂದಾಗೆಲ್ಲ ನೆರೆಮನೆಯವರು ಈ ಮನೆಯವರಿಗೆ ಹೇಳಿ ಕಳುಹುತ್ತಿದ್ದರು.

ಫೋನನ್ನು ತೆಗೆದುಕೊಂಡವಳು ಕಿಟ್ಟಿಯೇ! ವಿಜಯನು ಗಡಿಬಿಡಿ ದನಿಯಲ್ಲಿ ತನ್ನ ಗೆಳೆಯ ಭೆಟ್ಟಿಯಾದನೆಂದೂ ಆಗ್ರಹ ಮಾಡಿ ಊಟಕ್ಕೆ ನಿಲ್ಲಿಸಿದನೆಂದೂ ಹೇಳಿದ.

"ಇಲ್ಲೀ ಊಟಾ ತಪ್ಪಿಸಲಿಕ್ಕೆ ಏನಾರ ಒಂದು ನೆವ."

"ಹಂಗೇನಿಲ್ಲ. ಊಟಾ ಮುಗಿಸಿ ೮-೩೦ರ ಸುಮಾರಿಗೆ ಅಲ್ಲಿಗೆ ಬರತ್ತೇನಿ."

"ಮತ್ಯಾಕ ಬರತೀರಿ? ನಾನು ಇನ್ನೊಂದು ಅರ್ಧ ತಾಸಿಗೆ ಇಲ್ಲಿಂದ ಹೊರಟುಬಿಡತೇನಿ. ಮನೀಗೆ ನೆಟ್ಟಗೆ ಬಂದಬಿಡ್ರಿ."

ನಾನಿನ್ನು ಕೇವಲ ಕಮ್ಮಾ ಯಾನೆ ನೂತನ್‌ಳ ಸಲುವಾಗಿ ಬರುವೆನೆಂದು ಭಾವಿಸಿ ತನ್ನ ಹೆಂಡತಿ ಅಲ್ಲಿಗೆ ಬರಬೇಡವೆಂದು ಹೇಳಿರಬೇಕೆ? "ಆಂ?" ಎಂದ ಫೋನಿನಲ್ಲಿಯೆ.

"ನೀವು ನನ್ನ ಕರಕೊಂಡು ಹೋಗಲಿಕ್ಕೆ ಇಲ್ಲೀ ತನಕಾ ಬರೋದು ಬ್ಯಾಡಾ ಅಂದೆ. ನನಗೂ ಒಬ್ಬಾಕಿ ಜೋಡಿಗೆ ಸಿಕ್ಕಾಳ ಕಮ್ಮಾನ ಗೆಳತಿ. ಇದೀಗ ಬಂದ್ರು ಇಬ್ಬರೂ. ಆಕಿನೂ ದಾದರ ಕಡಿಗೇ ಬರೋಕಿ ಇದ್ದಾಳಂತ."

"ಅಚ್ಛಾ" ಎಂದು ರಿಸೀವರನ್ನು ಕೆಳಗಿಟ್ಟು, ವಿಜಯೀಂದ್ರನು ತನ್ನ ಮಿತ್ರ 'ಮಿತ್ರಾಣಿ'ಯರನ್ನು ಕೂಡಿಕೊಂಡನು.

ಬಸ್ ಟರ್ಮಿನಸ್ ಹತ್ತಿರವೇ ಇದ್ದ ಅವರ ಮನೆಗೆ ಬಂದೊಡನೆ ಆಕೆ ಚಹದ ಸಲುವಾಗಿ ಸ್ಟೋ ಹೊತ್ತಿಸತೊಡಗಿದಳು. ಡೀಯೆಸ್ಸನು ಬಚ್ಚಲಿನಲ್ಲಿ ಖ್ಯಾಕರಿಸುತ್ತಿದ್ದ. ಪಡಸಾಲೆಯಲ್ಲಿ ಕುಳಿತ ವಿಜಯೀಂದ್ರನು ಸ್ಥಳ ಪರೀಕ್ಷೆ ನಡೆಸಿದ್ದನು.

ತಮ್ಮದರಂತೆಯೇ ಇರುವ ಎರಡು ಭಾಗಗಳ ಮನೆ. ಆದರೂ ಎಷ್ಟೊಂದು ಅಚ್ಚುಕಟ್ಟುತನ! ಕಿಟ್ಟಿಗೆ ಈ ಚೊಕ್ಕಟತನ ಬರಲಾರದು. ಒಂದೇ ಊರಿನವರಾದರೂ ಎಷ್ಟು ಅಂತರ! ಆದರೆ ಆ ಸ್ಥಳದಲ್ಲೆಲ್ಲ ಎದ್ದು ಕಾಣುವಂತಹವೆಂದರೆ, ಪಾಲಿಶ್‌ದಿಂದ ನಯವಾಗಿದ್ದ ಪ್ರಶಸ್ತವಾದ ಮಂಚ! ಅದರ ಬುಡದಲ್ಲಿ ಟ್ರಂಕು, ಇತರ ಸಾಮಾನುಗಳನ್ನು ಅಡಕಿಸಿ ಇಟ್ಟಿದ್ದರೂ ಮೇಲೆ ಹಾಸಿದ ಜಮಖಾನೆಯ ಪದರು ಕೆಳಗೆ ಜೋತಾಡಿ ಅದನ್ನು ಮರೆಮಾಡಿದ್ದಿತು. ಜಮಖಾನೆಯನ್ನು ಡಬ್ಬಲ್ ಗಾದಿ, ಅದರ ಮೇಲೆ ಹಾಸಿದ ಮಿದುವಾದ ಬೆಡ್ ಶೀಟು, ಸೊಳ್ಳೆಯ ಪರದೆಯನ್ನು ಹಾಕಲು ಅನುಕೂಲಿಸುವಂತೆ ಇರುವ ವ್ಯವಸ್ಥೆ. ವಾಹ್! ಜೀವನದಲ್ಲಿ ರಸಿಕತೆಯನ್ನು ಹೀರಿಕೊಳ್ಳುವುದೆಂದರೆ ಇದೇ. ನಮ್ಮ ಡೀಯೆಸ್ ಸುಖಿ ಎಂಬ ಭಾವತಂದ್ರಿಯಲ್ಲಿದ್ದಾಗ,

"ಯಾಕೋ, ಮಂಚಾ ಭಾಳ ನೋಡತೀದಿ. ನಮ್ಮ ಮಾವ ಕೊಟ್ಟದ್ದೇನಲ್ಲ ಮತ್ತ. ನಾನೇ ಮಾಡಿಸಿದ್ದು" ಎನ್ನುತ್ತ ಡೀಯೆಸ್ ಹೊರಬಂದನು.

"ನಾನೂ ಅದೇ ಅಂದೆ. ಏನು ಕೊಡತಾರೊ ಈಗಿನ ಕಾಲದ ಮಾವಂದಿರು. ಬರೇ ಕನ್ಯಾ ಒಂದ ಕೊಡತಾರ. ಒಮ್ಮೆ ನಾವು ಕನ್ಯಾ ಪಾಸ್ ಮಾಡಿದಿವಿ ಅಂದ್ರ ತೀರಿತು, ಬೇಕಾರ ಮಾಡಿಕೊ ಸಾಕಾದ್ರ ಬಿಡು ಅಂತಾರ!" ಇಬ್ಬರೂ ಮನದಣಿಯ ನಕ್ಕರು. ಗೆಳೆಯನ ಹೆಂಡತಿಗೆ ಈ ಮಾತು ಕೇಳಿಸಿತೋ ಇಲ್ಲವೋ ಅವಳ ಪ್ರತಿಕ್ರಿಯೆ ಏನೆಂಬುದು ವಿಜಯನಿಗೆ ತಿಳಿಯಲಿಲ್ಲ. ತುಸು ಹೊತ್ತಿನ ಮೇಲೆ ಚಹದ ಟ್ರೇ ಹಿಡಿದುಕೊಂಡು ಆಕೆ ಬಂದಳು.

ಚಹ ಕುಡಿಯುತ್ತ "ನಮ್ಮ ಮನೀ ಕಡೆ ಯಾವಾಗ ಬರತೀರಿ? ನಮ್ಮ ಹೇಣ್ತಿಗೆ ಅಷ್ಟು ನಿಮ್ಮ ವ್ಯವಸ್ಥಾ ಅಚ್ಚುಕಟ್ಟುತನ ಕಲಿಸಿ ಕೊಡಬೇಕು" ಎಂದು ಹೆಂಡತಿಯನ್ನು ಬೈದಂತೆ ಮಾಡಿ, ಮಿತ್ರನ ಹೆಂಡತಿಯನ್ನು ಹೊಗಳಿದನು,

ಇನ್ನು ಮುಚ್ಚಿಡುವುದರಲ್ಲಿ ಏನರ್ಥವಿದೆ? ಮೊದಲಿಗೆ ತನ್ನ ಗಂಡನ ಆತ್ಮೀಯ ಗೆಳೆಯನೆಂಬ ಭಾವನೆಯಿಂದ ತುಸು ಮಾತಾಡುತ್ತಿದ್ದವಳಿಗೆ ಈಗ ಅವನ ಅಸಹಜ ಸಲಿಗೆಯ ಮಾತುಗಳಿಂದ ಅವನ ಬಗ್ಗೆ ಆದರವುಳಿದಿರಲಿಲ್ಲ. ಹೀಗಾಗಿ ವಿಜಯನ ಸ್ಥಾನ ಆ ಹಾಸ್ಯಗಳಿಗೆ ಆಕೆ ಗಮನ ಕೊಡಲಿಲ್ಲ; ಇಷ್ಟೇ ಅಲ್ಲ, ಮುಂದೆ ಇವರ ಅಖಂಡ ಹರಟೆ ನಡೆದಾಗ ಹಿತ್ತಲ ಬಾಗಿಲಿನಿಂದ ಎದ್ದು ಹೋಗಿ ನೆರೆಮನೆಯಲ್ಲಿ ಕುಳಿತಳು.

ವಿಜಯೀಂದ್ರನಿಗೂ ಬೇಸರ, ಅಲ್ಲ, ಸಿಟ್ಟೇ ಬಂದಿತು. ಇನ್ನಿಲ್ಲಿ ಊಟಮಾಡುವುದು ದೂರವೇ ಉಳಿಯಿತು. 'ಡೀಯಸ್ಸನಂತಹ ಸರಳ ಸ್ವಭಾವದವನಿಗೆ ಈ ದಿಮಾಕಿನ ಹೆಣ್ಣು ಯೋಗ್ಯವಲ್ಲ' ಎಂದು ತೀರ್ಮಾನಿಸಿದ.

ವಿಜಯೀಂದ್ರನು ಹೊರಟು ನಿಂತಾಗ ೮-೩೦ ಆಗಲಿಕ್ಕೆ ಬಂದಿದ್ದತು. ಆವಾಗಲೂ ಆಕೆ ಮರಳಿ ಒಳಗೆ ಬಂದಂತಿರಲಿಲ್ಲ.

"ಊಟಕ್ಕೆ ಎಂದ ಬರತೀ?" ಎಂಬುದಾಗಿ ಡೀಯಸ್ ಕೇಳಿದ! "ಸ್ಪೇಶಲ್ ಅಡಿಗೆ ಮಾಡಿಸು ಅಂದ್ರ ಬರತೀನಿ" ಎಂದು ಮಾತನಾಡಿ ವಿಜಯೀಂದ್ರ, ಅಲ್ಲಿಂದ ಹೊರಬಿದ್ದನು.

ಅವನ ಮನಸ್ಸು ಕಿರಿಕಿರಿಗೊಂಡಿತ್ತು. ಬೇಸರ ಮೂಲಕದ ದಣಿವೆನಿಸಿತ್ತು. ಬಸ್ ಸ್ಟಾಪಿಗೆ ಕಾಯ್ದು ನಿಂತ. ೧೫ ನಿಮಿಷ ಕಾಯಬೇಕಾಯಿತಾದ್ದರಿಂದ ಇನ್ನಷ್ಟು ಕಿರಿಕಿರಿಗೊಂಡನು. ಕೊನೆಗೆ ದಾದರ ಟರ್ಮಿನಸ್ಸಿಗೆ ಹೊರಟು ನಿಂತ ಸಿಂಗಲ್ ಬಸ್ ಸಿಕ್ಕಿತು. ಕಿಟಕಿಗೆ ಇರುವ ಒಂದು ಸೀಟಿನ ಮೇಲೆ ಕುಳಿತನು.

ಅವನ ಮುಂದೆಯೇ ಇಬ್ಬರು ಸಿಂಧೀ ಹುಡುಗಿಯರು ಕುಳಿತಿದ್ದರು. ಅವರೆಡೆಗೆ ಅವನ ಗಮನವೇನೂ ಇರಲಿಲ್ಲ. ಒಂದು ಸ್ಟಾಪ್ ಹೋಯಿತು, ಇನ್ನೊಂದು ಬಂತು. ದಾದರಿಗೆ ಮಾತ್ರ ಹೋಗುವುದಿದ್ದುದರಿಂದ ವಿಶೇಷ ಜನ ಹತ್ತಲಿಲ್ಲ. ಮಾಹಿಮ್ ದಾಟಿ ಮೂರನೆಯ ಸ್ಟಾಪ್ ಇರಬೇಕು, ಆ ಇಬ್ಬರು ಲಲನೆಯರು ಕೆಳಗಿಳಿದರು. ಆದರೆ ಇದೇನು!

'ಛಪ್! ಛಪ್' ಎಂಬ ಸಪ್ಪಳ ಇಡೀ ಬಸ್ಸಿನಲ್ಲಿಯೇ ಪ್ರತಿಧ್ವನಿಸಿತು. ಒಬ್ಬ ಹರೆಯದ ದಾಂಡಿಗನು, ಕೆಳಗಿಳಿಯುವ ಮುಂಚೆ ವಿಜಯನ ಬಳಿಯಲ್ಲಿ ಕುಳಿತಿದ್ದ ಒಬ್ಬನಿಗೆ ನಾಲ್ಕು ಏಟು ಬಾರಿಸಿದನು.

"ಮುರ್ಖ ಕ್ಯೊಂ ಮಾರತೇ ಹೋ" ಎಂದು ಹೊಡೆಸಿಕೊಂಡವನು ಪ್ರತಿಭಟಿಸಿದಾಗ,

"ಛಾಂಚೋದ್" ಎನ್ನುತ್ತ ಆ ದಾಂಡಿಗನು ಇನ್ನೆರಡು ಏಟನ್ನು ತಾಡಿಸಿದನು.

"ಮೈ ತೊ ಕುಛ್ ನಯೀ ಕಿಯಾ. ಕಂಡಕ್ಟರ ಕು ಪೂಛೊ!"

ಕಂಡಕ್ಟರನೋ "ಹೀಗೇ ಆಗಬೇಕಾದ್ದು ಆಗಲಿ!" ಎಂಬಂತೆ ಸುಮ್ಮನಿದ್ದ. ಅಷ್ಟರಲ್ಲಿ ಆ ದಾಂಡಿಗನ ಬಳಿಯಲ್ಲಿ ನಿಂತಿದ್ದ ಇನ್ನೊಬ್ಬ ಸಿಂಧೀ ಮನುಷ್ಯನು ತನ್ನ ಸಂಗಾತಿಯನ್ನು ಎಳೆದುಕೊಂಡು ಕೆಳಗಿಳಿದನು. ಬಸ್ಸು ಮುಂದೆ ಹೊರಟಿತು.

ಎಂತಹ ರೋಮಾಂಚಕಾರೀ ಪ್ರಸಂಗ! ಯಾರಿಗೂ, ಏನು, ಹೀಗೇಕಾಯಿತು ಎಂಬುದು ತಿಳಿದಿರಲಿಲ್ಲ. ಆದರೆ ಹೊಡಿಸಿಕೊಂಡವನ ಮುಖ ಮತ್ತು ಪರಿಸ್ಥಿತಿ ನೋಡಿದಾಗ, ವಿಜಯನಿಗೆ ಸ್ಪಷ್ಟವಾಯಿತು, ತನ್ನ ಬಳಿಯಲ್ಲಿದ್ದ ಅವನು ಆ ಹುಡಿಗೆಯರ ವಿಷಯದಲ್ಲಿ ಏನೋ ಅಶ್ಲೀಲವಾದ ರೀತಿಯಲ್ಲಿ ನಡೆದುಕೊಂಡಿರಬೇಕು ಎಂದು. ಈಗ ಬಸ್ಸಿನಲ್ಲಿದ್ದವರಲ್ಲಿ ಕಂಡಕ್ಟರನೊಬ್ಬನೆ ಅವನು ಏನು ಮಾಡಿದನೆಂಬುದನ್ನು ನೋಡಿದ್ದ. ಅಂತೆಯೇ ಆ ಹೊಡೆಸಿಕೊಂಡವನು,

"ಮೀ ಕಾಯ ಕೇಲೆ ನಾಹಿ. ಕಾಯ ಹೋ ಮಾಸ್ತರ್. ತುಮೀಚ ಸಾಂಗಾ" ಎಂದು ಕೇಳಿದುದಕ್ಕೆ ಕಂಡಕ್ಟರನು 'ಈಗ ಮುಗೀತಲ್ಲ' ಎಂದು ತನ್ನ ತುಟಿಯಲ್ಲಿಯೇ ನಕ್ಕನು. ಬಸ್ಸಿನಲ್ಲಿದ್ದವರೊಬ್ಬೊಬ್ಬರೇ ಹೊಡೆತ ತಿಂದವನನ್ನು ಪ್ರಶ್ನಿಸತೊಡಗಿದರು ವಿವಿಧ ಭಾಷೆಗಳಲ್ಲಿ.

ವಿಜಯೀಂದ್ರನು ತನ್ನ ಮನಸ್ಸಿನಲ್ಲಿಯೇ ತನ್ನ ಬೆನ್ನನ್ನು ತಟ್ಟಿಕೊಂಡನು. ಪುಣ್ಯಕ್ಕೆ ಇವತ್ತು ತನಗೆ ಆ ಹುಡುಗೆಯರ ಕಡೆಗೆ ಏನೂ ಗಮನವಿರಲಿಲ್ಲ. ಸುಮ್ಮನೆ ಮರ್ಯಾದೆ ಹೋಗುವ ಮಾತು.

ಹೆಂಡತಿಯೆದುರು ಕುಳಿತು ಈ ಪ್ರಸಂಗದ ಮೀಮಾಂಸೆ ಮಾಡಬೇಕೆಂದು ವಿಜಯೀಂದ್ರ ಆತುರದಿಂದಲೇ ಮನೆಗೆ ಬಂದಾಗ ೯ ಗಂಟೆ ಮೀರಿ ಹೋಗಿದ್ದಿತು. ಕಿಟ್ಟಿ ಹಾಸಿಗೆ ಹಾಸಿ ಇಟ್ಟು, ಕುಡಿಯುವ ನೀರಿನ ತಂಬಿಗೆ ತುಂಬಿ ಇಟ್ಟು, ಗೋಡೆಗಾತು ಕುಳಿತು 'ಚಂದಮಾಮಾ' ಓದುತ್ತಿದ್ದಳು.

ಅವನು ಬಂದ ಕೂಡಲೇ, "ಊಟ ಆಗಿದೆ, ಹೌದಲ್ಲ?" ಎಂದು ಕೇಳಿದಳು. 'ಹೂಂ' ಎಂದನೀತ. ರಾತ್ರಿಯ ಹಾಲು ಇದೆ, ಹುಡುಕಿದರೆ ಪಲ್ಯದ ಬುಟ್ಟಿಯೊಳಗೆ ಒಂದೆರಡು ಬಾಳೆಹಣ್ಣುಗಳು ದೊರೆತೇ ದೊರೆಯುತ್ತವೆ ಎಂಬ ಭರವಸೆ ಅವನದು.

ಮನಸ್ಸು ವ್ಯಗ್ರವಾದಾಗ ಹೆಂಡತಿಯೊಡನೆ ಹರಟಿದ ಮೇಲೆ ಅದು ಕಡಿಮೆಯಾಗುವುದೆಂಬದು ಅವನ ಅನುಭವದ ಮಾತಾಗಿದ್ದತು. ಹಾಲು, ಹಣ್ಣು, ನೀರುಗಳನ್ನು ಹೊಟ್ಟೆಗೆ ಹೊಯಿದು, ದೀಪವಾರಿಸಿ ಹಾಸಿಗೆಯ ಮೇಲೆ ಅಡ್ಡಾಗಿ, ವಿಜಯೀಂದ್ರನು ಬಸ್ಸಿನಲ್ಲಿ ನಡೆದ ಘಟನೆಯ ಒಂದೊಂದೆ ಎಳೆಯನ್ನು ಎತ್ತಿಕೊಂಡು

ಹೇಳುತ್ತ "ಅವನು ಕಣ್ಣು ಹೊಡೆದು ಅವಳ ಜೋತಾಡುವ ಹೆಳಲಿನ ರಿಬ್ಬನನ್ನು ಹಿಡಿದಿರಬೇಕು" ಎಂದನು.

"ನನಗ್ಯಾಕಷ್ಟು ಈ ವಿಷಯ ತಿವಿದು ಹೇಳುತೀರಿ? ನಾನೇನು ಹುಡಿಗೆಯರ ಕಡೆ ನೋಡೂದಿಲ್ಲ!" ಎಂದಳು ಕಿಟ್ಟಿ.

ತನಗೆ ಗುರಿಯಿಟ್ಟು ಆಡಿದ ಮಾತು ಅದು! ಮನಸ್ಸು ಮತ್ತಷ್ಟು ಗಾಸಿಗೊಂಡಿತು. ಬೆಳಿಗ್ಗೆ ಆ 'ಸಂಧ್ಯಾ' ಕೊಂಕಿನಿಂದ ತನ್ನನ್ನು ನೋಡಿದಳು. ಡೀಯಸ್ಸನ ಹೆಂಡತಿ ತನ್ನ ಅನಾದರದಿಂದ ಅಪಮಾನ ಮಾಡಿದಳು, ಆ ಸಿಂಧೀ ಯುವಕ ಪ್ರಸಂಗ ಬಂದರೆ ತನಗೂ ಹೊಡೆಯಬಹುದಿತ್ತು ಎಂದು ನೆನೆದುಕೊಳ್ಳುತ್ತಿದ್ದಾಗ ಹೆಂಡತಿಯೂ ಈಗ ತನ್ನನ್ನು ಅವಮಾನಪಡಿಸುತ್ತಿದ್ದಾಳಲ್ಲ ಎಂದು ಮುನಿಸು ಮೇಲೆದ್ದು ನಿಂತಿತು. ಮಲಗಿದಲ್ಲಿಯೇ ಸಿಟ್ಟಿನಿಂದ ಮುಖವನ್ನು ಆ ಕಡೆಗೆ ತಿರುಗಿಸಿದನು.

"ಹೀಂಗ ಹಂಗಿಸಿ ಮಾತಾಡೋದು ಛೊಲೊ ಅಲ್ಲಾ! ಹೇಳಿರತೇನಿ" ಎಂದು ವಿಜಯೇಂದ್ರ ಗದರಿಸಿದನು.

"ನೀವು ಹಿಂಗ ಹುಡಿಗೇರ ಕಡೆ ನೋಡೋದು ಛೊಲೊ ಅಲ್ಲ ಅಂತೇನಿ. ಬಿಡಬಾರದ ಆ ಚಾಳೀನ? ಮಂದೀ ಒಳಗ ಒಮ್ಮೊಮ್ಮೆ ಬಹಾಳ ಅಸಹ್ಯ ಕಾಣತದ."

"ಸಾಕು ಸಾಕು. ನಾ ಅಂದ್ರ ಏನು ಒಬ್ಬ ಮವಾಲಿ ಅಂತ ತಿಳಿದೀಯೇನು? ನಿಂದೇನು ಗಂಟು ಹೋತು?"

"ಗಂಟು ಅಲ್ಲ. ಮರ್ಯಾದಿ ಹೋತು ಇವತ್ತು ನಿಮ್ಮ ಮುಂಜಾನೀ 'ಸಂಧ್ಯಾ' ಭೆಟ್ಟಿಯಾಗಿದ್ದು, ಇವತ್ತ. ನಾನು ಆಕೀ ಸಂಗತೀನ ದಾದರತನಕಾ ಬಂದದ್ದು."

"ಸುಳ್ಳು. ನನಗ ಮುಂಜಾನಿ ಭೆಟ್ಟಿಯಾದಾಕಿ ಆಕೀನೇ ಅಂತ ಹೆಂಗ ಗೊತ್ತಾತು?"

ನೀವು ತಂದ 'ವೇಣಿ' ಅದ ಅಲ್ಲ. ಅದೇ ಎಲ್ಲಾ ಮಾಡಿತು. ಆಕಿ ಸ್ಪೆಶಲ್ ಆಗಿ ಎರಡು ಮಾಡಿಸಿದ್ದಳಂತ. ಒಂದ ಸಾಕು ಅಂತ ಹೇಳಿ ಬಿಟ್ಟಿದ್ದನ್ನ ನೀವು ಖರೀದಿ ಮಾಡಿದ್ರಂತ!"

"ಹಿಂಗೇನು?" ವಿಜಯೀಂದ್ರನು ಇತ್ತ ಕಡೆಗೇ ಹೊರಳಿದನು.

"ಹೌದು. ಆಕೀನೇ ಗುರುತು ಹಿಡಿದಳು. ನೀವು ದೇವರ ಪೂಜೆಗೆ ಹೂ ತುಳಸೀ ತಗೊಂಡದ್ದನ್ನೂ ಹೇಳಿದಳು. ನಿಮ್ಮ ಯಜಮಾನರು ಬಹಳ ಧಾರ್ಮಿಕರಿದ್ದರೇನು ಅಂತ ಕೇಳಿದಳು."

ವಿಜಯನಿಗೆ ಕಮರದೇಗು ಬಂದಂತಾಯಿತು.

"ಸಣ್ಣಾಕಿ ಇದ್ರು ಮಹಾ ಪಕ್ಕಾ ಇದ್ದಾಳ ಆ ಹುಡುಗಿ. 'ನಾ ವೇಣಿ ಹಕ್ಕೊಳ್ಳೋದನ್ನ ನೋಡತತ ನಿಂತಿದ್ರು, ಛಂದ ಕಾಣಸ್ತದ ಅಂತ ಹೇಳಿ ನಿಮಗೂ ಅದನ್ನ ತೊಗೊಂಡಿರಬೇಕು' ಅಂದಳು. ನನಗೆಷ್ಟು ಕಚ್ ಅನಿಸಿರಬ್ಯಾಡಾ. ಕಮ್ಮಾನ ಸಾಲೀ ಆಕಿ ಅಂತ ಸುಮ್ಮನಿದ್ದೆ. ಉತ್ತರಾ ಅರೆ ಏನಿತ್ತು ಕೊಡಲಿಕ್ಕೆ? ಹಂಗ್ಯಾಕ ಮಾಡ್ತೀರಿ? ಬಿಡಬಾರದ ಆ ಚಾಳೀನ. ನೀವು ಮನಸ್ಸು ಮಾಡಿದರ ಒಂದು ಕ್ಷಣದೊಳಗೆ ಬಿಡಲಿಕ್ಕೆ ಆಗತದ."

ದಡದಡನೆ ಏರಿಕೆಯ ದನಿಯಲ್ಲಿ ಹೇಳಿದಳು. ವಿಜಯನ ಬಾಯಿ ಬಂದ್ ಆಯಿತು. ತಾನು ತನ್ನ ಹೆಂಡತಿಯ ಕೈಯಲ್ಲಿ ಸಿಕ್ಕಿಬಿದ್ದೆನಲ್ಲ ಎಂಬ ಕೊರಗಿನ ದನಿಯೊಂದು ಮನಸ್ಸಿನ ಒಳಗೆ ಕೊಟರ್, ಕೊಟರ್ ಎಂದು ಒದರಿಕೊಳ್ಳುತ್ತಿತ್ತು.

ವಿಜಯೀಂದ್ರನು ತಾನು ಅಂದದ್ದನ್ನು ಅನಿಸಿಕೊಂಡು, ಪೆಚ್ಚನಂತೆ ಮುಖ ಮಾಡಿಕೊಂಡು, ಮಾತಾಡದೇ ಸುಮ್ಮನಿದ್ದುದನ್ನು ಕಂಡು ಕಿಟ್ಟಿಗೆ ಅದೇನನಿಸಿತೊ, ಅವನ ಕುತ್ತಿಗೆಯ ಬುಡದಲ್ಲಿ ತನ್ನ ತೋಳನ್ನು ನೂಕಿ ತನ್ನೆಡೆಗೆ ಎಳೆದುಕೊಂಡಳು. ಗಂಡನಾಗಿ 'ಅವಳ ಬಳಿ ಹೋಗಲೊಲ್ಲದ ವಿಜಯನು ಅಪರಾಧಗೈದ ಹುಡುಗನು ಬೈದು ರಮಿಸುವ ತನ್ನ ತಾಯ ಬಳಿ ಹೋಗುವಂತೆ ಅವಳ ಹತ್ತಿರ ಸರಿದನು.

❄ ❄ ❄ ❄ ❄

೬. ಗಂಧ ಮತ್ತು ಕಲ್ಲು

“ಏ, ಜಾಸ್ತ ಬಾಯಿ ಬಿಟ್ಯಂದ್ರ ನೋಡು.”

“ನೀವ್ಯಾರ್ರಿ ನನ್ನ ಬಾಯಿ ಹಿಡಿಯುವವರು? ಅಡೀಗೀ ಮನಿ ನನ್ನದದ. ಅದರೊಳಗೆ ನಿಮ್ಮದೇನೂ ಅಧಿಕಾರ ಇಲ್ಲ. ತಿಳೀತ?”

“ಈ ಅಡಿಗಿ ಮನ್ಯಾಗಿನ ಸಾಮಾನ-ಸಟ್ಟು ನಿಮ್ಮಪ್ಪ ತಂದು ಹಾಕಿಲ್ಲ. ಅದರೊಳಗೆ ಏನರೆ ಸಾಮಾನ ಹಾಳಾದ್ರ ನನ್ನ ರಕ್ತ ಅಟ್ಟಸತದ. ಇ-ಇದೆಲ್ಲಾ ದಿಮಾಕ ಕಟ್ಟಿಡು.”

“ನಮ್ಮ ಅಪ್ಪನ ಹೆಸರು ತಗೀಬ್ಯಾಡ್ರಿ! ಮೂರು ಮಕ್ಕಳ ತಂದಿ ಆದ್ರಿ. ಇನ್ನರೆ ಬಿಡ್ರಿ ಆ ಸುಟ್ಟ ಚಾಳಿ. ನಾ ನಿಮ್ಮ ಅವ್ವ, ಅಪ್ಪನ ಹೆಸರ ತಗದ್ರ ಹೆಂಗನಸತದ?”

“ಸಿಸ್, ನಿನ್ನಂಥಾಕೀ ಸಂಗಡ ಮಾತಾಡುವದೇ ಮೂರ್ಖತನ.”

ಸಂದರ್ಭವನ್ನು ತಿಳಿಸದೆಯೆ ಒಂದು ಜಗಳದ ಮಾತನ್ನು ಹೀಗೆ ಎತ್ತಿ ಹೇಳಿದ್ದಕ್ಕೆ ಕ್ಷಮಿಸಬೇಕು. ಜಗಳವಾಡಿದವರು ಓರ್ವ ಗಂಡ, ಹೆಂಡತಿ ಎಂಬುದನ್ನು ಯಾರೂ ತಿಳಿದುಕೊಂಡಾರು; ಆದರೆ ಆ ಜಗಳಾಡಿದವರು, ನಾವೇ ಗಂಡ-ಹೆಂಡತಿ. ಎಲ್ಲರ, ಇಲ್ಲವೆ ಅನೇಕರ ಮನೆಯಲ್ಲಿ ಈ ಜಗಳಗಳು ಇರತಕ್ಕುವೇ. ಇಷ್ಟೇ. ನಮ್ಮ ಮನೆಯಲ್ಲಿ ನಿತ್ಯವೂ ಇರುತ್ತಿದ್ದುದು ಮಾತ್ರ ವಿಶೇಷ ಸಂಗತಿ.

ಜಗಳದ ಕಾರಣ, ಮತ್ತೇನಿಲ್ಲ. ಪ್ರತಿ ದಿನವೂ ರಾತ್ರಿ ಅಡುಗೆಯನ್ನು ಹೆಚ್ಚು ಮಾಡಿ, ಅದು ಉಳಿಯಿತೆಂದು ಒಕ್ಕಲಗಿತ್ತಿಗೆ ಹಾಕುವುದು ನನಗೆ ಸರಿಬಾರದೇ ನಾನು ಆಕ್ಷೇಪಿಸಿದೆ. ಎರಡನೇದವರಿಗೆ ಹೀಗೆ ಈಡು ಮಾಡುವಷ್ಟು ಸೋವಿಯ ದಿನಗಳು ಈಗಿಲ್ಲವಷ್ಟೆ. (ಮೇಲಾಗಿ ನಾನೊಬ್ಬ ಸಾಮಾನ್ಯ ಕಾರಕೂನ.) ರಾತ್ರಿ ಅಡುಗೆಯನ್ನು ಒಂದು ಹಿಡಿ ಕಡಿಮೆ ಏಕೆ ಮಾಡಬಾರದೆಂದು ಆಕ್ಷೇಪಿಸಿ ಬೇಸತ್ತು ಆ ದಿನ ಜಗಳಾಡಬೇಕಾಯಿತು. ಮೂಲ

ವಿಷಯ ಉಳಿದು, ಒಂದು ತಾಸಿನ ತನಕ ಅನವಶ್ಯಕ ಜಗಳದ ಮಾತುಗಳೆದ್ದುದರಿಂದ ತ್ರಸ್ತನಾಗಿ ನಾನೇ ಸುಮ್ಮನಾದೆ.

ಮದುವೆಯಾದ ಹೊಸತರಲ್ಲಿ, ೩-೪ ವರ್ಷ ಗಂಡ ಹೆಂಡಿರಲ್ಲಿ ಘರ್ಷಣೆ ಇರುವುದು ಸಹಜ. ಒಬ್ಬರ ಮಾತನ್ನು ಇನ್ನೊಬ್ಬರು ಕೇಳಬೇಕೆಂಬ ಪ್ರೇಮದ ಸತ್ತೆಯಿಂದ ಹಾಗಾಗುವುದು ಸ್ವಭಾವಿಕವೆ. ಆದರೆ ೮-೧೦ ವರ್ಷ ಸಂಸಾರ ನಡೆಸಿ ಮೂರು ಮಕ್ಕಳಾದಾಗಲೂ ಈ ಘರ್ಷಣೆ ಉಳಿದುಕೊಂಡು ಹೆಚ್ಚೆಚ್ಚಾಗುತ್ತ ನಡೆದರೆ ಅದು ದುರ್ದೈವದ ಸಂಗತಿಯಲ್ಲವೆ?

ಜಗಳದಲ್ಲಿ ನಾನು ಬೆಳಗಿನ ಚಹವವನ್ನೇ ಕುಡಿದಿರಲಿಲ್ಲ. ಅರ್ಧ ತಾಸು ತಡೆದು ನನ್ನ ಹೆಂಡತಿಯು ಚಹದ ಕಪ್ಪನ್ನು ಹಿಡಿದುಕೊಂಡು ಪಡಸಾಲೆಗೆ ನಾನು ಕುಳಿತಲ್ಲಿಗೆ ಬಂದಳು. ಮಕ್ಕಳು ಒಳಗೆ ತಮ್ಮ ಬೆಳಗಿನ ಫಲಾಹಾರದ ಗದ್ದಲದಲ್ಲಿಯೇ ಇದ್ದುವು. ನನ್ನ ಹೆಂಡತಿ ಅರ್ಧ ಸ್ವಗತ ಅರ್ಧ ನನಗಾಗಿ ಹೇಳತೊಡಗಿದಳು:

"ಝುಗಳಾ, ಝುಗಳಾ! ನನಗಂತೂ ಸಾಕಾಗಿ ಹೋಗೇದ. ನಿಮ್ಮಂತೇನ ಆಗಲಿ ಅಂತ ನಾ ಎಷ್ಟು ಸರೆ ನಿರ್ಧಾರ ಮಾಡಿರತೇನಿ. ಆದರ ನಿಮ್ಮಿಂದಾ ಒಂದು ಕೆಟ್ಟ ಮಾತು ಬಂದ್ರೂ ನನಗ ತಡಕೋಳಿಕ್ಕೆ ಆಗೂದಿಲ್ಲ; ನಾನರೆ ಏನು ಮಾಡಲಿ. ಮಂದೀ ಒಳಗ ಎಷ್ಟು ನಗ್ಗೇಡು. ಆಜೂ ಬಾಜೂ ಮನಿಯವರು ಕೊಂಕು ನಗೀ ನಕ್ಕೋತ ನಮ್ಮನೀ ಕಡೇನ ಕಿವಿ ಚಾಚಿರತಾರ. ಎಷ್ಟು ಅಸಹ್ಯ!... ಮಕ್ಕಳ ಮುಂದ ಅರೆ ನಾವು ಜಗಳಾಡಬಾರದು. ಮನೀ ಒಳಗ ನಕ್ಕೋತ, ಆನಂದದ ವಾತಾವರಣ ಇದ್ರ ಹುಡುಗರೂ ಪ್ರಸನ್ನ ಆಗೇ ಬೆಳೀತಾವ. ಇಲಾಂತಂದ್ರ ಅವೂ ಧುಸುಮುಸು ಹಾಯುವ ಕ್ಷುದ್ರ ಗುಣಾ ಕಲೀತಾವಲ್ಲ ಅಂತ ಚಿಂತಿ ಬಿದ್ದದ."

ತನ್ನ ಈ ಆತ್ಮ ನಿರೀಕ್ಷಣೆಯಲ್ಲಿ ಆಕೆಯು ತನ್ನ ಸ್ವಭಾವ ದೋಷವನ್ನು ಅರಿತು ಒಪ್ಪಿಕೊಂಡಳಲ್ಲ ಎಂದು ನನಗೆ ಸಮಾಧಾನವಾಯಿತು. ಉತ್ತೇಜಿತನಾಗಿ ಹೇಳಿದೆ.

"ಅದಽ ನಾನೂ ಅನ್ನೋದು. ಒಂದು ಸಾದಾ ಮಾತು ನಾವು ಆಡಲಿಕ್ಕೆ ಹೋದರೂ ಕಲ್ಲು ಘಟ್ಟಿಸಿದ್ಹಾಂಗ ಜಗಳದ ಕಿಡಿ ಏಳತಾವ. ಅದಕ್ಕ ನಾವು ಇನ್ನ ಮ್ಯಾಲ ಆದಷ್ಟು ಮಾತೇ ಕಡಿಮಿ ಮಾಡೋಣ. ಅಂದ್ರ ಏನರೆ ಪರಿಸ್ಥಿತಿ ಸುಧಾರಿಸೀತು."

ನನ್ನ ಹೆಂಡತಿ ಕೆಲ ಕ್ಷಣ ಮೌನವಾಗಿದ್ದಳು. ಅಲ್ಲಿಂದ ಹೇಳಿದಳು. "ನಿಮಗೆ ತಿಳಿದ್ಹಂಗ ನೀವು ಮಾಡಿರಿ; ನನಗ ತಿಳಿದ್ಹಂಗ ನಾ ಮಾಡತೇನಿ. ಪರಸ್ಪರ ಕೆಲಸದೊಳಗೆ ಕೈ ಹಾಕೂಣಽ ಬ್ಯಾಡಾ."

ಈಕೆ ಅತ್ಯಂತ ತಿಳುವಳಿಕಸ್ಥಳಂತೆ ಮಾತನಾಡಿದಳೆಂಬ ಸಮಾಧಾನದಲ್ಲಿ ನಾನು ಹೇಳಿದೆ:

“ಇದಕ್ಕ ನನ್ನ ಸಂಪೂರ್ಣ ಒಪ್ಪಿಗಿ ಅದ. ಕೆಲವು ದಿವಸ ಪ್ರಯೋಗ ಮಾಡಿ ನೋಡೋಣ. ಬಟ್ಟೇ ಮಾತು ಬಿಡಲಿಕ್ಕೆ ಆಗೂದಿಲ್ಲ. ಎಷ್ಟು ಅವಶ್ಯ ಅದನೋ ಅಷ್ಟೇ ಆಡೋಣ.”

“ಯಾಕ? ಮನಸು ಮಾಡಿದರ ಎಲ್ಲಾ ಆಗತದ. ಯಾವಾಗರೆ ಅದನ್ನು ಮಾತಾಡೋದು ಅಂತ ಇಟಗೊಂಡ್ರ ಮುಂದ ಅದು ಬೆಳೀತ ಹೋಗಿ, ಕೆಲವು ದಿವಸ ಆದ ಮ್ಯಾಲೆ ಮೊದಲಿನ ಪರಿಸ್ಥಿತಿಸೇ ಬರಬಹುದು. ಅದಕ್ಕ ಸಂಪೂರ್ಣ ಮಾತು ಬಿಟ್ಟುಬಿಡೋಣ” ಎಂದಳು.

ಅದೂ ನಿಜವೆನಿಸಿತು. ನನಗೆ. ತೀರ ನಿರ್ವಾಹವಿಲ್ಲದ ಪ್ರಸಂಗ ಬಂದರೆ ನಮ್ಮ ಹಿರಿಯ ಮಗ ಏಳು ವರ್ಷದ ಮನಮೋಹನ, ಎರಡನೆಯವಳು ಸುನಂದಾ ಇದ್ದೇ ಇದ್ದಾರಲ್ಲ, ಸಂದೇಶ ಮುಟ್ಟಿಸಲು ಎಂದು ಭಾವಿಸಿ “ಹಾಗಿದ್ದರೆ ಒಂದು ವಾರ ಬಿಟ್ಟು ನೋಡೋಣ. ಆ ಪ್ರಯೋಗ ಯಶಸ್ವಿಯಾಗಿ ಮಾತಿನ ಚಕಮಕಿ ತಪ್ಪುವಂತಾದರೆ ಮುಂದುವರಿಸಿದರೂ ಆದೀತು” ಎಂದು ನುಡಿದೆ. ಹಾಗೆ ಹೇಳುವಾಗ ನಮ್ಮ ಸಂಸಾರ ಸಮಸ್ಯೆಗೆ ಹೊಸದೊಂದು ಪರಿಹಾರ ಮಾರ್ಗವನ್ನು ಹುಡುಕಿದೆನೆಂಬ ಆತ್ಮತೃಪ್ತಿ ನನ್ನಲ್ಲಿ ಮೂಡಿದ್ದಿತು.

ಸುಮ್ಮನೆ ವಿನೋದಕ್ಕೆ ಲಘುವಾಗಿ ನಾವು ಆ ರೀತಿಯಾಗಿ ಚರ್ಚಿಸಲಿಲ್ಲವೆಂದು ಮೊದಲಿಗೇ ಸ್ಪಷ್ಟಪಡಿಸುತ್ತೇನೆ. ನಿಜವಾಗಿಯೇ ನಾವು ಈ ವಿಷಯದಲ್ಲಿ ‘ಸೀರಿಯಸ್’ ಆಗಿದ್ದೆವು. ನಮ್ಮ ನಿತ್ಯದ ರಸಗಸಿ ಬಡಿದಾಟಗಳು ಅಷ್ಟೊಂದು ರೋಸಿಗಿಡಿಸಿಬಿಟ್ಟಿದ್ದವು.

ಮತ್ತೆ ತುಸು ಹೊತ್ತು ಮೌನವಾಗುಳಿದ ಆಕೆ ನಂತರ ಹೇಳಿದಳು: “ಒಮ್ಮೆ ನಿರ್ಧರಿಸಿದ ಮ್ಯಾಲೆ ತಡ ಯಾಕೆ? ಇವತ್ತೇ ಈಗಿನಿಂದಲೇ ಮಾತು ಬಿಡೋಣ. ಆದರೆ ಒಂದು ಕರಾರು. ನೀವು ಯಾರ ಎದುರಿಗೂ ಇದರ ಬಗ್ಗೆ ಚಕಾರ ಶಬ್ದವನ್ನೂ ಎತ್ತಕೂಡದು. ಮನೆಯಲ್ಲಿಯ ಒಂದು ಸಣ್ಣ ಪ್ರಸಂಗವಿದ್ದರೂ ನೀವು ಹೋಗಿ ಆ ನಿಮ್ಮ ಗೆಳೆಯ ವಿಠ್ಠಲ ಮಾಸ್ತರನೆದುರು ತೋಡಿಕೊಳ್ಳುವವರು.”

ಅವಳು ಹೇಳಿದ್ದು ನಿಜವಿದ್ದರೂ, ತನ್ನ ಮನಸ್ಸಿನ ದುಗುಡವನ್ನು ತೋಡಿಕೊಳ್ಳುವುದಕ್ಕೆ ಅವಳಿಗೂ ಅವಳ ಗೆಳತಿ ಇದ್ದಳು! ಆ ಮಾತನ್ನು ಎತ್ತಿದರೆ ಸುಮ್ಮನೆ ಹಂಗಿಸಿದ ಹಾಗಾಗುವದೆಂದು ತಿಳಿದು, ಅವಳ ಕರಾರಿಗೆ ನಾನು ‘ಅಸ್ತು’ ಎಂದೆ.

ನಿತ್ಯದಂತೆ ನಮ್ಮ ನಮ್ಮ ಕೆಲಸದಲ್ಲಿ ತೊಡಗಿದೆವು. ನಾನು ದಾಡಿ ಮತ್ತು ಸ್ನಾನಗಳನ್ನು ಲಗುಬಗೆಯಿಂದ ಮುಗಿಸಿ, ಅರ್ಲ ಸ್ಟ್ಯಾನ್ಲೆ ಗಾರ್ಡನರನನ್ನು ಹಿಡಿಮಕೊಂಡು ಕುಳಿತೆ. ಆಕೆ ಮಕ್ಕಳಿಗೆ ಸ್ನಾನ ಮಾಡಿಸಿ, ಅಡುಗೆಗೆ ಕುಳಿತಳು.

"ಸುನಂದಾ, ಅಪ್ಪಾಗ ಕಾಯಿ ಒಡೆದು ಕೊಡಲಿಕ್ಕೆ ಹೇಳು."

ನಮ್ಮ ಮೌನದ ಪ್ರಥಮ ಪ್ರಯೋಗದ ಆ ವಾಕ್ಯ ನನಗೂ ಕೇಳಿಸಿತು. ನಾನು ಒಳಗೆ ಹೋಗಿ ತೆಂಗಿನಕಾಯಿ ಒಡೆದುಕೊಟ್ಟು ಬಂದೆ. ಈ ಮಧ್ಯೆ, ತೊಟ್ಟಿಲಲ್ಲಿ ಮಲಗಿದ್ದ ನಮ್ಮ ಚಿಕ್ಕ ಮಗು ಎದ್ದು ಅಳತೊಡಗಿತು. ತನ್ನ ಕೈ ಖಾಲಿ ಇರದಿದ್ದರೆ, 'ಒಂದು ಸ್ವಲ್ಪ ಕೂಸಿನ್ನ ಕೈಯೊಳಗೆ ತಗೊಳ್ರಿ' ಎಂದು ಆಕೆ ಒದರಿ ಹೇಳುವುದು ರೂಢಿ. ಆ ದಿನ ಅದಕ್ಕಾಗಿ ನಾನು ಕಾಯದೆ, ನಾನೇ ಹೋಗಿ ತೊಟ್ಟಿಲು ತೂಗಿ ಮತ್ತೆ ಮಲಗಿಸಿದೆ.

ತುಸು ಹೊತ್ತಿನ ಮೇಲೆ ಹಾಲಿನವ ಬಂದ. ಈಕೆಯು ಒಳಗಿನಿಂದ ಪಾತ್ರೆಯನ್ನು ಹಿಡಿದುಕೊಂಡು ಹೊರಗೆ ಬಂದು ಹಾಲು ಹಾಕಿಸಿಕೊಂಡಳು. ತಿಂಗಳ ಮೊದಲು ವಾರವಾದ್ದರಿಂದ ಆತ ಹಾಲಿನ ಲೆಕ್ಕ ಕೇಳಿದ. ನಾವು ಮಾತನಾಡುವ ಒಂದು ಸಣ್ಣ ಸಂದರ್ಭ ಬಂದಿತ್ತು. ಮಾತನ್ನು ಬಿಟ್ಟಿದ್ದೆವಾದ್ದರಿಂದ, ಆಕೆ 'ಅವರನ್ನೇ ಕೇಳು' ಎಂದು ಹಾಲಿನವನಿಗೆ ಹೇಳುತ್ತಾಳೆಂದು ನಾನು ಭಾವಿಸಿಕೊಂಡೆ. ಆಕೆ ಏನೂ ಹೇಳಲಿಲ್ಲ! ಅವಳು ಮಾಡಿದ್ದೇ ಸರಿ ಎನಿಸಿತು. ಹಾಲಿನವ ಹಣ ಕೇಳಿದ್ದು ನನಗೆ ಕೇಳಿಸಿಯೇ ಇತ್ತಲ್ಲವೆ.

ಸರಿ; ಹತ್ತು ಹೊಡೆಯಿತು. ನಾನು ಒಮ್ಮೆ ಅಡಿಗೆಯ ಮನೆಗೆ ಹಾಯ್ದು ಬಂದೆ. ಜಗಳದ ಮೂಲಕ, ಅಡಿಗೆಯ ಕೆಲಸ ಹಿಂದುಳಿದಿದ್ದಿತು. ಸಾಮಾನ್ಯವಾಗಿ. 'ವೇಳೆಯಾಯಿತು' ಎಂದು ನಾನು ಅವಸರ ಪಡಿಸುತ್ತಿದ್ದರೆಯೇ ಕಚೇರಿಯ ಹೊತ್ತಿಗೆ ಅಡಿಗೆಯು ಒದುಗುತ್ತಿದ್ದಿತು. ಪರಸ್ಪರರಲ್ಲಿ ಮಾತು ಇಲ್ಲದಾಗ ಏನು ಮಾಡುವುದು? ನಾನು ಗಡಿಯಾರವನ್ನೆ ಎತ್ತಿ ಅವಳಿಗೆ ಕಾಣುವಂತೆ ಅಡುಗೆಯ ಮನೆಯಲ್ಲಿಟ್ಟೆ.

ಮುಂದೆ ಹತ್ತೇ ಮಿನಿಟಿನಲ್ಲಿ ಆಕೆ ತಾಟು ಮಣೆ ಹಾಕಿದಳು. ಒಂದರಲ್ಲಿ ಮಾತ್ರ ಬದಲಾವಣೆಯಾಗಿದ್ದಿತು. ಮಾಡಿದ ಅಡುಗೆಯನ್ನೆಲ್ಲ, ನನ್ನ ಮುಂದೆ ಇಟ್ಟಳಲ್ಲದೆ ತಾನು ಹಾಕುವ ಉಸಾಬರಿಗೆ ಹೋಗಲಿಲ್ಲ! ಅದರಿಂದ 'ಸಾಕೆ, ಬೇಕೆ' ಎಂದು ಕೇಳುವ ಪ್ರಮೇಯ ಬಾರದಷ್ಟೆ. ನನ್ನ ಹೆಂಡತಿಯ ಜಾಣ್ಮೆಗೆ ನಾನು ತುಸು ತಲೆದೂಗಿದೆನೆಂದರೂ ಸರಿ.

ಕಚೇರಿಯಲ್ಲಿ ನಾನು ಕೆಲಸದಲ್ಲಿ ನಿರತನಾದೆನೆಂದರೆ ನನಗೆ ಮನೆಯ ಯಾವುದೇ ವಿಚಾರ ಗಮನದಲ್ಲಿರುವುದಿಲ್ಲ. ಸಂಜೆಯ ಆರೂವರೆ ಗಂಟೆಗೆ ಮನೆಗೆ ಬಂದಾಗಲೇ ನನಗೆ ನಮ್ಮ ಬೆಳಗಿನ ಪಣದ ವಿಷಯ ಲಕ್ಷ್ಯಕ್ಕೆ ಬಂದಿತು.

ಯಾವ ಮಾತನ್ನಾಡದೇ ನಾನು ಕೈಕಾಲು ಮುಖ ತೊಳೆದುಕೊಂಡು ಪಡಸಾಲೆಗೆ ಬಂದಾಗ, ನನ್ನ ಮೇಜಿನ ಮೇಲೆ ಚಹದ ಕಪ್ಪನ್ನು ಇಡಲಾಗಿದ್ದಿತು. ಅದರರೊಂದಿಗೇ, ನಾನು ಸರ್ಕ್ಯುಲೇಟಿಂಗ ಲೈಬ್ರರಿಯಿಂದ ತಂದಿದ್ದ ಪತ್ತೇದಾರೀ ಪುಸ್ತಕವನ್ನೂ ಇಟ್ಟಿದ್ದಳು.

ನನಗೆ ಅವಳ ಈ ಚೇಷ್ಟೆ (?) ಸರಿ ಬರಲಿಲ್ಲ. ಅಲ್ಲಿಯೆ ಇದ್ದ ದಿನ ಪತ್ರಿಕೆಯ ಮೇಲಿನ ಭಾಗದ ಬಿಳಿಯ ಪಟ್ಟಿಯನ್ನೇ ಉದ್ದಕ್ಕೆ ಹರಿದು, 'I dont like such nasty

jokes. Ours is not mere observation of ಮೌನವ್ರತಮ್. I am really serious about our decision in being aloof as far as possible' ಎಂದು ಇಂಗ್ಲೀಷಿನಲ್ಲಿಯೆ ಗೀಚಿದವನೆ ಅದೇ ಶಾಲೆಯಿಂದ ಒಳಗೆ ಕಾಲಿಡುತ್ತಿದ್ದ ಮನಮೋಹನನನ್ನು ಕುರೆದು, 'ಇದನ್ನು ನಿಮ್ಮವ್ವನಿಗೆ ಕೊಡೆ'ಂದು' ಕಳುಹಿಸಿಯೆ ಚಹದ ಕಪ್ಪನ್ನು ಕೈಗೆತ್ತಿಕೊಂಡೆ.

ನನಗಿದೇ ಆಶ್ಚರ್ಯ! ದಿನ ಬಿಟ್ಟು ದಿನ ಕಳೆದಂತೆ, ನಮ್ಮೀ ಮೌನ ಧಾರಣದಿಂದ ಯಾವ ರೀತಿಯಿಂದಲೂ ನಮ್ಮ ನಿತ್ಯ ವ್ಯವಹಾರದಲ್ಲಿ ಅಡೆತಡೆಯುಂಟಾದಂತೆ ಅನಿಸಲೇ ಇಲ್ಲ. ಮತ್ತೆ ಯಾರಿಗೂ ಹೊರಗಿನವರಿಗೆ ಅದರ ಕಲ್ಪನೆ ಕೂಡ ಬಂದಿರಲಿಲ್ಲ. ಅವಳ ದೈನಂದಿನ ಬೇಕು ಬೇಡಗಳನ್ನು ನೋಡಿಕೊಂಡು ನಾನಾಗಿಯೆ ಅದರಂತೆ ನಡೆಯುತ್ತಿದ್ದೆ. ನನ್ನ ವೇಳೆ ಅವೇಳೆಗಳನ್ನು ಊಹಿಸಿಕೊಂಡು ತನ್ನ ಕರ್ತವ್ಯವನ್ನು ತಾನು ಮಾಡುತ್ತ ಆಕೆ ಇರತೊಡಗಿದಳು. ಎಲ್ಲವೂ ಯಥಾಸ್ಥಿತವಾಗಿ, ಅದೇಕೆ ಮೊದಲಿಗಿಂತ ಸರಾಗವಾಗಿ ಸಾಗಿತ್ತು. ಫಕ್ತ ಮಾತು ಇರಲಿಲ್ಲ! ಅದರ ಜೊತೆಗೆ ಜಗಳವೂ ಹೊರಟುಹೋಗಿತ್ತು.

ನಾವು ಗೊತ್ತುಮಾಡಿಕೊಂಡಿದ್ದ ಒಂದು ವಾರವು ಮುಗಿಯುತ್ತ ಬಂತು. ಇನ್ನು ಇದನ್ನು ಮುಂದುವರಿಸಬೇಕೆ, ಬೇಡವೆ ಎಂದು ನಾನು ಅವಳನ್ನು ಒಂದು ಮಾತು ಕೇಳುವ ಮಟ್ಟಿಗೆ ಮೌನಭಂಗ ಮಾಡಿದ್ದರೆ ನಡೆಯುತ್ತಿತ್ತು. 'ಅವಳೇ ಕೇಳುತ್ತಾಳೆ, ನಾನೇಕೆ ಅದರ ಉಸಾಬರಿ ಮಾಡಲಿ' ಎಂಬ ಭಾವನೆ ನನ್ನಲ್ಲಿ ಬಂದು ಸುಮ್ಮನಿದ್ದೆ. ಇಷ್ಟೇ, ಅವಳಿಗೆ ಈ ಪೀಠಿಕೆ ಹಾಕಲಿಕ್ಕೆ ಅನುಕೂಲವಾಗಬೇಕೆಂದು ಆ ದಿನ ನಾನು ಹೊರಗೇ ಹೋಗಲಿಲ್ಲ.

ಊಂಹು. ನನ್ನ ಎಣಿಕೆ ಸುಳ್ಳಾಯಿತು. ಅವಳೋ ಇದು ಒಂದು ವಾರದ ಪ್ರಯೋಗವಿತ್ತೆಂಬ ಮಾತನ್ನೆ ಮರೆತಂತೆ ವರ್ತಿಸತೊಡಗಿದಳು. ನನ್ನ ಹೆಂಡತಿಯ ಹಟವಾದೀ ಸ್ವಭಾವ ವಿಚಾರವು ಮರು ನೆನಪಿಗೆ ಬಂತು. 'ಇದರ ಕೊನೆಯೆಂತು? ಹೀಗೆ ನಾವು ದೂರ ದೂರವಿದ್ದರೆ ಮುಂದೇನು ಗತಿ' ಎಂದು ಚಿಂತಾಕುಲನಾದೆ.

ಈ ಮಧ್ಯೆ ನನ್ನ ಹೆಂಡತಿಯ ಅಕ್ಕನ ಗಂಡ, ತಮ್ಮ ಆಫೀಸಿನ ಕೆಲಸದ ನಿಮಿತ್ತ ನಾಲ್ಕು ದಿನ ನಮ್ಮಲ್ಲಿಗೇ ಬಂದು ಇಳಿಯುವವರಿದ್ದರು. ೧೫ ದಿನ ಮೊದಲಿಗೇ ಹಾಗೆಂದು ಒಕ್ಕಣಿಸಿ, ಬರುವುದಕ್ಕೆ ಮುಂಚೆ ಇನ್ನೊಮ್ಮೆ ದಿನ, ಗಾಡಿಯ ವೇಳೆ ವಗೈರೆ ತಿಳಿಸುವೆನೆಂದು ಉಲ್ಲೇಖಿಸಿದ್ದರು. ಇನ್ನು ಅವರು ಬಂದಾಗ ನಮ್ಮ ಮೌನವ್ರತದ ಬೊಬ್ಬಾಟವಾಗಬಾರದಲ್ಲ; ಅವಳ ತವರಿನ ಬಳಗದಲ್ಲಿ ಇದೊಂದು ನಗೆಚಾಟಿಕೆಯ ವಿಷಯವಾಗಬಾರದಲ್ಲ ಎಂದು ಕಾಳಜಿಯಾಯಿತು. ಈ ಸಂದರ್ಭದಲ್ಲಿ ಇನ್ನು ಅವಳು ಮಾತಿಗೇ ತೊಡಗಿದರೆ, ಹೋಗಲಿ. ಸುಮ್ಮನೆ ನಾನು ಅದನ್ನು ಬೆಳೆಸುವುದೇನೂ ಸರಿಯಲ್ಲ ಎಂದು ಗೊತ್ತುಪಡಿಸಿಕೊಂಡೆ.

ಅವರು ತಿಳಿಸಿದ ದಿನ ಹತ್ತಿರ ಬಂತು. ಆದರೆ ಅವರ ಪತ್ರವೇ ಬಂದಿರಲಿಲ್ಲ. ಒಂದು ವೇಳೆ ನಾ ಮನೆಯಲ್ಲಿಲ್ಲದಾಗ ಅವರ ಪತ್ರ ಬಂದು, ತನ್ನ ತವರಿನ ವಿಷಯ

‘ಇವರಿ’ಗೇಕೆ ಎಂದು ಅದನ್ನು ಬಚ್ಚಿ ಇಟ್ಟಿರಬಹುದೆ ಎಂಬ ಶಂಕೆಯೂ ಮೂಡಿತು. ಅವಳು ಮನೆಯಲ್ಲಿಲ್ಲದ ಸಮಯ ಸಾಧಿಸಿ, ಆ ಪತ್ರಕ್ಕಾಗಿ, ಎಲ್ಲ ಸಂದು-ಸ್ಥಳಗಳನ್ನು ಹುಡುಕಿದೆ. ಪತ್ರ ಸಿಗಲಿಲ್ಲ. ಏನೇ ಆಗಲಿ ಎಂದು ಆ ದಿನ ಎರಡು ತಾಸು ಆಫೀಸಿಗೆ ತಡವಾಗಿ ಬರುವೆನೆಂದು ಚೀಟಿ ಕಳಿಸಿ ಗಾಡಿ ಬರುವ ಹೊತ್ತಿಗೆ ಮನೆಯಲ್ಲೇ ಉಳಿದೆನು. ಹಾಗೆ ಉಳಿದದ್ದೇ ನೆಟ್ಟಗಾಯಿತು. ಅಡುಗೆಯ ಮನೆಯಲ್ಲಿಯ ವಿಶೇಷ ತಯಾರಿಯೂ ನನ್ನ ಅನುಮಾನವನ್ನು ದೃಢೀಕರಿಸಿತು.

ತುಸು ವೇಳೆಯಲ್ಲಿಯೆ ನಮ್ಮ ‘ಷಡ್ಡಕ’ ಮಹಾಶಯ ಬಂದ. ಕುಶಲ ಪ್ರಶ್ನೆಗಳಾದುವು. ಒಳಗೆ ಹಣಿಕಿ ‘ಆರಾಮ ಇದ್ದೀರಾ’ ಎಂಬದಾಗಿ ಈಕೆಯನ್ನು ಕೇಳಿದ. ಅಡಿಗೆಯ ಅವಸರದಲ್ಲಿಯೆ ಈಕೆಯು ತನ್ನ ಅಕ್ಕನ, ಅಕ್ಕನ ಮಕ್ಕಳ ಸುದ್ದಿಯನ್ನು ಕೇಳಿಕೊಂಡಳು.

ಊಟಕ್ಕೆ ಕುಳಿತೆವು. ನನಗೆ ಆತುರವನ್ನು ತಡೆಯಲಾಗದೇ ‘ಪತ್ರವನ್ನೇಕೆ ಹಾಕಲಿಲ್ಲ?’ ಎಂದು ಅವರನ್ನು ಕೇಳಿದೆ.

“ಯಾಕೆ ನಮ್ಮ ಶ್ರೀಮತಿ ಬರೆದಿದ್ದಳಲ್ಲ?” ಎಂದನಾತ.

ನನ್ನ ಸಂಶಯ ನಿಜವಾಯಿತು. ‘ಹೂಂ. ಪತ್ರ ಬಂದದ್ದನ್ನು ಮುಚ್ಚಿಟ್ಟಳಲ್ಲವೆ’ ಎಂಬ ಸಿಟ್ಟು ಉಕ್ಕೇರಿತು. ಆ ಭರದಲ್ಲಿ ದುರುಗುಟ್ಟಿ ಅವಳ ಮುಖ ನೋಡಿದೆ. ಆದರೆ ಪತ್ರವನ್ನು ಬಚ್ಚಿ ಇಟ್ಟುದರ ಕೊಂಕಿನ ಮುಖಭಾವ ಅವಳಲ್ಲಿ ಕಾಣಿಸಲಿಲ್ಲ. ಅವಳ ನಿಃಶೂನ್ಯ ನೋಟವು ನನ್ನನ್ನು ತಣ್ಣಗೆ ಮಾಡಿತು. ಆಮೇಲೆ ವಿಚಾರ ಬಂತು. ‘ಅಕ್ಕನ ಪತ್ರವೆಂದರೆ ಖಾಸಗಿ ವಿಷಯವಾಯಿತು. ಅಂತೇ ನನ್ನ ಕಣ್ಣಿಗೆ ಬೀಳಲಿಲ್ಲ’ವೆಂದು ಅರ್ಥಮಾಡಿಕೊಂಡೆ. ‘ನನ್ನ ಹೆಂಡತಿ ಅದೆಷ್ಟೊಂದು ವ್ಯಾವಹಾರಿಕವಾಗಿ ವರ್ತಿಸತೊಡಗಿದ್ದಾಳಲ್ಲ’ ಎಂದು ಮನಸ್ಸಿಗೆ ಎಲ್ಲೊ ಒಂದು ಬದಿಯಲ್ಲಿ ನೋವೆನಿಸಿತು.

ಆ ೩-೪ ದಿನಗಳನ್ನು ನಾನು ದುಗುಡದಲ್ಲಿಯೆ ಕಳೆದೆ. ನಮ್ಮಿಬ್ಬರ ಮಾತಿನ ಪ್ರಸಂಗಗಳನ್ನು ಅತ್ಯಂತ ಸಹಜತೆಯಿಂದಲೇ ಆಕೆ ತಪ್ಪಿಸಿದಳೆಂದೊ ನಮ್ಮ ಅತಿಥಿಗೆ ಕಚೇರಿಯ ಕೆಲಸವೇ ಹೆಚ್ಚಾಗಿದ್ದಿತೆಂದೊ ಸ್ವತಃ ಅವರು ಅಷ್ಟು ಹುಷಾರ್ ಜಾತಿಯವರಲ್ಲವೆಂದೊ, ಅವರಿಗೆ ನಮ್ಮ ಪಣದ ಸುಳಿವು ಕೂಡ ಸಿಕ್ಕಿರಲಿಲ್ಲ. ಆದರೆ ಊರು ಮುಟ್ಟಿದ ಮೇಲೆ ನಮ್ಮ ಆತಿಥ್ಯಕ್ಕಾಗಿ ಕೃತಜ್ಞತೆಯನ್ನು ವ್ಯಕ್ತಪಡಿಸುವ ತನ್ನ ಪತ್ರದಲ್ಲಿ ಮಾತ್ರ ಈ ಸಾಲನ್ನು ಒಕ್ಕಣಿಸಿದ್ದರು. 'Neverthless I appreciated, before my dear wife that you two have once for all sunk all your differences and that peace prevails on your homefront.' ಐದು ನ. ಪೈ.ಯ ಕಾರ್ಡಿನ ಮೇಲೆ ಗೀಚಿ ಬಂದಿದ್ದ ಅದನ್ನು ಮೇಜಿನ ಮೇಲೆಯೇ ಇಟ್ಟು ಕಚೇರಿಗೆ ಹೋದೆ.

ಅದಾಗಿ ಮರು ಶನಿವಾರ. ಮಧ್ಯಾಹ್ನ ಮೂರು ಗಂಟೆಗೇ ಮನೆಗೆ ಬರಬೇಕಿತ್ತು. ಕೆಲಸದ ಮೂಲಕ ತಡವಾಯಿತು. ಮನೆಗೆ ಬಂದಾಗ ಐದು ಹೊಡೆದಿತ್ತು. ನಾನು ಒಳಗೆ ಕಾಲಿಡುವಾಗ, ಬಚ್ಚಲು ಮನೆಯಲ್ಲಿ ನನ್ನ ಹೆಂಡತಿ ಯಾರೊಡನೆಯೊ ಮಾತನಾಡುವುದು ಕೇಳಿಸಿತು.

"ತಾ ನೋಡಿದರ ಒಕ್ಕಲಗಿತ್ತಿ. ಎಷ್ಟು ಸೊಕ್ಕು ಈಕೀದು. ನಾ ಏನು ಕೈಲಾಗದಾಕಿ ಅಂತ ತಿಳದಾಳ. ಬಿಟ್ಟರ ಬಿಟಗೋ ಅಂತ ಹೇಳಿದೆ. ಈಗ ಯಾವದು ನಿಂತಿತೇನು ನೋಡ್ರಿ."

"ಅರಿವಿ ಸಹಿತ ಒಗದಿದ್ದಿಲ್ಲೇನು?"

"ಅರಿವಿ ಹಂಗೇ ಹಿಂಡಿ ಇಟ್ಟಿದ್ಲು. ನಾನೇ ಎಲ್ಲಾ ಅರಿವಿ ಒಣಗಹಾಕಿದೆ. ಇವಷ್ಟು ಭಾಂಡಿ ಉಳದಾವ; ಏನು ಮಹಾ. ರೂಢಾ ಆಗೋತನಕಾ ಒಂದಿಷ್ಟು ತ್ರಾಸು. 'ಒಕ್ಕಲಗಿತ್ತೇರು ಸಹಿತ ಯಾರೂ, ನಿನ್ನ ಬಾಯಿ ಕಾಲಾಗ ನಿಂದ್ರೂದುಲ್ಲಾ' ಅಂತ 'ಇವರು' ಅಂತಿರತಾರ. ಅದಕ್ಕ ಇನ್ನ ಮ್ಯಾಲೆ ಒಕ್ಕಲಗಿತ್ತೀನೇ ಬ್ಯಾಡಾ ಅಂತ ಮಾಡೇನಿ."

"ಅಲ್ಲಾ. ಆಕಿ ನಿಮಗ ಅಂದಳರೆ ಏನು?"

"ಏನ ಮಾಡತೀರಿ ತೊಗೊಂಡು. 'ಮಾಡಿಕೊಂಡ ಗಂಡಗ ಸಿಕ್ಹಂಗ ಅನ್ನವರಿಗೆ ನಮ್ಮಂಥವರ ದರದ ಎಲ್ಲ್ಯದ' ಅನಬೇಕ?"

"ಹೂಂ! ಏನು ಧೈರ್ಯಾರೆವಾ ಅಂತೀನಿ. ಇಷ್ಟು ತಿರುಗಿ ನಿಂತು ಮಾತಾಡಬೇಕಾದ್ರೆ ಧೈರ್ಯಾ. ಅಷ್ಟು ಎದುರಾ ಎದುರಾ ಹೇಳಿದ್ರ ಬಾಯಾಗಿನ ಹಲ್ಲು ಉದರಸತಿದ್ದೆ. ಭಾಂಡೀ ತಿಕ್ಕಲಿಕ್ಕೆ ತೊಗೊಂಡು ಒಯ್ಯುವಾಗ ವಟಾ ವಟಾ ಅನಕೋತ ಹೋದದ್ದು ಕೇಳಿಸಿತು. ಆಗೇ ಕೈ ತೊಗೊಂಡೆ.

ಇಷ್ಟರಲ್ಲಿ ಆ ನೆರೆಮನೆಯಾಕೆಯ ಕಣ್ಣಿಗೆ ನಾ ಬಿದ್ದೆ. ಆದುದರಿಂದ ಆಕೆ

"ಆತು. ಯಾವಾಕಿ ಅರೆ ಛೊಲೋ ಹೆಣ್ಣು ಮಗಳು ಕೆಲಸಕ್ಕ ಸಿಕ್ಕರ ನಾ ನೋಡತೇನಿ. ಮನ್ಯಾಗ ಸಣ್ಣ ಸಣ್ಣ ಕಂದಮ್ಮಗಳು. ನೀವರೆ ಏನು ಘಟ್ಟಿ? ವಿಶೇಷ ತ್ರಾಸ ಮಾಡಕೋ ಬ್ಯಾಡ್ರಿ" ಎಂದು ಹೇಳುತ್ತ ಹಿತ್ತಿಲ ಬಾಗಿಲಿನಿಂದ ಜಾರಿದಳು.

'ಪ್ಪ. ಪ್ಪ! ಅಂತೂ, ತನ್ನ ಉಗ್ರ ಸ್ವಭಾವದಿಂದಾಗಿ ಗಂಡನ ದರಕಾರವನ್ನೂ ಇಡಲಿಲ್ಲವಲ್ಲಾ ಎಂಬ ಮಾತನ್ನು ಒಕ್ಕಲಗಿತ್ತಿಯಂಥವಳಿಂದ ಅನ್ನಿಸಿಕೊಳ್ಳಬೇಕಾಯಿತಲ್ಲ' ಎಂಬುದಾಗಿ ನನಗೆ ಅಭಿಮಾನದ ಆನಂದ ಉಕ್ಕೇರಿತು. 'ಭೇಷ್ ಛೊಲೋ ಮಾಡಿದಳು ಒಕ್ಕಲಗಿತ್ತಿ' ಎಂದು ಮನದಲ್ಲಿಯೆ ಅವಳನ್ನು ಹೊಗಳಿದೆ.

ನಾನು ಬಟ್ಟೆಗಳನ್ನು ಬದಲು ಮಾಡುತ್ತ ಪಡಸಾಲೆಯಲ್ಲಿದ್ದಾಗ ನನ್ನ ಹೆಂಡತಿಯು ರಭಸದಿಂದ ಭಾಂಡಿಗಳನ್ನು ತಿಕ್ಕುವ ಸದ್ದು ಕೇಳಬರುತ್ತಲೇ ಇತ್ತು. ಬೆವೆತು ನೀರಿಳಿಯುವ ಅವಳ ಶೋಚನೀಯ ಮುಖವನ್ನು ನೋಡಿ ಯಾಕೆ ಅವಳನ್ನು ಸಂಕೋಚಗೊಳಿಸಬೇಕೆಂದು ನಾನು ತುಸು ತಡೆದೆ.

ಅವಳ ಕೆಲಸ ಮುಗಿದ ಮೇಲೆ ಒಳಗೆ ನಾನು ಕಾಲಿರಿಸಿದೆ. ಮಾನಸಿಕ ಹಾಗೂ ದೈಹಿಕ ಎರಡೂ ರೀತಿಯಲ್ಲಿ ಆಕೆ ಥಕಾಸಿದ್ದಳಾಗಿದ್ದರಿಂದ ಅವಳ ಸ್ಥಿತಿ ಕರುಣಾಜನಕವಾಗಿತ್ತು. ಒಂದೆರಡು ಸಾಂತ್ವನದ ಮಾತುಗಳನ್ನಾಡಿ, ಅವಳು ತನ್ನ ಮನಸ್ಸಿನ ದುಗುಡವನ್ನು ಪರಿಹರಿಸಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನನಗೆ ವಿಚಾರ ಬಂತು. ಆಗ ನನ್ನ ಮನಸ್ಸು ಅಂತಃಕರಣದ ಭಾವನೆಯಿಂದ ಅರಳಿದ್ದಿತು.

ಇತ್ತ ಆಕೆ ನನ್ನನ್ನು ಕಂಡು ಲಗುಬಗೆಯಿಂದ ಸ್ಟೋವನ್ನು ಹೊತ್ತಿಸುವುದಕ್ಕೆ ತೊಡಗಿದ್ದಳು. 'ನನಗೆ ಈಗ ಚಹ ಬೇಡ' ಎಂದು ಹೇಳಲೆಂದೆ. ಅದೀಗ ಹೊರಗೆ ನನ್ನ ಚಹ ಫಲಾಹಾರವಾಗಿದ್ದರಿಂದ ನನಗೆ ನಿಜವಾಗಿಯೇ ಬೇಡವಾಗಿತ್ತು. ಮನೆಯಲ್ಲಿ ದೂತರು-ಮಕ್ಕಳು ಇಬ್ಬರೂ ಇರಲಿಲ್ಲ. 'ನನಗೀಗ ಚಹ ಬೇಡ' ಎಂದು ಹೇಳಬೇಕೆಂದು ಎದ್ದ ನಾಲಗೆ ಮತ್ತೆ ಮುಗುಚಿಕೊಂಡುಬಿಟ್ಟಿತು.

ಯಾಕೆ ಹಾಗೆ ಆಯಿತು ಎಂಬುದೇ ನನಗೆ ತಿಳಿಯದು. ಹಾಗೆ ಹೇಳಿಬಿಟ್ಟು ಮಾತಿಗೆ ಪೀಠಿಕೆ ಹಾಕಿದ್ದರೆ ಎಷ್ಟೊಂದು, ಅದೆಷ್ಟೊಂದು ಒಳ್ಳೆಯದಾಗುತ್ತಿತ್ತು. ನನ್ನನ್ನು ನಂಬಿ ಬಂದ ಜೀವ ಒದ್ದಾಡುವಾಗ ನೆರೆಮನೆಯಾಕೆ ಸಾಂತ್ವನ ಮಾಡಬೇಕಾಯಿತು. ನನ್ನ ಒಂದು ಮಾತು ಅವಳಿಗೆ ಅದೆಷ್ಟು ಹಿತವನ್ನುಂಟುಮಾಡುತ್ತಿದ್ದಿತೊ ಏನೊ. ನಾನು ತಪ್ಪು ಮಾಡಿದೆ ಎಂದು ಅನಿಸತೊಡಗಿತು. ಮರುಕ್ಷಣಕ್ಕೆ 'ಯಾರು ಬಲ್ಲರು. ಅವಳಂತೂ ಹಟವಾದಿನಿ. ನಿರ್ಧಾರ ಬೇರೆ ಮಾಡಿಬಿಟ್ಟಿದ್ದಾಳೆ. ನಾ ಮಾತನಾಡ ಹೋಗಿದ್ದರೆ ಅಪಾರ್ಥ ಮಾಡಿಕೊಳ್ಳುವ ಸಂಭವವೂ ಇತ್ತು' ಎಂದು ನನಗೆಯೇ ಸಮಾಧಾನ ಹೇಳಿಕೊಂಡೆ.

ಏನಿದ್ದರೂ ಮನೆಯಲ್ಲಿಯ ಈ ಕೃತ್ರಿಮ ಶಾಂತ ವಾತಾವರಣ, ಉರಿ ಗಾಳಿಯನ್ನು ಬೀಸಿದಂತೆ ಆಗಿದ್ದ ಆ ಮಸಣ ಮೌನ ನನಗೆ ತೀರ ಅಸಹ್ಯಕ್ಕಿಟ್ಟುಕೊಂಡಿತು. ಅವಳು ಚಹ ತಂದಾಗ 'ಏನಾಯ್ತು' ಎಂದು ಇಷ್ಟು ಕೇಳಿಬಿಡುತ್ತೇನೆ ಎಂದು ನಿರ್ಧರಿಸಿ ಕುಳಿತೆ. ಆದರೆ ಚಹ ಹಿಡಿದುಕೊಂಡು ಬಂದಾಗಿನ ಅವಳ, ಹಿಂದೆ ಎಂದೂ ಆಗಿರದ ಬಿಮ್ಮನೆಯ ಮುಖ ನೋಡಿದಾಗ, ಮತ್ತೆ ನನ್ನ ನಾಲಗೆ ಹಿಂಜರಿಯಿತು.

ಒಂದು ದಿನ. ಅವತ್ತು ನಾನು ಎಂದಿನಂತೆ ಸಂಜೆ ಮನೆಗೆ ಬಂದ ಮೇಲೆ ಹೊರಬೀಳುವುದರ ಬದಲು, ಮನೆಗೆಯೆ ಎಂಟು ಗಂಟೆಗೆ ಬಂದೆ. ಅದೇ ಒಂದು ಸಣ್ಣ ತಪ್ಪಾಯಿತೆಂಬಂತೆ ಪರಿಸ್ಥಿತಿ ಇತ್ತು. ಸುನಂದೆ ನಮ್ಮಿಬ್ಬರ ಅತ್ಯಂತ ಅಚ್ಚೆಯ ಮುದ್ದುಗುವರಿಗೆ

ಜ್ವರವು ಏರಿ ಬಂದಿದ್ದಿತು. ಈಕೆ ಸುನಂದೆಯನ್ನು ತೊಡೆಯ ಮೇಲೆ ಮಲಗಿಸಿಕೊಂಡು ನಡುಮನೆಯಲ್ಲಿ ಕುಳಿತಿದ್ದಳು. ಒಂದು ಕ್ಷಣ ಆಕೆ ನನ್ನನ್ನು ನೋಡಿದಳು. ಅದೇ ನಿರ್ವಿಕಾರದ ಎಂದಿನ ನೋಟ. ತುಸು ಹೊತ್ತಿನ ಮೇಲೆ ಮಗುವಿನ ಬಗಲಲ್ಲಿ ಇಟ್ಟಿದ್ದ ಥರ್ಮಾಮೀಟರನ್ನು ಹೊರತೆಗೆದು ನೋಡಿದಳು, ಮಾತಿಲ್ಲ.

ಮಗುವಿಗೆ ಏನು ಜಡ್ಡಾಗಿದೆ ಎಂಬ ಮಾತು ಹಡೆದ ತಂದೆಗೂ ತಿಳಿಯದ ಸ್ಥಿತಿಯೆ? ನನ್ನಲ್ಲಿ ಈ ಅಸಹಾಯ ಸಿಟ್ಟು ಹೊಗೆಯಾಡುತ್ತಿದ್ದಾಗಲೇ ಲಗುಬಗೆಯಿಂದ ಬಟ್ಟೆ ಬದಲಾಯಿಸಿ, ಕೈ ಕಾಲು ತೊಳೆದುಕೊಂಡವನೆ ಮಗುವಿನ ಹಣೆಯನ್ನು ಮುಟ್ಟಿ ನೋಡಿದೆ. ಸುಡುತ್ತಿತ್ತು. ಥರ್ಮಾಮೀಟರ ೧೦೨ ಡಿಗ್ರಿಯನ್ನು ತೋರಿಸುತ್ತಿತ್ತು. ಈಕೆ ಬಹು ಹೊತ್ತು ಇಲ್ಲಿಯೇ ಕುಳಿತಿರುವಳೆಂದೂ, ಅಡುಗೆಯ ಮನೆಯ ಕೆಲಸವಾವುದೂ ಆಗಿಲ್ಲವೆಂದು ಕಂಡುಬಂತು. ಕೂಡಲೇ ಒಳ ಬಂದು ನಾನಾಗಿ ಅವಳ ತೊಡೆಯಿಂದ ಮಗುವನ್ನು ಎತ್ತಿಕೊಂಡು, ನನ್ನ ತೊಡೆಯ ಮೇಲೆ ಮಲಗಿಸಿಕೊಂಡೆ. ಸುನಂದೆಗೆ ನಾನು ಬಂದದ್ದು ತಿಳಿದಾಗ, ಆನಂದದ ನಿಮ್ನ ರೇಷೆಯು ಅವಳ ನಿತ್ರಾಣವಾದ ಎಳೆಯ ಮುಖದಲ್ಲಿ ಮಿನುಗಿತು. ಮಗುವನ್ನು ತಬ್ಬಿ ಚುಕ್ಕು ಬಡಿದೆ. ಆ ಗುಂಗಿನಲ್ಲಿ ಸುನಂದೆ ನಿದ್ರೆ ಮಾಡತೊಡಗಿದಳು. ಅವಳನ್ನು ಮೆಲ್ಲನೆ ಹಾಸುಗೆಯ ಮೇಲೆ ಮಲಗಿಸಿ, ಡಾಕ್ಟರರ ಮನೆಗೆ ಓಡಿದೆ.

ಡಾಕ್ಟರರ ಮನೆಯೆಂದರೆ ನಾವಿರುವ ಓಣೆಯಲ್ಲಿಯೇ ಕೊನೆಯಲ್ಲಿದೆ. ಅವರು ಹೊಸತಾಗಿ ಪ್ರ್ಯಾಕ್ಟೀಸು ಸುರುವು ಮಾಡಿದ್ದರಿಂದ ಮನೆಗೆ ೯ ಗಂಟೆಯ ಒಳಗೇ ಬಂದುಬಿಡುತ್ತಿದ್ದರು. ನಾನು ಮನೆಗೆ ಹೋದಾಗ ಅವರಿನ್ನೂ ಬಂದಿರಲಿಲ್ಲ. ಮಗುವಿಗೆ ಗುಣವಿಲ್ಲವೆಂದೂ, ಮನೆಗೆ ಬಂದೊಡನೆಯೆ ಕೂಡಲೇ ಬಂದು ನೋಡಿಕೊಂಡು ಹೋಗಬೇಕೆಂದೂ ಅವರ ಪತ್ನಿಗೆ ತಿಳಿಸಿ ಬಂದೆ.

ನಾನು ಡಾಕ್ಟರರಲ್ಲಿಗೇ ಹೋಗಿದ್ದೆನೆಂದು ಅವಳು ಊಹಿಸಿರಲು ಸಾಕು ಎಂದು ಅನಿಸಿತು. ಏನಿದ್ದರೂ ಮನೆಗೆ ಬಂದು ಡಾಕ್ಟರರ ಸುದ್ದಿಯನ್ನು ನಾನಾಗಿ ಅವಳೆದುರು ಎತ್ತುವ ನೆವದಲ್ಲಿ ನಮ್ಮ ಪಣವನ್ನು ಮುರಿಯಬೇಕೆಂದು ನಿರ್ಧರಿಸಿದೆ. ಮನೆಯ ಯಜಮಾನನಾಗಿ ನನ್ನ ಕರ್ತವ್ಯದಲ್ಲಿ ನಾನು ದೂರವಿರುವಂತಾಗಬಾರದು ಎಂಬ ಅಳುಕು ನನ್ನಲ್ಲಿ ಜಾಗ್ರತವಾಗಿತ್ತು. ಮನೆಯ ಒಳಗೆ ಕಾಲಿರಿಸಿದೊಡನೆಯೇ, ಊಟಕ್ಕೆ ಕುಳಿತಿದ್ದ ಮನಮೋಹನನು, 'ಅಪ್ಪಾ, ಎಲ್ಲಿಗೆ ಹೋಗಿದ್ದೀ?' ಎಂದು ಕೇಳಿದ.

"ಡಾಕ್ಟರರ ಕಡೆಗೆ ಹೋಗಿದ್ದೆ. ಮನೀಗೆ ಬಂದ ಕೂಡಲೇ ಕಳಿಸಿಕೊಡ್ರಿ ಅಂತ ಅವರ ಹೇಣ್ತಿಗೆ ಹೇಳಿ ಬಂದೆ" ಎಂದೆ ನಾನು.

ಆದದ್ದೇನು? ಅದರಿಂದ ನಾನಾಗಿ ಈಕೆಯೊಡನೆ ಮಾತನಾಡುವ ಪ್ರಸಂಗ ತಪ್ಪಿಬಿಟ್ಟಿತು. ಇವಳದಾದರೂ ಎಷ್ಟು ಹಟ ಎಂದು ಬೇಸರವೂ ಆಯಿತು. ದಿನದಂತೆ

ಹಾಕಿದ ತಾಟಿನ ಮೇಲೆ ನಾನೂ ಬಂದು ಕುಳಿತೆ. ಮೂವರೂ ಊಟದ ಶಾಸ್ತ್ರ ಮುಗಿಸಿದೆವು. ಮಧ್ಯದಲ್ಲಿ ತೊದಲು ನುಡಿಯನ್ನು ಆಡುತ್ತ ರಂಜಿಸುವ ಸುನಂದೆ ಊಟದ ವೇಳೆಗೆ ಬಳಿಯಲ್ಲಿ ಇರಲಿಲ್ಲ.

ಮಗುವಿನ ಜ್ವರ ಹಾಗೇ ಇತ್ತು. ಗಂಟಲು ಒಣಗಿದೆಯೆಂದು ಈಕೆಯು ಗ್ಲುಕೋಸ ನೀರನ್ನು ಕುಡಿಸಿದಳು. ಡಾಕ್ಟರರು ಇನ್ನೂ ಬರಲಿಲ್ಲ. ಬಹಳ ದಾರೀ ಕಾಯ್ದು ಬೇಸತ್ತು ನಾನು ಇನ್ನೊಮ್ಮೆ ಅವರ ಮನೆಗೆ ಹೋದೆ. ಆಗೂ ಅವರು ಬಂದಿಲ್ಲವೆಂದು ತಿಳಿದು, ಅವರ ಪತ್ನಿಯಂತೆ ನನಗೂ ಅಚ್ಚರಿ ಎನಿಸಿತು.

ಮನೆಯಲ್ಲಿ ಯಾರಿಗಾದರೂ ಸಣ್ಣ ಜಡ್ಡು ಬಂದರೂ ಸಾಕು 'ಈಕೆ'ಯು ಬಲು ಗಾಬರಿಯಾಗುತ್ತಾಳೆ. ಎಷ್ಟೋ ಸಲ ನೆರೆಯವರು, ಅದೇಕೆ ಸ್ವತಃ ಅವಳ ತವರುಮನೆಯವರೂ ಕೂಡ ಅವಳ ಈ ಅತಿಯಾದ ಪುಕ್ಕಲತನಕ್ಕೆ ಹಾಸ್ಯ ಮಾಡಿದ್ದುಂಟು. ಈಗ ಮಾತ್ರ ಆ ಸಂದರ್ಭವಿರಲಿಲ್ಲ. ಎಳೆಯ ಮಗು ಜ್ವರದಲ್ಲಿ ಅಖಂಡ ಬೇಯುತ್ತಿತ್ತು. ಅಯ್ಯೋ, ಅವಳೆಷ್ಟು ಗಾಬರಿಯಾಗಿದ್ದಾಳೊ ಎಂದು ಒಂದೇ ಸಮನೆ ಮಿಡುಕಿದೆ.

ನಾನು ಹೊರಗಿನ ಕೆಟ್ಟ ಥಂಡಿಯಲ್ಲಿಯೆ ಸಿಗರೇಟನ್ನು ಎಳೆದು ಪೂರ್ಣ ಮುಗಿಸಿ ಮನೆಗೆ ಬಂದಾಗ ಈಕೆಯು ಮುದ್ದೆಯಾಗಿ ಮಲಗಿಕೊಂಡಿದ್ದಳು. ನಿದ್ದೆ ಹತ್ತಿದ್ದಿತು. ಅವಳನ್ನು ಎಬ್ಬಿಸ ಹೋಗದೇ ಅಲ್ಲಿಯೆ ರಗ್ಗನ್ನು ಹೊಚ್ಚಿ, ದೀಪವನ್ನು ಆರಿಸಿದೆ. ನಸುಕಿನಲ್ಲಾದರೂ ಡಾಕ್ಟರನ್ನು ಕರತರಲೇಬೇಕು ಎಂದುಕೊಳ್ಳುತ್ತ ಮುಸುಗೆಳೆದೆ.

ಪ್ರತಿ ನಿತ್ಯದ ನಿಯಮದಂತೆ ರಾತ್ರಿ ಎರಡು ಗಂಟೆಯ ಸುಮಾರಿಗೆ ಎಚ್ಚರವಾಗಿ ನಾನು ಕಣ್ಣು ತೆರೆದಾಗ ಮೇಲೆ ದೀಪ ಉರಿಯುತ್ತಿತ್ತು. ನನಗೊ ಅದನ್ನು ಆರಿಸಿದ ಹಾಗೆ ನೆನಪು. ಹೊರಳಿ ನೋಡಿದೆ. ಈಕೆಯು ಎದ್ದು ಕುಳಿತು ಮಗುವಿನ ಹಣೆಗೆ ತಣ್ಣೀರಿನ ಪಟ್ಟಿ ಇಡುತ್ತಿದ್ದಳು. ನಾನು ಗಡಬಡಿಸಿ ಎದ್ದೆ. ಅವಳು ಪಚ್ಚಿ ನೋಡಿ ಇಟ್ಟಿದ್ದ ಥರ್ಮಾಮೀಟರನ್ನು ನೋಡಿದೆ. ಜ್ವರ ೧೦೩ರ ಗೆರೆಯನ್ನು ದಾಟಿಬಿಟ್ಟಿದ್ದಿತು.

ನಾನೂ ಬಳಿಯಲ್ಲಿ ಕುಳಿತು ಮಗುವಿನ ಹಣೆಗೆ ತಣ್ಣೀರಿನ ಪಟ್ಟಿಯನ್ನು ಇಡುತ್ತಲೂ ಆಕೆ ಅಲ್ಲಿಂದ ಎದ್ದಳು. ಜ್ವರ ಇಳಿಯುವದಕ್ಕೆ ಅನ್ಯ ಉಪಾಯವಿರಲೇ ಇಲ್ಲ. ಯಾವಾಗ ಬೆಳಗಾದೀತೊ ಎಂದು ಎಣಿಸುತ್ತಿದ್ದೆ. ನನ್ನ ಲಕ್ಷ್ಯವೆಲ್ಲ ಮಗುವಿನ ಕಡೆಗೆ ಇರುವಾಗ, ಹೊರಗೆ ಚಪ್ಪಲಿಯ ಸಪ್ಪಳವಾಯಿತು. ಎದ್ದು ನೋಡಿದೆ. ಈಕೆಯು ಕೊರಳಿಗೆ ಸ್ಕಾರ್ಫ ಸುತ್ತಿಕೊಂಡು ಹೊರಗಿನ ಬಾಗಿಲಿನ ಕೊಂಡಿಯನ್ನು ತೆರೆಯುತ್ತಿದ್ದಳು. ನಾನೇನು ಮಾಡಬೇಕು? ಮೊದಲು ಅವಳನ್ನು ಪ್ರತಿಬಂಧಿಸಿ ನಾನೇ ಡಾಕ್ಟರರ ಕಡೆಗೆ ಹೋಗಬೇಕೆಂದು ನಿರ್ಧರಿಸಿದೆ. ಮಗುವಿನ ಮೈಮೇಲೆ ಬಟ್ಟೆಯನ್ನು ಹೊದಿಸಿ ಬರಬೇಕೆನ್ನುವಾಗಲೇ ಹೊರಗೆ ಕಾಲಿರಿಸಿದ್ದಳು. ಆದರೂ ಧಾವಿಸಿದೆ.

ಆದರೆ ಅವಳು ಹೋಗುವಾಗ ಹೊರಗಿನ ಕೊಂಡಿಯನ್ನು ಎಳೆದುಕೊಂಡು ಹೋಗಿದ್ದಳು! 'ಯಾಕೆ? ನಾನು ಪ್ರತಿಬಂಧಿಸಲಾರದೆಂದೆ? ಗಾಳಿಗೆ ಬಾಗಿಲು ತೆರೆದೀತು ಎಂಬ ಕಾರಣದಿಂದೆಯೆ? ಅಸಹಾಯ ಮನಸ್ಥಿತಿಯಲ್ಲಿ ನಾನು ಮತ್ತೆ ಮಗುವಿನ ಬಳಿಗೆ ಬಂದೆ. ಲಕ್ಷ್ಯವೆಲ್ಲ ಹೆಂಡತಿಯ ಕಡೆಗೇ ಇದ್ದಿತು. ಮಧ್ಯರಾತ್ರಿಯಲ್ಲಿ ಏಕಾಕಿಯಾಗಿ, ಯಾರೂ ದಿಕ್ಕಿಲ್ಲವೆಂಬಂತೆ ನನ್ನ ಹೆಂಡತಿ ಡಾಕ್ಟರರನ್ನು ಕರತರಲು ಉದ್ಯುಕ್ತಳಾಗಬೇಕಾಯಿತೆ? ಮಾತನಾಡಲೇ ಕೂಡದೆಂಬ ಇವಳ ಹಟವಾದರೂ ಎಷ್ಟು? ಎಲ್ಲವನ್ನೂ ತಾನೇ ಮಾಡಿಕೊಳ್ಳುವ ಇವಳ ದಿಮಾಕನ್ನು ಸಡಲಿಸದೆ ಹೋದರೆ ನನ್ನ ಹೆಸರೇ ಅಲ್ಲ. ಮಾಡುತ್ತೇನೆ. ಚೆನ್ನಾಗಿ ಇವಳಿಗೆ ದಂಡಿಸುತ್ತೇನೆ...'

ಅಗಿನ ಪ್ರತಿಯೊಂದು ಮಿನಿಟಿನಲ್ಲಿಯೂ ನಾನು ಉದ್ವಿಗ್ನತೆಯಿಂದ ಬೇಯುತ್ತಿರುವಾಗ ಡಾಕ್ಟರರು ಬಂದರು. ಅವರ ಹಿಂದೆಯೆ ನನ್ನ ಹೆಂಡತಿ ಇದ್ದಳು. ಅವರು ಕೂಡಲೇ ಮಗುವನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ಮಗುವಿನ ಎದೆ, ಬೆನ್ನು ಹೊಟ್ಟೆಗಳ ಮೇಲೆಯೂ ಒದ್ದೆಯ ಪಟ್ಟಿಯಾಡಿಸಿದರು. ಫ್ಲೂ ಜ್ವರವೆಂದೂ ಗಾಬರಿಗೆ ಕಾರಣವಿಲ್ಲವೆ ತಿಳಿಸಿದರು. ಅದು, ಇದು ಮಾತನಾಡುತ್ತ ನಾವು ಒಂದು ತಾಸು ವೇಳೆ ಕಳೆದೆವು. ಮಗುವಿನ ಜ್ವರ ೧೦೧ರ ಗೆರೆಯನ್ನು ಇಳಿಯತೊಡಗಿತ್ತು. ಅವರ ಸಲಹೆಯ ಮೇರೆಗೆ, ಬಚ್ಚಗಿನ ಹಾಲನ್ನು ಕುಡಿಸಿ ಮಲಗಿಸಿದೆವು.

ಮುಂದಿನ ದಿನಗಳಲ್ಲಂತೂ ನಾವು ಮಾತನಾಡದೇ ಇರುವುದು ಒಂದು ಸಹಜ ಸಿದ್ಧ ನಡವಳಿಕೆ ಎಂಬಂತಾಗಿಬಿಟ್ಟಿತು. ಅದರ ಬಗ್ಗೆ ಯೋಚನೆ ಮಾಡುವುದನ್ನೇ ಬಿಟ್ಟಿದ್ದೆ. ಸ್ಪಷ್ಟವಾಗಿ ಹೇಳಬೇಕೆಂದರೆ ಅವಳೊಡನೆಯ ಮಾತಿನ ಜರೂರಿ ನನಗೇನೂ ಇರಲಿಲ್ಲ.

ಆ ದಿನ ಬಂತು. ಯಥಾಪ್ರಕಾರ ಅಂದು ಬೆಳಗಿನ ಅಲ್ಪಸ್ವಲ್ಪ ಮನೆಗೆಲಸಕ್ಕೆ ನೆರವಾದಂತೆ ಮಾಡಿ, ಸ್ನಾನ ಮುಗಿಸಿ ಪೇಪರನ್ನು ಓದುತ್ತ ಕುಳಿತಿದ್ದೆ.

"ಚಹಕ್ಕೆ ಸಕ್ಕರಿ ಹಾಕೇದ್ದೋ ಇಲ್ಲೋ ನೋಡ್ರಿ" ಎಂಬ ಮಾತು ಕೇಳಿಸಿತು. ದನಿ ಹೆಂಡತಿಯದೆಂದೆನಿಸಿದರೂ, ಆಕೆ ಬಾಯಿ ಬಿಟ್ಟರೆ ಅದು ನನಗಾಗಿ ಅಲ್ಲ, ನನಗೆ ಸಂಬಂಧಿಸಿದ್ದೇ ಅಲ್ಲ, ಎಂಬ ಸರಣಿಯು ಬಲು ಚೆನ್ನಾಗಿ ರೂಢಿಯಾಗಿದ್ದಾಗ ಆಕೆ ನನ್ನನ್ನು ಕುರಿತೇ ಆ ಮಾತನ್ನಾಡಿದ್ದಳೆಂದು ನಾನು ತಿಳಿಯಬೇಕಾದರೆ, ಆಕೆ ಅದನ್ನು ಪುನರುಚ್ಚರಿಸಬೇಕಾಯಿತು.

ದಿಙ್ಮೂಢನಾಗಿ ಆಕೆಯನ್ನು ನೋಡತೊಡಗಿದೆ. ಚಹದ ಕಪ್ಪನ್ನು ಹಿಡಿದುಕೊಂಡೇ ನಿಂತಿದ್ದಳು. ಹೌದು, ಅವಳೇ ಮಾತನಾಡಿದವಳು? ನನ್ನೊಡನೆ ಮಾತನಾಡಿದ್ದಳು! ಎಲ್ಲ ಬಿಟ್ಟು ಈಗೇಕೆ ಮಾತನಾಡಿದಳು. ಆಡುವ ಪ್ರಸಂಗ ಕುತ್ತಿಗೆಯವರೆಗೆ ಬಂದಾಗ ಆಡಿರಲಿಲ್ಲ. ಈಗ ಏಕೆ? ಅದೂ ಇಷ್ಟು ದಿನ ಬಿಟ್ಟು! ಎಷ್ಟು ದಿನ....?

"ಇವತ್ತಿಗೆ ಈ ಘಳಿಗೆಗೆ ಬರೋಬ್ಬರಿ ಒಂದು ತಿಂಗಳಾತು ನಾವು ಮಾತು ಬಿಟ್ಟು. ನಾ ಮಾತ ಬಿಟ್ಟಿದ್ದರಿಂದ ನಿಮಗ ಏನು ಕೊರತಿ ಆಗಲಿಲ್ಲ. ಕೂಸಿಗೆ ೧೦೩ ಡಿಗ್ರಿ ಜ್ವರಾ ಬಂದು ಕುದೀತಿದ್ರೂ ನಿಮಗ, ಅಲ್ಲ ನನಗೂ ನಿಮ್ಮ ಮಾತಿನ ಜರೂರಿ ಬೀಳಲಿಲ್ಲ. ಇನ್ನ ಅದನ್ನ ಕಡಿತನಕಾ ಬಿಡಬಲ್ಲೆ, ಅಂತ ಅನಿಸ್ತು"

ಕಡೆಯ ವಾಕ್ಯ ನನ್ನನ್ನು ಶಲ್ಯದಂತೆ ತಿವಿಯಿತು. ಆಕೆ ಮುಂದುವರಿಸಿದಳು :

"ಏನೊ ನನ್ನದು ಅಂತ ಹಚಿಗೊಂಡಿದ್ದೇ ಅಂತ ಮುಗಿಬಿದ್ದು, ಸ್ವಲ್ಪ ಹೆಚ್ಚು ಕಡಿಮಿ ಆಡತಿದ್ದೆ. ನಿಮ್ಮ ಮ್ಯಾಲೆ ನನಗೆ ಏನೊ ಅಧಿಕಾರ ಅದ ಅಂತ ನನ್ನ ಭಾವನಾ ಆಗಿತ್ತು. ನಿಮಗ ಅದು ಸರಿಬರಲಿಲ್ಲ. ಜಗಳಾಗತಾವ ಅಂತ ಮಾತು ಬಿಡೋಣ ಅಂದ್ರಿ. ಸುಧಾರಿಸಿಗೊಂಡು ಇರೋಣ ಅಂತ ಅನ್ನಲಿಲ್ಲ! ಹೆಂಗ ಇರಬೇಕು ಅನ್ನೋದನ್ನ ನೀವು ನನಗ ತಿಳಿಸಿಕೊಡೋ ಪ್ರಯತ್ನ ಮಾಡಲಿಲ್ಲ."

ನನ್ನ ಸಮಸ್ತ ಇಂದ್ರಿಯಗಳೂ ನಿರ್ಜೀವವಾಗಿ, ಶ್ರವಣಕಾರ್ಯ ವೊಂದರಲ್ಲಿಯೇ ನನ್ನ ಶಕ್ತಿಯೆಲ್ಲ ಕೇಂದ್ರೀಕೃತವಾಗಿ ನಾನು ಅವಳ ಮಾತನ್ನು ಕೇಳುತ್ತಲಿದ್ದೆ.

"ಕೂಸು ಅಳತಿದ್ರ ಕಚೇರಿಗೆ ಹೊತ್ತಾತು ಅಂತ ನೆವಾ ಮಾಡಿ ಭರಕ್ಕನ ನೀವು ಹೋಗಬಹುದು. ಆದರ ನನಗ ಅದು ಬೇಡಿ ಬಯಸಿದ, ಬಿಡದ ಕರ್ಮ. ನಿಮಗ ಬ್ಯಾಡ ಆಗಿ, ನಿಮ್ಮ ವಿಶ್ವಾಸದ ಅಧಿಕಾರ ಕಳಕೊಂಡರೂ, ಈ ಮಕ್ಕಳಿಂದ ನನಗ ಈ ಮನ್ಯಾಗ ಬದುಕುವ ಅಧಿಕಾರ ಉಳಿದದ ಅಂತ ಇಲ್ಲಿ ಇದ್ದೇನಿ. ಇಷ್ಟs, ನಿಮಗ ತಿಳಿದಷ್ಟು ದುಡ್ಡು ತಂದು ಹಾಕುವ ಕರ್ತವ್ಯ ನೀವು ಮಾಡತೀರಿ. ಅದು ನನ್ನ ಪುಣ್ಯ. ಮತ್ತ ಈಗ್ಯಾಕ ಮಾತಾಡಿಸಿದೆ ಅಂತ ನೀವು ಕೇಳಬಹುದು. ನಾ ಹಿಂಗ ವಿಚಾರ ಮಾಡಿದೆ; ನನ್ನಷ್ಟಕ್ಕ ನಾನು, ನಿಮ್ಮಷ್ಟಕ್ಕ ನೀವು, ಸಂಸಾರಕ್ಕ ಮಕ್ಕಳಿಗೆ ಎಷ್ಟು ಅವಶ್ಯ ಅದನೋ ಅಷ್ಟೇ ನಾವೂ ನೀವೂ ಇರಲಿಕ್ಕೆ ಬರತಿದ್ರ ತೋರಿಕೆಗೆ ಮಾತು ಬಿಡೋ ಅಗತ್ಯ ಎಲ್ಲಿ ಉಳೀತು? 'ಸುನಂದಾ, ಅಪ್ಪನ್ನ ಊಟಕ್ಕ ಕರಿ' ಅಂತ ಹೇಳೊದಕ್ಕೂ, 'ತಾಟು ಹಾಕೇದ ಊಟಕ್ಕ ಬರ್‍ರಿ', ಅಂತ ನಾ ಕರೆಯೂದಕ್ಕೂ ಏನು ಫರಕದ ಹೇಳ್ರಿ? ನನಗ ಈ ಮಾತಿನ ಜರೂರಿ ಬಿತ್ತೂ ಅಂತ ಈಗ ನಾ ನಿಮ್ಮ ಕಡೆ ಬರಲಿಲ್ಲ. ಅದರ ಮಾತು ಆಡದೇ ಇರೂ ಜರೂರಿ ಉಳೀಲಿಲ್ಲ ಅಂತ ನಾನು ಬಂದೆ."

ಅಸಹಾಯತೆ, ಸಿಟ್ಟು ಎರಡೂ ಎದುರು ನಿಂತು ನನ್ನ ಕಪಾಳಗಳಿಗೆ ಹಾಂಗೊಮ್ಮೆ ಹೀಂಗೊಮ್ಮೆ ತಾಡಿಸುವಂತೆ ನನ್ನ ಪರಿಸ್ಥಿತಿಯಾಗಿತ್ತು. ಉತ್ತರ ಹೇಳಲು ಬುದ್ಧಿ ಧಾವಿಸುತ್ತಿದ್ದರೂ, ಸಮರ್ಪಕವಾಗಿ ಏನು ಹೇಳಬೇಕೆಂದು ತಿಳಿಯದೇ ಸುಮ್ಮನೆ ಚಹದ ಕಪ್ಪನ್ನು ಕೈಗೆತ್ತಿಕೊಂಡೆ. ಚಹ ಕಹಿಯೇನಿರಲಿಲ್ಲ. ಆದರೆ ನನ್ನ ಮುಖ ಕಪ್ಪಿಟ್ಟದ್ದು ನೋಡಿ

ಆಕೆ ತಾನು ಸಕ್ಕರೆ ಹಾಕಿಲ್ಲವೆಂದು ಭಾವಿಸಿದಳೋ ಏನೋ; 'ಸಕ್ಕರೆ ತರುತ್ತೇನೆ' ಎನ್ನುತ್ತ ಒಳಗೆ ಹೋದಳು.

ಮನೆಯ ವಾತಾವರಣವು ಉಸಿರುಗಟ್ಟುವಷ್ಟು ಅತ್ಯಸಹ್ಯವಾಗಿದ್ದಾಗ ನಾನು ಕೂಡಲೇ ಉಟ್ಟ ಧೋತರದ ಮೇಲೆಯೇ ಹೊರಬಿದ್ದೆ. ನನಗದೇ ಯೋಚನೆ; ಇಂದೇ ಏಕೆ ಮಾತನಾಡಿಸಿದಳು? ಅವಳೇ ಮೊದಲು ಆಡಿದರೂ, 'ನೀನೇ ಸೋತೆ. ...ನೀನೆ!' ಎಂದು ಮನಸ್ಸು ಸಾರುತ್ತಿತ್ತು. ಕಾಯಾ-ವಾಚಾ-ಮನಸಾ ಒಂದು ತಿಂಗಳು ಕಾಲ ದೂರವಿರುವಾಗ ಆಕೆಯಾಗಿಯೆ ಏಕೆ, ಅದೇನು ಮೌನವನ್ನು ಮುರಿದಳು. ಅಲ್ಲ, ಅವಳ ಮಾತಿನಲ್ಲಿ ಅದೇನು ಸತ್ವ! ಅದೆಂಥ ಅಗಾಧ ತಿಳುವಳಿಕೆಯುಳ್ಳವಳಂತೆ ಆಡಿದಳಲ್ಲ...

ನನಗರಿಯದಂತೆಯೇ ನನ್ನ ಕಾಲುಗಳು ಗೆಳೆಯ ವಿಠ್ಠಲಮಾಸ್ತರನ ಮನೆಗೆ ಕರೆದೊಯ್ದುವು.

❄ ❄ ❄ ❄ ❄

೭. ಕಾಗೆಗೆ ಹೇಳಿದ ಕಥೆ

ಇಂದು ನೀವೆಲ್ಲ ನನಗಾಗಿ, ನನಗೆ ಸ್ವರ್ಗದಲ್ಲಿ ಗತಿ ಕಾಣಿಸಲೆಂದು, ಈ ಹಿತ್ತಲಿನಲ್ಲಿ ಕೂಡಿದ್ದೀರಿ. ಹನ್ನೆರಡನೆಯ ದಿನದ ಉಳಿದೆಲ್ಲ ಕರ್ಮವನ್ನು ದುಃಖದಿಂದ, ಆದರೂ ನಿಷ್ಠೆಯಿಂದ ಮಾಡಿದಿರಿ. ಈಗ 'ಕಾಗೆ ಪಿಂಡ'ಕ್ಕಾಗಿ ದಾರಿ ಕಾಯುತ್ತಿದ್ದೀರಿ, ಈ ಉರಿಬಿಸಿಲಿನಲ್ಲಿ.

ಕಾಗೆಪಿಂಡ ಅಗಲೊಲ್ಲದು. ಕಾಗೆಗಳು ಆ ಅನ್ನದ ಮುದ್ದೆಗಳ ಹತ್ತಿರ ಬರಲೊಲ್ಲವು. ಅದಕ್ಕೆ ನಾನು ಮನಸ್ಸಿನಲ್ಲಿ ಏನೋ ಭೂಲೋಕದ ವಾಸನೆ ಹಿಡಿದಿದ್ದೇನೆಂದು ಸಹಜದಲ್ಲೇ ತಿಳಿದಿದ್ದೀರಿ.

ಹೌದು, ವಾಸನೆ ಹಿಡಿದಿದ್ದೇನೆ! ಪ್ರಬಲವಾದ ವಾಸನೆ!

ಆ ನನ್ನ ವಾಸನೆ ಏನಿದ್ದರೂ ಪೂರ್ಣಗೊಳಿಸುವೆನೆಂದೂ, ನಾನು ತೃಪ್ತಿಪಟ್ಟುಕೊಳ್ಳಬೇಕೆಂದೂ ಒಬ್ಬೊಬ್ಬರಾಗಿ ರಾಮಾಚಾರ್ಯರು ಹೇಳಿದಂತೆ ನೀರು ಬಿಡುತ್ತಿದ್ದೀರಿ.

ಅ ವಾಸನೆ ಇದೇ ಇರಬೇಕು; ನನ್ನ ೧೩ ದಿನದ ಎಳೆ ಮಗುವಿಗೆ ಪಾಲನೆಯ ವಿಷಯವೇ ಇರಬೇಕು ಎಂದು ತಿಳಿದಿದ್ದೀರಿ. ಅದರ ಪೋಷಣೆಯ ಭರವಸೆಯನ್ನು ಕೊಡುತ್ತಿದ್ದೀರಿ.

ಆದರೂ ಕಾಗೆಗಳು ಹತ್ತರ ಬರಲೊಲ್ಲವು! ನನ್ನ ವಾಸನೆ ನಾನು ಬಿಟ್ಟಿಲ್ಲ... ಇದು ನನಗೆ ಸಂತೋಷದ ಮಾತೆಂದು ತಿಳಿದಿದ್ದೀರ? ಛೇ, ಇಂದು ನಾನು ನಿಮ್ಮೊಟ್ಟಿಗೆ ಇರುವವಳಾಗಿದ್ದರೆ ಖಂಡಿತ ನಿಮಗೆ ಈ ರೀತಿ ಕಷ್ಟ ಕೊಡುತ್ತಿದ್ದಿಲ್ಲ. ನಿಮ್ಮ ಹಾಗೆ ನಾನಿಂದು ಮರ್ತ್ಯಳಾಗಿ ಉಳಿದಿಲ್ಲ; ಮೃತಳು ನಾನು.

ಅಂತೆಯೇ ನಿಮ್ಮೆಲ್ಲರ ಮನಸ್ಸಿನ ವಿಚಾರಗಳನ್ನು ಅಳೆಯಬಲ್ಲವಳಾಗಿದ್ದೇನೆ! ನಿಮ್ಮ ದುಃಖ, ಅನುತಾಪ, ಕಣ್ಣೀರುಗಳನ್ನು ನನ್ನನ್ನು ತಟ್ಟುತ್ತವೆ. ಆದರೆ ಆದರಿಂದ ನನಗೆ ನೋವಾಗುವುದಿಲ್ಲ!

ನನಗೂ ನನ್ನ ವಾಸನೆ ಏನೆಂದು ತಿಳಿದಿದೆ. ಆದರೆ ಅದಕ್ಕೆ ಪರಿಹಾರ ಇಲ್ಲ. ಅದನ್ನು ನಾನು ಹೇಳುವಂತಾಗುವತನಕ ನನ್ನ ವಾಸನೆಯನ್ನು ಬಿಡಲಾರೆನಲ್ಲಾ. ಈ ಗಳಿಗೆಯಲ್ಲಿ ನಿಮಗೆಲ್ಲ ಎಷ್ಟೊಂದು ತೊಂದರೆ ಎಂದು ಮಿಡುಕುತ್ತಿದ್ದೇನೆ.

ಅಯ್ಯೋ, ನನ್ನ ಕೈಹಿಡಿದವರಿಗೆ ನನ್ನ ಮೇಲೆ ಅಪನಂಬಿಕೆ. ನಾನು ಅನ್ಯಾಯ ಮಾಡಿದ್ದ ಪ್ರಸಂಗದಲ್ಲೇ ಅಪನಂಬಿಕೆ ಇಡಲಿಲ್ಲ, ನೀವು. ಈಗ 'ಮಗುವಿನ ಆರೈಕೆಯನ್ನು ನಾನು ನೋಡಿಕೊಳ್ಳುತ್ತೇನೆಂದು ವಚನಕೊಟ್ಟರೂ ನಂಬಲಾರೆಯಾ' ಎಂದು ಅಂದುಕೊಳ್ಳುತ್ತಿದ್ದೀರೆಲ್ಲ. ಊಂಹು, ನನ್ನ ವಾಸನೆ ಮಗುವಿಗೆ ಸಂಬಂಧಪಟ್ಟರೂ ಅದರ ಆರೈಕೆಯ ವಿಷಯದಲ್ಲೇನೂ ನನಗೆ ಯೋಚನೆ ಇಲ್ಲ ಎಂದು ಹೇಗೆ ತಾನೆ ನಿಮಗೆ ತಿಳಿಹೇಳಲಿ?

ಅಪ್ಪಾ, ಮಗಳ ಬಾಣಂತಿತನಕ್ಕೆಂದು ಎಷ್ಟು ಉಮೇದಿಯಿಂದ ಬಂದಿದ್ದಿ ನೀನು! ಮೊಮ್ಮಗನನ್ನು ಮೊದಲ ಸಲ ಕಂಡೆನೆಂಬ ಸಂತೋಷ ನಿನ್ನಲ್ಲಿ ತುಂಬಿ ತುಳುಕುತ್ತಿತ್ತು. ಆದರೆ ಏಕಾಏಕಿ ಹೀಗೆ ನನಗೆ ನಂಜು ಏರಲು ನಿನ್ನ ಬಾಣಂತಿತನದ ಕೆಲಸಗಳಲ್ಲಿ ಹೆಚ್ಚು ಕಡಿಮೆಯಾಯಿತೊ ಎಂದು ಈಗ ವಿಹ್ವಲಳಾಗಿರುವೆಯಲ್ಲ. ನನ್ನಂತಹ ಸಶಕ್ತಳಿಗೂ ಹೆರಿಗೆಯ ನೋವು ಈ ರೀತಿ ಪರಿಣಾಮ ಮಾಡಬೇಕೆ ಎಂದು ನೊಂದುಕೊಳ್ಳುತ್ತಿರುವೆಯಲ್ಲ. ಹಾಗೆ ಎಷ್ಟು ಮಾತ್ರಕ್ಕೂ ಆಗಿಲ್ಲ ಎಂದು ನಿನಗಾದರೂ ತಿಳಿಹೇಳಲು ನಾನೀಗ ಎಲ್ಲಿ ಶಕ್ತಳಿದ್ದೇನೆ?

ಓ ದೇವರೇ! ಒಂದೇ ಒಂದು ಸಲ ನನಗೆ ನನ್ನ ಈ ಬಳಗದವರೊಡನೆ ಮಾತನಾಡಲು ಬಿಡು. ಒಂದೇ ಸಲ! ಅವರಿಗೆ ತಿಳಿಸಿ ಹೇಳುವೆ, ನನ್ನ ವಾಸನೆ ಇದಲ್ಲ ಎಂದು. ಆಮೇಲೆ ಮತ್ತೆ ನಿನ್ನಲ್ಲಿಗೆ ಖಂಡಿತವಾಗಿ ಬರುವೆ. ಮಗುವಿನ ನಂಟನ್ನು ಗಣಿಸುವುದಿಲ್ಲ. ಮಗು ನನಗೆ ಬೇಡವಾದುದು ಎಂದು ನೀನರಿಯೆಯಾ?

ಅಕೊ, ಅಲ್ಲಿ ಯಾರು ಬಂದವರು? ನೆಗೆಣ್ಣೆಯಲ್ಲವೆ? ಏನು ಶೋಭಾ, ನೀನೂ ನೀರು ಬಿಡಬೇಕೆನ್ನುತ್ತೀಯಾ? ಯಾವ ಕೊರತೆಯೂ ಆಗದಂತೆ ನನ್ನ ಮೂರೂ ಮಕ್ಕಳನ್ನು ನೋಡಿಕೊಳ್ಳುವೆನೆಂದು ನೀನೂ ಹೇಳಬೇಕೆ?...

ಹೂಂ ನೀರು ಬಿಟ್ಟು ಹಾರ್ದಿಕವಾಗಿ ಹೇಳಿದ ಮೇಲೂ 'ಕಾಗೆ ಪಿಂಡ' ಆಗಲಿಲ್ಲವೆಂದು ಯೋಚಿಸುತ್ತೀಯೇನೆ ಶೋಭಾ? ಸ್ವತಃ ನನ್ನ ತಾಯಿಯೆ, ನನ್ನ ಪತಿಯೇ ಹೇಳಿದ ಮೇಲೆ, ಮತ್ತೆ ಎರಡನೆಯವರ ಭರವಸೆಯ ಅವಶ್ಯಕತೆ ನನಗಿದೆಯೆ? ಆದರೂ, ನನ್ನ ಕೊನೆಯ ಮಗುವೊಂದನ್ನು ಬಿಟ್ಟು, ಉಳಿದ ಎರಡೂ ಹೆಣ್ಣುಮಕ್ಕಳನ್ನು

ನಿನಗೊಪ್ಪಿಸಿದ್ದೇನೆ. ನಾನು ಒಪ್ಪಿಸುವುದೇನು ಬಂತು; ನಿನ್ನ ಸರಳ ಅಂತಃಕರಣದ ಸುಳಿಗೆ ಸಿಕ್ಕು ಅವೇ ತಾವಾಗಿ ನಿನ್ನೆಡೆ ಬಂದುಬಿಟ್ಟಿವೆ.

ಇದೇನು ಎಲ್ಲರ ಮುಖದಲ್ಲಿ ಒಂದು ಕ್ಷಣದ ಸಮಾಧಾನ? ಆತುರವೂ ಹೂತು ನಿಂತಿದೆ! ಸರಿ; ಒಂದು ಕಾಗೆ ಮುಂದೆ ಬಂದಿತೆಂದೇ? ಹ್ಞ, ಯಾಕೆ ಸುಮ್ಮನೆ ಆಸೆಪಡುತ್ತೀರಿ? ಅದು ಒಂದು ಹೆಜ್ಜೆ ಮುಂದಿಟ್ಟರೂ ಪಿಂಡವನ್ನು ಮುಟ್ಟಲಾರರು, ಮುಟ್ಟಲಾರದು!

ಅಂತೂ ನಿನ್ನ ಧೈರ್ಯವೂ ಹೆಚ್ಚಿನದಪ್ಪ. ಇವೆಲ್ಲ ಕಾತರವನ್ನು ಶಮನಮಾಡುವ ಸಹಾನುಭೂತಿಯೇ ನಿನಗೆ? ಹಾಗಾದರೆ ನನ್ನ ವಾಸನೆ ಏನಿದೆಯೆಂಬುದನ್ನಾದರೂ ನಿನಗೆ ಹೇಳುವೆ. ಅದಕ್ಕೆ ಉತ್ತರ ನನ್ನ, ಯಾರ ಕೈಯಲ್ಲಿಯೂ ಇಲ್ಲ. ಆದರೂ ನನ್ನ ಮಾತು ಕೇಳಿಯಾದ ಮೇಲೆ ಧೈರ್ಯ ತಂದುಕೊಂಡು ಪಿಂಡವನ್ನು ಮುಟ್ಟಿಬಿಡು. ಅಷ್ಟೇ ಅವರಿಗೆ ಸಮಾಧಾನವಾಗಬಹುದು. ಒಪ್ಪಿಗೆಯೇ?.... ಹೇಗೆ ಸುರುವು ಮಾಡಲಿ ಎಂದು ಯೋಚಿಸುತ್ತಿದ್ದೇನೆ. ಮತ್ತು ನಾನು ಹೇಳುವ ಮಾತೆಲ್ಲವನ್ನೂ ಕೇಳುವಷ್ಟು ತಾಳ್ಮೆಯೂ, ತಿಳಿವಿನ ಮಟ್ಟವೂ ನಿನ್ನಲ್ಲಿದೆಯೇ ಎಂದು ನನಗೆ ಸಂಶಯ ಬರುವುದಕ್ಕೆ ಕ್ಷಮಿಸು. ಮನುಷ್ಯ ವರ್ಗವೆಲ್ಲ ಪಿಂಡ ಪ್ರದಾನ ಪ್ರಸಂಗದಲ್ಲಿ ಮಾತ್ರ, ನಿನಗೆ ಶರಣ ಹೋಗಿ, ಉಳಿದೆಲ್ಲ ವೇಳೆಯಲ್ಲಿ ನಿನ್ನನ್ನು ಕೀಳಾಗಿ ಭಾವಿಸುವ ಪರಂಪರೆಯ ಗಾಢ ತೆರೆ ನನ್ನ ಮೆದುಳ ಮೇಲೆಯೂ ಇದೆ.

ನೋಡು, ಈ ಕಡೆ ದೀಕ್ಷಾಬದ್ಧರಾಗಿ ಜೋಲು ಮುಖ ಮಾಡಿಕೊಂಡು ಮಧ್ಯವಯಸ್ಸಿನವರೊಬ್ಬರು ಕುಳಿತಿದ್ದಾರಲ್ಲ, ಅವರು ನನಗೆ ಗಂಡನಾಗಬೇಕು. ಸ್ವಲ್ಪ ಗೂನು ಬೆನ್ನು ಅಂತ ನಿನಗೆ ಕಾಣುವದಲ್ಲವೆ, ಅದು ಬಹಳ ಹೊತ್ತು ಕುಳಿತಿದ್ದರಿಂದೇನಲ್ಲ; ಮೊದಲಿನಿಂದಲೂ ಅವರ ಬೆನ್ನು ಬಾಗಿ ಇದೆ.

ಇವರೊಟ್ಟಿಗೆ ನಾನು ಏಳು ವರ್ಷ ಕಳೆದಿದ್ದೇನೆ. ನನಗಿಂತ ಹಿಂದೆ ಒಬ್ಬಾಕೆ ಇವರ ಕೈ ಹಿಡಿದಿದ್ದಳಂತೆ. ನಾನು ಅವಳನ್ನು ನೋಡಿಲ್ಲ. ಆಕೆ ಬಂಜೆಯೆಂದು ನಮ್ಮ ಅತ್ತೆ ಅವಳನ್ನು ಉರಿಸುತ್ತಿದ್ದರಂತೆ. ಈಗ ಅತ್ತೆಯವರೂ ಇಲ್ಲ; ಅವಳೂ ವಿಷಮಜ್ವರದಿಂದ ತೀರಿಕೊಂಡಳಂತೆ. ಆಕೆ ಹೋದ ಮೇಲೆ ಈ ಮನೆಗೆ ನಾನು ಕಾಲಿರಿಸಬೇಕೆಂದು, ನನ್ನ ಹಿರಿಯರು ತೀರ್ಮಾನಿಸಿದರು.

ಇಲ್ಲಿ ನೋಡು, ಎರಡು ಮಕ್ಕಳು ನಿಂತಿವೆಯಲ್ಲ. ಅವರಲ್ಲಿ ಒಬ್ಬಳು ನಾಗವೇಣಿ ಮೊನ್ನೆ ಮೊನ್ನೆ ಅವಳನ್ನು ಶಾಲೆಗೆ ಹೆಸರು ಹಚ್ಚಿಸಿಯಾಗಿದೆ. ಬಳಿಯಲ್ಲಿ ನಿಂತ ಈಕೆ ಅವಳಿಗಿಂತ ಎರಡು ವರ್ಷಕ್ಕೆ ಚಿಕ್ಕವಳು. ಉಳಿದವರ ಅಭಿಮತವನ್ನು ಗಣಿಸದೆ ನಾನೇ ಆಕೆಗೆ ಯಶೋದೆ ಎಂದು ಹೆಸರಿಟ್ಟೆ. ಹೆಸರಿನದೇನು ಮಹತ್ವ ನಿನಗೆ. ನಿಮ್ಮ ಬಳಗದಲ್ಲಿ

ಹೆಸರನ್ನು ಇಡುವ ಪದ್ಧತಿಯೇನಿಲ್ಲ. ಆದರೂ ಮುಂದೆ ಥಕ್ಕನೆ ನಾನು ಹೆಸರುಗೊಂಡು ಕರೆದಾಗ ಏನೆಂದು ನಿನಗೆ ಅಚ್ಚರಿಯಾಗಬಾರದು.

ಕ್ರಾಪು ಬಿಟ್ಟ ಒಬ್ಬರು ನಿಂತಿದ್ದಾರಲ್ಲ. ಅವರು ನನ್ನ ಮೈದುನರು. ಸೈನಿಕ ಶಿಕ್ಷಣ ಪಡೆಯಲು ಬೇಕಾಗುವಷ್ಟು ದೇಹ ಸದೃಢವಾಗಿದೆ. ಆದರೆ ಕಲಿತದ್ದು ವಿಜ್ಞಾನ ವಿಷಯ. ಅಲ್ಲಿ ನಿಂತ ಆ ಬಳುಕು ದೇಹದ, ಹೆಸರಿನ ತಕ್ಕಂತೆ ಇರುವ ಶೋಭಾಗೆ ತಕ್ಕ ರೂಪವು ಮಾತ್ರ ಇವರಲ್ಲಿದೆಯೆನ್ನಲೆ. ಇರಲಿ.

ಈ ಮನೆಯಲ್ಲಿ ಬಂದ ಹೊಸತಾಗಿ ನನಗೆ ಯಾರನ್ನು ಕಂಡರೂ ಆಗುತ್ತಿರಲಿಲ್ಲ. ಅದರ ಕಾರಣ ಒಲ್ಲದ ಮನದಿಂದ ಈ ಮನೆಯಲ್ಲಿ ಕಾಲಿರಿಸಿದೆ ಎಂದು. ಕಲಿತ, ಸ್ವತಂತ್ರ ವಿಚಾರವುಳ್ಳವಳೆಂದು ನನ್ನ ನಾ ತಿಳಿದಿರುವಾಗ ನನಗೆ ವಯಸ್ಸು ಹೆಚ್ಚಾಯಿತೆಂದೂ, ನನಗಾಗಿ ಕೈಯೆತ್ತಿ ಕೊಡಬೇಕಾದ ವರದಕ್ಷಿಣೆಯ ಹಣವು ನನ್ನ ತಂದೆಯಲ್ಲಿಲ್ಲವಾಗಿಯೂ ನಾನು ಈ ಮನೆಗೆ ಬರಬೇಕಾಯಿತು; ಬಂದೆ.

ನನ್ನ ಬಾಳಿನ ಜೊತೆಗಾರ ರಸಿಕನಾಗಿರಬೇಕು, ನನ್ನನ್ನು ಒಂದು ಮಲ್ಲಿಗೆ ಹೂವಿನಂತೆ ನೋಡಿಕೊಳ್ಳಬೇಕು, ನನ್ನ ಮಾತನ್ನು ಕೇಳುತ್ತಿರಬೇಕು, ಅವನ ವಿಪತ್ಪ್ರಸಂಗಗಳಲ್ಲಿ ನನ್ನ ತಿಳಿ ಮನದ ಸಲಹೆಕೊಟ್ಟು ಪಾರು ಮಾಡಬೇಕು ಎಂದು ಏನೇನೆಲ್ಲ ಕನಸು ಕಟ್ಟಿಕೊಂಡವಳಾಗಿದ್ದೆ. ಅದೆಲ್ಲ, ಹೇಳಹೆಸರಿಲ್ಲದಂತೆ ಒರೆಸಿ ಹೋಗುವಂಥ ಹೊಸ್ತಿಲಕ್ಕೆ ಬಂದು ಎಡವಿದೆನಲ್ಲ ಎಂದು ನಾನು ಮದುವೆಯ ದಿನದಂದೇ ಬೇಸರಗೊಂಡಿದ್ದೆ.

ಈ ಬೇಸ ಸಿಡುಕಿನ ರೂಪವನ್ನು ತಾಳಿದುದು, ಆಗಿನ ೧೮ ವರ್ಷದ ಈ ಮೈದುನನನ್ನು ಕಂಡಾಗ. ಮದುವೆಯ ಮನೆಯಲ್ಲೆಲ್ಲ ಅವನದೇ ಓಡಾಟವಾಗಿ, ಯಾವುದಕ್ಕೂ ಅವನ ಸಲಹೆ, ಸರಸಗಳನ್ನೆ ಅನುನಯಿಸಿ ನಡೆಯುವ ಅವನ ಜನಪ್ರಿಯತೆ ನನಗೆ ಹೇಗೊ ಅನಿಸಿತು. ಎಲ್ಲರೂ ಅವನೊಟ್ಟಿಗೆ ಸಲಿಗೆಯಿಂದಿರುವಾಗ, ಸ್ವತಃ ಇವರೂ ತಮ್ಮ ತಮ್ಮನನ್ನು ಓಲಯಿಸುವಾಗ ಅವನ ವಿಷಯದಲ್ಲಿ ನನಗೆ ಮಾತ್ರ ಬಿಗುಮಾನ ಉಂಟಾಯಿತು. ಅವನ ವ್ಯಕ್ತಿತ್ವ ಈ ಮನೆಯಲ್ಲಿಯ ನನ್ನ ಸ್ಥಾನವನ್ನು ಆಕ್ರಮಣ ಮಾಡುತ್ತದೆ ಎಂದು ಅನಿಸಿ ನನ್ನ ಹೊಟ್ಟೆಯುರಿ ಹೆಚ್ಚಾಗುತ್ತಿತ್ತು.

ಆದರೂ ಮೈದುನರಾಯ ನನ್ನೊಟ್ಟಿಗೆ ಪ್ರತೀಕಾರಕ್ಕೆ ನಿಲ್ಲಲಿಲ್ಲ. ಎಲ್ಲರಂತೆ ನನ್ನ ಮೇಲೂ ಅವನ ಹಾಸ್ಯದ ಕಿಡಿಗಳು ಇದ್ದುವಲ್ಲದೆ, ಸಹಾಯ ಮಾಡುವ ಆತುರ, ಮಮತೆಯೊಂದನ್ನು ಬಿಟ್ಟು ತನ್ನ ಹೃದಯದಲ್ಲಿ ಇನ್ನೇನೂ ಇಲ್ಲ ಎನ್ನುವ ಹಾಗೆ ಇರುವ ಮಾತು-ನಡತೆ ನನ್ನನ್ನು ಇನ್ನಷ್ಟು ಕೆಣಕಿದುವು. ಈ ಮನುಷ್ಯ ಸೋತು ನಡೆದವರಂತೆ ಮಾಡಿಯೇ ಮನೆಯಲ್ಲಿ ನನಗಿಂತ ಶ್ರೇಷ್ಠನಾಗುತ್ತಿದ್ದಾನೆ ಎಂದನಿಸುತ್ತಿತ್ತು ನನಗೆ.

ನಾನು ಹೇಳಿದುದು ನಿನಗರ್ಥವಾಗುವುದಷ್ಟೆ. ಇದಕ್ಕೂ ಸರಳವಾಗಿ ಮಾಡಿ ಹೇಳಲು ನನಗೆ ಬರುವುದಿಲ್ಲ. ಅಲ್ಲದೆ ನಿನಗೆ ಹೇಳುವುದರ ಜೊತೆಗೆ ನನ್ನ ವಾಸನಾ ಭಾರವನ್ನೂ ತುಸು ಹಗುರ ಮಾಡಿಕೊಳ್ಳಲು ಇದು ಅವಕಾಶಕೊಡುವುದೆಂಬ ನನ್ನ ಸ್ವಾರ್ಥವೂ ಇದೆ.

ಮೂರೇ ತಿಂಗಳು. ಮದುವೆಯಾದ ಮೂರೇ ತಿಂಗಳು ಆತ ನಮ್ಮ ಮನೆಯಲ್ಲಿದ್ದ. ಮೆಟ್ರಿಕ್ ಪರೀಕ್ಷೆಯಲ್ಲಿ ಮೇಲ್ತರಗತಿಯನ್ನು ಪಡೆದಾಗ, ಆತನನ್ನು ಕಾಲೇಜಿಗೆ ಕಳುಹಿಸಬೇಕೆಂದು ಗೊತ್ತುಮಾಡಿ ಧಾರವಾಡಕ್ಕೆ ಅವನ ಅಣ್ಣ ಅಕ್ಕರೆಯಿಂದ ಕಳುಹಿದರು. ತಮಗಿರುವುದು ರೆವ್ಹಿನ್ಯೂ ಕಚೇರಿಯಲ್ಲಿಯ ಅಸಿಸ್ಟಂಟ್ ಶಿರಸ್ತೇದಾರಿಕೆಯಾದರೂ ಅವನ ವಿದ್ಯಾಭ್ಯಾಸದ ಹೊಣೆ ಹೊತ್ತರು.

ಪೀಡೆ ತೊಲಗಿತು ಎಂದು ಸಂತೋಷಪಡುವೆನೆಂದೆಣಿಸಿದ ನನಗೆ ಆ ವ್ಯಕ್ತಿ ಹೋದ ಮೇಲೆ ಏನನ್ನೊ ಕಳೆದುಕೊಂಡತಾಯಿತು, ನನ್ನ ಸ್ಥಿತಿ. ಅರ್ಥಾತ್ ಆಗ ನನ್ನ ಮಾನಸಿಕ ಹೋರಾಟಕ್ಕೆ ಎದುರಾಳಿಯೇ ಇರಲಿಲ್ಲ!

ಅವನು ಹೋದ ಮೇಲೆ ಅವರ ಅಣ್ಣ ಅವನ ಎಲ್ಲ ವಿವರ ತಿಳಿಯಲು ಹಾಗೂ ಆರೋಗ್ಯ ಕಾಯ್ದುಕೊಳ್ಳುವಂತೆ ಸೂಚಿಸಲು ಮೂರು ಮೂರು ದಿನಕ್ಕೊಮ್ಮೆ ಕಾಗದ ಬರೆಯುತ್ತಿದ್ದರು. ಅದನ್ನು ಅಂಚೆಯ ಕಟ್ಟೆಗೆ ತಾವು ರವಾನಿಸದೆ 'ನೀನೇನಾದರೂ ಬರೆಯುತ್ತಿದ್ದರೆ ಬರೆ' ಎಂದು ಕವರನ್ನು ಒಗೆದು ಕಚೇರಿಗೆ ಹೋಗಬೇಕು. ಇತ್ತ ತಮ್ಮನು ಕೂಡಾ 'ಒಲುಮೆಯ ಅಣ್ಣನಿಗೆ ನಮಸ್ಕಾರ' ಮಾಡುತ್ತ ನನ್ನ ಮೇಲೆ ಏನಾದರೂ ಹುಸಿ ಆಕ್ಷೇಪವನ್ನೆತ್ತಬೇಕು. ಊಟ-ಉಡಿಗೆ, ನೋಡಿದ ಸಿನೆಮಾ ಇವುಗಳ ವಿಷಯ ನನಗೆ ಬರೆಯುವಾಗ ಪ್ಯಾರಾದ ಮೊದಲಿಗೆ 'ಪ್ರಿಯ ಅತ್ತಿಗೆಗೆ' ಎಂದು ಹೆಸರಿಸಿಯೆ ಪ್ರಾರಂಭ ಮಾಡುತ್ತಿದ್ದ.

ಆದರೆ ನಾನೆಂದೂ ಉತ್ತರ ಬರೆಯಲಿಲ್ಲ. ಅವನು ಹತ್ತು ಸಲ ಪ್ರಾರ್ಥಿಸಿಕೊಂಡಷ್ಟೂ, ಅದಕ್ಕೆ ನಾನು ಬರೆಯದೇ ಇರುವ ನಿರ್ಧಾರ ಮಾಡಿದಷ್ಟೂ ನನ್ನ ಮನಸ್ಸು ಹರ್ಷಗೊಳ್ಳುತ್ತಿತ್ತು. ಆದರೂ ಆ ವ್ಯಕ್ತಿ ಅದಕ್ಕೆ ಮುಖಭಂಗಿತನಾದಂತೆ ಭಾವಿಸಿದ ಹಾಗೆ ಎಂದೂ ತೋರ್ಪಡಿಸಲಿಲ್ಲ.

ಅತ್ತಿಗೆ ಬರೆಯದಿದ್ದರೆ ಇಲ್ಲ ಎಂಬ ವಿಚಾರವೇ ಅವನಿಗೆ ಬರಲಿಲ್ಲವೇನೊ. ಅಂತೆಯೇ ರಜೆಯಲ್ಲಿ ಊರಿಗೆ ಬಂದ ಮೇಲೂ 'ನೀವು ಯಾಕೆ ನನಗೆ ಕಾಗದ ಬರೆಯಲಿಲ್ಲ? ನೀವು ಯಾಕೆ ದೀವಳಿಗೆಗೆ ಮಾಡಿದ ತಿನಿಸುಗಳನ್ನು ನನಗೆ ಕಳಿಸಲಿಲ್ಲ?' ಎಂದೆಲ್ಲ ಸಲಿಗೆಯ ಜಗಳ ಕಾಯಲಿಕ್ಕೆ ಸುರುವು ಮಾಡುತ್ತಿದ್ದ. ನನಗಿದು ಅರ್ಥವೇ ಆಗುತ್ತಿರಲಿಲ್ಲ. ಈ ಮನುಷ್ಯನನ್ನು ನಾನು ಹಿಡಿದಷ್ಟೂ ಆತ ನುಣುಚಿಕೊಳ್ಳುವ ಹಾಗೆ ಅನಿಸಿ ನನ್ನ ಭಾವನೆಗಳನ್ನು ಮುಳ್ಳು ಕಂಟಯ ಮೇಲೆ ಎಳೆದಷ್ಟು ನೋವಾಗುತ್ತಿತ್ತು.

ಇಷ್ಟು ಮಾತ್ರ ನಿಜ. ಅವನು ಮನೆಯಲ್ಲಿದ್ದಾಗ 'ನಗೀ ನವಿಲು' ಆಡುತ್ತಿತ್ತು. ಆದರೆ ಅಂಥ ಅವಧಿ ಕಡಿಮೆ. ಮತ್ತೆ ಆತ ಕಲಿಯಲು ಹೋಗುತ್ತಿದ್ದ.

ಅತೃಪ್ತಿಯೆಂದರೇನು ನಿನಗೆ ಗೊತ್ತಿದೆಯಷ್ಟೆ. ನನ್ನ ಬಾಳು ಬಟ್ಟೆನಲ್ಲಿ ಅತೃಪ್ತವಾಗಿಯೇ ಸಾಗುತ್ತಿದ್ದಿತು. ಈ ಮನೆಯಲ್ಲಿ ವಿಶೇಷ ಸಂಕಟ ನನಗಾಗಿ ಕಾದಿರದಿದ್ದರೂ, ಪರಿಸ್ಥಿತಿಗೆ ನಾನು ಒಗ್ಗಿಕೊಂಡು ಹೋಗಿದ್ದರೂ ಮದುವೆಗೆ ಮುಂಚೆ ನಾ ಕಟ್ಟಿದ್ದ ಕಲ್ಪನೆಯ ಹಂದರ ಕುಸಿದು ಬಿದ್ದಿದೆ ಎಂಬ ಅತೃಪ್ತಿ ನನಗಿತ್ತು.

ಅಂತೆಯೇ ಒಂದು ಮನೆಯಲ್ಲಿ ಎರಡನೆಯ ಹೆಂಡತಿ ಬಂದರೆ ದಾಂಪತ್ಯ ಹೇಗೆ ಸಾಮಾನ್ಯವಾಗಿ ನಡೆಯುಬೇಕೋ ಹಾಗೆಯೇ ನಮ್ಮದೂ ಸಾಗಿತ್ತು. ಆ ಕಾರಣ ನಿತ್ಯ ಸಂಸಾರದಲ್ಲಿ ಕೈ ಹಿಡಿದವರೊಡನೆ ವಾದಕ್ಕೆ ನಿಲ್ಲಲು ನಾ ಹಿಂಜರಿಯಲಿಲ್ಲ. ಅಂಥ ಪ್ರಸಂಗಗಳಲ್ಲಿ ಅವರೇ ಬೇಗ ಮಾತನ್ನು ನಿಲ್ಲಿಸುತ್ತಿದ್ದರು. ಸಿಟ್ಟು ಹೆಚ್ಚಾದಾಗ ನನ್ನನ್ನೆ ಹೊಡೆಯಲು ಬಂದಂತೆ ಮಾಡಿ ತಮ್ಮ ಅಸಹಾಯತೆಯನ್ನು ವ್ಯಕ್ತಪಡಿಸಿಕೊಳ್ಳುತ್ತಿದ್ದರು.

ನಿಮ್ಮ ಗೂಡಿನಲ್ಲಿ ನಿಮ್ಮಿಬ್ಬರಿಗೆ ಯಾವ ರೀತಿಯಿಂದಾದರೂ ಜಗಳ ಬರುತ್ತಿತ್ತೆ? ನಮ್ಮ ದಾಂಪತ್ಯದಲ್ಲಿ ಮಾತ್ರ ಭಿನ್ನತೆ ಹೇಗೆ ಬರುತ್ತಿತ್ತೆಂಬುದೇ ನನಗೆ ಆಗ ಒಗಟಾಗಿದ್ದಿತು. 'ತಪ್ಪು ಅವರದು. ಅವರಿಗೆ ಸಹಧರ್ಮಿಣಿಯನ್ನು ಸರಿಯಾಗಿ ನೋಡಿಕೊಳ್ಳುವುದು ಗೊತ್ತಿಲ್ಲ. ಹೆಣ್ಣು ಎಂದು ಭಾವಿಸಿದ್ದಾರಲ್ಲ' ಎಂದುಕೊಳ್ಳುತ್ತಿದ್ದೆ.

ಆದರೆ ಅವರು ನನ್ನನ್ನು ಸಂತೋಷಗೊಳಿಸಬೇಕು ಎಂದು ಎಷ್ಟು ನಿರ್ವಂಚನೆಯಿಂದ ಯತ್ನಿಸುತ್ತಿದ್ದರು! ಎಂಟು ಆಣೆ ಕೊಟ್ಟು 'ಇವತ್ತು ಪಾದುಕಾ ಪಟ್ಟಾಭಿಷೇಕ-ಸಿನೆಮಾ ಬಂದಿದೆಯಂತೆ, ನೋಡಿ ಬಾ' ಎಂದು ಹೇಳುತ್ತಿದ್ದರು. ಸಂಜೆಗೆ ಬರುವಾಗ ಹೂವುಗಳನ್ನು ತಂದು, 'ನಾಳೆ ದೇವರಿಗೆ ಏರಿಸಿಯಾದ ಮೇಲೆ ನೀ ಮುಡಿದುಕೊಳ್ಳಲೆಂದು ತಂದಿದ್ದೇನೆ' ಎನ್ನುತ್ತಿದ್ದರು. ತಮ್ಮ ಕಚೇರಿಯಲ್ಲಿ ಬಂದಿದ್ದ ಹಳ್ಳಿಗರ 'ಹುಂಬತನ'ವನ್ನು ವರ್ಣಿಸಿ, ನನ್ನನ್ನು ನಗಿಸಲು ಯತ್ನಿಸುತ್ತಿದ್ದರು. 'ನಿನಗೆ ಗೋಲು ಉಡುವುದು ಹೆಚ್ಚು ಪ್ರೀತಿಯಲ್ಲವೆ? ಇಕೋ, ಇದೊಂದು ಪತ್ತಲ ತಂದಿದ್ದೇನೆ. ಹೊರಗೆ ಉಟ್ಟುಕೊಂಡು ಹೋಗಿ ನನ್ನ ಮರ್ಯಾದೆ ತೆಗೆಯಬೇಡ, ಮತ್ತೆ' ಎಂದು ಹೇಳುತ್ತಿದ್ದರು.

ಇದೇ, ಇದೇ ಬಗೆ. ಇವರು ಹೀಗೆ ಮಾಡುವುದೆಲ್ಲ, ಆಡುವುದೆಲ್ಲ ನನಗೆ ಹುಚ್ಚು ನಗೆಯನ್ನು ತರಿಸುತ್ತಿತ್ತು. ಅವರಲ್ಲಿ ಕೀಳ್ತನ ಭಾವ ಇದ್ದಷ್ಟೂ ನನ್ನ ಅವರ ಅಂತರ ಹೆಚ್ಚುತ್ತ ಹೋಯಿತು.

ಅಂತೆಯೇ ವಾದಕ್ಕೆ ನಿಲ್ಲುತ್ತಿದ್ದೆ. ಬೆಳಗಿನಲ್ಲಿ ಏನಾದರೂ ಕಾದಾಟ. ಆಗ ಅವರು ವಿಷಯ ನಿಲ್ಲಿಸಿ ಸಿಕ್ಕ ಹಾಗೆ ಬೈದು ಇಲ್ಲವಾದರೆ ತುಸು ಅಂತರದಿಂದ ಕೈಯಲ್ಲಿದ್ದ

ಯಾವುದಾದರೂ ವಸ್ತುವನ್ನು ನನ್ನೆಡೆ ಬೀಸಿ ಕಚೇರಿಗೆ ಹೋಗುತ್ತಿದ್ದರು. ಸಾಯಂಕಾಲ ಬಂದ ಮೇಲೆ ಮತ್ತೆ ರಮಿಸುವುದಕ್ಕೆ ಪ್ರಾರಂಭ.

ಸ್ವಲ್ಪ ಹೆಚ್ಚು ಕಡಿಮೆ ಇಂಥ ದಿನಗಳನ್ನೆ ನಾನು ಕಳೆಯತೊಡಗಿದೆ ನೋಡು. ನಿಮ್ಮ ಯಾವ ಜಾತಿಯ ಪಕ್ಷಿಗಳ ಪ್ರಪಂಚದಲ್ಲಿ ಹೀಗುಂಟು ಎಂಬ ಸಾದೃಶ್ಯವನ್ನು ಯೋಚಿಸಬಲ್ಲೆಯಾ?

ಈ ಮಧ್ಯೆ ನಾನು ತವರಿನಲ್ಲಿ ಚೊಚ್ಚಿಲು ಸಂಭ್ರಮ ಮುಗಿಸಿಕೊಂಡು ಬಂದೆ. ಆಗ ಮೈದುನರಾಯ ಊರಿಗೆ ಬಂದಿದ್ದ. ಅವನ ಸಂತೋಷ ಹೇಳತೀರದು. ಮಗುವಿಗೆ ನೀರೆರೆಯುವುದಕ್ಕೆ ನಾನು ಬಂದೆ ಎನ್ನುತ್ತಿದ್ದ. ಬಟ್ಟೆ ಹಾಕಿ, ತೊಟ್ಟಿಲಲ್ಲಿ ನಾನು ಮಲಗಿಸುವೆ ಎಂದು ಮುಂದೆ ಬರುತ್ತಿದ್ದ. ಗಡಸು ದನಿಯಲ್ಲಿ ಆತ ಹಾಡು ಹೇಳಿ ತೊಟ್ಟಿಲು ತೂಗುತ್ತಿದ್ದಷ್ಟೂ ನನಗೆ ನಗೆಗಿಂತ ಕೋಪ ಹೆಚ್ಚುತ್ತಿತ್ತು. 'ಕತ್ತೆ ಹೊರಗೆ ಕಾದಿವೆ. ನಿಲ್ಲಿಸಿ ನಿಮ್ಮ ಗಾಯನ' ಎನ್ನುತ್ತಿದ್ದೆ.

"ಎಲ್ಲಿ? ಹೊರಗೆ ಕಾಣುವುದಿಲ್ಲವಲ್ಲ. ಓಹೋ. ಮಗು ಮಲಗಲಿ ಎಂದು ನೀವು ಹೊರಹೊಡೆದು ಬಂದಿರಬೇಕು ಅವನ್ನ" ಎಂದು ಆತನು ನಗೆಯಲ್ಲೇ ಹೇಳಬೇಕು. ಮತ್ತೆ 'ಯಥಾಜ್ಞಾಪಯತಿ ದೇವೀ' ಎಂದು ಮುಗಿತ ಹೇಳಿ, ಹಾಡನ್ನು ನಿಲ್ಲಿಸಬೇಕು.

ನಾನವನಿಗೆ ಆಡಿದ ಕೆಟ್ಟ ಮಾತು ಅಷ್ಟಿಷ್ಟಲ್ಲ. ಅದಕ್ಕೇನಾದರೂ ಈ ರೀತಿಯಲ್ಲಿ ನಗೆಯಲ್ಲೇ ಹೇಳಿ ನನ್ನ ಮನಸ್ಸು ಅಸ್ವಸ್ಥವಾಗುವಂತೆ ಮಾಡುತ್ತಿದ್ದ. ಅವರೊಟ್ಟಿಗೆ ಜಗಳ ಕಾದು ಗೆಲ್ಲುವಂತೆ ಇವನೊಂದಿಗೆ ನನಗೆ ಸಾಧ್ಯವಾಗದಿದ್ದುದೇ ನನ್ನ ಅಸೂಯೆಗೆ ತುಪ್ಪವನ್ನು ಹೊಯ್ದಂತೆ ಆಗುತ್ತಿತ್ತು.

ಛೇ, ನಾನು ಸುಮ್ಮನೆ ವಿಷಯ ಬೆಳಸುತ್ತಿದ್ದೇನೆ ಎಂದು ಕಾಣುತ್ತದೆ. ನಿನಗೆ ಬೇಸರ ಬಂದಿಲ್ಲವಷ್ಟೆ?

ಹೂಂ. ಹೀಗೆಯೇ ೫-೬ ವರ್ಷಗಳನ್ನು ಕಳೆದೆ ನೋಡು. ಈ ಎರಡನೆಯ ಮಗು ಯಶೋದೆಯೂ ಮನೆಯಲ್ಲಿ ನಡೆದಾಡತೊಡಗಿದಳು. ನಮ್ಮವರು ಸಂಸಾರ, ಹೆಂಡತಿಗಿಂತ ಧಾರ್ಮಿಕ ಹಾಗೂ ಸರಕಾರೀ ಜೀವನಕ್ಕೆ ಹೆಚ್ಚು ಮಹತ್ವ ಕೊಡತೊಡಗಿದರು.

ಆಗ ಹೋದ ವರ್ಷ ವಿದ್ಯಾರ್ಜನೆ ಮುಗಿಸಿಕೊಂಡು ಮೈದುನರಾಯ ಊರಿಗೆ ಬಂದ. ನನ್ನ ಮದುವೆಯ ಕಾಲಕ್ಕೆ ತೆಳ್ಳಗೆ, ಬೆಳ್ಳಗೆ ಇದ್ದ ವ್ಯಕ್ತಿ ಈಗ ಬೀಸಾಗಿ ಭೀಮಕಾಯನಂತೆ ತೋರುತ್ತಿದ್ದ. ಆದರೂ ಆ ನಿಲುವಿಕೆ ಇನ್ನೊಬ್ಬರನ್ನು ಭಯಗೊಳಿಸುವಂತಹದಲ್ಲ, ಚಕಿತಗೊಳಿಸುವಂತಹದಾಗಿತ್ತು.

೭-೮ ಸಾವಿರ ರೂಪಾಯಿಗಳನ್ನು ವೆಚ್ಚ ಮಾಡಿ ಸೋತಿದ್ದ ಇವರು ಅದಾವಾಗ ತಮ್ಮನು ದೊಡ್ಡ ಸಂಬಳ ತರುತ್ತಾನೆಂದು ತಿಳಿದಿರುವಾಗ ಆತ ನೌಕರಿ ಇನ್ನೂ ಪ್ರಾರಂಭ ಮಾಡಿರಲಿಲ್ಲ. ಬಂದವುಗಳನ್ನು ಆ ಈ ಕಾರಣದಿಂದ ಬಿಡುತ್ತಲಿದ್ದ.

ಅಣ್ಣತಮ್ಮಂದಿರ ನಡುವೆ ಬರಬರುತ್ತ ಮೊದಲಿನ ಹಾರ್ದಿಕ ವಿಶ್ವಾಸ ನಿಂತಿತು. ಅವರ ಕಣ್ಣು ತಪ್ಪಿಸಿರುವುದೊಂದೆ ಈತನಿಗೊಂದು ಉದ್ಯೋಗವಾಯಿತು. ಅವರು ಚಹ ಕುಡಿಯುತ್ತಿದ್ದಾಗ ಇವನಿಗೆ ಇನ್ನೂ ಮುಖ ತೊಳೆಯುವ ಆತುರವಿರುತ್ತಿತ್ತು. ಉಳಿದ ಬೆಳಗಿನ ವೇಳೆ ಹಿತ್ತಿಲಲ್ಲಿ ಸಸಿಯನ್ನು ಊರುವುದೊ, ನೀರು ಹೊತ್ತು ಹಾಕುವುದೊ ಇಂಥದೇನಾದರೂ ಕೆಲಸ. ಅವರು ಸ್ನಾನಮಾಡಿ ಪೂಜೆಗೆ ಕುಳಿತರೆಂದರೆ ಸದ್ದಿಲ್ಲದೆ ಹೊರಗೆ ಬರುವುದು ಮಧ್ಯಾಹ್ನ ೧ ಗಂಟೆಗೇ.

ಆಮೇಲೆ ನನ್ನೊಡನೆ ಬೇಕಾದ, ಬೇಡವಾದ ಮಾತುಗಳನ್ನೆಲ್ಲ ಆಡಿ ಊಟವಾದ ಮೇಲೆ ಎರಡು ಗಂಟೆಗೆ ಅಟ್ಟದ ಮೇಲೆ ನಿದ್ದೆಹೋದನೆಂದರೆ ಏಳುವುದು ೫ ಗಂಟೆಗೆ. ನಂತರ ಮತ್ತೆ ತಿರುಗಾಟ. ರಾತ್ರಿಯ ಊಟ ಒಂದಿನ ಇದ್ದರೆ, ಇನ್ನೊಂದು ದಿನ ಮಾಡುತ್ತಿರಲಿಲ್ಲ. ಮಕ್ಕಳಿಗೆ ತುಸು ಪಾಠ ಹೇಳಿದಂತೆ ಮಾಡಿ, 'ಅಣ್ಣ' ಒಟಗುಟ್ಟುತ್ತಿದ್ದರೂ ರಾತ್ರಿ ಒಂದು ಗಂಟೆಯ ವರೆಗೆ ದೀಪವುರಿಸುತ್ತ ಏನನ್ನೋ ಓದಿ ಮಲಗುತ್ತಿದ್ದ.

ಆ ದಿನ!

ಆ ದಿನ ಅಣ್ಣತಮ್ಮಂದಿರಲ್ಲಿ ಮಾತಿನ ಬಿರುಸು ಹರಿಯಿತು. 'ಎಷ್ಟು ದಿನ ಹೀಗೆ ನನಗೆ ಭಾರವಾಗಿರಬೇಕೆನ್ನುತ್ತೀ?' ಎಂದು ಇವರು ಖಟ್ಟಿಗೆ ಹಚ್ಚಿದರು. ಈ ಜಗಳ ಎಲ್ಲಿ ವಿಕೋಪಕ್ಕೆ ಹೋಗುವುದೊ ಎಂಬ ಸಹಜ ಭಯ ನನಗೆ ಉಂಟಾಯಿತು. ತಮ್ಮನು ಸಿಡುಕಿನಲ್ಲಿ ಮನೆ ಬಿಟ್ಟು ನಡೆದ. ಅವನ ಸಿಡುಕು, ನಡತೆಯಲ್ಲಿ ಬರುವುದು ಬಹಳ ಕಡಿಮೆ.

ಒಂದೂವರೆ ಗಂಟೆಗೆ ಮನೆಗೆ ಬಂದ. ಅಡಿಗೆ, ಅದರ ಮೇಲು ಕೆಲಸಗಳನ್ನು ಮುಗಿಸಿ ಊಟಮಾಡದೇ ಇವನಿಗಾಗಿ ಕಾದಿದ್ದೆ. ಎಲ್ಲವೂ ಮುಚ್ಚಿಟ್ಟಿದ್ದಿತು. ಅಡಿಗೆಯ ಮನೆ ಸ್ವಚ್ಛವಾಗಿತ್ತು. ಅದನ್ನು ನೋಡಿ "ನನ್ನ ಊಟವಾಗಿದೆ" ಎಂದು ಹೇಳಿ. ಅಟ್ಟದ ಮೇಲೆ ಹೋದ,

ನನಗ ಯೋಚನೆಯಾಯಿತು. ಬೆಳಗಿನದೇ ಇನ್ನೂ ಕಸುಕು ಇದು ಎಂದು ಭಾವಿಸಿದೆ. ಅವನನ್ನು ಪುನಃ ಕರೆಯುವುದು ನನ್ನ ಅಭಿಮಾನಕ್ಕೆ ಸ್ವಲ್ಪವೂ ಆಗದ ಮಾತಾಗಿದ್ದಿತು. ಅಲ್ಲದೆ ಇವನು ಬರುವವರೆಗೆ ನನ್ನ ಊಟವಾಗಿರುವುದಿಲ್ಲ ಎಂದು ಗೊತ್ತಿದ್ದೂ ನನ್ನನ್ನು

ಲೆಕ್ಕಿಸದಿದ್ದುದಕ್ಕೆ ನನಗೆ ಸಿಟ್ಟು ಒತ್ತರಿಸಿತು. 'ಹೋಟೆಲಿನ ಹಾಳಾದ್ದು ತಿಂದಿರುತ್ತಾನೆ, ಹೋಗಲಿ' ಎಂದುಕೊಂಡೆ. ತಾನಾಗಿ ಬರುವನೆಂದು ಐದು ನಿಮಿಷ ಕಾದೆ. ಬರಲಿಲ್ಲ. ನಾನು ಊಟ ಮಾಡಿದೆ.

ಮೇಲೆ ಅಟ್ಟದ ನೆಲ ಅವನ ಓಡಾಟದ ರಭಸಕ್ಕೆ ತೊನೆಯುತ್ತಿದ್ದಿತು. ಅದೇಕೊ ಆ ದಿನದ ಊಟ ನನಗೆ ಅಷ್ಟು ಪ್ರಶಸ್ತವೆನಿಸಲಿಲ್ಲ.

ಗೋಮಯ ಮುಗಿಸಿ, ಒಕ್ಕಲಗಿತ್ತಿ ತಂದಿಟ್ಟು ಹೋಗಿದ್ದ ಬಟ್ಟೆಗಳನ್ನು ಒಣಗ ಹಾಕಲು ತೊಡಗಿದ್ದೆ.

ಕೆಳಗಿಳಿದು ಬರುತ್ತಿದ್ದ.

ಬಂದವನೇ ಹತ್ತಿರ ನಿಂತು, "ನಿಮಗೂ ನನ್ನ ಮೇಲೆ ಸಿಟ್ಟೇ?" ಎಂದು ಕೂಗಿದ.

ಒಂದು ಕ್ಷಣ ಅವನ ವೇದನಾಪೂರಿತ ಮುಖವನ್ನು ನೋಡಿದೆ. ಆಕ್ರೋಶದ ನಿಮಿತ್ತ ಅವನು ಕೂರಾಗಿ ನೋಡುವದನ್ನು ನನಗೆ ಎದುರಿಸುವ ಇಚ್ಛೆ ಇರಲಿಲ್ಲ. ತುಚ್ಛತೆಯಿಂದ ಒಮ್ಮೆ ನೋಡಿ ನಾನು ಕೋಲಿನಿಂದ ಬಟ್ಟೆ ಒಣಹಾಕುತ್ತಿದ್ದೆ.

ಆಗ ನನ್ನ ಉಂಡೆದ್ದ ಎಲೆ ಇನ್ನೂ ಇದ್ದುದನ್ನು ಅತ ನೋಡಿದ. ಮಧ್ಯಾಹ್ನದ ಹೊತ್ತು ಮೀರಿಯೂ ಇವನಿಗಾಗಿ ನಾನು ಕಾದಿದ್ದುದು ಗೊತ್ತಾಯಿತು. ಮರುಕ್ಷಣವೇ ಹಾರ್ದಿಕ ದೈನ್ಯತೆಯೇ ಅವನ ದನಿಯಲ್ಲಿ ಒತ್ತರಿಸಿ ಬಂದು,

"ನನಗೆ ಗೊತ್ತಾಗಲಿಲ್ಲ. ತಿದ್ದಿಟ್ಟ ಅಡುಗೇ ಮನೆ ಕಂಡು ನಿಮ್ಮ ಊಟವಾಗಿದೆ ಎಂದು ತಿಳಿದಿದ್ದೆ. ಇಲ್ಲ. ಇನ್ನೊಮ್ಮೆ ಹೀಗೆ ಮಾಡುವುದಿಲ್ಲ. ತೊಂದರೆ ಕೊಡುವುದಿಲ್ಲ... ಮಾತಾಡಿರಿ, ಏನಾದರೂ ಮಾತನಾಡಿರಿ. ನನ್ನ ಹೃದಯದ ನೋವು ನಿಮಗೇನೂ ಅನಿಸುವುದಿಲ್ಲವೆ? ಏನು?" ಎನ್ನುತ್ತ ತನ್ನ ಕೈಯಲ್ಲಿನ ಕೋಲನ್ನು ಕಸಿದ.

ಥಟ್ಟನೆ ಕೆನ್ನೆಗೆರಡು ಬಿಗಿದುಬಿಡಬೇಕು ಎಂದು ತಿರುಗಿದೆ.

ಆದರೆ... ಅವನ ಮುಖಮುದ್ರೆ! ಅಲ್ಲಿಯ ಕಾತರ ಭಾವ! ನನಗಾಗಿ ಇರುವ ಕೋಮಲ ಭಾವನೆ...!

ಹಾ! ಹಾ! ಮೊಟ್ಟಮೊದಲು ನನಗಾದ ವಿಜಯ! ಆಕಸ್ಮಿಕವಾಗಿ ಅವನು ಶರಣು ಬಂದಿದ್ದ. ಆಸೆ, ಆನಂದ, ಮಾರ್ದವ ಎಲ್ಲವನ್ನೂ ಒತ್ತಾಗಿಸಿಕೊಂಡು, ಹುಚ್ಚಳ ಹಾಗೆ ಅವನೆಡೆ ನೋಡುತ್ತಿದ್ದೆ.

ಏನಾಯಿತೊ ನನಗೆ ತಿಳಿಯದು. ನನ್ನ ಮೈಮೇಲೆ ನನಗೇ ತಿಳಿವಿರಲಿಲ್ಲ.

ಇನ್ನೊಂದು ಗಳಿಗೆಗೆ ತನ್ನೆಲ್ಲ ಬಲವನ್ನು ಹಾಕಿ ಆತ ಬಿಗಿಯಾಗಿ ಬಂಧಿಸಿದ್ದ.

ಏನಾಗಿತ್ತು ನನಗೆ ಎಂಬುದು ಇನ್ನೂ ತಿಳಿದಿಲ್ಲ. ಅದೆಂಥ ರಾಕ್ಷಸೀ ತನ್ಮಯತೆಯೇ ನನ್ನನ್ನು ಅವನಲ್ಲಿ ಕಟ್ಟಿಹಾಕಿತ್ತು. ಎಂಥದೋ ದಾಹ ನನ್ನ ದೇಹವನ್ನು ಸುಡುತ್ತಿತ್ತು...

ಅಂದಿಗಾಯಿತು ನನ್ನ ಅಧಃಪತನ. ಸತ್ಯ ಜಗತ್ತಿನಲ್ಲಿ ನಾನು ಕುಲಟೆಯಾದೆ.

ಸಂಜೆ ನಾವಿಬ್ಬರೂ ತಪ್ಪಿತಸ್ಥರಂತೆ ಮನೆಯಲ್ಲಿ ಓಡಾಡಿದೆವು. ಆದರೂ ಅವನು ನಗುತ್ತಿದ್ದ. ಅವರು ಕಚೇರಿಯಿಂದ ಬರುವುದಕ್ಕೆ ಮುನ್ನವೇ ಮನೆ ಬಿಟ್ಟು ಹೊರಟ.

ಅಲ್ಲಿಂದ ಪ್ರತಿಕ್ಷಣಕ್ಕೂ ನನ್ನ ಅಪರಾಧದ ಕಲ್ಪನೆ ನನ್ನಲ್ಲಿಯೇ ಬೃಹದಾಕಾರ ತಾಳಲಾರಂಭಿಸಿತು. ಅದೊಂದು ಮನೋದೌರ್ಬಲ್ಯದ ಕಾಲ; ಇನ್ನು ಎಡಹುವುದಿಲ್ಲ ಎಂದುಕೊಂಡೆ. ಆದರೆ 'ಹಾಳಾಯಿತು ಮುಂದಿನ ವಿಚಾರ. ಈಗಂತೂ ಎಲ್ಲರಿಗೂ ನಾಗು, ಯಶೋದೆಯರಿಗೆ ಕೂಡ ದ್ರೋಹ ಬಗೆದೆನಲ್ಲ' ಎಂದು ಇನ್ನೊಂದು ವಿಚಾರ ತಿವಿಯಿತು.

ಸಾಲದ್ದಕ್ಕೆ ಎದೆ ಒಂದೇ ಸಮನೆ ಡವಡವ ಹೊಡೆದುಕೊಳ್ಳುತ್ತಿತ್ತು. ಮತ್ತೆ ನಾನವನ ಮೇಲೆ ಕರಕರನೆ ಹಲ್ಲು ತಿಂದೆ. ಪಾಪಿ, ನನ್ನ ಜೀವನವನ್ನು ಹಾಳುಮಾಡಿದ. ಇವನಿಗೆ ಏನಾದರೂ ಪ್ರತೀಕಾರ ಮಾಡಬೇಕು ಎಂದುಕೊಂಡೆ.

ಅವನನ್ನು ಬೈದೇನು ಪ್ರಯೋಜನ? ಆ ಗಳಿಗೆಗೆ ನನ್ನ ಕಣ್ಣಿನಲ್ಲಿ ಏನೋ ಒಂದು ಕ್ರಂದನವನ್ನು ಕಂಡಿರಬೇಕು. ಅದಕ್ಕೆಯೇ ನನ್ನ ಸೆಳೆದ. ಆ ಉದ್ದೇಶ ಮೊದಲು ತನ್ನಲ್ಲಿರಲಿಲ್ಲವೆಂದು ಅವನೇ ಹೇಳಲಿಲ್ಲವೆ? ಆಮೇಲಾದರೂ ನಾ ಬಿಡಿಸಿಕೊಳ್ಳಲೆತ್ನಿಸಿದೆನೇನು? ಇಲ್ಲ.

ಇಲ್ಲ, ನಾನೇ ಇದಕ್ಕೆ ಕಾರಣ. ತಪ್ಪು ನನ್ನದೇ. 'ನಾನು ಜಾರಿದೆ' ಎಂದು ಅಖಂಡವಾಗಿ ಹೃದಯ ಗಂಟೆ ಭೇದಿಸುತ್ತಿರುವಾಗ ಆತ್ಮಹತ್ಯೆ ಮಾಡಿಕೊಳ್ಳಬೇಕು ಎಂದು ಮಾತ್ರ ಅನಿಸಲಿಲ್ಲ! ಆ ವಿಚಾರ ಬಂದರೂ ಹೃದಯದಾಳದಲ್ಲಿ ಸ್ವಲ್ಪವೂ ಇರಲಿಲ್ಲ.

ಸಂಜೆ ಕಚೇರಿಯಿಂದ ಅವರು ಬಂದರು. ನಾನೆಷ್ಟು ನಿರ್ವಿಕಾರವಾಗಿರಬಯಸಿದರೂ ಸಾಧ್ಯವಾಗದೇ ಇರುವಾಗ 'ಜ್ವರ ಬಂದಿದೆಯೇ' ಎಂದು ವಿಚಾರಿಸಿದರು. ಇಲ್ಲ ಎಂದೆ. ಉಗುರು ಬೆಚ್ಚಗಿದ್ದ ನನ್ನ ಹಣೆ ಮುಟ್ಟಿ ನೋಡಿದರು. ನಾನು ಮುಖವನ್ನೇ ಎತ್ತಲಿಲ್ಲ.

ರಾತ್ರೆ 'ಏನು, ಏನಾಗಿದೆ ನಿನಗೆ? ಹೀಗೇಕಿದ್ದೀ' ಎಂದು ಕೇಳಿದಾಗ ಅವರ ಕೊರಳಲ್ಲಿ ತಲೆಯಿರಿಸಿ ಅತ್ತುಬಿಟ್ಟೆ. ಅವರ ಸಾಂತ್ವನದಲ್ಲಿ, ಮೊಟ್ಟಮೊದಲ ಸಲ ನಾನು ಅವರ ಕೈಗೂಸಾಗಿದ್ದೆ.

ಮತ್ತೇನು ಹೇಳಲಿ ಈ ಹಾಳು ಕತೆಯನ್ನು. ಇಷ್ಟು ಸಾಲದೆ ಆತ ಸದ್ದಿಲ್ಲದೆ ಬಂದು ಪೇಸಿ ನಗೆಯನ್ನು ಬೀರುತ್ತಿದ್ದ. ಮಧ್ಯಾಹ್ನ ಬರುತ್ತಲೂ ಅವನ ಧೈರ್ಯತೆ ಹೆಚ್ಚುತ್ತಿತ್ತು. ಆದರೆ ನಿರ್ಧಾರದ ಮನದಿಂದ ನಾನು ಅದಕ್ಕೆ ಕಠೋರವಾಗಿ ವರ್ತಿಸಿದೆ. ಆದರೂ, ಆದರೂ ಆ

ಮುಚ್ಚಂಜೆಯ ನೆನಪು ಆಮೇಲೆ ತುಂಬ ಕಾಡತೊಡಗಿತು. ಅದರ ನೆನವರಿಕೆಯಲ್ಲಿ ಯಾವುದೊ ಒಂದು ಪಾಶವೀ ತೃಪ್ತಿ ನನ್ನ ತಲೆಗೆ ಗುಂಗು ಹಿಡಿಸುತ್ತಿತ್ತು.

ನನ್ನ ಸುದೈವಕ್ಕೆ, ಆ ಮೇಲೆ ೭-೮ ದಿನ ಮಾತ್ರ ಆತ ಮನೆಯಲ್ಲಿದ್ದುದು. ನೌಕರಿ ದೊರೆತಿತ್ತು. ಮನೆಬಿಟ್ಟು ಹೋದ. ಅಲ್ಲಿಂದ ಎರಡೇ ತಿಂಗಳು. ನಂತರ ಈ ಶೋಭೆಯೊಡನೆ ಮದುವೆಯಾಗಿ ಬೆಳಗಾಂವಿಯಲ್ಲಿ ಇರತೊಡಗಿದ. ಮದುವೆಗೆ ನಾನು ಹೋಗಲಿಲ್ಲ. ತವರಿನಲ್ಲಿಯೆ, ಆಕಸ್ಮಿಕ ಜಡ್ಡೆಂಬ ನೆಪದಿಂದ ಉಳಿದಿದ್ದೆ.

ಅದರೂ ನನ್ನ ನಿತ್ಯದ ಬದುಕಿನಲ್ಲಿ ಮೊದಲಿನ ಸ್ವಾರಸ್ಯ-ಸತ್ವಗಳು ಉಳಿದಿರಲಿಲ್ಲ. ಎಲ್ಲವೂ ಹಸಗೆಟ್ಟು ಹೋಗಿತ್ತು. ಇಂಥ ಅತಿ ಬೇಸರದ ಗಳಿಗೆಗಳಲ್ಲಿ ನನಗೇನು ವಿಚಾರ ಬರುತ್ತಿತ್ತು, ಗೊತ್ತೆ? ಇದು ಯಾರಿಗೂ ಗೊತ್ತಿಲ್ಲವಲ್ಲ, ಎಂದು! ಮತ್ತಲ್ಲದೆ ನಾನಾಗಿಯೇ ತಿಳಿದು ಕುಲಟೆಯಾದವಳಲ್ಲವಲ್ಲ ಎಂದು!

ಅವನು ಸಂಪೂರ್ಣ ಕಣ್ಮರೆಯಾದಾಗ ಮನಸ್ಸು ತುಸು ಸ್ತಿಮಿತಕ್ಕೆ ಬಂತು. ಮನಸ್ಸಿನ ನೋವು ಮಾಯವಾಗಿತ್ತು. ಗಾಯ ಉಳಿದಿತ್ತು.

ಈ ಮಧ್ಯೆ ನಾನು ಮೂರನೆಯ ಸಲ ತಾಯಿಯಾಗುವವಳಿದ್ದೇನೆಂದು ಕಂಡುಬಂತು.

ಅವರು ಆಗಾಗ ತಮ್ಮನಿಗೆ ಕಾಗದ ಬರೆದು ನನ್ನ ಆರೋಗ್ಯದ ವಿಚಾರ ತಿಳಿಸುತ್ತಿದ್ದರು. 'ಬೇಗ ನೀನು ರಜೆ ತೆಗೆದುಕೊಂಡು ಬಾ' ಎಂದು ತಿಳಿಸುತ್ತಲೇ ಇದ್ದರು. ಎಂದಿನಂತೆ ಅದೇ ನಿಷ್ಕಲ್ಮಷ ಹೃದಯ ಅದರಲ್ಲಿರುತ್ತಿತ್ತು. ಎಂದಿನಂತೆ 'ನೀನೇನಾದರೂ ನಾಲ್ಕು ಸಾಲು ಬರೆಯುತ್ತಿದ್ದರೆ ಬರೆ' ಎಂದು ಕವ್ಹರನ್ನು ಇಟ್ಟು ಹೋಗುತ್ತಿದ್ದರು.

ತಮ್ಮನಿಗೆ ಬರುವ ಸಾಹಸ ಇರಲಿಲ್ಲವೇನೊ. ಆದರೂ ಬರಲೇಬೇಕಾದ ಪ್ರಸಂಗ ಒದಗಿತು. ನಾನು ದಿನ ತುಂಬಿದವಳೆಂದೂ, ತಾವು ಕಮಿಶನರರೊಡನೆ ಹಳ್ಳಿಗಳ ಮೇಲೆ ಫಿರ್ತಿಗೆ ಹೋಗುವದಿರುವುದೆಂದೂ ಅವನಿಗೆ ಸಕುಟುಂಬ ಬಂದು ಬಿಡಲು ತಂತಿ ಹೋಯಿತು. ಇವಳು ನನ್ನ ತಾಯಿ, ಬಂದು ಆಗಲೆ ಒಂದು ವಾರವಾಗಿತ್ತು.

ಈ ಸಲದ ನನ್ನ ಹೆರಿಗೆ ತುಂಬ ಕಷ್ಟಕರವಾದುದು, ಮೊನ್ನೆ ಮೊನ್ನೆಯ ಸಂಗತಿಯಷ್ಟೆ. ಈ ಮೈದುನರಾಯ ತುಂಬ ಎಡತಾಕಿದ, ಎಲ್ಲ ಸಹಾಯಗಳನ್ನೂ ಒದಗಿಸಿದ. ರಾತ್ರಿಯೆಲ್ಲ ಸಿಪ್ಪೆಗಟ್ಟು ದುಡಿದ. ಎಲ್ಲವೂ ತನ್ನ ಮೇಲೆ ಹೊರಿಸಿ ಹೋಗಲಾದ ಕರ್ತವ್ಯವನ್ನು ಮಾಡುವಂತೆ ಇದ್ದಿತು, ಅವನ ದುಡಿತ.

ಏಳೆಂಟು ತಾಸಿನ ಬೇನೆ ಮುಗಿದ ಮೇಲೆ ಬೆಳಗಿನ ಕೋಳಿ ಕೂಗುವುದರ ಮುನ್ನವೇ ಮಗುವು ಉದಯಿಸಿ ತಾನು ಬಂದಿರುವೆನಾಗಿ ಅತ್ತು ಹೇಳಿತು.

ಅಂದು ಸಂಜೆಗೇ ತಾರಸ್ನು ಕಂಡು, ಅವರು ಒಂದು ದಿನದ ರಜೆಯಲ್ಲಿ ಬಂದರು. ಅವ್ವ ಈ ಮೈದುನನನ್ನು ಅವರೆದುರು ಹೊಗಳಿದ್ದೂ ಹೊಗಳಿದ್ದೇ. 'ದೇವರೂ ಸಹಾಯಕ್ಕೆ ಬಂದ, ಅಂತೂ ಜನನ ಸುಸೂತ್ರವಾಯಿತು' ಎಂದಳು.

ಎರಡು ಹೆಣ್ಣುಗಳ ನಂತರ ಈ ಸಲ ಈ ಗಂಡು ಮಗು. ಅವರು ಬಂದು ದೂರದಿಂದ ಮಗುವನ್ನು ಕಂಡು ಹೆಮ್ಮೆಯಿಂದ ನೋಡಿದರು. ಅಯ್ಯೋ, ಗಂಡಸಿನ ದರ್ಪವೇ ಎಂದುಕೊಂಡೆ. ಕೆಲಹೊತ್ತಿನ ಮೇಲೆ ಹಾಲಿನ ಪಾತ್ರೆ ಹಿಡಿದುಕೊಂಡು ಈತ ಒಳಗೆ ನಿಂತ. ಮಗುವನ್ನು ನೋಡುತ್ತಿದ್ದ. ಪೂರ್ಣ ಐದು ನಿಮಿಷವಾದರೂ ಮುಗಿಯಲಿಲ್ಲವಾಗಿ ಅವನ ಕಡೆ ನೋಡಿದೆ.

'ಈ ಮಗು ನನ್ನಿಂದ ಹುಟ್ಟಿದುದು' ಎಂಬ ಭಂಗಿಯಲ್ಲಿ ಒಂದೇ ಸಮನೆ ಹೆಮ್ಮೆಯಿಂದ ಬೀಗಿದ್ದವರಂತೆ ಅವನ ಮುಖದಲ್ಲಿ ಲಾಸ್ಯವೊಂದು ತೇಲುತ್ತಿತ್ತೆ? ನಾನು ತಲೆ ತಗ್ಗಿಸಿದೆ.

ನನ್ನುಸಿರು ಕಾಯ್ದರೂ ನಾನು ಸುಮ್ಮನೆ ಇದ್ದೆ. ಅವನು ಹೋದ.

ಆದರೆ ಒಮ್ಮೆಲೇ ಆ ವಿಚಾರ ತಲೆಗೇರಿ ಕುಳಿತಿತು. ಈ ಮಗು ಯಾರದು ಅವರದೆ? ಇವನದೆ?

ಮಕ್ಕಳನ್ನು ಕೊಡುವವ ದೇವರು. ಆದರೆ ಯಾರ ಕೈಯಲ್ಲಿಟ್ಟು ಇದು ನನಗೆ ತಲುಪುವಂತೆ ಮಾಡಿದ? ಥಕ್ಕನೆ ಇವನ ಕೈಯಲ್ಲಿ ಕಳಸಿ ಕೊಟ್ಟದ್ದರೆ?

ಮಗುವಿನ, ಅವತಾರದ ಮೊದಲ ಗಳಿಗೆ ಯಾವುದಿರಬಹುದೆಂದು ಯೋಚಿಸಿಕೊಂಡೆ. ಒಟ್ಟಿನಲ್ಲಿ 'ಆ ದಿನ'ದ ಹತ್ತಿರ ಹತ್ತಿರವೇ ಎಂದು ಖಚಿತವಾಗತೊಡಗಿತು. ಅದರ ಹಿಂದು ಮುಂದಿನ ದಿನಗಳನ್ನು ಮತ್ತೆಲ್ಲ ಎಣಿಕೆ ಹಾಕಿದೆ. ಜೊಳ್ಳು ದಿನಗಳನ್ನು ಕಳೆದಾಗ ಅದೇ ದಿನ ಎಂಬ ವಿಚಾರ ಎದ್ದು ನಿಲ್ಲುತ್ತಿತ್ತು.

ಕೆಲೆಂಡರ್ ತರಿಸಿ ನೋಡಿದೆ. ಒಂಬತ್ತು ತಿಂಗಳು, ಒಂಬತ್ತು ದಿನ ಸರೀ ಎಣಿಸಿದರೆ ಹೆಚ್ಚು ಕಡಿಮೆ ಆ ದಿನದ ಮರುದಿನವೆ ಕೊನೆಗುಳಿಯಬೇಕೆ!

ಆ ರಾತ್ರಿ ಹನ್ನೆರಡು ಗಂಟೆಯಾಗಿರಬಹುದು. ನಿಶ್ಶಬ್ದವಿದ್ದ ಮನೆಯಲ್ಲಿ ದೊಡ್ಡ ಗಡಿಯಾರದ ಟಿಕ್,ಟಿಕ್, ಟಿಕ್, ಎಂಬ ಸದ್ದಿನ ಜೊತೆಗೆ ನನ್ನ ವಿಚಾರವೂ ತಾಳ ಹಾಕುತ್ತಿತ್ತು.

ಮಗುವಿನ ಮುಖವನ್ನು ಒಂದು ಕ್ಷಣ ನೋಡಿದೆ. ಅವರಿಬ್ಬರಲ್ಲಿ ಯಾರ ವೈಶಿಷ್ಟ್ಯವೂ ಅಲ್ಲಿ ಎದ್ದು ಕಂಡುಬರಲಿಲ್ಲ.

ಇಲ್ಲ, ನಾನು ಮಗುವಿನ ತಂದ ಯಾರೆಂದು ತಿಳಿಯಲೆಬೇಕು. ಹೇಗಾದರೂ ನನಗದು ಗೊತ್ತಾಗಬೇಕು ಎಂದು ಮನಸ್ಸು ಹಟಮಾರಿಯಾಗತೊಡಗಿತ್ತು. ಅದಕ್ಕಾಗಿ ಅವರನ್ನು ಕೇಳಲೆ? ತಮ್ಮದು ಎಂದು ಹೇಳಿಯೆ ಹೇಳುತ್ತಾರೆ. ಆದರದು ಸುಳ್ಳಿದ್ದರೆ? ಥಕ್ಕನೆ ಸುಳ್ಳಿದ್ದರೆ. ಅವನನ್ನು ಕೇಳುವುದೆ ? ಛೀ!

ಇಲ್ಲ, ಇಲ್ಲ. ನನಗೆ ನನ್ನ ಮಗುವಿನ ತಂದೆ ಯಾರೆಂದು ತಿಳಿಯಲೆಬೇಕು. ತಿಳಿಯಲೇಬೇಕು! ಈ ಮಗುವಿನ ತಂದೆ ಯಾರೆಂದು ನಾನು ತಿಳಿಯಲೆಬೇಕು! ಬೇಕು! ಬೇಕು!

ಸಮುದ್ರದ ನೀರೇ ಕತಕತನೆ ಕುದಿದರೆ ಏಳುವಂತಹ ದುರ್ಭರ ಕಾವು, ವಿಚಾರದ ತೆರೆಗಳ ತಾಕಲಾಟ ನನ್ನ ಹೃದಯವನ್ನೆಲ್ಲ ವ್ಯಾಪಿಸಿದುವು. ಮೈ ಗದಗದ ನಡುಗುತ್ತಿತ್ತು. ನನಗೆ ತಡೆಯಲಾಗಲಿಲ್ಲ. ಗಟ್ಟಿಯಾಗಿ ಚೀರಿಬಿಟ್ಟೆ.

ತಾಯಿ ಗಾಬರಿಯಿಂದ ಓಡಿ ಬಂದಳು. ಏನಾಯಿತು? ಏನಾಯಿತು ಎಂದು ಮಲಗಿದ್ದವರೆಲ್ಲ ಎದ್ದು ಬಂದರು 'ಏನೊ ಕೆಟ್ಟ ಕನಸು ಬಿದ್ದಿತ್ತು' ಎಂದೆ. ಸಮಾಧಾನವಾಯಿತವರಿಗೆ. ತಾಯಿ ಅದು ಇದು ಆಡುತ್ತ ಚಿಮಣಿಯ ದೀಪವನ್ನು ದೊಡ್ಡದು ಮಾಡಿ 'ನಾನಿಲ್ಲಿಯೇ ಇದ್ದೇನೆ' ಎಂದು ಅಭಯ ಹೇಳುತ್ತ ಹೊಸ್ತಿಲಕ್ಕೆಯೇ ತಲೆ ಕೊಟ್ಟು ಮಲಗಿದಳು.

ಎಲ್ಲರೂ ಹೊರಗೆ ಹೋಗುವುದನ್ನೆ ನಾನು ಕಾಯುತ್ತಿದ್ದೆ. ನನಗೆ ಏಕಾಂತ ಬೇಕಾಗಿತ್ತು. ನನಗೆ ಮಗುವಿನ ತಂದೆ ಯಾರು ಎಂಬುದನ್ನು ಯೋಚಿಸಬೇಕಿತ್ತು. ಯಾರು? ಯಾರದಿರಬಹುದು ಈ ಮಗು?...? ಯಾರು? ?

ಪ್ರಶ್ನಾರ್ಥಕ ಚಿನ್ಹೆ ಒಂದೇ ಸಮನೆ ಎದ್ದೆದ್ದು ಕುಣಿಯುತ್ತಿತ್ತು. ಹಿಂದಿನ ಎಲ್ಲ ಸಂದರ್ಭಗಳೂ ಮಿಂಚಿ ಹೋದವು. ಆದರೂ ನಿರ್ಣಯಾತ್ಮಕವಾಗಿ ಈ ಮಗುವಿನ ತಂದೆ ನನ್ನ ಇವರೇ ಎಂದು ನನಗೆ ಹೇಳಲಾಗದಾಯಿತು.

ಥಟ್ಟನೆ ಒಂದು ಯೋಚನೆ ನೆನಪಿಗೆ ಬಂದಿತೆಂದು ಎದ್ದು ಕುಳಿತೆ. ತಾಯಿ ನಿದ್ದೆ ಹೋದುದನ್ನು ಕಂಡೆ. ಮಗುವನ್ನು ಮೆಲ್ಲಗೆ ಹೊರಳಿಸಿ, ಅದರ ಬೆನ್ನ ಮೇಲೆ ನನ್ನ ಅವರಿಗೆ ಇದ್ದ ಒಂದು ಸಣ್ಣ ಮೊಚ್ಚೆ (ಕಲೆ) ಇದೆಯೋ ಎಂದು ನೋಡಿದೆ! ಇರಬಾರದಾಗಿತ್ತೆ.

ಕಣ್ಣು ಮುಚ್ಚಿದ ಆ ಮಾಂಸದ ಮುದ್ದೆ ಇನ್ನೂ ನಿದ್ರೆಯಲ್ಲಿತ್ತು. ಮನಸ್ಸು, ಹೇಗಾದರೂ ಮಾಡಿ ಇದರ ತಂದೆ ನನ್ನವರೇ ಎಂದಾಗಿಬಿಡಲಿ ಎಂದು ಆಶಿಸುತ್ತಿತ್ತು. ಅದಕ್ಕೆ ಕಲ್ಲು ಹಾಕುತ್ತ ಅವನೊಂದಿಗೆ ಕಳೆದ ಆ ಮುಸ್ಸಂಜೆ ಧುತ್ತೆಂದು ನಿಲ್ಲುತ್ತಿತ್ತು.

ನಾನು ಯೋಚಿಸಿದಷ್ಟು ಸಮಸ್ಯೆ ಆಳವಾಯಿತು. ಈ ಜಗತ್ತಿನಲ್ಲಿ ಈ ಮಗುವಿನ ತಂದೆ ಇಂಥವರೇ ಎಂದು ಹೇಳುವವರು ಯಾರೂ ಇಲ್ಲವೆ? ನನ್ನಗದು ಗೊತ್ತಾಗಲೇಬೇಕಾದರೆ ಏನು ಮಾಡಬೇಕು? ಏನು ಮಾಡಬೇಕು?

ಅದಕ್ಕೆ ಬರಿ ಶೂನ್ಯವೇ ನನ್ನ ಮೆದುಳಲ್ಲಿ ಆಘಾತಮಾಡುತ್ತಿತ್ತು. ಕೆಕ್ಕರಗಣ್ಣಿನಿಂದ ಮಗುವನ್ನು ನೋಡಿ, 'ಪಾಪಿಯೇ, ನಿನ್ನಿಂದ ನನಗೀ ಸಂಕಟ, ಜೀವನಾದ್ಯಂತವೂ ನನ್ನ ವ್ಯಭಿಚಾರದ ಗುರುತಾಗಿ ನೀ ನನ್ನ ಕಣ್ಣ ಮುಂದೆ ಇರಬೇಕೆ? ಯಾಕೆ ನೀ ಹುಟ್ಟಿ ಬಂದದ್ದು? ಏನು ನಿನ್ನ ಅಗತ್ಯವಿತ್ತು? ನೀನು ಯಾತಕ್ಕೆ ಬಂದ್ದು? ಹೇಳು!' ಎಂದೆ.

ಮರುಕ್ಷಣ, ಆ ಕೂಸಿನ ಕತ್ತನ್ನು ಇದ್ದಕ್ಕಿದ್ದಂತೆ ಹಿಸುಕಿಬಿಟ್ಟರೆ ಏನು ತಪ್ಪು ಎನಿಸಿತು. ಹೌದು! ಅಷ್ಟಾದರೆ ನನ್ನ ಮಹಾ ಪಾಪಕ್ಕೆ ಸಾಕ್ಷ್ಯವಾಗಿ ಏನೂ ಉಳಿಯುವುದಿಲ್ಲ. ಹೌದು. ಎಂದವಳೇ ಕೈಗಳನ್ನು ಕುತ್ತಿಗೆಯ ಹತ್ತಿರ ಒಯ್ದುಬಿಟ್ಟಿದ್ದೆ!

ಆದರೆ ಚಿಮಣಿಯ ದೀಪದಲ್ಲಿ ದೊಡ್ಡದಾಗಿ ಬಿದ್ದಿದ್ದ ನನ್ನ ನೆರಳೇ ನನ್ನನ್ನು ಹೆದರಿಸಿತು! 'ನೀ ಮಾಡಲೆಳಸಿದ್ದೇನು? ರಕ್ಕಸಿಯೇ! ನಿನ್ನ ಹೊಟ್ಟೆಯ ಕರುಳನ್ನು, ಏನೂ ಅರಿಯದ ಆ ಶಿಶುವನ್ನು ಕೊಲ್ಲುವಿಯಾ? ಹೆಣ್ತನದ ಶೀಲವನ್ನು ಎಂದೋ ಕಳೆದುಕೊಂಡಿರುವಿ. ತಾಯ್ತನಕ್ಕೂ ಕುಠಾರಿಯಾಗುತ್ತೀಯಾ?' ಎಂದು ಚಮ್ಮಟಿಗೆಯನ್ನು ಎತ್ತಿ ಮೈ ನುಗ್ಗುನುರಿಯಾಗುವಂತೆ ಹೊಡೆದ ಹಾಗೆ ಭಾಸವಾಯಿತು. ಏಟು ತಿನ್ನುತ್ತ ನೆಲಕ್ಕುರುಳಿದ ನಾನು, 'ಇಲ್ಲ, ಇನ್ನೊಮ್ಮೆ ಮಾಡುವುದಿಲ್ಲ' ಎಂದು ದೀನೆಯಾಗಿ ಹೇಳುವಂತಿತ್ತು.

ನಾನು ಮುಖ ಮುಚ್ಚಿಕೊಂಡು ನೀರವವಾಗಿ ಅಳತೊಡಗಿದೆ. ನನಗೆ ಆತ್ಮಹತ್ಯೆಯ ಹೊರತು ಆಗ ಬೇರೆ ದಾರಿ ತೋರಲಿಲ್ಲ. ಮಗುವಿನ ರಕ್ಷಣೆ ಹೇಗೂ ಆಗುತ್ತದೆ ಎಂದುಕೊಂಡೆ. ಆ ವಿಚಾರ ಬಂದಾಗ ಎಷ್ಟು ಹಗುರೆನಿಸಿತು ಮನಸ್ಸಿಗೆ!

ಆತ್ಮಹತ್ಯೆಗೆ ಅಲ್ಲಿ ಸಾಧನವೇನೂ ಇರಲಿಲ್ಲ. ಆದರೂ ನನ್ನ ನಿರ್ಧಾರ ಗಟ್ಟಿ ಯಾಗಿತ್ತು. ಅದರಲ್ಲಿ ಉದ್ವೇಗದ ಲವಲೇಶವೂ ಇರಲಿಲ್ಲ.

ಎದ್ದು ಬಂದು, ಅಲ್ಲಿಟ್ಟ ನೆನೆಹಾಕಿದ ಕಡಲೆ, ತಂದಿಟ್ಟ ಬಾಳೆಹಣ್ಣು, ಕಣಕದ ಮುದ್ದೆಯನ್ನೂ ತಿಂದುಹಾಕಿದೆ. ಮತ್ತಿನ್ನು ಅದು ಇದಕ್ಕೆ ಅಲೆದಾಡಿದೆ. ಬಾಣಂತಿಯ ಹಸಿಮೈಗೆಂದು ಇಟ್ಟಿದ್ದ ದೇಸೀ ಔಷಧ, ಬೇರುಗಳೇನೇನಿದ್ದುವೊ ಎಲ್ಲವನ್ನೂ ನುಂಗಿದೆ. ಇಷ್ಟಾದರೂ ಪ್ರಾಣ ಹೋಗದಿದ್ದರೆ? ದೀಪ ಕಂಡಿತು. ಧೈರ್ಯ ತಂದುಕೊಂಡು, ಆ ಚಿಮಣಿಯನ್ನೆತ್ತಿ ಅದರ ಇನ್ನೊಂದರಲ್ಲಿದ್ದ ಸ್ಪಿರಿಟನ್ನೂ ಸೇರಿಸಿ ಕುಡಿದುಬಿಟ್ಟು ಕತ್ತಲೆ ಮಾಡಿಕೊಂಡು ಮಲಗಿದೆ.

ಸಂಟಕ! ಹೇಳಲಾಗದಷ್ಟು ಸಂಕಟ! ಉರಿ ಹತ್ತಿದಂತಿತ್ತು, ನನ್ನ ಉದರಕ್ಕೆ. ಸಾಯುವ ಕಾಲದ ಸಂಕಟ ಏನೆಂಬುದರ ಅರಿವು ಬಂದಿತ್ತು. ಆದರೂ ಮನಸ್ಸು ಶಾಂತವಾಗಿತ್ತು. ಮಾಡಿದ್ದ ನಿರ್ಧಾರದಲ್ಲಿ ಸ್ವಲ್ಲವೂ ನಾನು ಗಟ್ಟಿಯಾಗಿ ನರಳಲಿಲ್ಲ ಕೂಡ. ಅದನ್ನು ಅದಮಿ ಹಿಡಿದಷ್ಟು ವೇದನೆ ಹೆಚ್ಚುತ್ತಿತ್ತು. ಆದರೂ ಜೀವ ಕಳೆದುಕೊಂಡದ್ದು ಸರಿಯಾಗಲಿಲ್ಲ ಎಂಬ ಯೋಚನೆ ತಪ್ಪಿಯೂ ಬರಲಿಲ್ಲ. ಬೇಗ ಇದರಿಂದ ಮುಕ್ತಳಾಗಿ ಮಾಡು ಎಂದು ದೇವರಲ್ಲಿ ಮೊರೆಯಿಟ್ಟೆ ಮಾತ್ರ.

ಸಾಯುವ ಕಾಲಕ್ಕಾದರೂ ದೇವರು ಈ ಮಗುವಿನ ತಂದೆ ಯಾರು ಎಂಬುದನ್ನು ಹೇಳುವನೆ ಎಂದು ನಂಬಿದ್ದೆ. ಅವನೂ ನನ್ನ ಕೈಬಿಟ್ಟ. ಮಗುವಿನ ಕಡೆ ಮಗ್ಗುಲಾದಾಗ ನನ್ನ ಕಣ್ಣಿನಿಂದ ನೀರು ಬಂತು. ಅದೇ ನನ್ನ ಕೊನೆಯ ಮೋಹದ ಗಳಿಗೆಯಾಗಿದ್ದಿತು, ನನ್ನ ಜೀವನದಲ್ಲಿ.

ಜ್ವರ ಬಂದು ಯಾವಾಗಲೊ ನನಗೆ ಎಚ್ಚರ ತಪ್ಪಿತ್ತು. ಅರಿವು ಮೂಡಿದಾಗ ನನ್ನ ಆತ್ಮ ಆ ದೇಹವನ್ನು ಬಿಟ್ಟು ಬಂದಿತ್ತು. ಅದೇ ಬೆಳಕಾಗಿತ್ತು. ಮನೆಯೆಲ್ಲ ರೋದನ ಶಾಲೆಯಾಗಿ, ಅಳುವಿನಲ್ಲೇ ನನ್ನ ಸಾವಿನ ಕಾರಣವನ್ನು ಅವರು ಎಣಿಸುತ್ತಿದ್ದರು.

ಇದೇ ನೋಡು ನನ್ನ ವಾಸನೆ. ಹೇಗೆ ತಾನೆ ಇದು ಪರಿಹಾರವನ್ನು ಪಡೆಯಬಹುದು? ಆ ಕಾರಣ ಪಿಂಡವನ್ನು ಮುಟ್ಟಿಬಿಡು. ಅವರಿಗೆ ಅದರಿಂದ ಖಂಡಿತ ತೃಪ್ತಿಯಾಗುವದು. ಅದನ್ನಿಷ್ಟು ನೋಡಿ ಹೊರಟುಬಿಡುವೆ. ಹೋಗುತ್ತೇನೆ. ಮಗುವಿನ ತಂದೆ ಯಾರೆಂಬ ಗುಟ್ಟನ್ನು ಸೃಷ್ಟಿಕರ್ತನು ಬಿಟ್ಟುಕೊಡುವವರೆಗೂ ಅದನ್ನೆ ಅರಸುತ್ತ ಹೀಗೆಯೇ ತಿರುಗುತ್ತಲೇ ಇರುತ್ತೇನೆ.

❄ ❄ ❄ ❄ ❄

೮. ಇಂತೀ ನಮಸ್ಕಾರ

೧೫/೮/೧೯೬೬

ಮ॥ರಾ॥ರಾ ಮಾವಂದಿರಲ್ಲಿ

ಗೋವಿಂದರಾಯನ ಕೃತಾನೇಕ ನಮಸ್ಕಾರಗಳು. (Submitted through proper channel)

ತರುವಾಯ. ಪರಮಾತ್ಮನ ಅನುಗ್ರಹದಿಂದ ಇಲ್ಲಿ ಎಲ್ಲರೂ ಕ್ಷೇಮದಿಂದಿದ್ದಾರೆ. ನೀವೂ ಈ ಇಳಿವಯಸ್ಸಿನಲ್ಲಿ ಸುಕ್ಷೇಮವೆಂದು ತಿಳಿಯುತ್ತೇನೆ. ಅದಾಗಿ, ನನಗೆ ಪೆನ್ಷನ್ ಆಗಿರುವ ವಿಷಯವನ್ನು ಈಗಾಗಲೇ ನನ್ನ ಹಿಂದಿನ ಪತ್ರದಲ್ಲಿ ಬರೆದಿರುತ್ತೇನೆ. ಪ್ರಕೃತ, ನಾನು ನನ್ನ ಬದುಕಿನಲ್ಲಿ ಅತ್ಯಂತ ಮಹತ್ವದ ಒಂದು ನಿರ್ಣಯವನ್ನು ತಗೊಂಡಿದ್ದೇನೆ. ನನ್ನ ವಿಷಯದಲ್ಲಿ ಸದಾ ಸಹಾನುಭೂತಿ ಇರುವ ನಿಮಗೆ ಈ ಬಗ್ಗೆ ವಿವರಣೆಯನ್ನು ಕೊಡುವುದು ಅವಶ್ಯವೆನಿಸಿದೆ. ಕಾರಣ ಈ ಪತ್ರವನ್ನು ನಿಮ್ಮ ಮಗಳ ಮುಖಾಂತರ ಕಳಿಸುತ್ತಿದ್ದೇನೆ. ನನ್ನ ನಿಮ್ಮ ವ್ಯವಹಾರದಲ್ಲಿ proper channel ಎಂದರೆ ಅವಳೇ ತಾನೆ?

ಸುಮಾರು ೩೦ ವರುಷಗಳ ಹಿಂದೆ, ನಿಮ್ಮ ಮಗಳನ್ನು 'ನೋಡ'ಲೆಂದು ನನ್ನನ್ನು ನೀವು ನಿಮ್ಮ ಮನೆಗೆ ಕರೆದೊಯ್ದಿರಿ. ಆ ದಿನ ತಲೆ ತಗ್ಗಿಸಿ ಕುಳಿತಿದ್ದ, ಅವಳ ರೂಪ, ಯೌವನವನ್ನು ನೋಡಿ ನಾನು ಬೆರಗಾಗಿಬಿಟ್ಟೆ. ಮರುದಿನ ಬೆಳಿಗ್ಗೆ ನೀವು ಬಂದು "ಹುಡುಗಿ ಬುದ್ಧಿವಂತೆ, ಸ್ವಭಾವದಲ್ಲಿ ಮುಗ್ಧೆ, ಎಲ್ಲಾ ಮನೆಗೆಲಸದಲ್ಲಿ ಪ್ರವೀಣೆ. ನಾನು ಬಡವ, ಮಕ್ಕಳಂದಿಗ, ಈ ಮದುವೆಗೆ ಒಪ್ಪಿ ನನ್ನನ್ನು ಉದ್ಧಾರ ಮಾಡಬೇಕು" ಎಂದು ಹೇಳಿದಿರಿ. ಆದರೆ ನಾನೇ ನಿಮಗೆ ಅಂಗಲಾಚಿ, "ನಿಮ್ಮ ಮಗಳನ್ನು ನನಗೇ ಕೊಡಿರಿ" ಎಂದು ಹೇಳುವ ಮನಸ್ಥಿತಿಯಲ್ಲಿದ್ದೆ!

ಮದುವೆಯಾದ ಕೆಲವು ವರ್ಷ ನಾನು ಈ ಲೋಕದಲ್ಲಿ ಇದ್ದೇನೇ ಎಂದು ನನಗೇ ಸಂದೇಹ. ಸುಖ... ಸುಖ! ಅವಳನ್ನು ಅರೆಕ್ಷಣವೂ ಬಿಟ್ಟು ಇರಲಿಕ್ಕೆ ನನ್ನಿಂದ ಸಾಧ್ಯವೇ

ಇಲ್ಲ ಎಂದು ಭಾವಿಸಿದ್ದ ದಿನಗಳವು. ಸೋದರಿಯರಿಲ್ಲದ ನನಗೆ, ಈ ಮುಂಚೆ ಯಾವ ಸ್ತ್ರೀಯೊಡನೆಯೂ ಮಾತಿನ ಬಳಕೆ ಇರಲಿಲ್ಲ. ಈಗೋ, ನಿಮ್ಮ ಮಗಳ ಯಜಮಾನನೆಂಬ ಅಭಿಧಾನವನ್ನು ಹೊಂದಿದೆ. ಅವಳ ಮನೆಗೆಲಸದ ಅಚ್ಚುಕಟ್ಟುತನ, ಶೃಂಗಾರಪ್ರಿಯತೆ, ರುಚಿಯಾದ ತಿನಿಸು, ಆ ಲಲ್ಲೇಮಾತು, ಆಗಾಗಿನ ಹುಸಿಮುನಿಸು ಇವೆಲ್ಲ ಅವಳ ವಿಷಯದಲ್ಲಿ ನನ್ನನ್ನು ಹುಚ್ಚನನ್ನಾಗಿ ಮಾಡಿದ್ದುವು. ಅವಳ ಮನಸ್ಸಿಗೆ ಬೇಸರವಾಗುವಂತೆ, ಅವಳ ಇಚ್ಛೆಗೆ ವಿರುದ್ಧವಾಗಿ ನಡೆದುಕೊಳ್ಳುವುದು ಘೋರವಾದ ಅನ್ಯಾಯವೆಂದು ನಾನು ಭಾವಿಸಿದ್ದ ದಿನಗಳವು. ಅಷ್ಟೊಂದು ಆದರ, ಭಯ, ಪ್ರೀತಿ-ನನಗೆ ಅವಳ ವಿಷಯದಲ್ಲಿದ್ದಿತು. ಪೂರ್ವಜನ್ಮದಲ್ಲಿ ಏನೋ ವಿಶೇಷ ಪುಣ್ಯಮಾಡಿದ್ದೆನೆಂದೇ ಇಂಥ ಸ್ತ್ರೀ ನನಗೆ ದೊರಕಿದಳೆಂದು ಬಗೆದಿದ್ದೆ. ಸ್ವಲ್ಪದರಲ್ಲಿ ಹೇಳಬೇಕೆಂದರೆ, ಅವಳು ನನ್ನ ಪಾಲಿಗೆ ಪೂಜಾನ್ವಿತಳಾದ ದೇವಿಯೇ ಆಗಿದ್ದಳು.

ನಿಮ್ಮ ಮಗ ಮುರಾರಿಯು ನಮ್ಮ ಮನೆಯಲ್ಲಿ ಕಲಿಯಲಿಕ್ಕೆಂದು ಇದ್ದನಷ್ಟೆ. ಅವನನ್ನು ನಮ್ಮಲ್ಲಿ ತಂದಿರಿಸುವ ಕೆಲ ದಿನಗಳ ಹಿಂದೆ, ನಿಮ್ಮ ಮನೆತನದ ಕಷ್ಟದ ಪರಿಸ್ಥಿತಿಯನ್ನು ನಿಮ್ಮ ಮಗಳು ಕಣ್ಣೀರು ತಂದು ವಿವರಿಸಿದಾಗ, ನನ್ನ ಸ್ವಂತದ ತಮ್ಮನಿಗೇ ಬಂದೊದಗಿದ ಕಷ್ಟದ ಪರಿಸ್ಥಿತಿಯೆನ್ನುವಷ್ಟು ನೊಂದುಕೊಂಡೆ. ಈ ಮುರಾರಿಗೆ ಸಂಬಂಧಪಟ್ಟ ಒಂದು ಘಟನೆಯೇ ನನ್ನ ಜೀವನದಲ್ಲಿ ಮೊದಲ ಆಘಾತವನ್ನು ತಂದೊಡ್ಡಿತು.

ಅವನು ನಮ್ಮ ಮನೆಯಲ್ಲಿದ್ದು ಒಂದು ವರ್ಷ ಆಗಿರಬೇಕು. ನಮ್ಮ ಕಾಕಾನ ಮಗಳ ಮದುವೆ ನಿಶ್ಚಯವಾಗಿದ್ದಿತು. ಲಗ್ನವು ಬೆಳಗಾವಿಯಲ್ಲಿ. "ಲಗ್ನಕ್ಕೆ ನೀವಿಬ್ಬರೂ, ಮುಂಚಿತವಾಗೇ ಬರಬೇಕು" ಎಂದು ಕಾಕಾ ಪತ್ರ ಬರೆದರು. ಅದೇ ಅನರ್ಥಕ್ಕೆ ಕಾರಣವಾಯಿತು. 'ನಾವಿಬ್ಬರೇ' ಎಂದರೆ ಮುರಾರಿಯನ್ನು ಏನು ಮಾಡುವುದು? ಏನೋ ಗಡಿಬಿಡಿಯಲ್ಲಿ ಮುರಾರಿಯ ಹೆಸರನ್ನು ಬರೆಯುವುದು ಉಳಿದಿರಬೇಕು ಎಂದು ಇವಳಿಗೆ ಹೇಳಿದೆ.

ಆದರೆ ನಿಮ್ಮ ಮಗಳು ವಿಪರೀತ ಸಿಟ್ಟಿಗೆದ್ದಳು. ಇಷ್ಟರಮಟ್ಟಿಗೆ ತಾನೂ, ತನ್ನ ತವರಿನವರೂ ಅವರ ಕಣ್ಣಲ್ಲಿ ಕಾಣದಂತಾದೆವೆ? ಎಂದು. "ಮುರಾರಿಯ ಹೆಸರನ್ನು ಅವರ ಪತ್ರದಲ್ಲಿ ಕಾಣಿಸಿದ್ದರೂ ನಾನು ಕರೆಕೊಂಡು ಹೋಗುತ್ತಿದ್ದಿಲ್ಲ. ಅವನು ಎಷ್ಟೆಂದರೂ ನಿಮ್ಮ ಬಳಗಕ್ಕೆ ಹೊರಗಿನವನೇ. ಏನಿಲ್ಲ, ನಾವು ಬಡವರೆಂದೇ ಹೀಗೆ ಅಲಕ್ಷ್ಯ, ನನಗೆ ಗೊತ್ತು ನನ್ನ ತಮ್ಮನು ನಿಮ್ಮ ಆಶ್ರಯದಲ್ಲಿರುವುದು ನಿಮ್ಮ ಕಾಕಾನಿಗೆ ಸರಿಬಂದಿಲ್ಲ. ಯಾಕೆ ಸುಮ್ಮನೇ? ನಾನು ಅವನನ್ನು ಊರಿಗೆ ಕಳಿಸಿಬಿಡುತ್ತೇನೆ. ನಾನು ಮದುವೆಗೂ ಹೋಗುವುದಿಲ್ಲ. ನೀವೊಬ್ಬರೇ ಸುಖವಾಗಿ ಹೋಗಿ ಮಜಾ ಮಾಡಿ ಬನ್ನಿರಿ!"

ಮಾವಯ್ಯಾ, ಅಂದಿನ ಅವಳ ರೌದ್ರ ಸ್ವರೂಪವು ನನ್ನ ಕಣ್ಣೆಗೆ ಇಂದಿಗೂ ಕಟ್ಟಿದಂತಿದೆ. ಇವಳು ಇಷ್ಟರ ಮಟ್ಟಿಗೆ ಆಕ್ರೋಶಗೈಯುವ ಪ್ರವೃತ್ತಿಯವಳಾದರೆ ನನ್ನ ಮುಂದಿನ ಗತಿಯೇನು

ಎಂದು ಹೌಹಾರಿದೆ. ಆದರೂ ಈ ರಭಸವು ತಾತ್ಪೂರ್ತಿಕವೆಂದು ನಂಬಿದ್ದೆ. ಇಲ್ಲ. ಆ ಲಗ್ನದ ಮನೆಯಲ್ಲಿ ನನ್ನ ಆಪ್ತ ಮಂಡಳಿಯೆದುರು ಇವಳನ್ನು ಹೆಮ್ಮೆಯಿಂದ ಮೆರಸಬೇಕೆಂದು ಅದೆಷ್ಟು ಯೋಚಿಸಿದ್ದೆ! ಅದೆಲ್ಲ ಮಣ್ಣುಗೂಡಿತು.

ನಿಮ್ಮ ಶ್ರೀಮತಿಯು ನಮ್ಮಲ್ಲಿ ಕೆಲ ತಿಂಗಳು ಇರಲಿಕ್ಕೆಂದು ಮೊದಲ ಸಲ ಬಂದಾಗ ಇವಳು ಚೊಚ್ಚಲ ಬಸುರಿ. ಮೇಲೆ ಮುರಾರಿಯ ಪರೀಕ್ಷೆಯ ದಿನಗಳಾದುದರಿಂದ, ನಿಮ್ಮ ಶ್ರೀಮತಿಯನ್ನು ನಮ್ಮಲ್ಲಿಗೆ ಕಳಿಸಬೇಕೆಂದು ನಾನು ಬೇಡಿಕೊಂಡೆ. ಅದೇ ಪ್ರಮಾದವಾಯಿತು. ನನ್ನ, ಇವಳ ಮನಸ್ಸು ಸಿಡಿಮಿಡಿಗೊಳ್ಳುವುದಕ್ಕೆ ಆ ಮಹಾತಾಯಿ ಅಪ್ರತ್ಯಕ್ಷವಾಗಿ ಕಾರಣಳಾದಳು.

ಮೊದಲ ಸಲ ಗರ್ಭಿಣಿಯಾದ ಪತ್ನಿಯನ್ನು ತೃಪ್ತಿಪಡಿಸುವಲ್ಲಿ ಯಾವ ಗಂಡನು ಹಿಂದೆ ಬಿದ್ದಾನು? ಆದರೆ ನಿಮ್ಮ ಹೆಂಡತಿಯೊ? "ತನ್ನ ಮುಗ್ಧ" ಮಗಳಿಗೆ ಚುಚ್ಚಿ ಚುಚ್ಚಿ. "ಇದನ್ನು ತಂದರೇನೆ?" "ಅದನ್ನು ಕೊಟ್ಟರೆ?," "ಮುತ್ತಿನ ಬಿಲವಾರ ಮಾಡಿಸಿಕೊಳ್ಳಲು ಮುಂದೆ ಎಲ್ಲಿ ಆಗುತ್ತದೆ? ಈಗೇ ತಕ್ಕ ಸಮಯ" ಎಂದು ಹೇಳಿಕೊಡುವ ಅವರ ಸಣ್ಣತನದಿಂದಾಗಿ ನಾನು ಕಿಡಿಕಿಡಿಯಾದೆ. ಹೋಗಲಿ. ಮಗಳ ಮೇಲಿನ ಕಕ್ಕುಲಾತಿಯಿಂದ ಹಾಗೆ ನಡೆದುಕೊಳ್ಳುತ್ತಿದ್ದರೆ ಅಡ್ಡಿಯಿದ್ದಿಲ್ಲ. ನನ್ನ ಖಾಸಗೀ ವ್ಯವಹಾರದಲ್ಲಿಯೇ ಅವರ ಅಧಿಕಪ್ರಸಂಗ ಇರುತ್ತಿದ್ದಿತು. ಅವರ ದೃಷ್ಟಿಯಲ್ಲಿ ನಾನು ಒಬ್ಬ ವ್ಯವಹಾರ ಗೊತ್ತಿಲ್ಲದ ಮನುಷ್ಯ! ಒಂದು ಸಲ ನಮ್ಮ ರೈತ ಭರಮಜ್ಜನು ಬಂದಾಗ ನಿಮ್ಮ ಪತ್ನಿಯು ಅವನಿಗೆ ಇಲ್ಲದ ಪ್ರಶ್ನೆ ಹಾಕುತ್ತ ಆಕ್ಷೇಪಿಸಿದಾಗ, ನಾನು ಗದರಿಸಬೇಕಾಯಿತು. ಅವರು ಮುಳುಮುಳು ಅಳುತ್ತ ಒಳಗೆ ಹೋಗುತ್ತಲೂ ನಿಮ್ಮ ಮಗಳು ಮೇಲ್ವಾಯ್ದು ಬಂದಳು. ದೊಡ್ಡ ವ್ಯಾಗ್ಯುದ್ಧ! ಗರ್ಭಿಣಿಯ ಮನಸ್ಸನ್ನು ಗಾಸಿಗೊಳಿಸುವುದು ಸರಿಯಲ್ಲವೆಂದು ಅಂದು ನಾನೇ ಸುಮ್ಮನಾದೆ.

ಗತಿಸಿಹೋದ ನಿಮ್ಮ ಶ್ರೀಮತಿಯನ್ನು ಬೈಯುತ್ತಿದ್ದೇನೆಂದು ಬೇಸರಿಸಬೇಡಿರಿ. ಹೇಳಬೇಕಾದ ಮಾತೆಂದರೆ ಬಾಣಂತಿತನಕ್ಕಾಗಿ ತನ್ನ ತಾಯಿಯೊಡನೆ, ತವರಿಗೆ ಹೋಗಿ ನಿಮ್ಮ ಮಗಳು ಮಗು ನಾನಿಯೊಡನೆ ತಿರುಗಿ ಬಂದಾಗ, ಸಂಪೂರ್ಣ ಬದಲಾಯಿಸಿದ್ದರು. ಅಥವಾ ತನ್ನ ಮುಗ್ಧತನವನ್ನು ತಾಯಿಯ ಮಡಿಲಲ್ಲಿ ಬಿಟ್ಟು, ನಾಲಗೆಯನ್ನು ಹರಿತಮಾಡಿಕೊಂಡು, ಇನ್ನೆರಡು ಕೈಗಳನ್ನು ಕಟ್ಟಿಕೊಂಡು, ಕಾಳಿಕಾರೂಪವನ್ನು ಗ್ರಹಣ ಮಾಡಿದ್ದಳು.

ಮಾವಯ್ಯ, ಆ ಮುಂದಿನ ದಿನಗಳಲ್ಲಿ ಅವಳೊಡನೆಯ ವಾಗ್ವಾದ, ಅವಳ ಚಂಡಿತನ, ಇವುಗಳಲ್ಲಿ ಯಾವುದನ್ನು ವಿವರಿಸಲಿ, ಎಷ್ಟೆಂದು ವಿವರಿಸಲಿ? ನಿತ್ಯವೂ ನಡೆಯತಕ್ಕವುಗಳಾಗಿರುವಾಗ? ಅವಳ ರಂಭಾಟದ ಇನ್ನೊಂದು ಪರಿಯೆಂದರೆ, ನನ್ನ ಬಳಗದಲ್ಲಿಯ ಇದ್ದವರು, ಸತ್ತವರ ದೋಷಗಳನ್ನು ಹೆಕ್ಕಿತೆಗೆದು, ಅವುಗಳನ್ನೆ ದೊಡ್ಡದು ಮಾಡಿ, ತಿವಿಯುವುದು. ಆಗ ಸಿಟ್ಟು ತಡೆಯದೇ, ನಾನು "ನನ್ನ ಮನೆಜನರ ಗೊಡವೆ,

ಪರಮನೆತನದಿಂದ ಬಂದ ನಿನಗೇಕೆ? ನಿನ್ನ ತವರಿನವರಲ್ಲಿಯೂ ಇಂಥ ದೋಷಗಳು ಹೊರಟಾವು. ಎಲ್ಲರ ಮನೆಯ ದೋಸೆಗೂ ತೂತುಇರುತ್ತವೆ" ಎಂದೆ. ಆಗ ಅವಳು ಏನು ಮಾಡಿದಳೆಂಬುದು ನನಗೆ ಇನ್ನೂ ಕಣ್ಣಿಗೆ ಕಟ್ಟಿದಂತಿದೆ. ಸೆರಗನ್ನು ಅಡ್ಡಗಟ್ಟಿ, ಅಳುತ್ತಿರುವ ಮಗುವನ್ನು ತೊಡೆಯ ಮೇಲೆ ಮಲಗಿಸಿ, ರಪರಪನೆ ಬಡಿಯುತ್ತ ನನ್ನ ಕೈಯನ್ನು ಹಿಡಿದು ಜಗ್ಗಿ, "ಇಲ್ಲಿ ಕೂಡ್ರಿ! ನನ್ನ ತವರಿನವರಲ್ಲಿ ಏನೇನು ಲೋಪ ಕಂಡಿರಿ? ಈಗಲೇ ಹೇಳಬೇಕು, ಹೇಳದಿದ್ದರೆ ಬಿಡುವುದಿಲ್ಲ" ಎಂದು ಚೀರಿದಳು. ನನ್ನ ದುರ್ದೈವ! ಉದಾಹರಣೆಗಳನ್ನು ಕೊಡಬೇಕೆಂದರೆ, ಕೆದರಿ ಕೆದರಿ, ನಿಮ್ಮ ಬಳಗದವರ ಕೆಟ್ಟ ವಿಷಯಗಳನ್ನು ತಿಳಿದುಕೊಳ್ಳುವ ಸ್ತ್ರೀಪ್ರವೃತ್ತಿಯನ್ನು ನಾನು ಹೊಂದಿರಲಿಲ್ಲ.

ನಿಮ್ಮ ಮಗಳು ಎರಡನೆಯ ಸಲ ಗರ್ಭಿಣಿಯಾದಾಗ, ಎಂದರೆ ನಮ್ಮ ಬಾಲಚಂದ್ರನ ಜನನದ ಕಾಲಕ್ಕೆ ನನಗೆ ಸಂಸಾರವು ಒಳ್ಳೇ ಹಿತವಾಗಿದ್ದಿತು ನನ್ನ ಸುದೈವದಿಂದ, ನಿಮ್ಮ ಶ್ರೀಮತಿಯ ಕಾಲಧೂಳಿಯು ನಮ್ಮ ಮನೆಯಲ್ಲಿ ಬೀಳಲಿಲ್ಲ. ಇವಳು ದಿನ ತುಂಬಿದ ಬಸುರಿ ಇರುವಾಗ ನಾನು ಮನಮುಟ್ಟಿ ಉಪಚಾರ ಮಾಡಿದೆ. ಮುಂದೆ ಬಾಣಂತಿತನಕ್ಕೆ ಹೆಣ್ಣಾಳು ಇದ್ದರೂ ಒಳಗಿನ ಇತರ ಎಲ್ಲ ಕೆಲಸವನ್ನು ನಾನೇ ಮಾಡುತ್ತಿದ್ದೆ. ಆಗ ನನ್ನವಳು ಅದೆಷ್ಟು ಹಸನ್ಮುಖಿಯಾಗಿದ್ದಳು! ಅವಳ ಮನಸ್ಸಿಗೆ ಒಗ್ಗದ ಯಾವುದಾದರೂ ಕಾರ್ಯ ಜರುಗಿದಾಗ. ಕಿಂಚಿತ್ ರಗಳೆ ಮಾಡುತ್ತಿದ್ದರೂ ಆಗ ಅದು ನನಗೆ ವಿಶೇಷವೆನಿಸಲಿಲ್ಲ.

ಆದರೆ ದಿನಗಳೆದಂತೆ ನನ್ನ ಸಾಂಸಾರಿಕ ಕೆಲಸ, ವ್ಯವಹಾರಗಳು ಅವಳಿಗೆ ಸರಿಬರುತ್ತಿರಲಿಲ್ಲವೆಂದು ಕಂಡುಬಂದಿತು. ನಾನು ಯಾವುದೊಂದು ಕೆಲಸ ಮಾಡಿದ ಮೇಲೆ, ಪುನಃ ಅದನ್ನೆ ತಾನೂ ಮಾಡುತ್ತಿದ್ದಳು. ಹಾಗೆ ಮಾಡಿದಾಗಲೇ ಅವಳಿಗೆ ಸಮಾಧಾನ. ಇದಕ್ಕೆ ನಗೆಬರಿಸುವ ಒಂದು ಸಣ್ಣ ಉದಾಹರಣೆಯನ್ನು ಕೊಡುವೆನು : ನಮ್ಮ ನಾನಿಯನ್ನು ಒಮ್ಮೆ ಸಲೂನಿಗೆ ಕಳಿಸಿದ್ದೆ. ಆಗ ಅವನು ೧೦-೧೧ ವರ್ಷದವನಿರಬೇಕು. ಸಲೂನಿನವನು, ಅವನ ಕಿವಿಯ ಮೇಲೆನೊ ಕೂದಲು ಉಳಿಸಿದ್ದಂತೆ. ಆಮೇಲೆ ಮತ್ತೊಂದು ಕಡೆ ಹೋಗುವ ಪಾಳಿ ಬಂದಾಗ "ಹುಡುಗನ ಒಟ್ಟಿಗೆ ನೀವೂ ಹೋಗಿ, ಹಜಾಮನಿಗೆ ಬಜಾಯಿಸಿ ಬರ್ರಿ" ಎಂದು ನನಗೆ ಬಜಾಯಿಸಿದಳು. ಅದರಂತೆ ನಾನಿಯನ್ನು ಪಾಳಿ ಹಚ್ಚಿ ಕೂಡ್ರಿಸಿ, ತುಸು ಹೊತ್ತಿನಲ್ಲಿ ಹಿಂತಿರುಗಿ ಬಂದು ನೋಡುತ್ತೇನೆ ಸಲೂನಿನಲ್ಲಿ ಇವಳು! ಅವಳ ಆಕ್ಷೇಪಣೆಯ ಮಾತಿಗೆ ಸಲೂನಿನವನು "ರಾಯರು ಇದೀಗ ಬಂದು ಹೇಳಿಹೋಗಿದ್ದಾರೆ. ನೀವೇಕೆ ಬಂದಿರಿ?" ಎಂದಾಗ ಅಲ್ಲಿದ್ದವರು ನಗುತ್ತಿದ್ದುದನ್ನು ಕಂಡು ಬೇಸರವಾಯಿತು.

ಈ ಬಗೆಯ ಅವಳ ನಡತೆಗೆ, ನನ್ನ ಮೇಲಿನ ಅವಿಶ್ವಾಸಕ್ಕಿಂತ ಎಲ್ಲವನ್ನೂ ತಾನು ಸ್ವತಃ ಮಾಡಬೇಕು; ತಾನು ಮಾಡಿದ್ದೇ ಯಾವಾಗಲು ಸರಿ ಎಂಬ ಭಾವನೆಯೇ ಕಾರಣವೆಂದು ನನ್ನ ತಿಳಿವಳಿಕೆ. ಇನ್ನು ಅವಳು ಮಾಡಿದ್ದು, ನನ್ನ ದೃಷ್ಟಿಯಲ್ಲಿ ತಪ್ಪು ಎನಿಸಿ ವಾದಿಸಹೋದರೆ, ವಿಶೇಷ ರಗಳೆ ಮಾಡುತ್ತಾಳೆ. ಹೇಗೆ ತಿಳಿಸಿ ಹೇಳಿದರೂ ಕೇಳುವ

ಪ್ರವೃತ್ತಿಯವಳಲ್ಲ ಎಂದು ಕಂಡುಬಂದ ಮೇಲೆ ನಾನು ಆದಷ್ಟು ವಾದವನ್ನು ಬೆಳೆಸಬಾರದೆನ್ನುವ ಧೋರಣೆಯನ್ನು ತಳೆದೆ.

ಅನೇಕ ಹೆಂಗಸರಿಗೆ ಬಲು ಬೇಗ ಸಿಟ್ಟು ಬರುತ್ತದೆ. ಆದರೆ ಅಷ್ಟೇ ಬೇಗ ಶಾಂತರಾಗಿ ತಮ್ಮ ತಪ್ಪು ತಿಳಿದು ಹಿಂದಾದುದನ್ನು ಮರೆತುಬಿಡುತ್ತಾರೆ. ನಿಮ್ಮ ಮಗಳು ಹಾಗಲ್ಲ; ಅವಳಿಗೆ ಬಂದ ಕೋಪವು, ಬೇಗ ಆರುತ್ತದೇನೋ ನಿಜ. ಆದರೆ ತಾನು ಕೋಪಿಸಿಕೊಂಡದ್ದು ಸರಿಯೇ ಎಂಬ ಭಾವನೆಯು ಮುಂದೂ ಉಳಿಯುತ್ತದೆ! ಅವಳ ದೃಷ್ಟಿಯಲ್ಲಿ ಅವಳು ತಪ್ಪು ಮಾಡುವುದೇ ಇಲ್ಲ. ತನ್ನದು ತಪ್ಪು ಎಂದು ನನ್ನೆದುರು ಒಪ್ಪಿಕೊಂಡ ಒಂದು ಸಂದರ್ಭವೂ ನನಗೆ ನೆನಪಿಲ್ಲ. ಅದರಂತೆ ಗಂಡನಾದ ನಾನು ಮಾಡಿದ ಉತ್ತಮ ಕೆಲಸವೊಂದೂ ಅವಳಿಗೆ ಗೊತ್ತೇ ಇಲ್ಲ. ಗಂಡನು ಮಾಡುವುದು ತಪ್ಪಾದರೂ ಇರುತ್ತದೆ, ಇಲ್ಲವೆ ಮಾಡಬೇಕದ್ದನ್ನೆ ಮಾಡಿದ್ದಾರೆ, ಅದರಲ್ಲೇನು ವಿಶೇಷ ಎಂಬ ಮನೋಭಾವ ಅವಳದು! ಅಂತೂ ಗಂಡನಿಂದ ತಾನೇ ಶ್ರೇಷ್ಠಳೆಂಬ ಭಾವನೆಯು ಅವಳಲ್ಲಿ ಅದೆಂದು ಬೇರೂರಿತೊ.

ಅವಳನ್ನು ಸ್ವಾರ್ಥಿ ಮತ್ತು ಸಂಕುಚಿತ ದೃಷ್ಟಿಯವಳು ಎಂದು ಹೇಳುವ ಹಾಗೂ ಇಲ್ಲ. ನೆರೆಹೊರೆಯವರಲ್ಲಿ ಅವಳಿಗೆ ಅದೆಷ್ಟು ಮರ್ಯಾದೆ ಇದೆ! ಅನೇಕ ಜನರಿಗೆ ಉಪಕಾರ ಮಾಡಿದ್ದಾಳೆ. ಹಬ್ಬ ಹುಣ್ಣಿಮೆ, ಮದುವೆ ಮುಂತಾದ ಪ್ರಸಂಗಗಳಲ್ಲಿ ಮೆರೆದಾಡಿ ಸೈ ಎನಿಸಿಕೊಂಡಿದ್ದಾಳೆ. ನಮ್ಮೂರ ಮಹಿಳಾ ಸಂಘದಲ್ಲಿ ಉಪಕಾರ್ಯದರ್ಶಿನಿಯಿಂದ ಆರಂಭಿಸಿ ಉಪಾಧ್ಯಕ್ಷಿಣಿಯವರೆಗೂ ಅಧಿಕಾರ ವಹಿಸಿ, ಕಳೆದ ೨೦ ವರ್ಷಗಳಿಂದ ಕೆಲಸ ಮಾಡಿದ್ದಾಳೆ. ನಮ್ಮ ಶಿಕ್ಷಣಖಾತೆಯಲ್ಲಿ ನಾನೇನಾದರೂ ದೊಡ್ಡ ಅಧಿಕಾರಿಯಾಗಿದ್ದರೆ. ಅವಳು ಅಧ್ಯಕ್ಷಿಣಿಯೂ ಆಗಬಹುದಿತ್ತೇನೊ! ಅಂತೂ, ಅವಳು ಕೆಟ್ಟವಳು ಎಂದು ನಾನು ಯಾರ ಎದುರೂ ಆಡುವಹಾಗಿಲ್ಲ.

ಮಕ್ಕಳ ಮೇಲೆ ಆಕೆ ಎಗರಾಡುವಳಾದರೂ ಅಷ್ಟೇ ಪ್ರೀತಿ ವಾತ್ಸಲ್ಯಗಳನ್ನು ಅವರ ಮೇಲೆ ಹರಿಯಿಸುವಳಾದ್ದರಿಂದ, ನ ಮೂರೂ ಗಂಡು ಮಕ್ಕಳಿಗೆ ತಮ್ಮ ತಾಯಿಯೆಂದರೆ ಬಲು ಅಚ್ಚುಮೆಚ್ಚು, ಎಲ್ಲ ವಿರಸ ಇರುವುದು ಗಂಡನೆಂಬ ನನ್ನ ಮೇಲೆಯೇ! ನನಗೆ ದೈಹಿಕ ಬೇನೆ, ಬೇಸರಿಕೆ ಬಂದರೆ ಆಕೆ ತುಂಬಾ ಪರಿತಾಪಪಡುತ್ತಾಳೆ. ಉಪಚರಿಸುತ್ತಾಳೆ ನಿಜ. ಅದೇ, ನನ್ನ ಮನಸ್ಸಿಗೇನಾದರೂ ನೋವಾದರೆ ಅವಳು ಅದರ ದರಕಾರವನ್ನೇ ಮಾಡುವುದಿಲ್ಲ ನನ್ನ ಮಾನಸಿಕ ತೊಂದರೆಗಳನ್ನು ಸಹಾನುಭೂತಿಯಿಂದ ಎಂದೂ ಕಾಣುವುದಿಲ್ಲ. ಹೆಂಡತಿಯನ್ನು ಅಡಿಗೆ ಮಾಡುವ ಹಾಗೂ ಮಕ್ಕಳನ್ನು ಹೆರುವ ಯಂತ್ರ ಎಂದು ತಿಳಿಯುವ ಗಂಡಸರು ಇದ್ದಿರಬಹುದು. ತದ್ವಿರುದ್ಧವಾಗಿ, ಈಕೆಯು ಮಾತ್ರ, ಗಂಡನೆಂದರೆ ಹಣವನ್ನು ತರುವ ಹಾಗೂ ಮಕ್ಕಳನ್ನು ಹೆರುವುದಕ್ಕಿರುವ ಒಂದು ಸಾಧನ ಎಂದೇ ಬಗೆದಳು. ಇಂಥ ಗಂಡನನ್ನು ಬಯ್ಯಬಹುದು, ಪ್ರೀತಿ ಮಾಡಬಹುದು, ಅಲ್ಲಿ

ಹೋಗು, ಇಲ್ಲಿ ಬೇಡ ಎನ್ನಬಹುದು. ಈ ಪ್ರಾಣಿಗೆ ತಾನು ಏನೂ ಮಾಡಬಹುದು! ಏನೂ ಮಾಡಿದರೂ ನಡೆಯುತ್ತದೆ ಎಂಬ ಭಾವನೆಯು ಅದೆಂದು ಅವಳಲ್ಲಿ ಮೂಡಿತೋ.

ಆದರೆ ಅವಳಿಗಿಂತ ನಾನು ಶ್ರೇಷ್ಠನಾಗಿ ಮೆರೆಯುತ್ತಿದ್ದ ಏಕಮೇವ ಸಂದರ್ಭವೆಂದರೆ ರಾತ್ರಿಯ ಕಾಲ. ಹಗಲಿನಲ್ಲಿ ಅವಳು ಎಷ್ಟೇ ರಕ್ಕಸತನ ಮಾಡಿರಲಿ, ಸಂಜೆಯಾದೊಡನೆ ಅದೇನೂ ಆಗದವರಂತೆ ಆಕೆ ನನ್ನನ್ನು ಅನುನಯಿಸುತ್ತಿದ್ದಳು. ಆ ಗಳಿಗೆಗಳಲ್ಲಿ ನಾನು ಅವಳ ಯಜಮಾನ ಎಂದ ದರ್ಪಭಾವವು ನನ್ನಲ್ಲಿ ಮುಡುತ್ತಿದ್ದಿತು. ಮೋಜೆಂದರೆ, ನನ್ನ ಯಾವುದಾದರೂ ವಿಚಾರ ಅಥವಾ ಕೆಲಸಕ್ಕೆ ಒಪ್ಪಿಸಲು ಅದೇ ಯೋಗ್ಯ ಸಮಯವಾಗಿದ್ದಿತು.

ಇದರಿಂದಾಗಿ ನಮ್ಮ ದೈಹಿಕ ಸಂಬಂಧವಾದರೂ ಸೌಹಾರ್ದಯುತವಾಗಿ ಇರಬೇಕಿತ್ತಷ್ಟೆ. ಆದರೆ ನಿಮ್ಮ ಮಗಳು ಸಂಶಯ ಮಾತ್ಸರ್ಯಗಳಿಂದ ಪ್ರೇರಿತಳಾಗಿ ಒಮ್ಮೆ ಅದಕ್ಕೆ ಮಸಿ ಬಳಿದಳು. ಅದೇ ರಂಗೂತಾಯಿಯ ಪ್ರಕರಣ. ಅದು ನಿಮ್ಮ ಕಿವಿಯವರೆಗೂ ಮುಟ್ಟಿದೆ. ಅದರ ನಿಜಸ್ಥಿತಿಯನ್ನೀಗ ಬರೆಯುತ್ತಿದ್ದೇನೆ. ನನಗೆ ರಂಗೂತಾಯಿಯ ಗುರುತು ಮಾಡಿಕೊಟ್ಟವಳೇ ಸಂಸಾರವನ್ನು ಮಾರ್ಗಕ್ಕೆ ಹಚ್ಚಿದ ವಿಷಯವು, ಎಲ್ಲರಿಗೂ ತಿಳಿದಿದೆ.

ನನ್ನ ಆಫೀಸು ಮುಗಿದ ಮೇಲೆ, ರಂಗೂತಾಯಿಯ ಮನೆಗೆ ಆಗಾಗ ಹೋಗಿ, ಅವಳ ಇಬ್ಬರು ಚಿಕ್ಕ ಹೆಣ್ಣುಮಕ್ಕಳೊಡನೆ ಸರಸವಾಡಿ ಬರುತ್ತಿದ್ದ ವಿಷಯವೂ ನಿಮ್ಮ ಮಗಳಿಗೆ ಗೊತ್ತಿದ್ದದ್ದೇ ಇತ್ತು. ಆದರೆ ಅವಳ ಮಹಿಳಾ ಸಂಘದಲ್ಲಿ ಯಾರೊ ನುಡಿದ ಕೊಂಕುಮಾತಿಗೆ ನಿಮ್ಮ ಮಗಳು ನಮ್ಮಿಬ್ಬರ ಮೇಲೆ ರೌದ್ರಾವತಾರ ತಾಳಿಬಿಟ್ಟಳು. ಸಲ್ಲದ ಅಪವಾದ ಹೊರಿಸಿ, ೨-೩ ತಿಂಗಳು ನನ್ನನ್ನು ಮಾನಸಿಕವಾಗಿ ಅತ್ಯಂತ ಗಾಸಿಗೊಳಿಸಿದಳು. ಕೊನೆಗೆ ನಾನು ರಂಗೂತಾಯಿಯ ಮನೆಗೆ ಹೋಗುವುದನ್ನು ನಿಲ್ಲಿಸಿದುದಂತೂ ಸರಿಯೆ, ಶಾಲೆಯ ಪರೀಕ್ಷೆಗಳು ಮುಗಿದ ಕೂಡಲೇ ಅವಳನ್ನು ಬೇರೊಂದು ಊರಿಗೆ ವರ್ಗಮಾಡಿಸಿದೆ.

ನನಗೂ ನಿಮ್ಮ ಮಗಳಿಗೂ ವಿಶೇಷ ಘರ್ಷಣೆಯಾಗುತ್ತಿದ್ದುದು ಹಣದ ವೆಚ್ಚದ ವಿಚಾರದಲ್ಲಿ. ನಾನು ಕೈತುಂಬ ಹಣತರುವ ಆಫೀಸರನಲ್ಲ ಮತ್ತು ಇಂದಿನ ದಿನಗಳಲ್ಲಿ ನನಗೆ ನೆಪಕ್ಕೆ ಮಾತ್ರ ಆಸ್ತಿಯಿದೆಯಂಬುದು ಅವಳ ತಲೆಗೆ ಹೋಗುವುದೇ ಇಲ್ಲ. ಆದರೆ ತಾನು ಊರಲ್ಲಿಯ ಒಬ್ಬ ಗಣ್ಯ ಸಾಮಾಜಿಕ ಕಾರ್ಯಕರ್ತೆ, ಅದಕ್ಕೆ ತಕ್ಕಂತೆ ತನ್ನ ಮನೆ, ಮತ್ತು ನಡವಳಿಕೆ ಇರಬೇಕು ಎಂಬುದು ಅವಳ ಮನೋವೃತ್ತಿಯಾಗಿದೆ. ಅಂತೆಯೇ ನಮ್ಮ ಮನೆಯು ಫರ್ನಿಚರ್ ಮತ್ತು ಗಾಜಿನ ಪದಾರ್ಥಗಳಿಂದ ತುಂಬಿಹೋಗಿದೆ. ಮತ್ತು ಒಂದು ಮ್ಯೂಜಿಯಂನಲ್ಲಿ ಇರುವಷ್ಟು, ಅಲಂಕಾರದ ಬಣ್ಣದ ಅನೇಕ ವಸ್ತುಗಳು ಹರಡಿವೆ. ಸರಿ, ಈ ಅಪೂರ್ವ ವಸ್ತುಗಳನ್ನು ಇಡಲಿಕ್ಕೆ ಒಂದು ಸುಂದರವಾದ ಕಪಾಟು ಇಲ್ಲದಿದ್ದರೆ, ಅವನ್ನು ಮನೆಯಲ್ಲಿಟ್ಟು ಏನು ಪ್ರಯೋಜನ? ಆ ಗಾಂಧೀ ಫರ್ನಿಚರ್ ಮಾರ್ಟ್‌ದವರು ನಮಗೆ ಗುರುತಿನವನೇ ಆದ್ದರಿಂದ ೩೦೦ ರೂ. ಬೆಲೆ ಬಾಳುವ ಅಲಂಕಾರಿಕ ಕನ್ನಡ

ಕಪಾಟನ್ನು ನಮಗಾಗಿ ೫೦ ರೂ. ಕಡಿಮೆಮಾಡಿ ಕೊಡುತ್ತಾನೆ. ಆದ್ದರಿಂದ ಅದನ್ನು ಯಾಕೆ ತಗೊಳ್ಳಬಾರದು? ಇದು ಅವಳ ವಿಚಾರಸರಣಿ.

ಆದರೆ ಆ ೨೫೦ ರೂ.ಗಳನ್ನಾದರೂ ಎಲ್ಲಿಂದ ತರಲಿ? ಎಂದು ನಾನು ಹೇಳಿದರೆ "ನಾನೇನು ಹಣ ಗಳಿಸುತ್ತೇನೆಯೆ? ಅದರ ವಿಚಾರ ಮಾಡಬೇಕಾದವರು ನೀವು ತಾನೇ? ಅದು ಮನೆಯಲ್ಲಿ ಕಾಯಂ ಆಗಿ ಭೂಷಣವಾಗಿರುವಂತಹ ವಸ್ತು" ಎಂದು ಉತ್ತರ ಕೊಡುತ್ತಾಳೆ. ನಮ್ಮ ಮನೆಯಲ್ಲಿ ಇವಳು ಅತಿ ಸಿರಿವಂತೆಯಾದರೆ, ನಾನೋ ಕಡು ಬಡವ!

ನನ್ನಲ್ಲಿ ಹಣ ಇರುವುದಿಲ್ಲ : ಸಾಲವನ್ನು ಮಾಡಿಯೇ ತರಬೇಕಾಗುತ್ತದೆ ಎಂಬುದು ಅವಳ ತಲೆಗೆ ಆಗೊಮ್ಮೆ ಈಗೊಮ್ಮೆ ನಾಟುವುದುಂಟು. ಆದರೆ ಪ್ರಸಂಗಗಳು ಅನಿವಾರ್ಯವಾಗಿ ಒದಗಿಬಂದರೆ. ಆಕೆಯಾದರೂ ಪಾಪ ಏನು ಮಾಡಿಯಾಳು! ಪ್ರಯಾಗದಿಂದ ಹಿಂದೀ ಸೇವಾ ಸಂಘದ ಜಂಟಿ ಕಾರ್ಯದರ್ಶಿಯು ನಮ್ಮೂರಿಗೆ ಬಂದರೆ ಆ ಮಹಾಮಹಿಳೆಗೆ ಸ್ಥಳೀಯ ಮಹಿಳಾ ಸಂಘದ ಉಪಾಧ್ಯಕ್ಷಿಣಿಯಾದ ಇವಳು ತನ್ನ ಮನೆಯಲ್ಲಿ, ಹಲವು ಸ್ಥಳೀಯ ಪ್ರಮುಖ ಮಹಿಳೆಯರ ಸಮ್ಮುಖದಲ್ಲಿ ಚಹಾ ಪಾರ್ಟಿ ಕೊಡಲೇಬೇಕಾಗುತ್ತದಲ್ಲವೆ!

ಬದುಕಿನಲ್ಲಿ ಈ ಬಗೆಯ ಸಾಮಾಜಿಕ ಚಟುವಟಿಕೆ, ಸಾಂಸಾರಿಕ ಉಮೇದು ಅವಶ್ಯವಾಗಿ ಬೇಕು ಎಂದು ನೀವು ಅನ್ನಬಹುದು. ನಾನೂ ಒಪ್ಪುವೆ. ಆದರೆ ನಮ್ಮ ನೆಲೆ ಬೆಲೆಯನ್ನು ಗಮನಿಸಿ, ಅಷ್ಟರಮಟ್ಟಿಗೇನೇ ಇವನ್ನೆಲ್ಲ ಹಮ್ಮಿಕೊಳ್ಳಬೇಕು. ನಿಮ್ಮ ಮಗಳಿಗೆ ಕೊನೆಗೂ ಆ ಬುದ್ಧಿ ಬರಲಿಲ್ಲ. ತನ್ನ ದುಂದುಗಾರಿಕೆಯ ಉಮೇದಿನಿಂದಾಗಿ ನಿಮ್ಮ ಮಗಳು ನನಗೆ ಕೊಟ್ಟ ತೊಂದರೆ ಅಷ್ಟಿಷ್ಟಲ್ಲ. ಇಂಥ ಒಂದು ಪ್ರಸಂಗದಲ್ಲಿ ನಾನು ಅತ್ಯಂತ ಹೀನಾಯದ ಕೆಲಸವನ್ನು ಮಾಡಬೇಕಾಯಿತು.

ಸುಮಾರು ೧೨-೧೩ ವರ್ಷಗಳ ಹಿಂದೆ, ನಿಮ್ಮ... ಆ ಇವಳ ಹೆಸರು? ...ಅದೇ ನಿಮ್ಮ ಹಿರೇ ಮೊಮ್ಮಗಳ ಮದುವೆ ಗೊತ್ತಾಯಿತಷ್ಟೆ. ಆ ಕಾಲಕ್ಕೆ ನಾವು ಕೊಡಬೇಕಾದ ಉಡುಗೊರೆಯ ಮಾತು ಬಂತು. ಇವಳು ಸಣ್ಣವಳಿದ್ದಾಗ ತನ್ನ ಅಕ್ಕನು ಮಾಡಿದ ಉಪಕಾರದ ಲೆಕ್ಕವನ್ನು ಗಮನಿಸಿ ಒಂದು ಜೋಡು ಮುತ್ತಿನ ಬಳೆ, ರೇಷ್ಮೆ ಸೀರೆ ಇತ್ಯಾದಿಗಳನ್ನು ಕೊಡಬೇಕು ಎಂದು ಈ ಮಗಳು ಹಟಹಿಡಿದಳು. ಮೇಲೆ ಅದಕ್ಕೆ ಗಾಡಿ ಖರ್ಚನ್ನು ಸೇರಿಸಿದರೆ, ಸುಮಾರು ೨೦೦೦ ರೂ.ನ ವೆಚ್ಚ. ಎಲ್ಲಿಂದ ತರಬೇಕು, ಅಷ್ಟೊಂದು ಹಣವನ್ನು? "ಏನಾದರೂ ಮಾಡಿರಿ. ಇಂಥ ಪ್ರಸಂಗಗಳು ಮೇಲಿಂದ ಮೇಲೆ ಬರುತ್ತವೆಯೆ?" ಎಂದಳೀಕೆ. ಅದೂ ನಿಜ. ಆ ಹುಡುಗಿ ಮದುವೆಯಾಗುವುದು ಒಮ್ಮೆಯೇ ತಾನೇ? ಆದರೆ ಹಣವನ್ನು ಒದಗಿಸುವ ಇಂಥ ಕಷ್ಟ ಪ್ರಸಂಗಗಳನ್ನು ನಿಮ್ಮ ಮಗಳು ತಂದೊಡ್ಡಿದುದು ಒಮ್ಮೆಯೇನಲ್ಲ.

ಅಂತೂ, ಆ ಗಳಿಗೆಗೆ ನನಗೆ ಸಾಲ ಸಂಪಾದನೆಯ ಯಾವ ಮಾರ್ಗವೂ ತೋಚಲಿಲ್ಲ. ಒಂದೆರಡು ದಿನ ಒದ್ದಾಡಿದೆ. ಮದುವೆಯ ದಿನ ಹತ್ತಿರ ಬಂತು. ಮನೆಯಲ್ಲಿಯ ಬಂಗಾರದ ಒಡವೆಯೊಂದನ್ನು ಒತ್ತೆ ಹಾಕುವ ವಿಚಾರವೊಂದೇ ನನಗೆ ಹೊಳೆಯಿತು. ಆದರೆ, ಇವಳು ಅದಕ್ಕೆ ಸುಲಭವಾಗಿ ಒಪ್ಪಿಯಾಳೆ? ಅವುಗಳ ನಾನೇ ಮಾಡಿಸಿಕೊಟ್ಟದ್ದಾದರೂ, ಆಭರಣಗಳು ಸ್ತ್ರೀಯ ಖಾಸಗಿ ಸೊತ್ತುಗಳೇ. ಅದೇನಿದ್ದರೂ ಇವಳು ಕೊಡುವುದಿಲ್ಲ. ಇಷ್ಟೇ ಅಲ್ಲ, ಅಂಥ ವಿಚಾರವು ನನ್ನಲ್ಲಿ ಸುಳಿದದ್ದಕ್ಕೆ ಅರ್ಭಟಿಸದೇ ಬಿಡುವುದಿಲ್ಲ! ಎಂದು ಕಂಡಿತು. ನನ್ನನ್ನು ಈ ರೀತಿ ಗೋಳಾಡಿಸುವ ಇವಳ ಮೇಲೆ ಸೇಡಿನ ಬುದ್ಧಿ ಜಾಗೃತವಾಯಿತು. ಅವಳು ಮನೆಯಲ್ಲಿ ಇಲ್ಲದ ಸಮಯವನ್ನು ಸಾಧಿಸಿ, ಟ್ರಂಕಿನಲ್ಲಿದ್ದ ಬಂಗಾರದ ಟೀಕೆಯನ್ನು ಅಪಹರಿಸಿದೆ. ನಮ್ಮ ಮದುವೇ ಕಾಲದಲ್ಲಿ, ನಿಶ್ಚಯ ವಾಗ್ದಾನದ ಪ್ರಕಾರ ನಾನು ಸ್ವತಹ ಮಾಡಿಸಿ ತಂದ ಆಭರಣವದು. ಬೆಳಗಾಂವಿಯ ಒಬ್ಬ ಸರಾಫನಲ್ಲಿ ಅದನ್ನು ಮರಾಟಮಾಡುವಾಗ ನನ್ನ ಕಣ್ಣಲ್ಲಿ ನೀರು ಬಂದವು. ನನ್ನ ಗೃಹಸ್ಥ ಜೀವದಲ್ಲಿ ನಾನು ಅತ್ತುದೆಂದರೆ ಅದೊಂದೇ ಪ್ರಸಂಗದಲ್ಲಿ. ಆದರೂ ಗಂಡನ ಸ್ಥಿತಿ-ಗತಿ, ಮನೋಭಾವಗಳಿಗೆ ಸ್ವಲ್ಪವೂ ಗಮನಕೊಡದೇ ಇರುವ ಹೆಣ್ಣಿನ ಮೇಲೆ ಇದು ಯೋಗ್ಯ ಪ್ರತೀಕಾರವೆಂದು ಸಮಾಧಾನ ಮಾಡಿಕೊಂಡೆ. ಮದುವೆಯ ಸಮಾರಂಭದಲ್ಲಿ ಅದನ್ನು ಹಾಕಿಕೊಂಡು ಮೆರೆದಾಡುವುದು ತಪ್ಪಿತಲ್ಲ ಎಂಬ ವ್ಯಂಗ್ಯ ನಗೆಯೂ ಮೂಡಿತು. ಆಭರಣವು ಕಣ್ಮರೆಯಾದ ಒಂದು ತಿಂಗಳು, ಅವಳು ಏನೆಲ್ಲ ರಂಭಾಟ ಮಾಡಿದಳೆಂದು ಹೇಳುವುದು ಬೇಡ.

ನನ್ನ ಹಾಗೂ ನಿಮ್ಮ ಮಗಳ ಸಾಂಸಾರಿಕ ಸೌಹಾರ್ದವು ರಿಪೇರಿಯಾಗದಷ್ಟು ಹರಿದು ಹೋದದ್ದೆಂದರೆ ನಮ್ಮ ಮೂರನೆಯ ಮಗುವಿನ ಜಜನದ ಕಾಲಕ್ಕೆ. ಡೆಲಿವರಿಗಾಗಿ ಆ ಬಾರಿ, ಡಾ॥ ದೇಶಪಾಂಡೆ ಅವರ ಮೆಟರ್ನಿಟಿ ಹೋಮ್‌ಗೆ ಹೋಗುವೆನೆಂದಳು. ಆದರೆ ಅನವಶ್ಯಕವಾಗಿ ಹೆಚ್ಚು ಹಣ ವೆಚ್ಚವಾಗುವದೆಂದೂ, ಸಿವಿಲ್ ಆಸ್ಪತ್ರೆಯ ಮುಖ್ಯ ದಾಯಿಯು ನನಗೆ ವಿಶೇಷ ಗುರುತಿನವಳಾದ್ದರಿಂದ, ಅಲ್ಲಿಗೇ ಹೋಗುವುದೆಂದೂ ನಾನು ನಿರ್ಧರಿಸಿದೆ. ಅದೇಕೋ ಈ ವಿಷಯದಲ್ಲಿ ಅವಳು ಹಟ ಹಿಡಿಯಲಿಲ್ಲ. ಆಪರೇಷನ್ ವಿಚಾರದಲ್ಲಿ ಸಿವಿಲ್ ಸರ್ಜನ್‌ರು ಪರಿಣತರಿದ್ದರೆಂಬ ಕಾರಣದಿಂದ ಒಪ್ಪಿದಳೆಂದು ತೋರುತ್ತದೆ.

ದಿನತುಂಬಿ ಹೆರಿಗೆಯ ನೋವು ಕಾಣಿಸಿಕೊಂಡ ಕೂಡಲೇ ಅವಳನ್ನು ದವಾಖಾನೆಗೆ ಸೇರಿಸಿ, ನಡು ಮಧ್ಯಾಹ್ನ ಆಫೀಸಿಗೆ ಹೋದೆ. ಜನನವು ಹೇಗೆ ಸುಸೂತ್ರವಾದೀತೋ ಎಂಬ ದುಗುಡದಿಂದ ಮತ್ತೆ ಸಂಜೆಗೆ ದವಾಖಾನೆಗೆ ಹೋಗಿ ಬಂದೆ, ಇನ್ನೂ ಡೆಲಿವರಿ ಆಗಿರಲಿಲ್ಲ. ೨ ತಾಸು ಕಾಯ್ದು ಮನೆಗೆ ಬಂದು ಮಕ್ಕಳ ಊಟ, ಇತ್ಯಾದಿ ಮುಗಿಸಿ, ಪುನಹ ದವಾಖಾನೆಯಲ್ಲಿ ಕಾಯುತ್ತ ಕುಳಿತೆ. 'ಬೇನೆ'ಗಳು ಆರಂಭವಾದಾಗ ರಾತ್ರಿ ೧೧ ಗಂಟೆಯಾಗಿರಬೇಕು. ಆದರೆ ಮಗು ಹೊರಬರಲೊಲ್ಲದು. ಶಸ್ತ್ರಕ್ರಿಯೆ ಅಗತ್ಯವೆಂದು ಮುಖ್ಯದಾಯಿ ಹೇಳಿದಳು. ಆದರೆ ಸಿವಿಲ್ ಸರ್ಜನ್‌ರು ಮನೆಯಲ್ಲಿರಲಿಲ್ಲ. ಅವರನ್ನು

ಹುಡುಕಲೆಂದು ಟ್ಯಾಕ್ಸಿ ಮಾಡಿಕೊಂಡು ಸಿನಿಮಾ ಮಂದಿರಗಳು, ಇಸ್ಪೇಟಿನ ಕ್ಲಬ್‌ಗಳಲ್ಲಿ ಅಲೆದಾಡಿದೆ. ಸಿಕ್ಕಲೇ ಇಲ್ಲ. 'ಡಾಕ್ಟರರ ಮನೆಗೆ ಮತ್ತೊಮ್ಮೆ ಓಡಿದೆ. ಆಗೂ ಅವರು ಬಂದಿರಲಿಲ್ಲ. ನಿದ್ದೆಗಣ್ಣಲ್ಲಿ ಒಟಗುಟ್ಟುತ್ತ ಬಾಗಿಲು ತೆಗೆದ ಡಾಕ್ಟರರ ಹೆಂಡತಿಯಿಂದ, ಅವರು ಕಾರು ತೆಗೆದುಕೊಂಡು ಬೆಳಗಾಂವಿಗೆ ಹೋಗಿದ್ದು ರಾತ್ರಿಗೆ ಎಷ್ಟೊತ್ತಾದರೂ ಬರುವರೆಂದು ತಿಳಿದುಬಂತು. ಧಡಬಡಿಸಿ, ಇವಳ ಹತ್ತಿರ ಮರಳಿ ಬರುವಷ್ಟರಲ್ಲಿ, ದೇಶಪಾಂಡೆ ಡಾಕ್ಟರರು ಬಂದಿದ್ದರು. ಇಂಜಕ್ಷನ್ ಕೊಟ್ಟರು. ಆಪರೇಷನ್‌ಗೆ ದೊಡ್ಡ ಡಾಕ್ಟರರೇ ಬರಬೇಕು; ಬೇಗ ಆಗದೆ ಹೋದರೆ ತಾಯಿ ಮಗು ಇಬ್ಬರ ಜೀವಕ್ಕೂ ಗಂಡಾತರ ಎಂದರು. ನಾನು ಹೌಹಾರಿದೆ. ಇಡೀ ದವಾಖಾನೆಯನ್ನು ನಡುಗಿಸುವಂತೆ ಕೂಗುತ್ತಿದ್ದ ಇವಳಿಗೆ ಮುಖ ತೋರಿಸುವುದಕ್ಕೂ ಹೆದರಿಕೆಯಾಯಿತು. ಪುನಹ ಸಿವಿಲ್ ಸರ್ಜನ್‌ರ ಮನೆಬಾಗಿಲನ್ನು ಕಾಯುತ್ತ ಹೊರಗೇ ಕುಳಿತೆ. ನನಗೆ ಜೋಂಪು ಹತ್ತಿದ್ದಿತು. ಕಾರಿನ ಸಪ್ಪಳ ಕೇಳಿ ಎಚ್ಚೆತ್ತೆ. ಅಂತೂ ಆಪರೇಷನ್ ಥಿಯೇಟರಿಗೆ ಬಂದು, ಶಸ್ತ್ರ ಕ್ರಿಯೆಗೆ ಅಣಿಯಾದರು. ಅರ್ಧಗಂಟೆಯ ನಂತರ, ಸತ್ತ ಶಿಶುವನ್ನು ಹೊರ ತೆಗೆದರು. ಆದರೆ ಅದರ ತಾಯಿಯನ್ನು ಬದಕಿಸಿದರು. ನಾನು ಸಮಾಧಾನದ ದೊಡ್ಡ ಉಸಿರನ್ನೆಳೆದು ಎಳೆದೆ, ಈ ದುಗುಡದ ರುದ್ರ ನಾಟಕವು ಕೊನೆಗೊಮ್ಮೆ ಮುಕ್ತಾಯಗೊಂಡಿತಲ್ಲ ಎಂದು.

ಇದಿಷ್ಟು ನಡೆದ ಸಂಗತಿ. ಆದರೆ ಈ ವಿಷಯವಾಗಿ ನಿಮ್ಮ ಮಗಳು ನನ್ನ ಮೇಲೆ ದೊಡ್ಡ ಆರೋಪ ಹೊರಿಸಿದಳು. 'ನಾನು ಸಾಯುವ ಸ್ಥಿತಿಯಲ್ಲಿರುವಾಗ ನೀವು ದಕ್ಷತೆ ವಹಿಸಲಿಲ್ಲ. ಡಾಕ್ಟರರನ್ನು ಹೊತ್ತಿಗೆ ಕರತಂದಿದ್ದರೆ, ಮಗು ಅದೂ ಅಪರೂಪದಂತೆ ಹುಟ್ಟಿದ ಹೆಣ್ಣು ಬದುಕುತ್ತಿದ್ದಿತು. ಸಿವಿಲ್ ಸರ್ಜನ್‌ರು ಊರಲ್ಲಿ ಎಲ್ಲಿಯೂ ಸಿಗದ ಮೇಲೆ, ಪರಊರಿಗೆ ಹೋಗಿರಬಹುದೆಂಬ ವಿಚಾರ ನಿಮಗೇಕೆ ಬರಲಿಲ್ಲ? ಬೆಳಗಾಂವಿಯಿಂದ ಅವರು ಬೇಗ ಬರುವಂತೆ ನೀವು ಯಾವ ಪ್ರಯತ್ನ ಮಾಡಿದಿರಿ? ಏನೂ ಇಲ್ಲ. ಸಿವಿಲ್ ಸರ್ಜನ್ ಇಲ್ಲದಾಗ, ದೇಶಪಾಂಡೆ ಡಾಕ್ಟರರನ್ನಾದರೂ ಕರೆಯಬೇಕೆಂದೂ ನಿಮಗನಿಸಲಿಲ್ಲ. ಮೇಟ್ರನ್ ಕಡೆಯಿಂದ ಫೋನ್‌ಮಾಡಿಸಿ, ನಾನು ಕರೆಯಿಸಿಕೊಂಡೆ, ನೀವು ಅಲಕ್ಷ್ಯ ಮಾಡಿದ್ದರಿಂದ ಮಗು ಸತ್ತಿತು. ಆ ಗಳಿಗೆಗೆ ನಾನೂ ಸತ್ತಿದ್ದರೆ, ನೀವು ಪೀಡೆ ಹೋಯಿತೆಂದು ಸಂತೋಷಪಡುತ್ತಿದ್ದಿರಿ. ಹೌದೊ, ಅಲ್ಲವೊ ಆತ್ಮಸಾಕ್ಷಿಯಾಗಿ ಹೇಳಿ! ಹೇಳಿ!! ನೋಡುವ."

ಮಾವಯ್ಯ, ಈ ಮಾತಿಗೆ ನಾನು ಉತ್ತ ಹೇಳಲೇಬೇಕೆಂದು ನಿಮ್ಮ ಮಗಳ ಹಟ. ಏನೆಂದು ಉತ್ತರ ಕೊಡಬೇಕು?

ಆ ಶಿಶು ಸತ್ತಿತೇನೊ ನಿಜ. ಆದರೆ ನನ್ನ ಮನದಾಳದಲ್ಲಿ ಅದು ಬೆಳೆಯುತ್ತಲೇ ಇತ್ತು. ಅದು ಅಂಬೆಗಾಲಿಕ್ಕಿ ನಡೆದಂತೆ, ಹೊಸ್ತಿಲು ದಾಟಿ ರಸ್ತೆಯ ಮೇಲೆ ಬರಿಮೈಯಿಂದ ಓಡಾಡಿದಂತೆ, ಗೊಂಬೆಯನ್ನು ಬದಿಗೆ ಮಲಗಿಸಿಕೊಂಡು ಚುಕ್ಕು ಬಡಿದಂತೆ, ಪುಟ್ಟದಾದ ಪಾಟಿಯನ್ನು ಹಿಡಿದುಕೊಂಡು, ಪುಟಪುಟನೆ ನಡೆಯುತ್ತ, ಮನೆಗೆ ಬಂದವಳೇ 'ಅಪ್ಪಾ' ಎಂದು ನನ್ನನ್ನು ಅಪ್ಪಿಕೊಂಡಂತೆ, ಇಂಥವೇ ಸನ್ನಿವೇಶಗಳನ್ನು ನಾನು ಕಲ್ಪಿಸಿಕೊಂಡುದು

ಅದೆಷ್ಟೋ. ನಾಲ್ಕನೆಯ ಬಾರಿ ಇವಳು ಗರ್ಭವತಿಯಾದಾಗ ಹೆಣ್ಣು ಹುಟ್ಟುವುದೆಂದೇ ಆಶಿಸಿದ್ದೆ. ಅದು ಗಂಡೇ ಆಯಿತಲ್ಲವೆ. ಈ ವಿವೇಕನ ಜನನದ ನಂತರವೊ, ಆ ಸತ್ತ ಶಿಶುವನ್ನು ನೆನೆದು ನಿಮ್ಮ ಮಗಳ ಆಪಾದನೆ ಮುಂದುವರಿಯಿತು. ನನಗೆ ಸಂಸಾರದಲ್ಲಿ ಆಸಕ್ತ ಇಲ್ಲ ಎಂದು ಟೀಕಿಸುವ ಪ್ರಸಂಗ ಬಂದಾಗಲೆಲ್ಲ ಆ ಹಳೆಯ ಘಟನೆಯ ನೆನಪನ್ನು ತೆಗೆಯುತ್ತಿದ್ದಳು. ಒಂದು ದಿನವಂತೂ ಅವಳು "ನೀವೇ ಆ ಹೆಣ್ಣು ಶಿಶುವನ್ನು ಕೊಂದಿರಿ. ಅದರ ಶಾಪ ನಮ್ಮ ಮೇಲಿದೆ, ಅಂತೇ ನಮಗೆ ಇನ್ನೊಂದು ಹೆಣ್ಣು ಹುಟ್ಟಲಿಲ್ಲ" ಎಂದು ಚೀರಿದಳು.

ಆ ಮಾತನ್ನು ಕೇಳಿದ ಗಳಿಗೆಗೆ ನನ್ನಲ್ಲಿ ನಖಶಿಖಾಂತವಾಗಿ ಕೋಪವು ಕುದಿಯಿತು. ಆದರೆ ಏನೂ ಮಾಡುವ ಹಾಗಿರಲಿಲ್ಲ. ನನ್ನ ಜೀವರಸವೆ ಬತ್ತಿದಂತಾಯಿತು. ನನಗೆ ನನ್ನವರೆನ್ನುವರಿರಲಿಲ್ಲ. ನನ್ನ ಜೀವನ ಅತ್ಯಂತ ಬರಡು, ಅತ್ಯಂತ ವ್ಯರ್ಥ ಎಂದು ಕುಸಿದೆ.

ಏನು ಮಾಡಲಿ? ಹೇಗೆ ಆ ದುಸ್ಸಹ ಸ್ಥಿತಿಯನ್ನು ಎದುರಿಸಲಿ? ಮಲಗಿದಾಗ ಇವಳ ಕುತ್ತಿಗೆಯನ್ನು ಹಿಸುಕಿಬಿಡಲೆ? ಛೆ, ಅದಾಗದ ಮಾತು ಅಥವಾ ತವರುಮನೆಗೆ ಕಳಿಸಿ, ನಿಮ್ಮ ಮಗಳು ನನಗೆ ಬೇಡ ಎಂದು ನಿಮಗೆ ಪತ್ರಬರೆದು ಬಿಡಲೆ? ಊಂಹು, ಆಗ ಅವಳೇ ನನ್ನನ್ನು ಮನೆಬಿಟ್ಟು ಹೋಗೆಂದು ಹೇಳಿಯಾಳು. ವಿಚ್ಛೇದನ? ಆದರೆ ಯಾವ ಕಾರಣದಿಂದ? ಜಗಳಾಡುವಳು ಎಂದೆ? ಅಷ್ಟಕ್ಕೆ ವಿಚ್ಛೇದನವನ್ನು ದಯಪಾಲಿಸಲು, ನಮ್ಮ ಜಡ್ಜ್ ಸಾಹೇಬರು ಇಂಗ್ಲೆಂಡ್ ಅಮೆರಿಕಗಳಿಂದ ಬಂದವರಲ್ಲ. ಅಥವಾ, ನಾನೇ ಮನೆ ಬಿಟ್ಟು ಹೋದರೆ ಹೇಗೆ? ಆದರೆ ಬೆಳೆಯುತ್ತಿರುವ ಮುಗ್ಧಮಕ್ಕಳನ್ನು ಬಿಟ್ಟು ಹೋಗುವುದಾದರೂ ಎಲ್ಲಿಗೆ? ಜನ ಏನಂದಾರು...? ಹೀಗೆಲ್ಲ ಯೋಚಿಸುತ್ತ ನಿದ್ರೆಯಿಲ್ಲದ ರಾತ್ರಿಗಳನ್ನು ಕಳೆದೆ. ಆದರೆ "ನೀವೆ ಆ ಮಗುವನ್ನು ಕೊಂದಿರಿ. ಅದರ ಶಾಪ ನಮ್ಮ ಮೇಲಿದೆ" ಎಂಬ ಅವಳ ಆಕ್ರೋಶವು ನನ್ನನ್ನು ಹಿಂಡುತ್ತಲೇ ಇತ್ತು. ಅಖಂಡವಾಗಿ ಹೀಗೆ ಮೂರು ದಿನ ಬೆಂದು ಬೇಗುದಿಗೊಂಡ ಮೇಲೆ ಬೆಳಗಿನ ಜಾವ ನಿದ್ದೆ ಹತ್ತಿತ್ತು, ಎದ್ದುದು ಎಂಟು ಗಂಟೆಗೆ, ಆದರೆ ಅ ಗಳಿಗೆಗೆ ನನ್ನ ತಲೆಯಲ್ಲಿನ ಉರಿಯೆಲ್ಲ ಹೋಗಿಬಿಟ್ಟಿದ್ದಿತು. ಮನಸ್ಸು ಶಾಂತವಾಗಿದ್ದಿತು. ಆಗ ಗೊತ್ತಾಯಿತು. ನಿಮ್ಮ ಮಗಳ ಬಗ್ಗೆ ಇದ್ದ ನನ್ನ ಎಲ್ಲ ಮೃದು, ರೌದ್ರ ಭಾವನೆಗಳೆಲ್ಲವೂ ಆ ಉರಿಯಲ್ಲಿ ಸುಟ್ಟು ಕರಿಕಾಗಿದ್ದವು.

ಆ ದಿನದಿಂದ ಅವಳ ಭಾವನೋದ್ರೇಕಗಳನ್ನು ಎದುರಿಸುವುದು ನನಗೆ ಅಷ್ಟೊಂದು ತಾಪದಾಯಕವೆನಿಸಲಿಲ್ಲ. "ಹಾಳಾಗಲಿ ಈ ಹೆಣ್ಣಿನ ಹಣೆಬರಹವೇ ಇಷ್ಟು. ನನ್ನನ್ನು ಇದಕ್ಕೂ ಹೆಚ್ಚು ಏನು ಮಾಡುವ ಹಾಗಿದ್ದಾಳೆ" ಎಂಬ ಅಲಕ್ಷ್ಯಭಾವನೆ ನನ್ನಲ್ಲಿ ಮೂಡತೊಡಗಿತು.

ನನ್ನ ನಡತೆಯಲ್ಲಿನ ಈ ಬದಲಾವಣೆಯನ್ನು ನಿಮ್ಮ ಬುದ್ಧಿವಂತ ಮಗಳು ಬಲು ಬೇಗ ಕಂಡುಕೊಂಡಳು. ಇನ್ನಷ್ಟು ಬಲವಾಗಿ, ಸೆಣಸತೊಡಗಿದ್ದಳು. ಅಂದರೂ ನಾನು

ಶಕ್ಯವಿದ್ದಷ್ಟು ಹಿಂದುಳಿದೆ. ಆಗ ಇವಳು ಮಕ್ಕಳ ಮೇಲೆ ಪರ್ಯಾಯವಾಗಿ ಸೇಡನ್ನು ತೆಗೆಯುತ್ತಿದ್ದುದು ನನಗೆ ದುಸ್ಸಹವಾಯಿತು. ಬೆಳೆಯುವ ಹುಡುಗರ ಮೇಲೆ ಅದರ ಅನಿಷ್ಟ ಪರಿಣಾಮವಾಗುವುದಲ್ಲಾ ಎಂದು ಚಿಂತೆಗೀಡಾದೆ. ಇಂಥ ವಿಷಮಪರಿಸ್ಥಿಯನ್ನು ತಪ್ಪಿಸುವುದಕ್ಕೆ ಒಂದೆ ಉಪಾಯ ತೋಚಿತು. ಅದೆಂದರೆ ನನ್ನ ವಿಚಾರ, ನನ್ನ ಸ್ಥಾನ ಇವನ್ನು ಬದಿಗಿರಿಸಿ. ಅವಳ ಮನಸ್ಸಿನ ಒಲವಿನಂತೆಯೇ ನಡೆಯಬೇಕು ಎಂದು. ಅಂದಿನಿಂದ ನಾನು ನಿಮ್ಮ ಮಗಳಿಗೆ ಸಂಪೂರ್ಣ ಶರಣಾಗತನಾದೆ. ಸ್ವಂತಕ್ಕೆ ಯಾವ ಸುಖದುಃಖದ ಲೇಪವಿಲ್ಲದೆ ಅವಳ ಆಕಾಂಕ್ಷೆ, ಅಭಿರುಚಿ, ಬೇಕು ಬೇಡ ಇವುಗಳಿಗೆ ಅನುಗುಣವಾಗಿಯೇ ವರ್ತಿಸತೊಡಗಿದೆ. ನಮ್ಮ ನಾನಿಯ ಮದುವೆಯ ಕಾಲಕ್ಕೆ ಈ ನಿರ್ಲಿಪ್ತ ಅಧೀನತೆಯನ್ನು ನೀವು ಗುರುತಿಸಿಯೇ ಇದ್ದೀರಿ.

ನನ್ನ ಸ್ವಾತಂತ್ರ್ಯವನ್ನು ಈ ರೀತಿ ಕಳೆದುಕೊಂಡ ಮೇಲೆ ನನ್ನ ಹೊರಗಿನ ಬದುಕೂ ಎಷ್ಟೊಂದು ಪರತಂತ್ರವಾಗಿದೆಯೆಂಬುದರ ಅರಿವು ಕ್ರಮೇಣ ಆಗತೊಡಗಿತು. ಕಚೇರಿಯಲ್ಲಿ ನಾನು ಹೆಡ್‌ಕ್ಲಾರ್ಕ್ ಎಂಬ ತ್ರಿಶಂಕು ಸ್ಥಾನದಲ್ಲಿದ್ದುದರಿಂದ, ಜವಾಬ್ದಾರಿಯನ್ನು ಎಳ್ಳಷ್ಟು ಹೊತ್ತುಕೊಳ್ಳದ ಕ್ಲಾರ್ಕ್ ಜನರು ಮಾಡಿದ ತಪ್ಪಿನ ಹೊಣೆಯೆಲ್ಲ ನನ್ನದು. "ನೀವು ಚೆನ್ನಾಗಿ ನೋಡಲಿಲ್ಲವೇಕೆ? ಯಾತಕ್ರೀ, ನೀವು ಹೆಡ್‌ಕ್ಲಾರ್ಕ್ ಆಗಿರೋದು?" ಎಂಬ ಬೈಗಳನ್ನು ಸಾಹೇಬನಿಂದ ಕೇಳುವಾಗ. ನನ್ನ ಅತಂತ್ರ ಸ್ಥಿತಿಯ ಅರಿವಾಗುತ್ತಿದ್ದಿತು. ಈ ಸಾಹೇಬನೆಂಬವನ ಬೇಕು ಬೇಡಗಳನ್ನು ಅನುಸರಿಸಿಯೇ ದಿನದ ೭-೮ ತಾಸುಗಳನ್ನು ನಾನು ಕಳೆಯುತ್ತಿದ್ದೇನಲ್ಲವೆ? ನಾನು ಮುಂದಿರಿಸಿದ ಕಾಗದ ಪತ್ರಗಳನ್ನು ಸಾಹೇಬನು ಪರಿಶೀಲಿಸುತ್ತಿದ್ದ ಗಳಿಗೆಯಲ್ಲಿ, ನನಗೆ ಜಲಬಾಧೆಯುಂಟಾದರೆ, 'ಆಮೇಲೆಯೇ ಹೋದರಾಯಿತು. ಫಕ್ಕನೆ ಅವರು ಕರೆದರೆ?" ಎಂದು ಭಾವಿಸುವಷ್ಟು ನಾನು ಸ್ವತಂತ್ರ ವೃತ್ತಿಯನ್ನು ಕಳೆದುಕೊಂಡುಬಿಟ್ಟಿದ್ದೆ.

ಕಚೇರಿಯಲ್ಲಿ ಹೀಗೆ, ಮನೆಯಲ್ಲಂತೂ ಹಾಗೆ, ದೇವರೇ ಬಂದು "ಸಾಹೇಬ ಮತ್ತು ಹೆಂಡತಿ ಇವರಿಬ್ಬರಿಂದ ನಿನ್ನನ್ನು ಮುಕ್ತ ಮಾಡಿದ್ದೇನೆ. ನಿನಗೆ ಬೇಕಾದಲ್ಲಿಗೆ ಹೋಗು, ಬೇಕಾದ ಹಾಗೆ ಇರು" ಎಂದು ಹೇಳಿದ್ದಾದರೆ ಹಾಗೆ ದೊರಕಿದ ಸ್ವಾತಂತ್ರ್ಯವನ್ನು ಉಪಭೋಗ ಮಾಡುವ ಶಕ್ತಿಯಾದರೂ ನನ್ನಲ್ಲಿ ಉಳಿದಿದೆಯೆ ಎಂಬ ಸಂದೇಹ ಬರತೊಡಗಿತು.

ಏನಿದ್ದರೂ ನೌಕರಿಯೆಂಬ ಗಾಣದಿಂದ ಬಿಡುಗಡೆಗಾಗಿ ನಾನು ಎಷ್ಟೊಂದು ಕಾಯ್ದಿದ್ದೆ! ಆ ಸಮಯ ಹತ್ತಿರ ಬಂದಂತೆಲ್ಲ ನನಗಾದ ಸಂಭ್ರಮ ಹೇಳತೀರದು. ಇಡೀ ಹಗಲಿನ ವೇಳೆಯನ್ನು ನನ್ನ ಮನಸ್ಸಿಗೆ ಬಂದಂತೆ, ಹಾಯಾಗಿ ಕಳೆಯಬಹುದು ಎಂದುಕೊಂಡೆ. ಅಂತೂ ನೌಕರಿಯಿಂದ ಒಮ್ಮೆ ಮುಕ್ತನಾದೆ.

ಮುಂದೇನು? ಮನೆಯಲ್ಲಿ ಇಡೀ ದಿನ ಕುಳಿತಿರುವುದೆ? ಕುಳಿತೇನೇನೋ ನಿಜ. ಆದರೆ ಊದುವುದನ್ನು ಬಿಟ್ಟು ಒದರುವುದನ್ನು ಕೊಂಡಂತಾಯಿತು! ಗಂಡಸು

ದುಡಿಯುತ್ತಿದ್ದಾಗಲೆ ಮರ್ಯಾದೆಯನ್ನು ಕೊಡದಿದ್ದ ಹೆಣ್ಣು, ಮನೆ ಹಿಡಿದು ಕುಳಿತಾಗ ಮಾನಿಸಿಯಾಳೆ? ಮನೆಯಲ್ಲಿ ನಾನು ಮತ್ತಷ್ಟು ಪರಾಧಿನನಾದೆ. ಆಫೀಸಿನಲ್ಲಿ ದಿನಕ್ಕೆ ೬-೭ ಬಾರಿ ಚಹ ಕುಡಿದು ರೂಢಿ. ಸಿಪಾಯಿಯ ಕಡೆಯಿಂದ ಹೇಳಿಕಳಿಸಿ ೩ ಮಿನಿಟಿನಲ್ಲಿ ಬರುವ ಚಹಾಕ್ಕೆ, ಮನೆಯಲ್ಲಾದರೆ ಅರ್ಧಮುಕ್ಕಾಲು ಗಂಟೆ ಕಾಯಬೇಕಾಗುತ್ತಿತ್ತು. ಇದೇನು ದೊಡ್ಡ ವಿಷಯವೆಂದು ನಾನು ಹೇಳುತ್ತಿಲ್ಲ. ಪೆನ್ಷನ್ ಹೊಂದಿದ ಮೇಲೆ ಮನುಷ್ಯನ ಸ್ಥಿತಿ ಹೀಗಾಗುವುದಕ್ಕೆ ಒಂದು ನಿದರ್ಶನವಿದು.

ಬೆಳಿಗ್ಗೆ ತಿರುಗಾಡಲಿಕ್ಕೆ ಹೋಗುವುದು. ಪೆನ್ಷನರರ ವ್ಯಾಯಾಮ ಸಾಧನೆಯ ಮಾರ್ಗವಷ್ಟೆ. ನಾನೂ ಹೋಗುತ್ತಿದ್ದೆ. ಅದರ ಕಾರಣ ಮನೆಯಲ್ಲಿಯ ಬೆಳಗಿನ ಕಾಲದ ಗೌಜುಗದ್ದಲವನ್ನು ತಪ್ಪಿಸುವುದಕ್ಕೆ. ಮನೆಗೆ ಬಂದು ತುಸು ಹೊತ್ತಿನ ಮೇಲೆ. ಶಾಲೆಗೆ ಹೋಗುವ ವಿವೇಕನ ಊಟದ ಸಮಯಕ್ಕೆ ನನಗೆ ನಿದ್ರೆ ಬರುತ್ತಿತ್ತು. ನಾನೂ ಊಟ, ವಾಮಕುಕ್ಷಿಗಳನ್ನು ಮುಗಿಸಿ, ಏನಾದರೂ, ಓದುತ್ತಿದ್ದೆನಾದರೂ ವೇಳೆ ಕಳೆಯುವುದು ಕಷ್ಟವೆನಿಸಿತು. ಒಂದೆರಡು ಬಾರಿ ಕಚೇರಿಯ ಕಡೆಗೆ ಹೋದೆ, ಆದರೆ ಸಾಹೇಬನಿಂದ ಹಿಡಿದು ಜ್ಯೂನಿಯರ್ ಕ್ಲಾರ್ಕ್‌ನವರೆಗೂ ಹಿಂದನ ಫೈಲುಗಳ ಆ ಈ ವಿಷಯಗಳನ್ನು ಕೆದಕಿ, ನನ್ನನ್ನು ಕೇಳುವವರೇ! ಮಳೆ ನಿಂತರೂ ಮರದ ಹನಿ ನಿಲ್ಲಲಿಲ್ಲವೆಂದುಕೊಂಡು, ಅಲ್ಲಿಗೆ ಹೋಗುವುದನ್ನೆ ನಿಲ್ಲಿಸಿದೆ.

ಮೊನ್ನೆ ಮೊನ್ನೆ ನಮ್ಮ ಹಿರೇಸೊಸೆಯನ್ನು ಮುಂಬಯಿಯಲ್ಲಿರುವ ಅವಳ ಸೋದರಮಾವನ ಮನೆಗೆ ಕಳಿಸಿ ಬರಲೆಂದು ಹೋಗಿದ್ದೆನಷ್ಟೆ. ಮುಂಬಯಿಯಲ್ಲಿಯೆ, ಐ.ಐ.ಟಿ. ಹಾಸ್ಟೆಲಿನಲ್ಲಿ ಇರುತ್ತಿದ್ದ ಬಾಲಚಂದ್ರನನ್ನು ನಾನು ನೋಡಿಕೊಂಡು ಬರಬೇಕೆಂಬುದು ನಿಮ್ಮ ಮಗಳ ಅಪೇಕ್ಷೆಯಾಗಿದ್ದಿತು.

ಗಾಡಿಯಲ್ಲಿ ಕುಳಿತಾಗ, ಸೊಸೆಯು ತಾನು, ತನ್ನ ಗಂಡ ಬೇರೆ ಮನೆಯಲ್ಲಿ ಇರಬೇಕೆನ್ನುತ್ತೇವೆ; ಇಲ್ಲವೆ ವರ್ಗಮಾಡಿಸಿಕೊಳ್ಳುತ್ತೇವೆ; ಎಂದು ರಾಗ ಎಳೆದಳು. ಅದರ ಕಾರಣವನ್ನು ಅವಳು ಬಾಯಿ ಬಿಟ್ಟು ಹೇಳಿದಿದ್ದರೂ ತನ್ನ ಅತ್ತೆಯೊಡನೆಯ ಘರ್ಷಣೆಯೇ ಕಾರಣವೆಂಬುದು ಸ್ಪಷ್ಟವಿತ್ತು. ಯಾರು, ಎಲ್ಲಿ ಇದ್ದರೆ ನನಗೆ ಏನಾಗಬೇಕಾಗಿದೆ? ಆದ್ದರಿಂದ ನಾನು ಅವಳಿಗೆ ಏನು ಉತ್ತರ ಹೇಳಲಿಲ್ಲ.

ಈ ಮುಂಚೆ ಒಂದೆರಡು ಬಾರಿ ಬಂದಿದ್ದೆನಾದರೂ ಅಲ್ಲಿಯ ಅಸಂಖ್ಯ ಜನಸಮೂಹ ಮತ್ತು ಅವರ ಬದುಕಿನ ವೈವಿಧ್ಯ ಇವು ನನ್ನ ಜೀವನ ದೃಷ್ಟಿಯನ್ನೇ ಬದಲಿಸಿದುವು. ನಮ್ಮೂರಿನ ಕಚೇರಿ, ಮನೆ, ಪೇಟೆ, ಇವನ್ನು ಬಿಟ್ಟು ವಿಶಾಲವಾದ ಪ್ರಚಂಚ ಇದ್ದುದರ ಕಲ್ಪನೆ ಬಂದುದು ಆಗಲೇ. ನಾನು ಮೈಥಳಿ ಬಿಟ್ಟು ಮುಂಬಯಿಯ ವಿವಿಧ ಉಪನಗರಗಳಲ್ಲಿ, ಹರೆಯದ ಹುಡುಗನಂತೆ ಸ್ವಚ್ಛಂದವಾಗಿ ತಿರುಗಾಡಿದೆ. ನನ್ನ ನೌಕರಿಯ ಅವಧಿಯಲ್ಲಿಯೂ, ಅನೇಕ ಊರುಗಳನ್ನು ಸುತ್ತಿದ್ದೆ. ಆದರೆ ಅದು ಕಚೇರಿಯ ಕೆಲಸದ ಸಲುವಾಗಿ ಫಿರ್ತಿಯ ಆ ದಿನಗಳನ್ನು ನಮ್ಮ ಸಾಹೇಬನ ನೆರಳಿನಂತೆ ಕಳೆಯುವಾಗ ನನಗೆ ಯಾವ ಸ್ವಾತಂತ್ರ್ಯವೂ

ಇರಲಿಲ್ಲ. ಸೊಗಸಂತೂ ಇರಲೇ ಇಲ್ಲ. ಮುಂಬಯಿಯಲ್ಲಿ ಕಳೆದ ಕೆಲವು ದಿನಗಳಿಂದಾಗಿ, ನನ್ನಲ್ಲಿ ಎಂಥದೋ ಆತ್ಮ ವಿಶ್ವಾಸ ಮೂಡಿತು. ಉತ್ಸಾಹವೂ ತುಂಬಿತು.

ಅದಕ್ಕಿಂತ ಹೆಚ್ಚಿನದೆಂದರೆ, ನನ್ನ ಬೀಗರ ಮನೆಯಲ್ಲಿ ನನಗೆ ದೊರೆತ ಆದರ. ಅವರ ಹುಡುಗಿಯ ಮಾವ ಎಂದಲ್ಲ. ನಾನೊಬ್ಬ ಹಿರಿಯವ ಎಂಬ ಕಾರಣದಿಂದ. ಅವರ ಮಕ್ಕಳಲ್ಲಿ ಯಾರಾದರೊಬ್ಬರು ನನಗೆ ಊರು ತೋರಿಸಲೆಂದು (ಪ್ರತಿ ದಿನ ಪಾಳಿ ಹಚ್ಚಿ) ನನ್ನೊಟ್ಟಿಗೆ ಬರುತ್ತಿದ್ದರು! ಆ ಮನೆಯ ಯಜಮಾನಿತಿಯಂತೂ ಅಂತಃಕರಣದ ಪ್ರತಿಮೂರ್ತಿಯೇ ಆಗಿದ್ದಳು.

ಹಾಸ್ಟೆಲ್‌ನಲ್ಲಿ ಇದ್ದ ಬಾಲಚಂದ್ರನಯ ಪಿತೃದರ್ಶನಕ್ಕಾಗಿ ಒಮ್ಮೆ ಬಂದು, ತನ್ನ ತಾಯಿಯು ಕೊಟಿದ್ದ ತಿನಿಸಿನ, ಇತರ ಸಾಮಾನುಗಳನ್ನು ಕೊಂಡೊಯ್ದನು. 'ಆದಿತ್ಯವಾರ ದವರೆಗೂ ಬಿಡುವಿಲ್ಲ. ಆಮೇಲೆ ಕರೆದುಕೊಂಡು ಹೋಗುವೆ' ಎಂದನು. ಕಳೆದ ವರ್ಷ ಅವನು ಮುಂಬಯಿಗೆ ಹೊರಟು ನಿಂತಾಗ "ನಾನಿಯ ಶಿಕ್ಷಣಕ್ಕಾಗಿ ಹೊಲ ಮಾರಿದಿರಿ. ಕೊನೆಗೆ ಅವನು ಆದದ್ದು ಗೊಡ್ಡು ಬಿ.ಎಸ್‌ಸಿ. ನನಗೆ ನನ್ನ ಸ್ಕಾಲರ್‌ಶಿಪ್ ಇದೆ. ನಿಮ್ಮ ಹಂಗು ನನಗಿಲ್ಲ" ಎಂದು ಸಿಕ್ಕಹಾಗೆ ಉದ್ಧಟತನದಿಂದ ಒದರಾಡಿದ್ದ ಮಗನೀತ. ಅಂತೆಯೇ ಹೇಳಿದೆ :

"ಚಿಂತೆಯಿಲ್ಲ. ನೀನು ಅರಾಮ ಇದ್ದಿ ಹೌದಲ್ಲೊ. ಏನಾದರೂ ಬೇಕಿದ್ದರೆ ತಿಳಿಸು. ಇಕೊ ನಿನ್ನ ಹೆಸರಿಗೆ ೧೦೦೦ ರೂ. ಫಿಕ್ಸ್ ಡಿಪಾಜಿಟ್ ಇಲ್ಲಿಯ ಬ್ಯಾಂಕಿನಲ್ಲಿ ಇರಿಸಿದ್ದೇನೆ. ಅದರ ರಸೀತಿ ಇದು, ಜೋಪಾನವಾಗಿ ಇಟ್ಟುಕೊ. ನಾನು ನಿವೃತ್ತನಾಗುವಾಗ ನನ್ನ ಸಹೋದ್ಯೋಗಿಗಳು ಕೆಲವು ಶಿಕ್ಷಕ ಜನರು ಕೂಡಿಸಿ ಅರ್ಪಿಸಿದ ಹಮ್ಮಿಣೆಯ ಹಣವದು" ಎಂದು ಹೇಳಿ ಅವನ ನಿರೂಪ ತೆಗೆದುಕೊಂಡೆ.

"ಬಂದು ನಾಲ್ಕು ದಿನವಾಯಿತು. ನಾನು ಊರಿಗೆ ಹೊರಡುವೆನೆ"ಂದಾಗ ನನ್ನ ಬೀಗರು ಮತ್ತೂ ೩ ದಿನ ನಿಲ್ಲಿಸಿಕೊಂಡು ರವಿವಾರ ಬೆಳಗಿನ ಗಾಡಿಗೇನೆ ಹೋಗಲು ಅನುಮತಿ ಕೊಟ್ಟರು. ಹೊರಡುವ ಕಾಲಕ್ಕೆ ಮಕ್ಕಳೆಲ್ಲರೂ ನನಗೆ ನಮಸ್ಕಾರ ಮಾಡುತ್ತಿದ್ದಾಗ, ನಮ್ಮ ಸೊಸೆಗೆ ಅದೆಲ್ಲ ಮೋಜಿನದಾಗಿ ಕಂಡಿತು. ನಾನು ಈ ಬಗೆಯ ಆದರವನ್ನು ಕಾಣುವುದು ಅಪೂರ್ವವೆಂಬ ಭಾವದಿಂದ ಕಣ್ಣನ್ನು ಅರಳಿಸಿ ತಾನೂ ನಮಸ್ಕಾರ ಮಾಡಿದಳು. ಸ್ಟೇಷನ್ನಿಗೆ ಮಕ್ಕಳೆಲ್ಲರೂ ಕಳಿಸಲು ಬಂದು "ಕಾಕಾ, ಇನ್ನು ಯಾವಾಗ ಬರ್‍ತೀರಿ?" ಎಂದು ಕೇಳಿದಾಗಲಂತೂ, ನನ್ನ ಗಂಟಲು ಭಾರವಾಗಿ ಮಾತೇ ಹೊರಡಲಿಲ್ಲ.

ಊರಿಗೆ ಮರಳಿ ಬಂದ ಮೇಲೆ ನನಗೆ ಈ ಪೆನ್ಷನ್ ಜೀವನ ಬೇಸವನ್ನುಂಟು ಮಾಡಿತು, ದುಃಸಹವೂ ಆಯಿತು. ಬೇರೆ ಯಾವುದಾದರೂ ನೌಕರಿ ಹಿಡಿಯಲೆ ಎಂದು ಯೋಚಿಸುತ್ತಿದ್ದೆ. ಆಗ ನಿಮ್ಮ ಮಗಳು "ಅಂದಹಾಗೆ ನೀವು ಮಹಿಳಾ ಮಂಡಳದ ಕಚೇರಿ ಕೆಲಸವನ್ನು ಏಕೆ ಮಾಡಬಾರದು? ವರ್ಷಕ್ಕೆ ಇಂತಿಷ್ಟು ಅಂತ ಗೌರವಧನ ಕೊಡಿಸಬಹುದು.

ಸಂಸಾರಕ್ಕೆ ಉಪಯೋಗವಾಗುತ್ತದೆ" ಎಂದಳು. ಎಂದರೆ ಇವಳು ಉಪಾಧ್ಯಕ್ಷಿಣಿ, ನಾನು ಕಾರಕೂನ ಎಂಬಂತೆ ಕೆಲಸ ಮಾಡಬೇಕು! ನಾನು ಅದನ್ನು ಬಾಯಿ ಬಿಟ್ಟು ಹೇಳದಿದ್ದರೂ ನನ್ನ ತೀವ್ರ ಅಸಮ್ಮತಿಯನ್ನು ನನ್ನ ಮುಖಚರ್ಯೆಯಿಂದಲೆ ಆಕೆ ಊಹಿಸಿರಬೇಕು. ಅಂತೆಯೇ ಹೇಳಿದಳು:

"ನಾನು ಎಲ್ಲ ಯೋಚಿಸಿದ್ದೇನೆ. ನೀವು ಕ್ಲಾರ್ಕ್ ಅಂತ ಬರುವುದಿಲ್ಲ. Office secretary ಎಂದು, ಅಲ್ಲದೆ ತಿಂಗಳು ತಿಂಗಳು ಪಗಾರವೆಂದೇನೂ ನಿಮಗೆ ಕೊಡುವುದಿಲ್ಲ ಎಂದಮೇಲೆ ನೀವು ಮಹಿಳಾ ಸಂಘದ ನೌಕರರೇನಾಗುವುದಿಲ್ಲ. ಇದೇನು ನನ್ನ ಸೂಚನೆಯಲ್ಲ ಮತ್ತೆ ನಮ್ಮ ಅಧ್ಯಕ್ಷಿಣಿ ತಾವಾಗಿ ಹೇಳಿದ್ದು.'

"ಅವರು ಹಾಗೆ ಹೇಳಿದಾಗ, ನಿನಗೇನೂ ಅದು ಮರ್ಯಾದೆಗೇಡು ಎಂದು ಎನಿಸಲಿಲ್ಲವೆ?" ಎಂದು ನಾನು ಕೇಳಿದೆ. "ಯಾಕೆ ಅನಿಸಬೇಕು? ಮನೆಯಲ್ಲಿ ನೀವು ಹೇಗೂ ಖಾಲಿ ಕೂತಿದ್ದೀರಿ. ನಮ್ಮ ಮನೆಯಲ್ಲೆ ಈ ಕಚೇರಿ ಕೆಲಸ ಮಾಡಬಹುದು. ನಮಗೂ ನಿಮ್ಮ ಆಫೀಸು ಅನುಭವದ ಮಾರ್ಗದರ್ಶನ ಸಿಕ್ಕು ಸಂಘದ ಕೆಲಸ ಚೊಕ್ಕಟವಾಗಿ ನೆರವೇರಬಹುದು. ಮೇಲೆ ಸ್ವಂತಕ್ಕೂ ಪ್ರಯೋಜನ ತಾನೆ" ಎಂದು ನಿಮ್ಮ ಮಗಳು ಉತ್ತರ ಕೊಟ್ಟಳು.

ಹಲವಾರು ದಿನಗಳಿಂದ ಗಂಭೀರವಾಗಿ ಯೋಚಿಸುತ್ತಿದ್ದ ನನ್ನ ಸಮಸ್ಯೆಯು ತಾನಾಗಿ ಬಗೆಹರಿಯಿತು! ಅರ್ಥಾತ್ ಈ ಮನೆಯಲ್ಲಿ ಇನ್ನು ಹೆಚ್ಚು ಕಾಲ ನಾನು ಇಲ್ಲಿ ಏಕೆ ಇರಬೇಕು? ಮಕ್ಕಳಿಬ್ಬರೂ ತಮ್ಮ ದಾರಿ ಕಂಡುಕೊಂಡಿದ್ದಾರೆ. ಮೂರನೆಯವನಾದ ವಿವೇಕನ ಶಿಕ್ಷಣಕ್ಕಾಗಿ ನನ್ನ ಪ್ರಾವಿಡೆಂಟ್ ಫಂಡ್ ಮೀಸಲಿದೆ. ಇನ್ನು ಇವಳು! ಪಿತಾ ರಕ್ಷತಿ ಕೌಮಾರೇ, ಭರ್ತಾ ರಕ್ಷತಿ ಯೌವನೇ ರಕ್ಷಂತಿ ಸ್ಥವಿರೇ ಪುತ್ರಾಃ" ಎಂದು ಹೇಳುವ ಹಾಗೆ ನನ್ನ ಪರೋಕ್ಷದಲ್ಲಿ ಅವಳನ್ನು ನೋಡಿಕೊಳ್ಳಲು ಮೂವರು ಗಂಡುಮಕ್ಕಳಿದ್ದಾರೆ. ಮುಖ್ಯ ಅವಳನ್ನು ರಕ್ಷಿಸುವ ಜವಾಬ್ದಾರಿಯನ್ನು ಮುಗಿಸಬಯಸುತ್ತೇನೆ, ಗೃಹಸ್ಥ ಜೀವನದ ನಿರ್ವಹಣೆಯಲ್ಲಿ ನನ್ನ ಕೈಲಾದಷ್ಟು ಯೋಗ್ಯತೆಯಿದ್ದಷ್ಟು ಶ್ರಮಿಸಿದ್ದೇನೆ. ಪ್ರಕೃತ ಮನೆಬಿಟ್ಟು ಹೊರಟಿದ್ದೇನೆ.

ಇವತ್ತಿನಿಂದ ನನ್ನ ಪಾಲಿಗೆ ಹೆಂಡತಿ ಎಂಬುವಳು ಇಲ್ಲ, ಅವಳಿಗೆ ಸಂಬಂಧಿಸಿದ ಯಾವ ವ್ಯಕ್ತಿಯೇ ಆಗಲಿ, ವಸ್ತುವೆ ಆಗಲಿ ನನಗೆ ಬೇಡ. ಇದುವರೆಗಿನ ನನ್ನ ಬದುಕಿನ ಯಾವ ಸಂಬಂಧವನ್ನೂ ಇಟ್ಟುಕೊಳ್ಳದೆ, ಹೊಸ ಜೀವನವನ್ನು ನಡೆಸಬೇಕೆಂದಿದ್ದೇನೆ. ಯಾವ ಹೆದರಿಕೆ, ಬಂಧನಗಳಿಲ್ಲದೇ. ನಾನು ಹೀಗೆ ಹೊರಟು ಹೋಗುವಲ್ಲಿ ಅಪರೋಕ್ಷವಾಗಿ ಇವಳಿಗೂ ಅದರಿಂದ ಪ್ರಯೋಜನವಿದೆ :

(೧) ನಾನು ಇಲ್ಲಿಂದ ಕಣ್ಮರೆಯಾದ ಮೇಲೆ ಅವಳಿಗೆ ಗಂಡನೆಂಬ ಪ್ರಾಣಿಯ ಮಹತ್ವದ ಅರಿವು ಸ್ವಲ್ಪವಾದರೂ ಆದೀತು. ತನ್ನ ನಡತೆಯ ಬಗ್ಗೆ ಕಿಂಚಿತ್ತಾದರೂ

ಪಶ್ಚಾತ್ತಾಪಡುವಳೆಂದು ಭಾವಿಸುವೆ. ಅದರಿಂದ ಅವಳಿಗೆ ಮುಂದಿನ ಜನ್ಮದಲ್ಲಿ ಆಗುವ ಪತಿವಿಯೋಗ ಮುಂತಾದ ಅನರ್ಥಗಳು ತಪ್ಪಬಹುದು!

(೨) ಅವಳಿಗೆ ಇಷ್ಟು ವಯಸ್ಸಾದರೂ ಪರಮಾರ್ಥದಲ್ಲಿ ಆಸಕ್ತಿ, ಹುಟ್ಟಲಿಲ್ಲ. ಇನ್ನಾದರೂ ಅವಳು ದೇವರು, ಧರ್ಮದತ್ತ ಸ್ವಲ್ಪಾದರೂ ಮನಸ್ಸು ಹಾಕಿಯಾಳು ಎಂದು ನನ್ನ ಎಣಿಕೆ.

(೩) ಮಹತ್ವದ್ದೆಂದರೆ, ಅವಳು ಸಾಯುವವರೆಗೂ ಮುತ್ತೈದೆಯಾಗಿಯೆ ಉಳಿಯಬಹುದು! ಎಂದರೆ ವಿಧವೆ ಅಥವಾ ಸಕೇಶಿಯಾಗುವ ಭಯವೆ: ಇಲ್ಲ. ಏಕೆಂದರೆ ನಾನು ಇಲ್ಲಿಂದ ಹೋದಮೇಲೆ, ನನ್ನ ಬದುಕು ಸಾವಿನ ವಿಚಾರವು ಗೊತ್ತಾಗದಷ್ಟೆ. ಆ ಮೂಲಕ ಅವಳ ಆ ನೀಳ ಕುಂಕುಮ, ಥಳಕಿನ ಬೆಂಡೋಲೆ ಮತ್ತು ಕೇಶವಿನ್ಯಾಸ ಇವನ್ನು ಯಥಾವತ್ತಾಗಿ ಉಳಿಸಿಕೊಳ್ಳಬಹುದು. ನಿಮ್ಮ ಮಗಳ ನಡತೆಯ ಬಗ್ಗೆ ನನಗೆ ಎಷ್ಟೇ ಅನಾದರವಿದ್ದರೂ, ಅವಳ ಆರೋಗ್ಯಪೂರ್ಣ ಮುಖಮುದ್ರೆಯು ವಿರೂಪವಾಗುವುದನ್ನು ನಾನು ಸಹಿಸಲಾರೆ.

ಇಲ್ಲಿಂದ ಹೊರಟ ಮೇಲೆ. ಎಲ್ಲಿಗೆ ಹೋಗಬೇಕು, ಏನು ಮಾಡಬೇಕು ಎಂಬುದನ್ನು ನಿರ್ಧರಿಸಲಿಲ್ಲ. ನಾನು ಆತ್ಮಹತ್ಯೆಮಾಡಿಕೊಂಡೆನೆಂದಾಗಲೀ ಸನ್ಯಾಸಿಯಾದೆನೆಂದಾಗಲೀ ನೀವಾರೂ ತಿಳಿಯುವುದು ಬೇಡ. ಕ್ಷೇತ್ರ ತೀರ್ಥಗಳಿಗೆ ಹೋಗಿ, ಭಜನೆ, ಧ್ಯಾನವನ್ನು ಮಾಡುವ ಹವ್ಯಾಸ ಎಂದಿಗೂ ಇಲ್ಲ. ಕಾಶಿಯೊ, ಶಿರಡಿಯೋ, ಪಾಂಡಿಚೇರಿಯೊ ಇವಾವೂ ನನ್ನ ಗಮನದಲ್ಲಿಲ್ಲ. ನನಗೆ ಊರೂರು ತಿರುಗಬೇಕಾಗಿದೆ. ಅನ್ಯಜಗತ್ತು ಹೇಗಿದೆ ಎಂಬುದನ್ನು ನೋಡಬೇಕಾಗಿದೆ. ನನಗೆ ನಿತ್ಯ ಜೀವನದ ಬೇಕು, ಬೇಡಗಳು ಸದಾ ಇರುವುದರಿಂದಲೂ, ಮುಂದಿನ ಜೀವನವು ಸುಖವಾಗಿಯೇ ಕಳೆದೀತೆಂದು ನಂಬಿ ಹೊರಟಿದ್ದೇನೆ.

ಈ ಸಂಸಾರ ತ್ಯಾಗದಿಂದ ನಾನು ಯಾವ ಪುರುಷಾರ್ಥವನ್ನೂ ಸಾಧಿಸಿದುಂತಾಗುವುದಿಲ್ಲ ಎಂಬುದನ್ನು ಬಲ್ಲೆ. ಆದರೆ ನನಗೆ ನನ್ನಷ್ಟಕ್ಕೆ ಬಾಳುವುದು ಬೇಕಾಗಿದೆ. ಯಾವ ನಿರ್ಬಂಧ, ಜಂಜಡಗಳಿಲ್ಲದೆ, ನನಗೆ ಬೇಕೆನಿಸಿದಾಗ ಉಂಡು, ತಿಂದು, ಹೋಗಬೇಕೆನಿಸಿದಲ್ಲಿ ಹೋಗುವುದು ಬೇಕಾಗಿದೆ. ನನಗೆ ಬೆಳಗಿನ ಒಂಬತ್ತು ಗಂಟೆಗೇ ನಿದ್ರೆ ಮಾಡಬೇಕೆನಿಸಿ, ಒರಗಿದರೆ, ಯಾರ ಅಡ್ಡಿಯೂ ಇಲ್ಲದಿದ್ದ ವಾತಾವರಣದಲ್ಲಿ ಜೀವಿಸಬೇಕೆನಿಸಿದೆ. ಸ್ವಲ್ಪದರಲ್ಲಿ ಹೇಳಬೇಕೆಂದರೆ ನನಗೆ ಸ್ವಾತಂತ್ರ್ಯವು ಬೇಕಾಗಿದೆ. ಬಂಧನಗಳಿಲ್ಲದ, ಸ್ವತಂತ್ರಮಯ ಜೀವನವು ಹೇಗಿರುತ್ತದೆ ಎಂಬುದರ ಅನುಭವವನ್ನು ಪಡೆಯಹೊರಟಿದ್ದೇನೆ. ಅದಕ್ಕೂ ಹೆಚ್ಚು ನಾನು ಬಯಸುವುದು ಏನೂ ಇಲ್ಲ.

ಇಂತೀ ನಮಸ್ಕಾರಗಳು

❄ ❄ ❄ ❄ ❄

೮. ಮಾವನವರು

“ನಿಮ್ಮ ತಂದೆಯ ತಲೆ ಸರಿಯಿಲ್ಲ. ರಿಜಿಸ್ಟರ್ಡ್ ಪದ್ಧತಿಯಿಂದ ನಮ್ಮ ಮದುವೆ ನೆರವೇರಬೇಕೆಂದು ಹೇಳಿ ಕಳಿಸುವುದೇ? ನೀವೇನು ಕ್ರಿಶ್ಚನ್ನರೇ?”

“ಶ್! ಸ್ವಲ್ಪ ಮೆಲ್ಲಗೆ ಮಾತಾಡೇ ಮಹಾದೇವಿ. ಇದು Eastern Exports ಆಫೀಸು! ನಿಮ್ಮ ಅವ್ವನ ಅಡಿಗೀ ಮನೆಯಲ್ಲ. ಅದಿರಲಿ, ನಮ್ಮ ಮದುವಿ ಆಗದೇನೇ ಇಷ್ಟು ಜೋರು ಮಾಡತಿ! ಮುಂದೆ ನನ್ನ ಗತಿ?”

ನನ್ನವರ ಈ ನಗುಮಾತಿನ ಉತ್ತರಕ್ಕೆ ಬಲಿಬೀಳದೆ ಹೇಳಿದೆ, “ನಡೀರಿ ಈಗ. ನಿಮ್ಮ ಅಪ್ಪನ ಕಡೆ ಹೋಗೋಣ! ಹೋದ ವರ್ಷ ನಿಮ್ಮ ತಂಗೀ ಮದುವಿ ಆಯಿತಲ್ಲ. ಅದನ್ನು ರಿಜಿಸ್ಟ್ರಾರ್ ಕಚೇರಿಯಲ್ಲೇ ಮಾಡಿ ಮುಗಿಸಿದರೋ ಎಂದು ನಾನೇ ಕೇಳತೇನಿ.”

“ಹೂಂ. ಅವರು ಇವತ್ತೇ ಬೆಳಿಗ್ಗೆ ಧಾರವಾಡಕ್ಕೆ ಹೊರಟುಹೋಗಿದರು. ಅದಕ್ಕೆ ನಿನ್ನೆ ಸಂಜೆ ನಿಮ್ಮ ಅಣ್ಣಗ appointment ಕೊಟ್ಟಿದ್ದರು.”

“ಎಲ್ಲೆ? ಯುನಿವರ್ಸಿಟಿ ಲೈಬ್ರರಿಯ ಕಂಪೌಡಿನೊಳಗ?”

“ಅವರು ಮುಂಬೈಗೆ ಬರುವುದೇ ಲೈಬ್ರರಿಯೊಳಗಿನ ಸಂಶೋಧನ ಸಾಮಗ್ರಿ ತಿರುವಿ ಹಾಕಲಿಕ್ಕೆ. ಇಳಕೊಳ್ಳುವುದೂ ಯುನಿವರ್ಸಿಟಿ ಹಾಸ್ಟೆಲಿನಲ್ಲಿ.”

“ಇದ್ದೀತು. ನೀವು ಈಗಿಂದೀಗ ಧಾರವಾಡಕ್ಕ ಪತ್ರಾ ಬರೀರಿ. ಹುಡುಗೀ ಕಡೆಯವರು ರಿಜಿಸ್ಟರ್ ಮದುವೆಗೆ ಸುತರಾಂ ಒಪ್ಪಲ್ಲ ಅಂತ.”

“ಆದರೆ ಹುಡುಗೀನೇ ಅವರಿಗೆ ಒಪ್ಪಿಗಿ ಅಗಿರದಿದ್ರ?” ಹೌದೆ? ಇದಕ್ಕಾಗಿಯೇ ‘ರಿಜಿಸ್ಟರ್’ ಮದುವೆಯ ನೆವ ಹೂಡಿರಬಹುದೆ? ಎಂಬ ಯೊಚನೆ ಮೂಡಿತು. ನನ್ನ ಅಳುಕನ್ನು ತೋರಗೊಡದೆ-

“ಬಿಟ್ಟುಬಿಡಲಿ. ಈಗಾದರೂ ಪ್ರಸಂಗ ಕೈಮೀರಿಲ್ಲ” ಎಂದೆ.

"ಅಲ್ಲವೆ? ನೀನಾದರೂ ಬಿಟ್ಟುಬಿಡುವಾಕೆ ಇದ್ದರೆ, ಆಫೀಸಿನ ಆ ವೇಳೆಯಲ್ಲಿ ಯಾವ ಅಧಿಕಾರದಿಂದ ನುಗ್ಗಿದಿ? ಹೋಗಲಿ ಬಿಡು. ನಿನ್ನನ್ನು ಮದುವೆಯಾಗುವವ ನಾನು. ನಮ್ಮ ಅಪ್ಪನಲ್ಲ" ಅದೇ ಚೇಷ್ಟೆಯ ದನಿಯಲ್ಲಿ 'ಇವರು' ಹೇಳಿದರು.

"ನಿಮ್ಮ ಅಪ್ಪನಿಗೆ ನಾನೇಕೆ ಪಸಂದು ಬಂದಿಲ್ಲ? ಅದನ್ನಾದರೂ ಹೇಳಿರಿ," ಎಂದೆ ನಾನು.

"ನೋಡು. ಅವರು ದೊಡ್ಡ ವಿದ್ವಾಂಸರು, ಪ್ರೊಫೆಸರು ಅಂತ ಸಮಾಜದೊಳಗ ಮನ್ನಣೆ ಅದ. ಅಂಥವರ ಸೊಸೆ ಬಿ.ಎ. ನಪಾಸ ಆಗುವಷ್ಟು....."

"ಅದಕ್ಕ ನೀವೇ ಕಾರಣ! ಇಂಟರ್‌ದೊಳಗೆ ನಾ ಹಾಯ್ ಸೆಕೆಂಡ್ ಕ್ಲಾಸ್ ಬಂದಿದ್ದೆ, ಗೊತ್ತೆ?"

"ಬಿ.ಎ. ನಪಾಸು ಆದದ್ದಂತೂ ಸುಳ್ಳಲ್ಲ! ಇನ್ನೊಂದು ಕಾರಣ ಅಂದ್ರ ನಿನ್ನ ಮೂಗು! ನಮ್ಮ ಮನೆತನದಲ್ಲಿ ಯಾರಿಗೂ ಮೊಂಡ ಮೂಗು ಇಲ್ಲ. ನಮ್ಮ ಅಪ್ಪನದಂತೂ ಒಳ್ಳೇ ನಿಡಿದಾದ, ಎದ್ದು ಕಾಣುವ..."

"ನನ್ನನ್ನು ಮದುವೆಯಾಗುವವರು ನೀವು. ನಿಮ್ಮ ಅಪ್ಪನಲ್ಲ! ನಿಮಗೆ ಎಲ್ಲದಕ್ಕೂ ಹುಡುಗಾಟಿಕೆಯೇ. ಅವ್ವ ಕೇಳಿಕೊಂಡು ಬಾ ಎಂದಿದ್ದಾಳೆ. ಈಗ ನಮಗೇನು ಮಾಡಬೇಕೆನ್ನುತ್ತೀರಿ?"

"ಏನೂ ಮಾಡುವುದು ಬೇಡ. ಒಂದು ಐಸ್ ಕೋಲ್ಡ್ ಕಾಫೀ ತರಿಸಿಕೊಡ್ತೇನಿ. ಕುಡಿ. ವ್ಯಾನ್ ತಯಾರದ. ಮನೆಗೆ ಹೋಗಿ ಸ್ವಸ್ಥ ಮಲಗಿಕೊ."

ಎಷ್ಟೊಂದು ದುಗುಡ ಹಾಗೂ ಸಿಟ್ಟಿನಿಂದ ಬಂದಿದ್ದೆನೊ ಅದೆಲ್ಲವನ್ನೂ ಅಲ್ಲಿಯೇ ಬಿಟ್ಟು, ಮನೆಗೆ ಬಂದೆ.

ಕೊನೆಗೂ ಇವರ ತಂದೆಯ ಹಟವೇ ಗೆದ್ದಿತು. ನನ್ನ ಮದುವೆಯ ಕಾಲದಲ್ಲಿ, ಅಲಂಕೃತವಾದ ಆ ವಿವಾಹ ಮಂಟಪ, ಅಕ್ಷತೆ ಹಿಡಿದುಕೊಂಡು ಕಾಯ್ದು ನಿಂತ ನೂರಾರು ಜನ, ನನ್ನ ಗೆಳತಿಯರ ಸಡಗರ, ಬೀಗರ ಬಿಗುಮಾನ ಶಹನಾಯಿ ಸ್ವರದೊಂದಿಗೇ ಬೆರೆತ ಪುರೋಹಿತರ ಮಂತ್ರದ ಅವಾಂತರ, ಅದಕ್ಕಿಂತ ಸಪ್ತಪದಿ, ಲಾಜಾಹೋಮ, ಮತ್ತು ಒಗಟ ಹಾಕಿ ಹೆಸರು ಹೇಳುವ ಪ್ರಸಂಗಗಳಲ್ಲಿ ನಾಚಿಕೆಯ ಸಂತಸ ಇವಾವುವೂ ನನ್ನ ಪಾಲಿಗಿರಲಿಲ್ಲ. ಹೆಣ್ಣಿನ ಜೀವನದಲ್ಲಿ ಮದುವೆಯಂತಹ ಪ್ರಸಂಗ ಆಯುಷ್ಯದಲ್ಲಿ ಒಮ್ಮೆಯೇ ಬರುವಂತಹದು. ಅದರ ಸಮಸ್ತ ವೈಭವ, ಸಂಭ್ರಮಗಳಿಗೆ ನಾನು ಎರವಾಗಿದ್ದೆ.

ನಮ್ಮವರ ಆಫೀಸಿನ ಅಲಂಕಾರಶೂನ್ಯವಾದ ಕಾರಿನಲ್ಲಿ ಕುಳಿತು, ರಿಜಿಸ್ಟ್ರಾರ್‌ರ ಕಚೇರಿಯನ್ನು ಕಂಡು ಬಂದ ಮೇಲೆ, ಬಚ್ಚಲಿ ಮರೆಯಲ್ಲಿ ಗಳಗಳನೆ ಅತ್ತೆ. ಸಂಜೆಯ

'ರಿಸೆಪ್ಷನ್' ವೇಳೆಯಲ್ಲಿ 'ರಿಜಿಸ್ಟರ್ ಮದುವೆಯೇಕೆ?' ಎಂದು ಕೇಳಿದ ನನ್ನ ಗೆಳತಿಯರಿಗೆ "ನನ್ನ ತಂದೆ ತೀರಿಕೊಂಡು ಒಂದು ವರ್ಷ ಮುಗಿದಿಲ್ಲ; ನಮ್ಮ ತಾಯಿಗೆ ಮಾನಸಿಕ ವ್ಯಥೆಯಾಗಬಾರದೆಂದು ಹೀಗೆ ಮಾಡಲಾಯಿತು" ಎಂದು ಸಮಾಧಾನ ಹೇಳಿದೆ.

ನನ್ನ ಮಾವನೆಂಬ ವ್ಯಕ್ತಿ ಮದುವೆಗೂ ಬರಲಿಲ್ಲ. ನನ್ನ ಅತ್ತೆ ತುಂಬಾ ಧಾರ್ಮಿಕ ಪ್ರವೃತ್ತಿಯವರು. ಈ ಪರಿಯ ಮದುವೆಗೆ ತಾನು ಬರುವುದಿಲ್ಲವೆಂದು ಮೊದಲೇ ತಿಳಿಸಿಬಿಟ್ಟಿದ್ದರು. ಆದರೆ ಅದರಿಂದ ಜನರ ಆಡಿಕೆ ಇನ್ನಷ್ಟು ಬೆಳೆದು, ನನ್ನ ಪಾಲಿಗೆ ಮದುವೆಯೆನ್ನುವುದು ಒಂದು ಅವಮಾನಕರ ಸಂಗತಿಯಾಯಿತು.

ತಾರದೇವದಲ್ಲಿಯ ನನ್ನ ಹೊಸ ಮನೆಗೆ ಬಂದು ಸಂಸಾರ ಹೂಡಿದ ಮೇಲೆಯೂ ಗಂಡನ ಬಳಗದವರಾರೂ ಹಾಯಲಿಲ್ಲ. ಅವರು ಇರುತ್ತಿದ್ದುದೂ ಬೇರೆ ಬೇರೆ ಕಡೆಗಳಲ್ಲಿ. ಮಾವನದಂತೂ ಧಾರವಾಡದ ವಾಸ್ತವ್ಯ. ನನ್ನ ರಾಯರ ತಮ್ಮ ಇಂಗ್ಲಂಡಿಗೆ ಮೆಡಿಕಲ್ ಶಿಕ್ಷಣಕ್ಕಾಗಿ ಹೋಗಿದ್ದ. ಇವರ ತಂಗಿ ತನ್ನ ಎಂಜಿನಿಯರ್ ಗಂಡನೊಂದಿಗೆ ಹೊಸಪೇಟೆಯಲ್ಲಿ ಇದ್ದಳು. ಅತ್ತೆಯವರೂ ಗುಡಿ, ಗುಂಡಾರವಿರುವ ಊರುಗಳಲ್ಲಿ ತಿರುಗಾಡಿಕೊಂಡು ಇರುತ್ತಿದ್ದವರು. ಏನಿದ್ದರೂ ಈ ಜನರ ಅನಾಸ್ಥೆ ನನ್ನಲ್ಲಿ ಅವ್ಯಕ್ತ ಭೀತಿಯನ್ನುಂಟುಮಾಡಿತು. ಬೇಡವಾದ ವ್ಯಕ್ತಿಯಾಗಿ ನಾನು ಈ ಮನೆತನದಲ್ಲಿ ಕಾಲಿರಿಸಿದೆನೆ? ಮದುವೆಯ ಕಾಲದ ಬೇಸರ ಇನ್ನೂ ಯಾಕೆ ಹೋಗಿಲ್ಲ? ನಮ್ಮದು ಪ್ರೇಮ ವಿವಾಹವೆಂದೆ? ಬೇರೆ ಕನ್ಯೆಯನ್ನು ನನ್ನ ರಾಯರಿಗೆ ನೋಡಿ ಇಟ್ಟಿದ್ದರೆಂದೆ? ನಾವು 'ಕೊಂಕಣಸ್ಥ'ರು, ಅವರು 'ದೇಶಸ್ಥರು' ಎಂಬ ಭೇದವು ಕಾರಣವೆ? ಇದಾವುದೂ ತಿಳಿಯದೆ ಕಸಿವಿಸಿಗೊಂಡೆ.

ಇವರೋ ಏನೆಲ್ಲ ವಿಷಯವನ್ನು ನನಗೆ ಹೇಳುತ್ತಿದ್ದರೂ ತಮ್ಮ ಮನೆತನದ್ದಲ್ಲ. ಒಂದು ಸಲ ನಾನು ಈ ವಿಷಯವಾಗಿ ಖಟ್ಟಿಗೆ ಹಚ್ಚಿ ರಗಳೆ ಮಾಡಿದಾಗ,

"ಈ ಹೆಂಗಸರ ಸ್ವಭಾವವೇ ವಿಚಿತ್ರ. ಅಲ್ಲ, ಅತ್ತೀ, ಮಾವ, ನಾದಿನಿ, ಮೈದುನ ಇದ್ದರೆಂದರೆ 'ಏನು ಇವರ ಕಿಟಿ ಕಿಟಿ' ಅಂತ ಗಂಡನ ಜೀವ ಅರೆಯುತ್ತೀರಿ. ಅತ್ತೆಯ ಮನೆಯವರ ಕಾಟವೇ ಇಲ್ಲದಾಗ, 'ಇವರು ಯಾಕೆ ಬರಬಾರದು? ಅವರು ಬೇಕು' ಎಂದು ಅದಕ್ಕೂ ರಗಳೆ ಮಾಡುತ್ತೀರಿ. ಆರಾಮವಾಗಿ ದೂರ ಇದ್ದೀವಿ! ಅವರ ಉಸಾಬರಿ ಯಾಕೆ?" ಎಂದರು.

"ಅದೇನಿಲ್ಲ. ನೀವೆಲ್ಲೋ ಜಗಳಾಡಿ, ಮನೆ ಬಿಟ್ಟು ಬಂದಿರಬೇಕು. ಅದಕ್ಕೇ ಹೀಗೆ. ಏನಿಲ್ಲ, ಈ ಸಲ ಬೇಸಿಗೆಯ ರಜೆಯಲ್ಲಿ ಊರ ಕಡೆಗೆ ಹೋಗೋಣ. ನಾವೇನು ತಪ್ಪು ಮಾಡಿದ್ದೇವೆ ಎಂದು ನಾನೇ ಬಜಾಯಿಸುತ್ತೇನೆ," ಎಂದೆ.

ಆದರೆ ಬೇಸಗೆಗೆ, ಅನ್ಯ ಊರಿಗೆ ಹೋಗಲಿಕ್ಕಾಗದೇ, ಹೆರಿಗೆಗೆಂದು ತವರುಮನೆಗೆ ಹೋಗಬೇಕಾಯಿತು. ನನಗೆ ಅತೀವ ಕಷ್ಟವನ್ನು ಕೊಟ್ಟು ಜನಿಸಿದ ಮುದ್ದು ಕೂಸನ್ನು

ಅವರ ವಂಶದ ಕುಡಿಯನ್ನು ನೋಡಲಿಕ್ಕಾದರೂ ಗಂಡನ ಬಳಗದವರು ಬಂದಾರು ಎಂದು ಮಾಡಿದ್ದೆ. ನಾನಿನ್ನೂ ಹೆರಿಗೆಯ ದವಾಖಾನೆಯಲ್ಲಿದ್ದಾಗಲೇ, ಮಗುವಿಗೆ ಹೆಸರಿಡುವುದಕ್ಕಾಗಿ ಬರಬೇಕೆಂದು, ಅತ್ತೆಯವರಿಗೆ ಸ್ವಯಂ ಕಾಗದ ಬರೆದೆ. ೧೦-೧೨ ದಿನ ಕಾಯಿಸಿ ಕೊನೆಗೊಮ್ಮೆ ಬಂತು, ಅದರ ಪತ್ರ, ಯಾವುದೊ 'ಆನೆಖಿಂಡಿ' ಎಂಬ ಊರಿಂದ.

'ನನ್ನ ದ್ವಿತೀಯ ಪುತ್ರಿಗೆ ಮಾಡುವ ಆಶಿಷಃ -

ಶ್ರೀರಾಮಚಂದ್ರನು ತನ್ನ ಸೇವಾರ್ಥವಾಗಿ ನನ್ನನ್ನು ಇಲ್ಲಿ ನಿಲ್ಲಿಸಿಕೊಂಡಾನೆ. ಸಂಸಾರ ಬಂಧನದಿಂದ ಮುಕ್ತಳಾಗಿ ಇರಬೇಕೆಂದು ಬಯಸಿದರೂ ಮಗುವನ್ನೂ ನಿನ್ನನ್ನೂ ನೋಡಲು ನನ್ನ ಹೃದಯ ಎಷ್ಟೊಂದು ಹಾತೊರೆಯುತ್ತಿದೆ ಬಲ್ಲೆಯಾ? ಅದೂ ರಾಮಪ್ರಭುವಿನ ಪ್ರೇರಣೆಯೇ. ಯಾವುದಕ್ಕೂ ಕಾಲ ಬರಬೇಕಲ್ಲವೆ ಇತಿ, ಶ್ರೀರಾಮ ಸ್ಮರಣೆಗಳು.'

ವಿಚಿತ್ರವಾದ ಒಕ್ಕಣಿಕೆ! ಆದರೂ ನನ್ನ ಮೇಲೆ, ಅವರಿಗೆ ಬೇಸರವಿಲ್ಲ ಎನ್ನುವ ಮಾತು ನನಗೆ ಅದೆಷ್ಟು ಹಿತವೆನಿಸಿತು! ಇಂದಲ್ಲ, ನಾಳೆ ಅವರು ಬಾರದೇ ಇರುವುದಿಲ್ಲವೆಂದು ಭಾವಿಸಿದೆ.

ವಾಸಂತಿಯ ಲಾಲನೆ ಪಾಲನೆಯಲ್ಲಿ ನಾನು ಅನುಭವಿಕಳಲ್ಲವಷ್ಟೆ. ಆ ದುಡಿತ ಹೆಚ್ಚಾಗಿ ಮನಸ್ಸು ಕಿರಿಕಿರಿಗೊಂಡಾಗ, ಮನೆಯಲ್ಲಿ ಹಿರಿಯರೊಬ್ಬರ ಅಗತ್ಯ ಬಹಳಷ್ಟು ಅನಿಸುತ್ತಿತ್ತು. ನನ್ನ ರಾಯರಂತೂ ಮನೆಯಲ್ಲಿ ಇರುವವರೇ ಅಲ್ಲ. ಹಗಲೆಲ್ಲ ಮೇಲುಗೆಲಸಕ್ಕೆ ನೆರವಾಗುವ ಆಳು ಚಂದ್ರಾ ಇದ್ದಳೇನೊ ನಿಜ. ಆದರೆ ಮನೆಯಲ್ಲಿ ಮುದುಕ ಹಿರಿಯರೊಬ್ಬರು ಇದ್ದು, ಕಿರಿಕಿರಿಗೊಂಡ ತಾಯಿಯಿಂದ ಮಗುವನ್ನು ಬಿಡಿಸಿ, ಮುದ್ದಾಡುವ ಬಗೆಯೇ ಬೇರೆ. ಆ ಅನುಕೂಲತೆಗೂ ನಾನು ಎರವಾದೆನಲ್ಲ ಎಂದು ಬೇಸರಗೊಂಡೆ. ಅತ್ತೆಯವರಂತೂ ಹಾಗೆ. ಆದರೆ ಮಾವನಿಗೇನು ಧಾಡಿ? ಪ್ರೊಫೆಸರಿಕೆಯಿಂದ ಹೇಗೂ ನಿವೃತ್ತರಾಗಿದ್ದಾರೆ. ತಮ್ಮ ವ್ಯಾಸಂಗ ಗ್ರಂಥ ರಚನೆಗಳಿಗಾಗಿ ಇಲ್ಲೇ ಏಕೆ ಬಂದು ಇರಬಾರದು? ಪತ್ರವಿಲ್ಲ, ಉತ್ತರವಿಲ್ಲ, ಹಾಳಾಗಲಿ ಎಂಬುದಾಗಿ ಅವರನ್ನು ಮರೆತೇಬಿಡುವುದರಲ್ಲಿದ್ದಾಗ:

ಆ ದಿನ ರಾತ್ರಿ. ನನ್ನ ರಾಯರು ಹೇಳಿದ್ದನು :

"ಓ, ಹೆಂಡತೀ, ನಿನ್ನ ಮಾವನೆಂಬ ವ್ಯಕ್ತಿ ಬಂದಾರ. ನಾಡದು ಆದಿತ್ಯವಾರ ಮನಿಗೆ ಬರತಾರ."

"ಬಂದಾರ? ಬರ್‍ತಾರ? ಅಂದ್ರ ಈಗೆಲ್ಲಿದ್ದಾರ?"

"ಹಾಸ್ಟೆಲ್‌ಮೊಳಗ ಇದ್ದಾರ. ಬಂದು ಒಂದು ವಾರ ಆಯ್ತು."

ನನ್ನ ಸಿಟ್ಟು ನೆತ್ತಿಗೇ ಏರಿತು. "ಒಂದು ವಾರ ಆಯಿತೆ? ಇಲ್ಲೆ ಮನಿ ಇದ್ದೂ ಬೇರೆ ಕಡೆಗೆ ಇಳಕೊಂಡ್ರಲ್ಲ? ನಿಮಗ ಈ ವಿಷಯ ಗೊತ್ತಿತ್ತು. ಆದರೂ ನನಗ ಹೇಳಲಿಲ್ಲ, ಅಲ್ಲ? ಯಾಕೆ?"

"ಈಗ ಹೇಳಿದೆನಲ್ಲ!"

"ಹೌದು, ಬಹಳ ಉಪಕಾರ ಆಯ್ತು. ಅಂತೂ ನೀವು ತಂದೀ ಮಗ ಒಂದಾದಿರಿ! ನನ್ನ ಹೊರಗಿಟ್ಟಿರಿ. ನನ್ನ ಮೇಲೆ ಇಷ್ಟೊಂದು ದ್ವೇಷ ಸಾಧಿಸಲಿಕ್ಕೆ ಅವರಿಗೆ ನಾನೇನು ಅನ್ಯಾಯ ಮಾಡಿದ್ದೇನೆ? ನನ್ನನ್ನು ಬಿಡಿರಿ. ಈ ಕಂದಮ್ಮ ಏನು ತಪ್ಪು ಮಾಡಿದೆ? ಇದನ್ನು ನೋಡಬೇಕೆಂದಾದರೂ ನಿಮ್ಮ ಅಪ್ಪನಿಗೆ ಅನಿಸಲಿಲ್ಲ. ಅವರೇನು ಮನುಷ್ಯರೆ? ಪಶು"

"ಮಂಜೂ...!"

ನನ್ನವರು ಅತ್ಯಂತ ಗಟ್ಟಿ ದನಿಯಿಂದ ಚೀರಿದರು.

ಅವರು ಎಂದೂ ಹೀಗೆ ನನಗೆ ಬಿಡುಸಾಡಿದವರಲ್ಲ. ಅದು ಅವರ ತಪ್ಪೇನಲ್ಲ. ನಾನು ಅಗಾಗ ಒದರಾಡುತ್ತಿದ್ದೆನಾದರೂ ಮಿತಿಯನ್ನು ದಾಟಿ ನನ್ನ ನಾಲಿಗೆ ಅಂದು ವಿಷ ಕಾರಿದ್ದಿತು.

ಹೆದರಿಕೆಯಿಂದ ನನ್ನ ಮುಖವು ಬಿಳುಪೇರಿದ್ದನ್ನು ಕಂಡರೊ ಇಲ್ಲವೊ, ಅವರು ಕೂಡಲೇ ಮೃದುಮಧುರ ಭಾವದಿಂದ ಹತ್ತಿರ ಬಂದು "ಮಂಜೂ, ನೀ ಸುಳ್ಳೇ ತಪ್ಪು ತಿಳಿದೀದಿ. ನಿನ್ನ ಮೇಲೆ ಅವರಿಗೆ ಯಾವ ಬೇಸರವೂ ಇಲ್ಲ. ಒಳಗಿನ ಸಂಗತಿ ಅಂದರ, ತಮ್ಮ ಯಾವದೇ ಮಕ್ಕಳ ಮನಿಯೊಳಗೆ ಕಾಯಂ ಇರಬಾರದು ಅಂತ ಅವರು ನಿರ್ಬಂಧ ಹಾಕಿಕೊಂಡಾರ."

"ಮಕ್ಕಳ ಮನೆಯಲ್ಲಿ ತಂದೆ ಇರಬಾರದೆ?"

"ಹೂಂ, ಆ ಹಟಮಾರಿತನವೂ ಅವರಲ್ಲಿದ, ಅನ್ನಿರಿ" ಎಂದು ನುಡಿದೆ.

"ಹಾಗಲ್ಲ ಮಂಜೂ, ಅದಕ್ಕ ಇಪ್ಪತ್ತು ವರುಷದ ಹಿಂದಿನ ಒಂದು ಕಾರಣ ಅದ. ನಾ ಆವಾಗ ೮-೯ ವರುಷದವ ಇದ್ದೆ. ನನ್ನ ಅಜ್ಜಾ, ಅಜ್ಜೀನೂ ನಮ್ಮ ಮನೆಯಲ್ಲೇ ಇರತಿದ್ರು. ಒಂದು ದಿನ ನಮ್ಮ ಅಪ್ಪ ಅಜ್ಜಗ ಹೇಳತಿದ್ರು : 'ನೀವು ಈಗಿಂದೀಗ ಹಳ್ಳಿಗೆ ಹೊರಡಿರಿ!' ಅಂತ. ಅದಕ್ಕ ನಮ್ಮ ಅಜ್ಜ 'ಈ ವಯಸ್ಸಿನೊಳಗೆ ಅಲ್ಲಿ ಹೋಗಿ ಏನು ಮಾಡಲಿ? ನಿನ್ನ ಹೆಂಡತಿ ನಮಗೆ ಬೈತಾಳ, ಅನಾದರ ಮಾಡತಾಳ ಅಂತ ನೀ ತಿಳಿದೀದಿ. ಆಕೆಯ ಸ್ವಭಾವನೇ ಅಂಥದು, ನಮಗೇನು ಅದರ ಬಗ್ಗೆ ಬೇಸರ ಇಲ್ಲಪಾ' ಎಂದರು. 'ಅದೇನಿಲ್ಲ. ನನ್ನ ಕಣ್ಣೆದುರಿಗೇ ಆಕೆಯಿಂದ ನಿಮ್ಮ ಅಪಮಾನ ಅಗೋದನ್ನ ನಾ ಸಹಿಸಲಾರೆ' ಅಂತ ನಮ್ಮ ಅಪ್ಪ ಅಂದಾಗ, ಅಜ್ಜಿ ನನ್ನನ್ನು ಅಪ್ಪಿಕೊಂಡು 'ಈ ಕೂಸಿನ್ನ ಬಿಟ್ಟು ನಾ ಹೆಂಗ ಹೋಗಲ್ಯೋ' ಎಂದು ಹೇಳಿ ಅಳಹತ್ತಿದಾಗ ನಾನೂ ಅತ್ತದ್ದು ನನಗಿನ್ನೂ ನೆನಪಿದೆ. ಅಂದೇ ನಮ್ಮ ಅಪ್ಪ ಅವರಿಬ್ಬರನ್ನೂ ಹಳ್ಳಿಗೆ ಕಳಿಸಿ ಬಂದರು. ಆಗಿನ್ನೂ ಅಪ್ಪ ಇಂಗ್ಲೀಷ್ ಶಾಲೆಯ ಮಾಸ್ತರಕಿ ಮಾಡತಿದ್ದರು. ಯುದ್ಧದ ಕಾಲ, ದುಡ್ಡು ಸಾಲತಿದ್ದಿಲ್ಲ. ಅಂತೂ ಹಳ್ಳಿಯಲ್ಲೇ ಮುಂದೆ ಅವರಿಬ್ಬರೂ ತೀರಿಕೊಂಡರು. ಮುಪ್ಪಿನ ಕಾಲಕ್ಕ ತನ್ನ ತಂದೆ ತಾಯಿಗಳಿಗೆ ಒಬ್ಬನೇ ಮಗಾ ಆಗಿ, ತಾನು ಸಾಕಷ್ಟು ಸುಖಾ ಕೊಡಲಿಲ್ಲ ಎಂಬ

ಪಶ್ಚಾತ್ತಾಪದಿಂದ ಈ ನಿರ್ಬಂಧ ಹಾಕಿಕೊಂಡಾರ. ಬೇರೇನಿಲ್ಲ. ನನ್ನ ಮನೀ ಬಿಟ್ಟು ಅವರು ಬೇರೆ ಕಡೆಗೆ ಇರೋದಂದ್ರ ನನಗೆಷ್ಟು ಸಂಕಟ ಆಗತದ ಗೊತ್ತೇ? ಇನ್ನೇನು ಅವರಿಗೆ ಅದರಿಂದೇ ಮನಸ್ಸಿಗೆ ಹಿತ ಅನಿಸತಿದ್ರ, ಹಂಗೇ ಆಗಲಿ ಅಂತ ಸುಮ್ಮನಿದ್ದೇನೆ. ಹೋಗಲಿ, ನಾಡಿದ್ದು ಹೆಂಗೂ ಬರತಾರಲ್ಲ."

ನಿಜ ಹೇಳಬೇಕೆಂದರೆ, ಆ ಹಿಂದಿನ ರಗಳೆ ನನ್ನ ತಲೆಗೆ ಹಿಡಿಯಲಿಲ್ಲ. ಇಷ್ಟಕ್ಕೂ ಯಾರದ್ದೋ ತಪ್ಪಿಗೆ ಯಾರಿಗೋ ಶಿಕ್ಷೆಯೆ? ನನ್ನ ಸಿಟ್ಟಿನಲ್ಲೇ ನಾನು ಇದ್ದೆನಾದ್ದರಿಂದ

"ಹೋಗಲಿ ಬಿಡಿರಿ, ಆದಿತ್ಯವಾರ ಆದರೂ ಯಾಕ ಬರತಾರಂತ? ಬೇಡವೇ ಬೇಡ. ಬೇಕಾದರೆ ಅವರು ಇಲ್ಲಿರುವಷ್ಟು ದಿನ ನೀವು ಬೇರೆಯೇ ಹೋಗಿ ಇದ್ದುಬಿಡಿರಿ" ಎಂದು ಹೇಳಿದೆ.

ಅಂತೂ ನಾಡಿದ್ದು ರವಿವಾರ, ನನ್ನ ಮಾವ ಉಪಚಾರಕ್ಕಾಗಿ, ನನ್ನ ಮೇಲಿನ ಉಪಕಾರವೆಂಬಂತೆ ಬರುವವರು ಎಂದು ನನಗೆ ಗೋಚರವಾಯಿತು. ಏನಿಲ್ಲ, ಅವರನ್ನು ನಾನೇ ಭೆಟ್ಟಿಯಾಗಿ ಎಲ್ಲವನ್ನೂ ಸ್ಪಷ್ಟವಾಗಿ ಮಾತನಾಡಿಬಿಟ್ಟರೆ ಹೇಗೆ ಎಂದು ಯೋಚನೆ ಮೂಡಿತು.

ಮರುದಿನವೇ, ಮಗುವನ್ನು ಸಿಂಗರಿಸಿಕೊಂಡು, ಮನೆಯಿಂದೇ ಟ್ಯಾಕ್ಸಿ ಮಾಡಿಕೊಂಡು ಯುನಿವರ್ಸಿಟಿ ಲೈಬ್ರರಿಗೆ ಹೊರಟುಬಿಟ್ಟೆ. ಪ್ರೊ. ನಿಡಗುಂದಿಯವರನ್ನು ಕರೆಯಬೇಕೆಂದು ಹೇಳಿ ಕಳುಹಿ, ಹೊರಗಿನ ಬೆಂಚಿನ ಮೇಲೆ ಕಾಯುತ್ತ ಕುಳಿತೆ. ವಾಸಂತಿಯು ತನ್ನ ಪುಟ್ಟ ಕೈಗಳಿಂದ ನನ್ನ ಮಂಗಳಸೂತ್ರದೊಂದಿಗೆ ಆಡುತ್ತ ತೊಡೆಯ ಮೇಲೆ ಮಲಗಿದ್ದಳು.

ಬಂದರು ನನ್ನ ಮಾವ! ಸ್ವಲ್ಪ ಹೆಚ್ಚು ಕಡಿಮೆ ನನ್ನವರ ಹಾಗೆಯೇ ಎತ್ತರವಾದ ನಿಲುವು, ತುಸು ಬಾಗಿದ ಬೆನ್ನು, ಕೈಯಲ್ಲಿ ಬಡಿಗೆ, ಪಾಯಿಜಾಮಿನ ಮೇಲೆ ಜೋಧಪುರಿ ಕೋಟು.

ಅವರು ಗಂಭೀರವಾಗಿ ನಡೆದು ನನ್ನ ಸಮೀಪಕ್ಕೆ ಬರುತ್ತಿರುವಾಗ ಆ ಮೂಗು... ಕಾಣಿಸಿತು. ಕನ್ನಡಕದ ಹಿಂದಿನ ಕಣ್ಣುಗಳು ಕೆಂಪಗಾಗಿ ಕಂಡವು. ನಾನು ಮಗುವನ್ನು ಎತ್ತಿಕೊಂಡು, ಭಯಮಿಶ್ರಿತ ಆದರಭಾವದಿಂದ ಎದ್ದು ನಿಂತೆ.

"ನಾ ನಾನು ಮಂಜುಳಾ, ನಿಮ್ಮ ಸೊಸೆ. ಇದು ನಿಮ್ಮ ಮೊಮ್ಮಗಳು."

"ಗೊತ್ತು, ಗೊತ್ತು. ಗುರುತು ಹತ್ತಿತು. ಇಲ್ಲೇಕೆ ಬಂದಿ? ಶ್ರೀಧರ ಎಲ್ಲಿ?" ಎಂದು ಕೇಳಿದರು.

ಗೃಹಿಣಿಯೊಬ್ಬಳು ಅದೂ ತನ್ನ ಸೊಸೆಯೇ, ಮಗುವನ್ನೆತ್ತಿಕೊಂಡು, ಲೈಬ್ರರಿಯಂಥ ಸ್ಥಳದಲ್ಲಿ ತಮ್ಮನ್ನು ಭೆಟ್ಟಿಯಾಗ ಬಂದಿದ್ದ ವಿಚಿತ್ರ ಸನ್ನಿವೇಶದಿಂದಾಗಿ ಅವರೂ ಗೊಂದಲದಲ್ಲಿ ಬಿದ್ದಿದ್ದರು.

"ಅವರಿಗೆ ಹೇಳದೇ ಬಂದಿದ್ದೇನೆ" ಎಂದೆ.

"ನಡಿ, ಹೊರಗೇ ಹೋಗೋಣ" ಎಂದು ಹೇಳಿದ ಅವರನ್ನು ವಾಸಂತಿ ಪಿಳಿಪಿಳಿ ನೋಡುತ್ತ ಇದ್ದಳು.

ಮಳೆಗಾಲದ ದಿನವಾದುದರಿಂದ ತಂಪಾದ ಗಾಳಿ ಬೀಸುತ್ತ ಇದ್ದಿತು. ಆದರೆ ಮಳೆ ಇರಲಿಲ್ಲ. ಹೊರಗಂತೂ ಬಂದೆವು. ಎಲ್ಲಿಗೆ ಹೋಗಬೇಕೆಂದು ಅವರೂ ಯೋಚಿಸಿದಂತೆ ಕಾಣಲಿಲ್ಲ. ಹಾಗೆಯೇ ಚರ್ಚ್‌ಗೇಟ್ ಬಳಿಯ ಸಮುದ್ರದತ್ತ ಸಾಗಿದೆವು.

ದಾರಿಯಲ್ಲಿ ಅವರು ನನ್ನ, ನನ್ನ ತವರಿನವರ, ನನ್ನ ಹೊಸ ಮನೆಯ ಬಗ್ಗೆ ಒಂದೊಂದಾಗಿ ಕೇಳುತ್ತ ನಡೆದರು. ಆನರ್ಸ್‌ಗೆ ತಾವು ಕಲಿಸುವ ವಿಷಯವನ್ನೇ ತೆಗೆದುಕೊಳ್ಳಬಯಸಿ ಬಂದ ವಿದ್ಯಾರ್ಥಿಗೆ ಪ್ರೊಫೆಸರರು ಕೇಳುವ ರೀತಿ ಅದಾಗಿದ್ದಿತು.

ಆದರೂ ನಮ್ಮ ಮಾತಿನಲ್ಲಿ ಸಾಕಷ್ಟು ಸಲುಗೆಯ ವಾತಾವರಣ ಉಂಟಾಗಿದ್ದಿತು. ಚರ್ಚ್‌ಗೇಟ್ ಸಮುದ್ರ ತೀರದ ಒಂದು ಬೆಂಚಿನ ಮೇಲೆ ಕುಳಿತಿದ್ದಾಗ ನಾನು ಕೇಳಿಬಿಟ್ಟೆ:

"ಅಲ್ಲಾ, ಇಲ್ಲಿ ಮನೆಯಿದ್ದೂ ಹಾಸ್ಟೆಲಿನಲ್ಲಿ ಏಕೆ ಇಳಿದುಕೊಂಡಿರಿ?"

"ರವಿವಾರ ಬರುವವನೇ ಇದ್ದೇನೆ. ಶ್ರೀಧರ ಹೇಳಲಿಲ್ಲವೆ?"

"ಹೇಳಿದರು. ಆದರೆ ನೀವು ಅತಿಥಿಯಾಗಿ ಬರೋದು ಬೇಡ, ಮನೆಯಲ್ಲೇ ಇರಲಿಕ್ಕೆ ಬರುತ್ತಿದ್ದರೆ ಬರ್‍ರಿ ಎಂದು ಹೇಳಲಿಕ್ಕೇ ನಾನು ಈಗ ಬಂದದ್ದು."

"ಈ ಸಲವಂತೂ ಆಯಿತಲ್ಲ, ಮುಂದಿನ ಸಲ ನೋಡೋಣ."

"ನಿಮ್ಮ ಪ್ರತಿಜ್ಞೆಯ ವಿಷಯ ನನಗೆ ಗೊತ್ತಿದೆ. ಅದಕ್ಕೆ ನಾನೊಂದು ಉಪಾಯ ಸೂಚಿಸ್ತೇನೆ. ನಿಮ್ಮ ಸಾಮಾನು ಹಾಸಿಗೆ ಹಾಸ್ಟೇಲಿನಲ್ಲೇ ಇರಲಿ ಸ್ನಾನ, ಊಟ, ನಿದ್ದೆ ಇವು ಮೂರು ಅಷ್ಟೇ ಮನೆಯಲ್ಲಿ ಆಗಲಿ."

"ಅಲ್ಲಿಂದ ಉಳಿಯಿತೇನು?" ಎಂದು ಒಣನಗೆ ನಕ್ಕರು. ಹಲ್ಲು ಬಿದ್ದ ಅವರ ಬಾಯ ನಾಲಗೆಯ ಸುಳಿದಾಟವನ್ನು ವಾಸಂತಿ ನೋಡುತ್ತಲೇ ಇದ್ದಳು.

"ನೀವು ನಮ್ಮಲ್ಲಿಗೇ ಬಂದು ನಿಮ್ಮ ಪ್ರತಿಜ್ಞೆಗೆ ಭಂಗ ತಂದುಕೊಳ್ಳಬೇಕೆಂದೇನು ನಾ ಹೇಳುವುದಿಲ್ಲ. Formality ಅಂತ ನಮ್ಮಲ್ಲೆ ನೀವು ಬರುವ ಅಗತ್ಯನೂ ಇಲ್ಲ. ಇಷ್ಟೇ, ನೀವು ಮನೆಗೆ ಬಾರದೇ ಇದ್ದರೆ, ನಾನೇ ಪ್ರತಿ ದಿನ ಮಗುವನ್ನು ಹೊತ್ತುಕೊಂಡು ಸಂಜೆ ಇಲ್ಲಿಗೆ ಬರ್‍ತೇನೆ. ನನ್ನ ತಂದೆಯಂತೂ ಇಲ್ಲ. ಅಜ್ಜಂದಿರ ಅಕ್ಕರೆಯ ಭಾಗ್ಯವನ್ನು ಈ ಮಗು ಸ್ವಲ್ಪಾದರೂ ಪಡೆಯಲಿ."

ಹಾಗೆ ಹೇಳುತ್ತ ನನ್ನ ದನಿ ಒದ್ದೆಯಾಯಿತು. ಆ ಮ್ಲಾನ ಭಾವದಲ್ಲಿ ನಾನು ಮೈಮರೆತಿದ್ದಾಗ, ಅವರು ಮಗುವನ್ನು ನನ್ನಿಂದ ಕಿತ್ತುಕೊಂಡಿದ್ದರು!

ಪಶ್ಚಿಮ ದಿಕ್ಕಿನ ಸಮುದ್ರದ ನೀರಿನ ಮೇಲೆ ಮಳೆಯ ನೀರು ಬೀಳುತ್ತಲಿದ್ದಿತು. ಅದನ್ನು ಕಂಡು,

"ನಡಿ. ಹೊತ್ತು ಬಹಳಾಯಿತು. ಮನೆತನಕ ಹೇಗೆ ಹೋಗುತ್ತೀ? ನಾ ಕಳಿಸಲಿಕ್ಕೆ ಬರಲೇ? ಲೈಬ್ರರಿಯಲ್ಲಿ ಕಾಗದ ಪುಸ್ತಕ ಹಾಗೇ ಬಿಟ್ಟು ಬಂದಿದ್ದೇನಲ್ಲ" ಎಂದರು.

"ಬೇಡ, ನಾ ಟ್ಯಾಕ್ಸಿ ಮಾಡಿಕೊಂಡು ಹೋಗುವೆ. ನಿಮ್ಮನ್ನೂ ಲೈಬ್ರರಿಯತನಕ ಬಿಟ್ಟು ಹೋಗುವೆ" ಎಂದೆ ನಾನು.

ಟ್ಯಾಕ್ಸಿಯಲ್ಲಿ ಕುಳಿತಿದ್ದಾಗ ಅವರು ವಾಸಂತಿಯೊಂದಿಗೆ ಲಲ್ಲೆಗೈಯ್ಯುತ್ತ ಇದ್ದರು. ಟ್ಯಾಕ್ಸಿ ಲೈಬ್ರರಿಯ ಮುಂದೆ ಬಂದು ನಿಂತಾಗ. ನಿರುಪಾಯವೆಂಬಂತೆ ಮಗುವನ್ನು ನನಗೆ ಒಪ್ಪಿಸುವುದಕ್ಕೆ ಮೊದಲು "ನಾಳೆ ಬಂದುಗಿಂದೀ! ನಾಡದು ನಾನೇ ಬರ್ತೇನಿ, ಅಂ?" ಎಂದರು.

ಹೇಳಿದ್ದು ವಾಸಂತಿಗೆ, ಉದ್ದೇಶಿಸಿದ್ದು ನನಗೆ!

"ತಾರದೇವ ಚಲೋ" ಎಂದು ಟ್ಯಾಕ್ಸಿಯವನಿಗೆ ಹೇಳಿ, ವಿಜಯದ ಅಭಿಮಾನದಿಂದ ಬೀಗುತ್ತ ಕುಳಿತೆ. ಬಿ.ಎ. ನಪಾಸಾಗಿದ್ದರೂ ಮಾತಿನಲ್ಲಿ ಸೊಸೆ ಬುದ್ಧಿವಂತೆ ಎಂದು ಗ್ರಹಿಸಿರಬೇಕೆಂದು ನನ್ನನ್ನೇ ಹೊಗಳಿಕೊಂಡೆ. 'ನಾಳೆ ಬಂದುಗಿಂದೀ!' ಈ ಮಾತನ್ನು ಸೋಮವಾರಕ್ಕೂ ಅನ್ವಯಿಸುವುದು ಏನು ಕಠಿಣವಲ್ಲ ಎಂದುಕೊಂಡೆ.

ಮನೆಯ ಒಳಗಿನ್ನೂ ಕಾಲಿರಿಸಿರಲಿಲ್ಲ. ಎದುರಿಗೇ ನನ್ನ ರಾಯರು! "ಅರೇ, ನೀವು ಇಷ್ಟು ಬೇಗ? ನಿಮ್ಮ ಪಿತಾಜಿಯ ಭೆಟ್ಟಿಗೆ ಹೋಗಲಿಲ್ಲೇನು?" ಎಂದೆ.

"ಇಲ್ಲ ಮಹಾರಾಯ್ತಿ, ನಿನಗ ಹೆದರಿ ಹೋಗಲಿಲ್ಲ" ಎಂದರು.

"ಆದರ ನಾ ಹೋಗಿದೆ!"

"ಅಂ! ಭೆಟ್ಟಿಯಾಯಿತೆ? ಏನೇನು ಮಾತಾಡಿದಿರಿ?"

"ನಾ ಹೇಳುವುದಿಲ್ಲ, ನೀವು ಹೇಳತಿದ್ದಿರೇನು?"

ಹಾಗೆ ಹಂಗಿಸಿದೆನಾದರೂ, ಮಗುವನ್ನು ಅವರ ಕೈಗಿತ್ತು ಚಂದ್ರಾ ತಂದುಕೊಟ್ಟ ಚಹವನ್ನು ಕುಡಿಯುತ್ತ, ಎಲ್ಲವನ್ನೂ ಅವರಿಗೆ ವಿವರಿಸಿದೆ.

ಎಲ್ಲವನ್ನು ಕೇಳಿಕೊಂಡ ಮೇಲೆ "ಕಳ್ಳೀ, ಅಜ್ಜನ ಕಡೆಗೆ ಹೋಗಿದ್ದೀ?" ಎಂದು ಮಗುವನ್ನು ಮುದ್ದಾಡುತ್ತ, ನನ್ನ ಕಡೆ ಪ್ರಶಂಸಾಪೂರ್ವಕವಾಗಿ ನೋಡಿದರು.

"ಹೌದು, ನಿಮಗ ಆಗದ ಒಂದು ಕೆಲಸಾ ನಾನೂ ಅವ್ವಾ ಮಾಡಿಕೊಂಡು ಬಂದೇವಿ. ಅಜ್ಜಾ, ನಾಳೆ ಬಂದರಂದ್ರ ಇಲ್ಲೇ ಇರ್ತಾರ" ಎಂದು ವಾಸಂತಿಯ ಭಾಷೆಯಲ್ಲಿಯೆ ನಾನು ನುಡಿಯುತ್ತ,

"ಅಂದ್ಹಂಗ ನಮ್ಮ ರಿಜಿಸ್ಟರ್ ಮದುವೀಗೆ ಯಾಕ ಹಟಾ ಹಿಡಿದರು ಅಂತ ಕೇಳುವುದಕ್ಕಾಗಲೇ ಇಲ್ಲ" ಎಂದೆ.

ಅದಕ್ಕೆ "ಹಟ ಹಿಡಿದವರು ಅವರಲ್ಲ, ನಾನು" ಎಂದರು.

"ನೀವೆ? ಇದೇನು ಹೇಳ್ತೀರಿ?"

"ನಿಜವನ್ನೇ ಹೇಳಿದ್ದೇನೆ. ಹೋದ ವರ್ಷ ನನ್ನ ತಂಗಿಯ ಲಗ್ನದ ಕಾಲಕ್ಕ ನಮ್ಮ ಅವ್ವ ಬಹಳ ರಗಳೀ ಮಾಡಿದಳು ಅದರ ಪುನರಾವೃತ್ತಿ ಬೇಡಾ ಅಂತ ನಾನೇ ಹೀಗೆ ಹೇಳಿದೆ."

"ರಗಳೀ? ಏನದು?"

"ನಮ್ಮ ಅಪ್ಪ ಹಳೆಯ ಆಚಾರ ವಿಚಾರಗಳಿಗೆ ವಿಶೇಷ ಮಹತ್ವ ಕೊಡುವವರಲ್ಲ. ಜನಿವಾರ ಹಾಕುವದಿಲ್ಲ. ಆದರೆ ಲಗ್ನದ ಧಾರ್ಮಿಕ ವಿಧಿಯ ಕಾಲಕ್ಕಾದರೂ ಹಾಕಿಕೊಳ್ಳಬೇಕಷ್ಟೆ. ಪುರೋಹಿತರು ನಗುನಗುತ್ತ ಮಂತ್ರ ಹೇಳಿ, ನನ್ನ ತಂದೆಗೆ ಹೊಸ ಜನಿವಾರ ಕೊಟ್ಟರು. ನನ್ನ ತಾಯಿಗೆ ಅಷ್ಟೇ ಸಾಕಾಯಿತು. ಹಿಂದು ಮುಂದಿನ ರಗಳೆಯನ್ನೆತ್ತಿ ಹೀನಾಮಾನಾ ಬೈದಳು. ಅಲ್ಲಿ ನೆರೆದಿದ್ದ ಬೀಗರು, ಪ್ರತಿಷ್ಠಿತರು ಇವರು ಇದ್ದದ್ದನ್ನೇ ಮರೆತಳು. ವಯಸ್ಸಿನಿಂದ ಹಿರಿಯ, ಈ ಲಗ್ನದ ಕರ್ತಾ ಎಂಬುದನ್ನು ಸ್ವಲ್ಪಾದರೂ ಗಮನಿಸದೇ ನಾಲ್ಕು ಜನರೆದುರು ಹೀಗೆ ಬೈದರೆ ಏನಾದೀತು?"

"ಮುಂದೆ ನಿಮ್ಮ ಅಪ್ಪ ಏನು ಹೇಳಿದರು?"

"ಆ ಪ್ರಸಂಗದಲ್ಲಿ ಏನು ಹೇಳಿಯಾರು? ನಾವು ನಾವೇ ಇದ್ದಾಗಲಾದರೂ ಅವರು ಅಂಥ ಸಂದರ್ಭಗಳಲ್ಲಿ ಅಸಹಾಯಕನಂತೆ ಸುಮ್ಮನೆ ಕುಳಿತಿರುತ್ತಾರೆ. ಅವತ್ತಿನ ಸ್ಥಿತಿಯಂತೂ ಅತ್ಯಂತ ದೈನ್ಯಾಸ್ಪದವಾಗಿತ್ತು. ಒಡೆತ ತಿಂದ ಪ್ರಾಣಿಯಂತೆ ಜೋಲುಮುಖ ಮಾಡಿ ಅವರು ಕುಳಿತಿದ್ದನ್ನು ಕಂಡು ಆಕೆಯ ಗಂಟಲನ್ನೆ ಹಿಚುಕುವಷ್ಟು ನನ್ನ ಸಂತಾಪ ಮಿತಿಮೀರಿತು."

ಅಬ್ಬಾ! ನನ್ನ ರಾಯರ ಸ್ವಭಾವದಲ್ಲಿಯ ಈ ಕಠೋರವೃತ್ತಿ ನನಗೆ ಇದುವರೆಗೆ ಗೊತ್ತಾಗಿರಲಿಲ್ಲ. ಬಾಯ್ಬಿಟ್ಟು ಕೇಳುತ್ತಲಿದ್ದೆ.

"ಮುಂದೆ ನಮ್ಮ ಮದುವೆಯ ಪ್ರಸ್ತಾಪಕ್ಕೆಂದು ನಾ ಧಾರವಾಡಕ್ಕೆ ಹೋದಾಗ ಅವ್ವನಿಗೆ ನಿನ್ನ ರಗಳೆಯ ನಿಷೇದಾರ್ಥ ನಾ ಧಾರ್ಮಿಕ ರೀತ್ಯಾ ಮದುವೆ ಆಗೋದಿಲ್ಲ ಎಂದು ಹೇಳಿದೆ. 'ಬಿಟ್ಟುಬಿಡು! ನಿನ್ನ ಮದುವೆಗೇಕೆ, ನಿನ್ನ ಮನೆಗೂ ಕಾಲಿಡುವುದಿಲ್ಲ. ಮಲತಾಯಿಯ ಮಾತಿಗೂ ಸಹಿತ ಮನ್ನಣೆ ಕೊಟ್ಟು ಕಾಡಿಗೆ ಹೋದ ಶ್ರೀರಾಮನೆಲ್ಲಿ? ಹಡೆದ ತಾಯಿಯ ಮೇಲೆ ದ್ವೇಷ ಸಾಧಿಸುವ ನಿನ್ನಂಥ ಕುಲಕಂಟಕನೆಲ್ಲಿ' ಎಂದು ಒದರಾಡಿದಳು. ಆದರೆ ನನ್ನ ನಿರ್ಧಾರ ಅಚಲವಾಗಿತ್ತು. ನನ್ನ ತಂದೆಯೂ 'ಹಾಗೆಲ್ಲ ಹಟ

ಹಿಡಿಯಬಾರದು' ಎಂದು ನನಗೆ ಹೇಳಬಂದರು. ಆವಾಗ ನನ್ನ ತಾಯಿ ಏನು ಹೇಳಿದಳು ಗೊತ್ತೆ? 'ಸಾಕು ಸುಮ್ಮನಿರ್ರಿ. ನೀವೇ ಚುಚ್ಚಿ ಕೊಟ್ಟವರು, ಈಗ ನನ್ನೆದುರು ನಾಟಕ ಮಾಡಬೇಡಿರಿ' ಎಂದು."

"ಅಬ್ಬಾ, ಹಡೆದ ತಾಯಿಯ ಮೇಲೆ ನಿಮಗೆ ಇಷ್ಟೊಂದು ತಿರಸ್ಕಾರವೆ? ಮನೆಯ ಯಜಮಾನನನ್ನೂ ಮಕ್ಕಳನ್ನೂ ಅಂತಃಕರಣದಿಂದ ನೋಡಿಕೊಳ್ಳದೇ ಇಷ್ಟು ವರ್ಷ ಅವರು ಸಂಸಾರ ನಡೆಸಿದರೆ? ನಿಮ್ಮ ಅವ್ವ ಅಷ್ಟು ಕೆಟ್ಟವರೆ?"

"ಅವಳ ಅಂತಃಕರಣವು ರಕ್ಕಸತನದಷ್ಟೇ ಅತಿಯಾದದ್ದು ಇತ್ತು. ಸಣ್ಣವರಿದ್ದಾಗ ನಾವು ಬಹಳ ಹೊತ್ತು ಅವಳ ಕಣ್ಣ ನಜರು ತಪ್ಪಿ ದೂರ ಹೋಗಬಾರದು, ಇಷ್ಟೇ ಉಣ್ಣಬೇಕು, ಇಷ್ಟೇ ಮಲಗಬೇಕು! ಉಸಿರುಗಟ್ಟಿಸುವ ಅಂತಃಕರಣವದು. ಒಮ್ಮೆಯಂತೂ ನಾನು ಹೆದರಿ ಅವಳ ಎಣಿಕೆಯಂತೆ ಹೆಚ್ಚು ಉಂಡು ವಾಂತಿಮಾಡಿಕೊಂಡಿದ್ದೆ. ದೊಡ್ಡವನಾಗುತ್ತ ಹೋದಾಗೆಲ್ಲ ಅವಳ ಈ ಅಂತಃಕರಣದ ಉರುಲಿನಿಂದ ಯಾವಾಗ ಪಾರಾದೇನೋ ಅನ್ನಿಸುತ್ತಿತ್ತು. ನಮ್ಮದು ಬಿಡು. ನನ್ನ ತಂದೆಯದಂತೂ ನಿತ್ಯ ಗೋಳು. ಅವರ ವಿದ್ವತ್ತು, ವ್ಯಾಸಂಗಗಳಿಗೆ ಎಂದೂ ಆಕೆ ಮರ್ಯಾದೆ ಕೊಟ್ಟವಳಲ್ಲ. ಶ್ರೀರಾಮನ ಮೇಲಿನ ಭಕ್ತಿಯೊಂದನ್ನು ಬಿಟ್ಟರೆ ಜೀವನದಲ್ಲಿ ಉಳಿದೆಲ್ಲ ವೃತ್ತಿಗಳು ತುಚ್ಛವೆಂದೇ ಅವಳ ಭಾವನೆ. ಅವಳಂಥ nagging ಹೆಂಗಸನ್ನೇ ನಾನು ನೋಡಲಿಲ್ಲ."

ದುಃಸ್ವಪ್ನವನ್ನು ಕಂಡಂತೆ ನನ್ನ ಮನಸ್ಸು ವ್ಯಗ್ರವಾಗಿತ್ತು. ಯಾರದು ತಪ್ಪು? ಯಾರು ಸರಿ? ಎಂದು ತಿಳಿಯದಷ್ಟು ದಿಗ್ಭ್ರಮೆಗೊಂಡಿದ್ದೆ. "ಬಾಯೀ, ಕುಕ್ಕರ್ ಮಧೇ ಕಾಯ್ ಠೇವಾಯಿಚ?" ಎಂದು ಚಂದ್ರಾ ಕೇಳಿದಳು. ಎದ್ದು ಒಳಗೆ ಹೋದೆ.

ಮರುದಿನ ಇವರು ಕಚೇರಿಗೆ ಹೋದಾಗ ಅಂಚೆಯವ ಒಂದು ಟೆಲಿಗ್ರಾಮ್ ತಂದು ಕೊಟ್ಟ. ನನ್ನ ಹೆಸರಿನಲ್ಲಿಯೆ ಇದ್ದ ಆ ತಾರು ಧಾರವಾಡದಿಂದ ಬಂದಿದ್ದಿತು.

'Arriving Sunday mail. Attend station- Ramabai.'

ಇದೇನು? ನನ್ನ ಅತ್ತೆ ಮುಂಬಯಿಗೆ ಬರುವವರು! ಮಗನ ಮನೆಗೆ ಕಾಲಿಡುವುದಿಲ್ಲ ಎಂದವರು ಈಗ ಬರುವುದೆಂದರೆ? ಒಳ್ಳೇಯದೇ ಆಯಿತಲ್ಲ! ಆದರೆ ತಾಯಿಯ ಬಗೆಗೆ ತಾತ್ಸಾರ ತೋರುವ ನನ್ನ ರಾಯರು ಏನಾದರೂ ರಾದ್ಧಾಂತ ಮಾಡಿದರೆ? ಇಲ್ಲ, ಆ ಬಗ್ಗೆ ಇವರಿಗೆ ಕರಾರನ್ನೇ ಹಾಕುವೆ. ಇಷ್ಟಕ್ಕೂ ಹಿರಿಯರಾದ ಮಾವ ಇದ್ದಾರಲ್ಲ. ಸುಧಾರಿಸಿಕೊಂಡು ಹೋಗುತ್ತಾರೆ.

ಇನ್ನು 'ಇವರ' ಆಫೀಸಿಗೆ ಫೋನ್ ಮಾಡಿ ಟೆಲಿಗ್ರಾಮಿನ ಸುದ್ದಿಯನ್ನು ಹೇಳಬೇಕಲ್ಲ. ಆದರೆ ತನ್ನ ತಂದೆ ಬಂದಿದ್ದ ಸುದ್ದಿಯನ್ನು ಇವರೆಲ್ಲಿ ನನಗೆ ಮುಂಚೆ ಹೇಳಿದ್ದರು? ನಾನೂ ಹೇಳುವುದಿಲ್ಲ! ಹೇಗೋ ಬರುತ್ತಾರಲ್ಲ. ಮಾವನನ್ನು ಕರೆಯಲು ಇವರು ಹಾಸ್ಟೆಲಿಗೆ ಹೋಗಲಿ; ನಾನು ಸ್ಟೇಶನ್ನಿಗೆ ಹೋಗುವೆ! ಹೌದು ಹಾಗೇ ಮಾಡುತ್ತೇನೆ...

ಅಂತೂ ಪರಸ್ಪರ ಹೊಂದಿಕೆಯಾಗದ ಮೂವರೂ ನನ್ನ ಮನೆಯಲ್ಲಿ ಸೇರುತ್ತಾರೆ. ಆಗ ನಾನು, ಹೊರಗಿನವಳಾದ ನಾನು ಅವರನ್ನು ಒಂದುಗೂಡಿಸಬಲ್ಲೆ! ದೇವರು ತಾನಾಗಿ ಈ ಪ್ರಸಂಗವನ್ನು ತಂದುಕೊಟ್ಟಿದ್ದಾನೆ... ಅತ್ತೆಯವರೂ ಈಗೇ ಬರುವುದು ಏನನ್ನು ಸೂಚಿಸುತ್ತದೆ?... ಮಾವನವರ ವಿಷಯದಲ್ಲಿ ಮೊದಲಿಗೆ ಅದೆಷ್ಟು ಹೆದರಿದ್ದೆ! ನಿನ್ನೆ ಸಂಜೆ ಎಷ್ಟು ಸುಲಭವಾಗಿ ಕೆಲಸ ಬಗೆಹರಿಯಿತಲ್ಲ...

ಯಾವುದಕ್ಕೂ ಕಾಯ್ದು ನೋಡುವ ಸ್ವಭಾವ ನನ್ನದಲ್ಲ. ಕೂಡಲೇ ಮಗ್ಗುಲಿನ ಇರಾಣೀ ಹೋಟೆಲಿಗೆ ಹೋಗಿ, ಯುನಿವರ್ಸಿಟಿ ಲೈಬ್ರರಿಗೆ ಫೋನ್ ಮಾಡಿ, ನಿಡಗುಂದಿಯವರನ್ನು ಕರೆಕಳುಹಿದೆ.

"ಹಲೊ, ನಾನು ಮಂಜುಳಾ, ನಾಳೆ ೧೦ ಗಂಟೇಕ್ಕ ಇವರೇ ಕರೀಲಿಕ್ಕೆ ಬರ್ತಾರ, ಹಾಸ್ಟೆಲಿಗೆ. ಹಾಂಗ ಹೇಳಂತ ಹೇಳಿದರು..."

ಫೋನಿನ ಘೋರ್ ಘೋರ್ ಸಪ್ಪಳದಲ್ಲಿಯೇ "ಒಳ್ಳೇದು" ಎಂಬ ಅವರ ಉತ್ತರ ಕೇಳಿಸಿತು.

"ಮತ್ತ, ಧಾರವಾಡದಿಂದ ತಾರುಬಂದದ. ಅತ್ರೆಯವರು ನಾಳೆ ಬರ್ತಾರಂತ. ಮೇಲಿಗೆ. ಹೌದು... ಈಗ ಬಂತು." ಅವರು ನಡುನಡುವೆ 'Yes... Yes' ಎಂದದ್ದಷ್ಟೆ ಕೇಳಿಸಿತು. ಫೋನಿನಲ್ಲಿ ಅನ್ಯ ಸದ್ದು ಹೆಚ್ಚಾದಾಗ, ರಿಸೀವರನ್ನು ಕೆಳಗಿಟ್ಟೆ.

ಅತ್ತೆ-ಮಾವನವರನ್ನು ಮೊದಲಿಗೆ ಬರಮಾಡಿಕೊಳ್ಳುವ ಅಪೂರ್ವ ಪ್ರಸಂಗದಿಂದ ನಾನು ಉತ್ತೇಜಿತಳಾಗಿದ್ದೆ. ಅವರೊಂದಿಗೆ ಹೇಗೆ ನಡೆದುಕೊಳ್ಳಬೇಕು? ಅತ್ರೆಯ ಧಾರ್ಮಿಕ ಆಚರಣೆಗಳಿಗೆ ಏನೇನು ಅನುಕೂಲ ಒದಗಿಸಬೇಕು? ಮಾವನವರ ಅಭ್ಯಾಸಕ್ಕಾಗಿ ಇರುವ ಮೂರು ಕೋಣೆಗಳಲ್ಲಿ ಯಾವುದನ್ನು ಬಿಟ್ಟುಕೊಡಬೇಕು? ಇಬ್ಬರಿಗೂ ಮಲಗುವ ವ್ಯವಸ್ಥೆಯನ್ನು ಎಲ್ಲಿ ಮಾಡುವುದು? ಇವೆಲ್ಲ ವಿಚಾರಗಳಿಂದ ನನ್ನ ಕಳವಳ ಹೆಚ್ಚಾಯಿತು. ಕೂಡಲೇ ನನ್ನ ತಾಯಿಗೆ, ನಾಳೆ ಬೆಳಿಗ್ಗೆ ಬೇಗ ಮನೆಗೆ ಬಂದು ಹೋಗಬೇಕೆಂದು ಚಂದ್ರಾರ ಮೂಲಕ ಹೇಳಿ ಕಳುಹಿಸಿದೆ.

ಶನಿವಾರ ದಿನ, ಇವರಿಗೆ ಕಚೇರಿಯಲ್ಲಿ ವಿಪರೀತ ಕೆಲಸ. ರಾತ್ರಿ ಎಂಟೂವರೆಗೆ ಮನೆಗೆ ಬಂದ ಇವರಿಗೆ ಉಣಬಡಿಸಿದೆ. ನಾಳೆ ಹತ್ತಕ್ಕೆ ಗಾಡಿ ತೆಗೆದುಕೊಂಡು, ಹಾಸ್ಟೆಲಿಗೆ ಹೋಗ ಹೇಳಿದೆ. ನನ್ನ ತಾಯಿಯ ಸಹಾಯವನ್ನು ಕೋರಿದ್ದಕ್ಕೆ, ನಾನು ಕೈಲಾಗದವಳು ಎಂದು ಅವರು ಕೊಂಕು ನಗೆಯಾಡಿದರು. ತಂದೆಯ ಆಗಮನದ ವಿಚಾರ ಅವರ ಮನಸ್ಸಿನ ಒಳ ಒಳಗೆ ತೃಪ್ತಿಯನ್ನುಂಟುಮಾಡಿದ್ದು ಸ್ಪಷ್ಟವಿತ್ತು. ಇನ್ನು ಅತ್ತೆಯವರ ಆಗಮನದ ಸುದ್ದಿ ತುದಿ ನಾಲಗೆಯವರೆಗೆ ಬಂದು ನಿಂತಿತು. ಆದರ ಹೇಳಲಿಲ್ಲ. 'ನೋಡಿರಿ, ಮಾವನವರನ್ನು ಕರತಂದ ಹಾಗೆ ಅತ್ತೆಯವರನ್ನೂ ಬರಮಾಡಿಕೊಂಡಿದ್ದೇನೆ' ಎಂದು ನಾಳೆಯೇ ಹೇಳಲಿದ್ದೆ.

ರಾತ್ರಿ ಹತ್ತು ಹೊಡೆದಿತ್ತು. ನಾವು ಮಲಗುವ ತಯಾರಿಯಲ್ಲಿದ್ದಾಗ, ಯಾರೋ ಹೊರ ಬಾಗಿಲನ್ನು ಬಡಿದರು. ನಾನು ಬಾಗಿಲು ತೆರೆದೆ.

"ಮೀ, ಹಾಸ್ಟೇಲಾಚೆ ಸಿಪಾಯಿ ನಿಡಗುಂದಿ ಸಾಹೇಬ್ ಆಜ ಮೇಲನೀ ಧಾರವಾಡಲಾಗೇಲೆ, ಆಣಿ ಹೇ ತುಮಾಲಾ ದಿಲೇತ್" ಎಂದು ಹೇಳಿ ದೊಡ್ಡ ಹಣ್ಣಿನ ಬುಟ್ಟಿಯೊಂದನ್ನು ಇಟ್ಟು ಹೋದನು.

ಮಾವ ಹೊರಟುಹೋದರೆ? ನನ್ನೆದೆಗೆ ಸಿಡಿಲು ಬಡಿದಂತಾಯಿತು! ಹೊರಳಿದೆ. ಇವರು ನಡುಬಾಗಿಲಲ್ಲಿಯೇ ನಿಂತಿದ್ದರು. ಅವರ ಮೊಗದ ಮೇಲೆಯೂ ದಿಗ್ಭ್ರಮೆಯ ಕಳೆ.

"ಅರೆ, ಯಾಕೆ ಹೋದರು?" ಎಂದು ನುಡಿದ ಅವರಿಗೆ ಆ ಟೆಲಿಗ್ರಾಮ್ ಕೊಟ್ಟೆ.

ಅದನ್ನು ಓದಿದವರೇ ನನ್ನ ಎರಡೂ ಬದಿಯ ತಲೆಗೂದಲನ್ನು ಜಗ್ಗಿ ಎಳೆದು "ನೀ ಅವರಿಗೆ ಈ ಸುದ್ದಿ ಫೋನ್ ಮೇಲೆ ಹೇಳಿದಿ ಕಾಣಸ್ತದ! ಹೌದಲ್ಲೋ?" ಎಂದು ಚೀರಿದರು.

"ಹೌದು ತಪ್ಪೇನಾತು?" ಎಂದು ನಾನೂ ಆಕ್ರೋಶದಿಂದ ಉತ್ತರಿಸಿದೆ.

"ಮತ್ತ ನನಗೆ ಯಾಕೆ ಹೇಳ್ಳಿಲ್ಲ? ಬೊಗಳು, ಹೂ."

ಅವರ ಬೈಗುಳ ಸಿಟ್ಟುಗಳಿಗಿಂತ ನನ್ನ ಆಶಾಭಂಗದ ಪೆಟ್ಟೇ ಹೆಚ್ಚು ಬಲವಾಗಿದ್ದಿತು. ನನ್ನ ಹೆಮ್ಮೆ, ಆತ್ಮವಿಶ್ವಾಸಗಳನ್ನು ಅತ್ಯಂತ ನಿರ್ದಯದಿಂದ ನನ್ನ ಮಾವ ಬುಡ ಮೇಲು ಮಾಡಿದ್ದರು. ಮುಖ ಮುಚ್ಚಿಕೊಂಡು ಅಳಬೇಕೆಂದೆ. ನಮ್ಮ ಕೋಣೆಯಲ್ಲಿ ಜೋಡು ಹಾಸಿಗೆಯ ಮಧ್ಯದಲ್ಲಿ ಮಲಗಿದ್ದ ಮಗುವೂ ಅಳುತ್ತಿದ್ದುದರಿಂದ ಹಾಗೇ ಒಳಗೆ ಹೋದೆ.

ಇತ್ತ ನನ್ನ ರಾಯರಿಗೆ, ನಾನು ಸದ್ಭಾವನೆಯಿಂದ ಒಂದು ಕೆಲಸಕ್ಕಾಗಿ ಪ್ರಯತ್ನಿಸಿದೆನೆಂಬುದರ ಅರಿವು ಬಲು ಬೇಗ ಉಂಟಾಯಿತು.

"ಮಂಜೂ, ಒಂದು ದೃಷ್ಟಿಯಿಂದ ಅವರು ಹೋದದ್ದೇ ಒಳ್ಳೆಯದಾಯಿತು. ನನ್ನ ತಾಯಿ ಸುಧಾರಿಸಿಕೊಂಡು ಹೋಗುವುದು ಸಾಧ್ಯವೇ ಇದ್ದಿಲ್ಲ. ಆಕೆ ನಮ್ಮ ರಿಜಿಸ್ಟರ್ ಮದುವೆಯ ಬಗ್ಗೆ ಇನ್ನಾವ ರಾದ್ಧಾಂತ ಮಾಡುತ್ತಿದ್ದಳೊ. ಹೊಸಬಳಾದ ನಿನ್ನ ಮುಂದೆ ಆ ಹಗರಣ ಬೇಡವೆಂದೇ ನನ್ನ ತಂದೆ ಹೋದದ್ದು. ತಮ್ಮಷ್ಟಕ್ಕೆ ತಾವು ದೂರ ಇರಬೇಕೆಂದು ಅವರೆಷ್ಟು ಅಪೇಕ್ಷಿಸುತ್ತಾರೊ, ಅಷ್ಟೂ ನನ್ನ ತಾಯಿ ಸಂಸಾರ ಬೇಡ, ಬೇಡ ಎನ್ನುತ್ತಲೇ ಅವರ ಬೆನ್ನು ಹತ್ತುತ್ತಾಳೆ."

ಮುಂದೆ ೨-೩ ತಾಸಿನವರೆಗೆ ಇವರು ತಮ್ಮ ತಂದೆ ತಾಯಿಯರ ವಿರಸದ ಬಾಳುವೆಯ ಎಷ್ಟೋ ಘಟನೆಗಳನ್ನು ಹೇಳಿದರು. ಅನೇಕ ದಿನಗಳಿಂದ ಹತ್ತಿಕ್ಕಿಟ್ಟ

ಭಾವನೆಗಳೆಲ್ಲ ಹೊರಬಂದು, ಅವರ ಮನಸ್ಸು ನಿರಂಬಳವಾಗಿತ್ತು. ಅದನ್ನೆಲ್ಲ ಕೇಳುತ್ತ, ಅವರ ಆಂತರಿಕ ತೊಳಲಾಟದಲ್ಲಿ ಪಾಲುಗಾರ್ತಿಯಾದೆನಲ್ಲ ಎಂಬ ಸಮಾಧಾನ ನನಗಿತ್ತು.

"ಅರೆ, ಒಂದೂವರೆ ಗಂಟೆಯಾಯ್ತಲ್ಲ. ಮಲಗೋಣ ಇನ್ನು. ಇಕಾ, ನಾಳೆ ನಮ್ಮ ಮಾತೊಶ್ರೀ ಬಂದ ಮೇಲಿನ ಎಲ್ಲ ಜವಾಬ್ದಾರಿ ನಿನ್ನ ಮೇಲೆಯೇ! ನಾನಂತೂ ಸುಮ್ಮನುಳಿದುಬಿಡುವೆ."

ಆದರೆ ಅತ್ತೆಯವರೊಡನೆಯ ಹೊಂದಿಕೆಯ ಬಗ್ಗೆ ಅವರಿಗಿದ್ದ ಕಾಳಜಿ ನನಗಿರಲಿಲ್ಲ. ತಂದೆಯ ಪಕ್ಷಪಾತಿಯಾಗಿ ಇಷ್ಟರವರೆಗೆ ಏನೇನೆಲ್ಲ ಹೇಳಿದ್ದರೊ, ಅದರಿಂದ ನಾನು ತಿಳಿದಿದ್ದು ಇಷ್ಟೇ, ನನ್ನ ಅತ್ತೆ ಭಾವನಾತಿರೇಕದ ಆದರೆ ಬಾಯಿ ಚಪಲದ ಒಬ್ಬ ವ್ಯಕ್ತಿ. ಅವರನ್ನು ನನ್ನ ಮಾವ ಒಂದಿಷ್ಟು ಸಹನೆ, ಅಂತಃಕರಣಗಳಿಂದ ನಡೆಸಿಕೊಳ್ಳಲಿಲ್ಲವೆಂದೇ ಆ ಭಾವನೋದ್ವೇಗವು ಶ್ರೀರಾಮನ ಮೇಲಿನ ಹುಚ್ಚಿನತ್ತ ತಿರುಗಿರಬಹುದೆ! ನನ್ನ ಮಾವನಲ್ಲಿ ಸಹೃದಯತೆ ಏನೂ ಇಲ್ಲವೆನ್ನುವುದಕ್ಕೆ ಅವರು ಹೇಳದೆ ಕೇಳದೆ ಹೋದದ್ದರ ನಿದರ್ಶನ ಸಾಕಾಗಿತ್ತು.

ಅವರಿಬ್ಬರೂ ಈಗ ಎಲ್ಲಿರಬೇಕು? ಒಬ್ಬರು ಧಾರವಾಡಕ್ಕೆ ಸಾಗಿದ್ದರೆ,ಇನ್ನೊಬ್ಬರು ಮುಂಬಯಿಯತ್ತ ಧಾವಿಸಿದ್ದರು. ಪರಸ್ಪರ ವಿರುದ್ಧ ದಿಕ್ಕುಗಳು!

ನಿದ್ರಾವಶರಾಗಿದ್ದ ನನ್ನವರ ಕಡೆಗೆ ಹೊರಳಿ ನೋಡಿದೆ. ಇವರನ್ನು ನಾನು ಕಳೆದುಕೊಳ್ಳುವಂತಾಗಬಾರದಲ್ಲ ಎಂಬ ಅಂಜಿಕೆ ಮೂಡಿತು. ಈ ಎರಡು ವರ್ಷಗಳ ಕಾಲ ನಾನು ಅವರನ್ನು ಪ್ರೀತಿಸಲೇ ಇಲ್ಲ ಅಥವಾ ಆ ಪ್ರೀತಿಯ ಬಗೆಯೇ ಬೇರೆಯದೆನಿಸಿತು! ಅವರು ಇನ್ನಷ್ಟು ನನ್ನವರಾಗಬೇಕು. ನಾನು ಹೊಂದಿಕೊಳ್ಳಬೇಕು. ಅವರ ಬದುಕಿನಲ್ಲಿ ನಾನು ಇನ್ನಷ್ಟು ಬೆರೆಯಬೇಕು. ಅದು ಹೇಗೆ ಸಾಧ್ಯವೊ ಎಂದು ಕಳವಳಗೊಂಡೆ. ಆದರೆ ನನ್ನ ರಾಯರ ಸರಸ ಸಜ್ಜನಿಕೆಗಳನ್ನು ಆಗಾಗ ಸವಿದಿದ್ದ ನನಗೆ ಅದು ದುಸ್ಸಾಧ್ಯವೆಂದೇನೂ ತೋರಲಿಲ್ಲ.

ನಮ್ಮಿಬ್ಬರ ಮಧ್ಯದಲ್ಲಿ ಮಲಗಿದ್ದ ನನ್ನ ಬಂಗಾರದ ಮುದ್ದೆಯನ್ನು ತೊಟ್ಟಿಲಲ್ಲಿ ಮಲಗಿಸಿದೆ. ನನ್ನ ರಾಯರಿಗೆ ಎಚ್ಚರವಾಗದಷ್ಟು ಮೆಲ್ಲಗೆ ಅವರನ್ನು ತಬ್ಬಿಕೊಂಡು ನಿದ್ದೆ ಹೋದೆ.

❄ ❄ ❄ ❄ ❄



ನಮ್ಮ ನಾಡು ಮತ್ತು ನುಡಿಗೆ ಅರ್ಥಪೂರ್ಣ ಅಡಿಪಾಯವಾದ ಪುಸ್ತಕ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ನಮ್ಮ ಅಳಿಲು ಸೇವಾಸಂಸ್ಥೆ ತನ್ನ ಅಳಿಲು ಸೇವೆಯನ್ನು ಸಲ್ಲಿಸುತ್ತಾ ಬಂದಿದೆ. ಆಧುನಿಕತೆಯ ಮಿಂಚು ಎಷ್ಟೇ ಕೋರೈಸಿದರೂ ನಮ್ಮ ಪರಂಪರೆ, ಸಂಸ್ಕೃತಿ, ತೇಜಸ್ಸು ಸೌಮ್ಯ ನಂದಾದೀಪದಂತೆ ಇಂದೂ-ಮುಂದೂ ಎಂದೆಂದೂ ನಮ್ಮ ಹೃದಯ ಮತ್ತು ಬದುಕಿನಲ್ಲಿ ಬೆಳಗುತ್ತಿರುತ್ತದೆ. ಆ ಬೆಳಕಿನಲ್ಲಿ ಪುಸ್ತಕಗಳ ಪಾತ್ರವೂ ಗಣನೀಯವಾಗಿದೆ. ಅಂತಹ ಉಪಯುಕ್ತ ಪುಸ್ತಕಗಳನ್ನು ಪ್ರಕಟಿಸಿ ಓದುಗ ಮತ್ತು ಲೇಖಕರ ನಡುವೆ ಸೌಹಾರ್ದಯುತ ಸೇತುವೆಯಂತೆ ನಮ್ಮ ಸಂಸ್ಥೆಯು ಕಾರ್ಯನಿರ್ವಹಿಸುತ್ತಿದೆ. ಕನ್ನಡಿಗರ ಅಭಿಮಾನ ಮತ್ತು ಹಾರೈಕೆಯೇ ನಮ್ಮ ಕೆಲಸಕ್ಕೆ ಚೈತನ್ಯ ಶಕ್ತಿ.

ಕನ್ನಡದ ಹಿರಿಯ ಸಾಹಿತಿಗಳಾದ ಡಾ. ಶ್ರೀನಿವಾಸ ಹಾವನೂರರವರು ಹೆಣ್ಣಿನ ಜೀವನದ ಏಳು ಬೀಳುಗಳನ್ನು ವಯೋನುಕ್ರಮದಲ್ಲಿಚಿತ್ರಿಸಿರುವ ಕಥೆಗಳನ್ನು ಆಯ್ದು ನಮ್ಮ ಸಂಸ್ಥೆಗಾಗಿ ನೀಡಿದ್ದಾರೆ.



ಟಿ.ಎಸ್.ವಿಶ್ವನಾಥ್
ಅಧ್ಯಕ್ಷರು, ಅಳಿಲು ಸೇವಾ ಸಂಸ್ಥೆ